UNIVERSAL
LIBRARY
OU_200437
UNIVERSAL
LIBRARY

# ಜೀವನ ಚಿತ್ರ

( ಕಥಾಸಂಗ್ರಹ )

Post Graduate Li
College of Arts & Commerc

ಲೇಖಕರು

ದ. ಕೃ. ಭಾರದ್ವಾಜ

ಪ್ರಕಾಶಕರು

ಆನಂದ್ ಬ್ರದರ್ಸ್

ಕೆಂಪೇಗೌಡರಸ್ತೆ, ಬೆಂಗಳೂರು 2.

( ಎಲ್ಲಾ ಹಕ್ಕುಗಳನ್ನೂ ಕಾದಿಪಲಾಗಿವೆ)

ಬೆಲೆ : ರೂ. 2—0—0.

ಮುದ್ರಕರು:
ಎಸ್. ನಂಜಪ್ಪನವರು,
ಉಷಾ ಪ್ರೆಸ್,
೮೪೩, ಚಿಕ್ಕಪೇಟೆ, ಬೆಂಗಳೂರು-೨.

# ಶ್ರದ್ಧಾಂಜಲಿ

---

**ಕವಿಸಾರ್ವಭೌಮನಾಗಿ**

ತನ್ನ ಹೃದಯ ಮಿಡಿದ ಭಾರತಗೀತೆಯನ್ನು

ನಾಡ ಜನರಿಗೆ ಕೇಳಿಸಿ

**ಕತೆಗಾರನಾಗಿ**

ಮಾನವ ಜೀವನ ಚಿತ್ರಗಳನು ಚಿತ್ರಿಸಿ

ಸಮಾಜದ ಮುಂದೆ ಆದರ್ಶದಂತಿರಿಸಿ

**ಗುರು ದೇವನಾಗಿ**

ಧರ್ಮ, ಕಲೆ, ಜ್ಞಾನಪ್ರಸಾರಕಾಗಿ ದೇಹ ತೇಯಿದ

**ಶ್ರೀ ರವೀಂದ್ರನಾಥರ ಅಮರ ಆತ್ಮಕ್ಕೆ**

# ಶಬ್ದಚಿತ್ರಾನುಕ್ರಮಣಿಕೆ.


ಮೊದಲ ಮಾತು .... i-iv

೧. ಆತ್ಮ ವಿಕಾಸ .... ೧

೨. ಆತ್ಮನಿವೇದನೆ .... ೧೧

೩. ಆದಕ್ಕೇ ಅದೃಷ್ಟ ಅನ್ನೋದು .... ೨೬

೪. ಸುಧಾರಿತ ರಮಾ ಮಾಧವ .... ೩೯

೫. ವಿತಂತು .... ೫೩

೬. ಪಾಪವೊ ಪುಣ್ಯವೊ ? .... ೭೮

೭. ಶ್ರೀಸತ್ಯನಾರಾಯಣ ವ್ರತ .... ೯೫

೮. ನಂಬಿಕೆಗೆ ಮುಯ್ಯಿ .... ೧೧೬

೯. ಅಡವಿಯ ರಾಜ .... ೧೩೩

# ಮೊದಲ ಮಾತು

ಈಗ ದಕ್ಷಿಣ ಭಾರತದಲ್ಲಿ ಎಲ್ಲಿ ನೋಡಿದರೂ ವಾರಭವಿಷ್ಯ, ಮಾಸ ಭವಿಷ್ಯ, ವಾರ್ಷಿಕ ಭವಿಷ್ಯಗಳನ್ನು ಪ್ರಕಟಿಸದಿರುವ ಪತ್ರಿಕೆಗಳೇ ಇಲ್ಲ. ಈ ಫಲಜ್ಯೋತಿಷದ ಸಲುವಾಗಿ ಓದುಗರ ಸಂಖ್ಯೆಯೂ ಹೆಚ್ಚುತ್ತಿದೆ. ಮಾನವನ ಮನಸ್ಸು ಜೀವನ ಸಂಗ್ರಾಮದಲ್ಲಿ ಹೋರಾಡಿ ಬೇಸರಗೊಂಡಿರುವಾಗ ತನ್ನ ಭವಿಷ್ಯ ಸಂಗ್ರಾಮದ ಭವಿಷ್ಯಫಲವು ಆಶಾದಾಯಕವಾಗಿದೆಯೊ ಎಂದು ತಿಳಿಯುವ ಕುತೂಹಲವು ಜನತೆಯಲ್ಲಿ ಈ ಭವಿಷ್ಯಫಲವನ್ನು ತಿಳಿಯುವುದರಲ್ಲಿ ಕಾತುರತೆಯನ್ನು ಕೆರಳಿಸಿರುವುದು ಸ್ವಾಭಾವಿಕ. ಆದರೆ ಆ ಪತ್ರಿಕೆಗಳಲ್ಲಿ ಪ್ರಕಟವಾದ ಭವಿಷ್ಯಗಳೆಲ್ಲ ಯಾರ್ಯಾರಿಗೆ ಎಷ್ಟರ ಮಟ್ಟಿಗೆ ಫಲಿಸಿರುವುದೋ, ಫಲಿಸುವುದೋ ಎಂದು ತಿಳಿಯುವುದು ಅಸಾಧ್ಯ. ಆದರೂ ಅದನ್ನು ನೋಡಿ ಒಂದು ತೃಪ್ತಿಯಿಂದ, ಆಸೆಯಿಂದ ಜೀವನ ಸಂಗ್ರಾಮದಲ್ಲಿ ಮುಂದುವರಿಯಲೆತ್ನಿಸುವುದು ಸಾಮಾನ್ಯ ಮಾನವ ಸ್ವಭಾವ.

ಜೀವನಯಾತ್ರೆಯಲ್ಲಿ ಕೇವಲ ಸಮಾಜ ಚಿತ್ರಗಳನ್ನು ಚಿತ್ರಿಸುವ ಕೆಲವು ಸಣ್ಣ ಕತೆಗಳುಕೂಡ ಹಲವು ಸಂದರ್ಭಗಳಲ್ಲಿ ಈ ಭವಿಷ್ಯವಾಣಿಯ ಕೆಲಸವನ್ನು ಮಾಡುವವು. ಸಾಮಾನ್ಯ ಮಾನವ ಜೀವನಸಂಗ್ರಾಮದ ಸತತ ಹೋರಾಟದಲ್ಲಿ ಸಿಕ್ಕಿ, ತನ್ನ ಜನ್ಮ ಇನ್ನೂ ಎಷ್ಟುದಿನ ಹೀಗೆ ಹೋರಾಡಬೇಕು, ಬೇರೆಯವರಾರೂ ಈ ಬಗೆಯ ಕಷ್ಟಪಡದೆ ತಾನೊಬ್ಬನೇ ಈ ಕಷ್ಟಗಳಿಗೆ ಗುರಿಯಾಗಬೇಕೆ, ವಿಧಿಯು ತನ್ನೊಬ್ಬನ ವಿಚಾರದಲ್ಲಿಯೇ ಹೀಗೆ ಕ್ರೂರವಾಗಿರುವುದೇಕೆ ಎಂಬಿವೆ ಮೊದಲಾದ ಭಾವನೆಗಳು ಅವನಲ್ಲಿ ತುಂಬಿ ತುಳುಕಾಡುತ್ತ ಅವನ ಮನಸ್ಸು ಜೀವನದ ಹೊನಲಿನಲ್ಲಿ ಹೊಯ್ದಾಡುತ್ತಿರು

ವಾಗ, ಬೇರೆ ಜೀವನಚಿತ್ರಗಳು ಅವನ ಕಣ್ಣೆದುರಿಗೆ ನಿಂತರೆ, ಆಗ "ತಾನು ಜೀವನಯಾತ್ರೆಯಲ್ಲಿ ಏಕಾಂಗಿಯಾಗಿಲ್ಲ, ಮಾನವ ಸಮಾಜವೇ ತನ್ನೊಂದಿಗಿದ್ದು ವಿಧಿಯೊಂದಿಗೆ ಹೊರಾಡುತ್ತಿರುವುದು" ಎಂದು ಒಂದು ಬಗೆಯ ಸಮಾಧಾನವು ಅವನಲ್ಲಿ ಉಂಟಾಗುವುದು. ಅದರಿಂದ ಅವನಿಗೆ ಭವ್ಯಭವಿಷ್ಯ ವಿಚಾರದಲ್ಲಿ ಒಂದು ಆಸೆಯು ಮೂಡುವುದು. ಆ ಆಸೆಯಿಂದ ಅವನು ಜೀವನಯಾತ್ರೆಯನ್ನು ಮುಂದುವರಿಸಲು ಸಿದ್ಧನಾಗುವನು.

ಮಾನವ ಸಮಾಜದಲ್ಲಿ ಜೀವನದ ಸಹಜ ಚಿತ್ರಗಳು ಕಿರುಗತೆಯ ರೂಪದಲ್ಲಿ ಈ ಜೀವನ ಯಾತ್ರಿಕನಿಗೆ ಮಾರ್ಗದಲ್ಲಿ ಊರುಗೋಲಿನಂತೆ ಸಹಾಯಕವಾಗಿ, ಅವನ ಮನಸ್ಸಿಗೆ ಒಂದು ಬಗೆಯ ಸಮಾಧಾನವನ್ನೂ, ತನ್ನ ಸ್ಥಿತಿಯ ವಿಚಾರದಲ್ಲಿ ಒಂದು ಬಗೆಯ ತೃಪ್ತಿಯನ್ನೂ ಉಂಟುಮಾಡುವವಲ್ಲದೆ ಮಾನವ ಜೀವನಪಥದಲ್ಲಿರುವ ವೈವಿಧ್ಯಗಳನ್ನೂ ತೋರಿ, ಅವನನ್ನು ಒಂದು ಸಲ ನಗಿಸಿ, ಒಂದು ಸಲ ಅಳುವಂತೆ ಮಾಡಿ, ಸುಖದುಃಖಗಳು ಮಾನವ ಜೀವನದಲ್ಲಿ ಹಾಸು ಹೊಕ್ಕುಗಳಂತೆ ಹೇಗೆ ಹರಿಯುತ್ತಿವೆ ಎಂಬುದನ್ನು ತೋರುವವು. ಹಾಗೆಂತಲೆ ಜೀವನದ ಅನುಭವಗಳಿಂದ ಮನಸ್ಸು ಪರಿಪಕ್ವವಾಗ ಜೀವನದ ರಹಸ್ಯವನ್ನರಿತು, ಹೃದಯದಲ್ಲಿ ಭಾವೋದ್ರೇಕಗಳಿಗೆ ಎಡೆಗೊಡದೆ, ಶಾಂತಚಿತ್ತದಿಂದ ತನ್ನ ಕಣ್ಣೆದುರಿಗೆ ದೂರದ ದಿಗಂತದವರೆಗೆ ಗೋಚರವಾಗುತ್ತಿರುವ ಮಾನವ ಜೀವನದೃಶ್ಯವು ಓದುಗನ ಮನಸ್ಸಿನಮೇಲೆ ಪರಿಣಾಮವಾಗುವಂತೆ ಕಲೆಗಾರನು-ಕತೆಗಾರನು-ತನ್ನ ಕೌಶಲ್ಯದಿಂದ ಚಿತ್ರಿಸಿದ ಚಿತ್ರವು, ಕಿರುಗತೆಯು, ಮಾನವಜಾತಿಗೆ ಪ್ರಿಯವಾಗುವುದು.

ವಿಶಾಲ ಪ್ರಪಂಚದಲ್ಲಿ ಪ್ರಕೃತಿಯು ವಿವಿಧ ಲಾವಣ್ಯ, ವಿವಿಧ ಸಂಸ್ಕೃತಿ ವಿವಿಧ ಆಚಾರವಿಚಾರಗಳಿಂದ, ವಿವಿಧ ಉಡುಪುತೊಡವುಗಳಿಂದ, ಬಗೆಬಗೆಯ ಆಹಾರವಿಹಾರಗಳಿಂದ ಬೇರೆ ಬೇರೆ ಆಕಾರವಿಕಾರಗಳಿಂದ, ಜಾತಿಕುಲಗೋತ್ರಗಳಿಂದ ವಿಜೃಂಭಿಸುತ್ತಿದ್ದರೂ ಎಲ್ಲಮಾನವ ಹೃದಯವೀಣೆಯು ಮಿಡಿಯುತ್ತಿರುವುದು ಸಹಾನುಭೂತಿಪರಸ್ಪರವೊಂದನ್ನೆ. ಆದ್ದರಿಂದ ಪ್ರಪಂಚದ ಯಾವ ಭಾಗದ ಕಲೆಗಾರನು, ಕತೆಗಾರನು, ಚಿತ್ತವೇಧಕ, ಬೋಧಕ, ಮತ್ತು ವಿಚಾರಪ್ರಚೋದಕ ಕತೆಗಳನ್ನು ಬರೆದರೂ, ಅವು ದೇಶ ಕಾಲ ಭೇದಗಳಿಲ್ಲದೆ, ಜಾತ್ಯಾತೀತವಾಗಿ, ಸಾರ್ವತ್ರಿಕ ಮನ್ನಣೆಯನ್ನು ಪಡೆಯುವವು.

ಇಂದು ಕನ್ನಡಕ್ಕೆ ಪರಿವರ್ತಿತವಾಗಿ ಎಲ್ಲರಿಂದ ಮನ್ನಣೆಪಡೆಯುತ್ತಿರುವ ಪಾಶ್ಚಾತ್ಯಕಲೆಗಾರರ ಕಿರುಗತೆಗಳೆ ಇದಕ್ಕೆ ಸಾಕ್ಷಿ.

ಇಂದು ನಮ್ಮ ಕನ್ನಡನಾಡಿನ ಕಲೆಗಾರರ ಕೃತಿಗಳೂ ಭಾರತಿಯ ಭಾಷೆಗಳು ಮಾತ್ರವಲ್ಲದೆ, ಆಂಗ್ಲ ಭಾಷೆಗೂ ಪರಿವರ್ತಿತವಾಗಿರುವುದು ನಮ್ಮ ನಾಡಿನ ಕಲೆಗಾರರ ಸಂಖ್ಯಾಭಿವೃದ್ಧಿಗೆ ದ್ಯೋತಕವಾಗಿದೆ.

ನನ್ನಿಂದ ಚಿತ್ರಿತವಾದ ಒಂಭತ್ತು ಬಗೆಯ ಜೀವನ ಚಿತ್ರಗಳು ಇಲ್ಲಿ ಸಮಾವೇಶವಾಗಿವೆ. ಇವುಗಳಲ್ಲಿ 'ವಿತಂತು' ಮತ್ತು 'ಪಾಪವೊ ಪುಣ್ಯವೊ' ಎಂಬೆರಡು ಚಿತ್ರಗಳು 'ಪ್ರೇಮ' ಮಾಸಪತ್ರಿಕೆಯಲ್ಲಿ (೧೯೨೭-೨೮); 'ಅದಕ್ಕೇ ಅದೃಷ್ಟ ಅನ್ನೋದು' ಮತ್ತು 'ನಂಬಿಕೆಗೆ ಮುಯ್ಯಿ' ಎಂಬೆರಡು ಚಿತ್ರಗಳು ಕಥಾಂಜಲಿಯ ಮೊದಲನೆಯ ಸಂಪುಟದಲ್ಲಿ; 'ಸುಧಾರಿತರವಾ ಮಾಧವ' (೧೯೩೭ನೆಯ ಕಥಾಂಜಲಿ ದೀಪಾವಳಿ ಸಂಚಿಕೆಯಲ್ಲಿ); 'ಆತ್ಮ ನಿವೇದನೆ' ಎನ್ನುವುದು 'ಕತೆಗಾರ' ಪತ್ರಿಕೆಯ ಮೊದಲನೆಯ ಸಂಪುಟದಲ್ಲಿ; 'ಆತ್ಮವಿಕಾಸ'ವು ಬಡವರ ಬಂಧು ಪತ್ರಿಕೆಯಲ್ಲಿ ೩ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ (೧೯೩೪); 'ಸತ್ಯನಾರಾಯಣ ವ್ರತವು' 'ಪ್ರಜಾಮತ' ದಲ್ಲಿ (೧೯೩೭ರ ವಿಶೇಷ ಸಂಚಿಕೆಯಲ್ಲಿ); 'ಅಡವಿಯ ರಾಜ' ಎನ್ನುವುದು ಮೈಸೂರಿನ 'ಮಧುರವಾಣಿ' ಎಂಬ ಮಾಸಪತ್ರಿಕೆಯಲ್ಲಿ (೧೯೧೩ರಲ್ಲಿ) ಪ್ರಕಟವಾದವುಗಳು. 'ಅಡವಿಯ ರಾಜ' ಮತ್ತು 'ನಂಬಿಕೆಗೆ ಮುಯ್ಯಿ' ಎಂಬೆರಡು ಬೇರೆ ಕತೆಗಳ ಆಧಾರದಿಂದ ಬರೆದವು. ಉಳಿದವು ಪ್ರಕೃತಿದೇವಿಯ ಸೃಷ್ಟಿಸೌಷ್ಟವಾಗರದಿಂದ ಆರಿಸಿದ ವಿವಿಧ ಚಿತ್ರಗಳು. ಈ ಚಿತ್ರಗಳು ಎಷ್ಟು ಹಳೆಯವಾಗಿದ್ದರೂ, ಮಾನವ ಸಮಾಜದಲ್ಲಿ ಅವುಗಳ ದೃಶ್ಯಗಳಿಗೆ ನಿತ್ಯ ನೂತನತೆಇದೆ. ಇದಕ್ಕೆ ನೂತನ ಪ್ರಕೃತಿನಿಯಮವೇ ಮೂಲಕಾರಣ ವಾಗಿರಬಹುದು.

ಹಲವು ಮಿತ್ರರ ಒತ್ತಾಯದಿಂದ ಈ ಚಿತ್ರಗಳನ್ನು ಒಂದೇ ಹೊತ್ತಿಗೆ ಯಲ್ಲಿ ಸೇರಿಸಿ ಓದುಗರ ಮುಂದಿಡುವ ಸಾಹಸ ಮಾಡಲಾಗಿದೆ. ಈ ಚಿತ್ರ ರಚನೆಯಲ್ಲಿ ಸುತ್ತಮುತ್ತಲಿನ ದೃಶ್ಯಗಳಿಗಾಗಿ ವಿವಿಧ ವರ್ಣಗಳನ್ನಾಶ್ರಯಿ ಸದೆ, ಕೇವಲ ವ್ಯಕ್ತಿಚಿತ್ರಗಳ ರೂಪರೇಖೆಗಳನ್ನು ಮಾತ್ರ ಕೊಡಲೆತ್ನಿಸಿರು

ವೆನು. ಈ ಚಿತ್ರಗಳು ಎಷ್ಟರಮಟ್ಟಿಗೆ ಸಹಜವಾಗಿವೆ, ಆಕರ್ಷಕವಾಗಿವೆ, ಕಥಾಚಿತ್ರಕಲೆಯಲ್ಲಿ ಸೇರಲು ಎಷ್ಟರಮಟ್ಟಿಗೆ ಅರ್ಹವಾಗಿವೆ ಎಂಬುದನ್ನೂ ಅನುಭವಿಗಳೆನಿಸಿರುವ ಕಲಾವಿದ ಪಾಠಕರೆ ನಿರ್ಣಯಿಸಿಕೊಳ್ಳಬೇಕು. ಇದಕ್ಕೆ ಪ್ರೋತ್ಸಾಹ ದೊರೆತರೆ ಹಳೆಯ ಕಡತದಲ್ಲಿಟ್ಟಿರುವ ಬೇರೆ ಕೆಲವು ಚಿತ್ರಗಳನ್ನು ಪ್ರಕಾಶಕ್ಕೆ ತರಲೆತ್ನಿಸುವೆನು.

ಆನಂದ್ ಬ್ರದರ್ಸ್ ಸಂಸ್ಥೆಯವರು ಈ ಸಂಗ್ರಹವನ್ನು ಕನ್ನಡಿಗರ ಮುಂದಿಡಲು ನೆರವಾದುದಕ್ಕಾಗಿ ನಾನು ಅವರಿಗೆ ಕೃತಜ್ಞ. ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಉಷಾಪ್ರೆಸ್ಸಿನ ಮಾಲೀಕರಾದ ಶ್ರೀ ಎಸ್. ನಂಜಪ್ಪನವರಿಗೂ ವಂದನೆಗಳು.

೩೦-೧೧-೧೯೫೦ **ದ. ಕೃ. ಭಾರದ್ವಾಜ**

ಬಸವನಗುಡಿ, ಬೆಂಗಳೂರು.

# ಆತ್ಮ ವಿಕಾಸ

*

ರಾತ್ರಿ ಹನ್ನೆರಡು ಘಂಟೆ ಸಮಯ. ಮದ್ರಾಸಿನ ವೇಪರಿ ಎಂಬ ಭಾಗದಲ್ಲಿ ಎರಡಂತಸ್ತಿನ ಒಂದು ಭವ್ಯವಾದ ಭವನ. ಅದರ ಸುತ್ತಲೂ ಅಂದವಾದ ಹೂ ಬಳ್ಳಿ ಮರಗಳ ತೋಟ. ಅದರ ಸುತ್ತಲೂ ಕಾಂಪೌಂಡು ಗೋಡೆ. ಗೇಟಿನ ಬಳಿ ೧೩-೧೪ ವರುಷದ ಬಾಲಕನೊಬ್ಬನು ನಿಂತು ಕೂಗುತ್ತಿದ್ದಾನೆ.—

"ಸ್ವಾಮಿ ಡಾಕ್ಟರೆ! ಡಾಕ್ಟರ್ ಸ್ವಾಮಿಗಳೆ!"

ಉತ್ತರವಿಲ್ಲ. ಹುಡುಗನು ಕೂಗುವುದನ್ನು ನಿಲ್ಲಿಸಿದಕೂಡಲೆ ಮತ್ತೆ ನಿಶ್ಶಬ್ದ. ಭವನದ ಸುತ್ತಲೂ ಇದ್ದ ಹೂಬಳ್ಳಿ ಮರಗಳು ಆ ಬಾಲಕನ ಧ್ವನಿಯನ್ನು ತಮ್ಮಲ್ಲಿಯೇ ಅಡಗಿಸಿಕೊಂಡು, ಭವನದಲ್ಲಿರುವವರಿಗೆ ನಿದ್ರಾಭಂಗವಾಗದಂತೆ ಮಾಡುತ್ತಿರುವುವೇನೋ ಎಂಬಂತೆ ತೋರುತ್ತಿತ್ತು.

ಬಾಲಕನು ಚಳಿಯಿಂದ ನಡುಗುತ್ತ, ಆ ನಿಶ್ಶಬ್ದತೆಯನ್ನು ಸಹಿಸಲಾರನೆಂಬಂತೆ ಮತ್ತೆ ಕೂಗಿದನು —"ಸ್ವಾಮಿ ಡಾಕ್ಟರ್ ಸಾಹೇಬರೆ!" ಮತ್ತೆ ನಿಶ್ಶಬ್ದ. ಉತ್ತರವಿಲ್ಲ. ಹುಡುಗನು ಬೇಸರಪಟ್ಟು "ಸ್ವಾಮಿ ಡಾಕ್ಟರ್ ಸಾಹೇಬರೆ! ಹೇಗಾದರೂ ಮಾಡಿ ನನ್ನನ್ನು ಕಾಪಾಡಿ, ಮಹಾರಾಯರೆ!" ಎಂದು ಮತ್ತೆ ಗಟ್ಟಿಯಾಗಿ ಕೂಗಿದನು. ನಡುಗುತ್ತಿರುವ ಬಾಲಕನ ಕೋಮಲಸ್ವರವು, ಮೃದುವಾದ ಹಾಸಿಗೆಯಲ್ಲಿ ಸುಖವಾಗಿ ಮಲಗಿ ನಿದ್ರಿಸುವವರಿಗೆ ಹೇಗೆ ಕೇಳಿಸೀತು! ಕೊನೆಗೆ ಹುಡುಗನು ತಡೆಯಲಾರದೆ ಅಳುವುದಕ್ಕಾರಂಭಿಸಿದನು. ಆಗ ಅವನ ಸ್ವರವು ಅಂಧಕಾರದಲ್ಲಿ

ವಿಲೀನವಾಗಿ, ವಾಯುದೇವನ ಮೂಲಕ ಆಕಾಶದಲ್ಲಿರುವ ಅನಂತ ನಕ್ಷತ್ರಗಳಿಗೆ ಕೇಳಿಸಿತು. ಆವು ತಮ್ಮ ಅಲ್ಪಪ್ರಕಾಶದ ಕಿರಣಗಳ ಬೆಳಕಿನಲ್ಲಿ ಬಾಲಕನನ್ನು ನೋಡಿದುವು. ಬಾಲಕನು—'ಡಾಕ್ಟರ್ ಸ್ವಾಮಿಗಳೆ, ನಾನು ಸಾಯುತ್ತಿದ್ದೇನೆ' ಎಂದು ಅಳುತ್ತಿದ್ದಾನೆ. ಡಾಕ್ಟರು ಏಳಲಿಲ್ಲ. ಕೊನೆಗೆ ಹುಡುಗನು ನಿರಾಶನಾಗಿ—'ಅಯ್ಯೋ! ಅಪ್ಪಾ, ನಾನು ನಿನ್ನನ್ನು ಬದುಕಿಸಿಕೊಳ್ಳಲಾರದೆ ಹೋದೆನು. ಮನುಷ್ಯರಲ್ಲಿ ಸ್ವಲ್ಪವೂ ಕರುಣೆಯಿಲ್ಲವೆ? ನನ್ನ ಮಾತು ಯಾರಿಗೂ ಕೇಳಿಸುತ್ತಿಲ್ಲವಲ್ಲ! ಇನ್ನು ಹೇಗೆ ಕೂಗಲಿ! ನನಗೆ ಗಟ್ಟಿಯಾಗಿ ಕೂಗುವುದಕ್ಕೂ ಆಗುತ್ತಿಲ್ಲ. ನಾನು ಬಂದು ಬಹಳ ಹೊತ್ತಾಯಿತು. ಇನ್ನು ಸ್ವಲ್ಪವೆ ಸಮಯವಿರುವುದು! ಇಷ್ಟೊತ್ತಿಗೆ ಅಮ್ಮನ ಗತಿ ಏನಾಗಿದೆಯೊ?– ಸ್ವಾಮಿ ಡಾಕ್ಟರ್ ಸಾಹೇಬರೆ! ಡಾಕ್ಟರ್ ಮಹಾರಾಯರೆ! ನಾನು ಸಾಯುತ್ತಿದ್ದೇನೆ, ಕಾಪಾಡಿ, ಮಹಾರಾಯರೆ!' ಎಂದು ಗೋಳಿಟ್ಟನು.

ಈಗ ಡಾಕ್ಟರಿಗೆ ಎಚ್ಚರಿಕೆಯಾಯಿತು! ಬಾಗಿಲು ತೆರೆಯಿತು! ಆದರೆ ಇದೇನು! ದುಃಖಿಯಾದ ಬಾಲಕನೆದುರಿಗೆ ಒಬ್ಬ ದೊಡ್ಡ ಮೈಕಟ್ಟುಳ್ಳ ಎತ್ತರವಾದ ಆಳು, ಕೈಯಲ್ಲಿ ದೊಣ್ಣೆಯನ್ನೂ, ಲಾಟೀನ (ದೀಪ)ವನ್ನೂ ಹಿಡಿದುಕೊಂಡು ಬಂದು ನಿಂತು, ಗೇಟಿನ ಬಾಗಿಲನ್ನು ತೆರೆದನು. ಬಾಲಕನು ಆವನನ್ನು ಕಂಡು, ವೇದನೆಯನ್ನು ತಡೆಯಲಾರದೆ, ವ್ಯಥೆಯಿಂದ 'ಸ್ವಾಮಿ, ನಾನು ಬಹಳ ಕಷ್ಟದಲ್ಲಿದ್ದೇನೆ! ನನ್ನನ್ನು ಕಾಪಾಡಬೇಕು!' ಎಂದು ಮತ್ತೆ ಅಳುವುದಕ್ಕಾರಂಭಿಸಿದನು.

"ಇಷ್ಟೊತ್ತಿನಲ್ಲಿ, ಅದೂ ರಾತ್ರಿಯಲ್ಲಿ ಇಲ್ಲಿ ಬಂದು ಯಾಕೆ ಅಳುತ್ತಿದ್ದೀಯೊ? ಹೊರಡು! ನಿನ್ನಂಥ ಬಡ ಭಿಕ್ಷುಕನ ಮನೆಗೆ ನಮ್ಮ ಡಾಕ್ಟರು ಬರುತ್ತಾರೊ? ಒಂದು ಘಂಟೆಯಿಂದ ಸುಮ್ಮನೆ ಕೂಗಿ ನಿದ್ದೆ ಕೆಡಿಸುತ್ತಿದ್ದಾನೆ. ಹೊರಡತೀಯೊ ಇಲ್ಲವೊ ಇಲ್ಲಿಂದ!" ಎಂದು ಆಳು ಗದ್ದರಿಸಿದನು.

ಬಾಲಕನು ಅಳುತ್ತ—"ಸ್ವಾಮಿ, ನಾನು ಬಹಳ ದುಃಖಕ್ಕೆ ಗುರಿಯಾಗಿದ್ದೇನೆ. ಇದನ್ನು ಡಾಕ್ಟರಿಗೆ ತಿಳಿಸಿರಿ. ಅವರು ನನ್ನ ಜತೆಯಲ್ಲಿ

ಬರಲಿ. ಇಲ್ಲವಾದರೆ ಇವತ್ತು ನಾನು ಸಾಯುತ್ತೇನೆ. ಈ ಸಮಯದಲ್ಲಿ ನನಗೆ ಸಹಾಯಮಾಡಿ. ಇದನ್ನೆಲ್ಲ ನೋಡುತ್ತಿರುವ ದೇವರು ನಿಮಗೆ ಒಳ್ಳೆಯದನ್ನು ಮಾಡುತ್ತಾನೆ" ಎಂದನು.

ಆಳು ಬಾಲಕನ ಮಾತುಗಳನ್ನು ಕೇಳಿ ವ್ಯಂಗ್ಯಭಾವದಿಂದ ಸ್ವಲ್ಪ ನಕ್ಕು, ಮತ್ತೆ ಅವನನ್ನು ಗದರಿಸುತ್ತ—'ಬೀದಿಯಲ್ಲಿ ಬೇಡುವ ಈ ಪೋರ ನನಗೆ ಜ್ಞಾನಬೋಧನೆ ಮಾಡುವುದಕ್ಕೆ ಬಂದಿದ್ದಾನೆ. ದೇವರು ನೋಡುತ್ತಿದ್ದರೆ ಅವನು ನಿನಗೇಕೆ ಸಹಾಯಮಾಡಲಿಲ್ಲ? ಹೋಗುತ್ತೀಯೊ ಇಲ್ಲಿಂದ, ಇಲ್ಲವೆ ಬೆನ್ನೆಲುಬು ಮುರಿಯಬೇಕೊ? ಡಾಕ್ಟರನ್ನು ಕರೆಯುತ್ತಾನೆ! ಡಾಕ್ಟರು ನಿಮ್ಮ ಮನೆ ಆಳೇನೊ? ಈ ಅಪರಾತ್ರಿಯಲ್ಲಿ ಇವನ ಮನೆಗೆ ಹೋಗಬೇಕಂತೆ! ಬೀದಿಯಲ್ಲಿ ಬೇಡುವವರ ಮನೆಗಳಿಗೆ ಡಾಕ್ಟರು ಹೋಗುತ್ತ ಕುಳಿತರೆ ಆಯಿತು! ಹೊರಡು ಇಲ್ಲಿಂದ!" ಎಂದನು.

ಇದೆಲ್ಲ ಹಣದ ಮಹಿಮೆ. ಚಂಚಲೆಯಾದ ರಮೆ! ನೀನು ಯಾವ ಸ್ಥಳದಲ್ಲಿಯೂ ಯಾರ ಬಳಿಯಲ್ಲಿಯೂ ಸ್ಥಿರವಾಗಿರುವುದಿಲ್ಲ. ಆದಾಗ್ಗೂ ಅವರ ಬುದ್ಧಿಯನ್ನು ಕೆಡಿಸುವೆ! ಮತ್ತೆ ನೀನು ಯಾವಾಗಲೂ ನಗುತ್ತಿರುವೆ. ಪರೋಪಕಾರ, ದಯೆ, ಕ್ಷಮೆ ಇತ್ಯಾದಿ ಧರ್ಮಗಳನ್ನೂ ಮನುಷ್ಯತ್ವವನ್ನೂ ಈ ಜಗತ್ತಿನಿಂದ ಓಡಿಸಬೇಕೆಂದು ನಿನ್ನ ಉದ್ದೇಶವೇನು? ಬೇರೆಯವರ ಅಧಿಕಾರವನ್ನು ಕಿತ್ತುಕೊಂಡು ಜನರು ಸ್ವಾರ್ಥಪರರಾಗುವಂತೆ ಮಾಡುವ ನೀನು, ನಿನ್ನ ಮನೆಯ ಬಾಗಿಲಲ್ಲಿ ಆ ಬಡಹುಡುಗನು ಅಳುತ್ತಿದ್ದರೂ ಹೃದಯಹೀನಳಾಗಿರುವೆಯಾ? ಇದುವೆ ನಿನಗೆ ಆನಂದ, ಇದುವೆ ನಿನಗೆ ಸುಖ, ಧರ್ಮ, ಪರೋಪಕಾರವೆನಿಸಿದರೆ, ಆಗಲಿ—ನಿನ್ನ ಅತ್ಯಾಚಾರವನ್ನು ಮುಂದುವರಿಸು! ಆದರೆ ಸೃಷ್ಟಿಯ ಆರಂಭದಿಂದ ಅಂತ್ಯದವರೆಗೆ ಹೆಚ್ಚುತ್ತಿರುವ ನಿನ್ನ ಅತ್ಯಾಚಾರಗಳೂ ಒಂದು ದಿನ ನಿರ್ಮೂಲವಾಗಬೇಕೆಂಬುದು ನಿನ್ನ ನೆನಪಿರಲಿ. ಯಾರ ಸ್ಥಿತಿಯೂ ಒಂದೇ ಬಗೆಯಾಗಿರುವುದಿಲ್ಲ. ಚಂಚಲೆಯಾದ ಲಕ್ಷ್ಮಿ! ನೀನು ಬಡ ದುಃಖಿಗಳ ರಕ್ತವನ್ನು ಹೀರಿ, ಅವರ ಅಧಿಕಾರವನ್ನು ಕಿತ್ತುಕೊಂಡು, ಬಿಸಿಯಾದ ರಕ್ತದಂತಿರುವ ಕಣ್ಣೀರನ್ನು ಅವರು ಸುರಿಸುವಂತೆ ಮಾಡುತ್ತಿರುವೆ. ಈ ಅತ್ಯಾಚಾರವು ಕೊನೆಯವರೆಗೂ ಇರಲಾರದು. ಏಕೆಂದರೆ ಸತ್ಯಕ್ಕೇ ಕೊನೆಗೆ

ಜಯವಾಗಬೇಕು. ಅಸತ್ಯವು, ಪಾಪವು, ಅಧರ್ಮವು ಎಂದಿಗೂ ಜಯಿಸ ಲಾರದು. ನಿನ್ನ ಬಲದ ಮಹಿಮೆಯಿಂದಲೆ ಈಗ ಅಸಹಾಯನಾದ ಬಾಲಕನ ಮೇಲೆ ಅತ್ಯಾಚಾರವು ನಡೆಯುತ್ತಿರುವುದಲ್ಲ. ನಿನ್ನ ಆ ಪರಮಸೇವಕನು ಆ ಬಾಲಕನ ದುಃಖವೇನೆಂದು ಕೂಡ ಕೇಳುತ್ತಿಲ್ಲವಲ್ಲ! ಅದಕ್ಕೆ ಬದಲಾಗಿ ನಿನ್ನ ಸೇವಕನ ಸೇವಕನು ಅವನನ್ನು ಕ್ರೂರವಾದ ಶಬ್ದಗಳಿಂದ ನಿಂದಿಸು ತ್ತಿರುವನಲ್ಲ!

ಆ ಬಾಲಕನು ಆಳಿನ ಗದರಿಕೆಯನ್ನು ಲಕ್ಷಿಸದೆ ಮತ್ತೆ—'ಡಾಕ್ಟರ್ ಮಹಾರಾಯರೆ! ಡಾಕ್ಟರ್ ಸಾಹೇಬರೆ! ನಾನು ಬಲು ಕಷ್ಟದಲ್ಲಿದ್ದೇನೆ, ಕಾಪಾಡಿ!' ಎಂದು ಕೂಗಿದನು. ಆಳು ಅವನಿಗೆ ಉತ್ತರ ಕೊಡುವಷ್ಟರಲ್ಲಿ, ಆ ಭವನದ ಮೇಲ್ಗಡೆ ಕೊಠಡಿಯು ವಿದ್ಯುದ್ದೀಪದಿಂದ ಪ್ರಕಾಶಮಾನ ವಾಯಿತು. ಅಲ್ಲಿಂದ 'ದೊಗ್ಗಾ!' ಎಂದು ಯಾರೊ ಆಳನ್ನು ಕೂಗಿದರು. ದೊಗ್ಗನು 'ಬಂದೆ ರಾಯರೆ' ಎಂದು ಹಿಂದಕ್ಕೆ ಹೊರಟನು. ಬಾಲಕನೂ ಅವನನ್ನು ಹಿಂಬಾಲಿಸಿದನು.

ಆಳು ಮುಂಭಾಗದಲ್ಲಿದ್ದ ಮಹಡಿಯ ಮೆಟ್ಟಿಲನ್ನು ಹತ್ತುವಾಗ ಹಿಂದಿದ್ದ ಬಾಲಕನನ್ನು ನೋಡಿ,–'ನೀನು ಇಲ್ಲಿಯೆ ಇರು. ಮೇಲಕ್ಕೆ ಬರಬೇಡ; ಬಂದರೆ ಕಾಲು ಮುರಿದುಹಾಕುತ್ತೇನೆ' ಎಂದನು. ಆಗ ಬಾಲಕನು–'ಡಾಕ್ಟರ್ ಮಹಾರಾಯರೆ, ಕಷ್ಟದಲ್ಲಿರುವವರನ್ನು ಬದುಕಿಸಿರಿ' ಎಂದು ಗಟ್ಟಿಯಾಗಿ ಕೂಗುತ್ತ ಅಳಲಾರಂಭಿಸಿದನು. ಮೇಲಿನ ಕೋಣೆ ಯಿಂದ ಮತ್ತೆ 'ದೊಗ್ಗಾ!' ಎಂಬ ಧ್ವನಿಯು ಬಂದಿತು.

ಮಹಡಿ ಮೇಲಿನ ಕೋಣೆಯಲ್ಲಿ ವಿಶಾಲವಾದ ಕರಿಯಮರದ ಮಂಚದ ಮೇಲೆ ಒಬ್ಬ ದೃಢಕಾಯನಾದ ಮನುಷ್ಯನು ಕುಳಿತಿದ್ದಾನೆ. ದೊಗ್ಗನು ಅವನೆದುರಿಗೆ ಬಂದು ನಿಂತನು. ಬಾಲಕನೂ ಆಳಿಗೆ ತಿಳಿಯದಂತೆ ಮಹಡಿ ಮೆಟ್ಟಲುಗಳನ್ನು ಹತ್ತಿ ಶೀಘ್ರವಾಗಿ ಮೇಲಕ್ಕೆ ಬಂದು ಮಂಚದ ಮೇಲೆ ಕುಳಿತಿದ್ದ ಮನುಷ್ಯನ ಕಾಲುಗಳನ್ನು ಹಿಡಿದುಕೊಂಡು, ಕಾತರಸ್ವರದಲ್ಲಿ– 'ಡಾಕ್ಟರ್ ಮಹಾಶಯರೆ, ಬಡವರ ಮೇಲೆ ದಯೆಯಿಡಿ. ನಾನು ಬಲು ಕಷ್ಟದಲ್ಲಿದ್ದೇನೆ. ನೀವು ನನ್ನ ಜತೆಗೆ ಬನ್ನಿರಿ. ತಡಮಾಡಬೇಡಿ. ನಾನು ಇವತ್ತು ಅನಾಥನಾಗುತ್ತೇನೆ' ಎಂದು ತನ್ನ ಕಂಬನಿಯಿಂದ ಡಾಕ್ಟರನ

ಪಾದಗಳನ್ನು ನೆನೆಯಿಸಿದನು. ನಿರ್ದಯನಾದ ಡಾಕ್ಟರನ ಚಿತ್ತದಲ್ಲಿ ದಯೆಯು ಪ್ರವೇಶಮಾಡಿತು. ಡಾಕ್ಟರು ಬಾಲಕನನ್ನು ಎಬ್ಬಿಸಿ, 'ನಡೆ, ನಾನು ಬರುತ್ತೇನೆ' ಎಂದನು.

ಐದು ನಿಮಿಷಗಳೊಳಗಾಗಿ ಡಾಕ್ಟರನ ಮೋಟಾರಿನಲ್ಲಿ ಬಾಲಕ ಶಂಕರನೂ ಹೊರಟನು.

(೨)

ಬಾಲಕನು ಮೃದುವಾದ ಸ್ವರದಲ್ಲಿ ಕಂಬಳಿಯ ತುಂಡೊಂದರ ಮೇಲೆ ಮಲಗಿದ್ದ ರೋಗಿಯ ಬಳಿ ಕುಳಿತು–'ಅಮ್ಮಾ' ಎಂದನು. ರೋಗಿಯು ಬಹಳ ಕಷ್ಟದಿಂದ ಕಣ್ಣು ತೆರೆದು ಕೈಸನ್ನೆಯಿಂದ ನೀರನ್ನು ಕೇಳಿದಳು. ಹುಡುಗನು ಬಾಯಲ್ಲಿ ನೀರು ಹಾಕಿದನು. ರೋಗಿಯು ಡಾಕ್ಟರ ಕಡೆ ನೋಡಿ–'ಇವರೇ, ಡಾಕ್ಟರ್ ಮಹಾರಾಯರು?' ಎಂದು ಕೇಳಿದಳು. ಬಾಲಕನು–'ಹೌದು ಅಮ್ಮಾ! ಬಹಳ ದಯಾಳುಗಳು. ಇನ್ನು ನೀನು ಬದುಕುವೆ, ಅಮ್ಮಾ' ಎಂದನು.

ರೋಗಿಯು ಸ್ವಲ್ಪ ಮಂದಹಾಸದಿಂದ–'ಮಗು, ನಾನು ಬದುಕುವುದು ಮುಂದಿನ ಜನ್ಮದಲ್ಲಿ' ಎಂದಳು.

ಬಾಲಕನು ನೆಟ್ಟನೋಟದಿಂದ ತಾಯಿಯನ್ನೆ ನೋಡಲಾರಂಭಿಸಿದನು. ಡಾಕ್ಟರನು ಮನೆಯ ನಾಲ್ಕು ದಿಕ್ಕಿಗೂ ತಿರುಗಿ ನೋಡಿದನು. ಮನೆಯು ಬಹು ಪುರಾತನವಾದ್ದು. ಕೆಳಗೆ ಜೌಗು ನೆಲ. ಒಟ್ಟಿನಲ್ಲಿ ಅದೊಂದು ಹಳೆಯ ಗುಡಿಸಲಿನಂತಿದೆ. ಅಲ್ಲಿ ಒಂದು ಹರಕು ಚಾಪೆಯ ಮೇಲೆ ಒಂದು ಕಂಬಳಿಯ ತುಂಡು ಹಾಸಿದೆ. ಅದರ ಮೇಲೆ ರೋಗಿಯು ಮಲಗಿದ್ದಾಳೆ. ಅಲ್ಲಿಂದ ಮತ್ತೊಂದು ಮೂಲೆಯಲ್ಲಿ ಒಂದು ಕಂಬಳಿ ತುಂಡಿನ ಮೇಲೆ ಒಂದು ಸೀರೆಯ ತುಂಡನ್ನು ಹಾಸಿ, ಅದರ ಮೇಲೆ ೫–೬ ವರುಷದ ಒಬ್ಬ ಕೃಶಳಾದ ಬಾಲಿಕೆಯು ಮಲಗಿ ನಿದ್ರಿಸುತ್ತಿದ್ದಾಳೆ. ಗೋಡೆಯ ಒಂದು ಗೂಡಿನಲ್ಲಿ ಒಂದು ಸಣ್ಣ ದೀಪವು ಮಿನುಗುತ್ತಿದೆ. ಅಲ್ಲಿನ ದೃಶ್ಯವನ್ನು ನೋಡಿದ ಕೂಡಲೆ, ಬಲು ಹಿಂದಿನ ಸಂಗತಿ ಯಾವುದೋ ನೆನಪಿಗೆ ಬಂದು, ರೋಗಿ ಒಬ್ಬ ಬಡಬ್ರಾಹ್ಮಣ ವಿಧವೆಯೆಂದೂ, ತನ್ನ ಮಕ್ಕಳಿಬ್ಬರನ್ನೂ ಸಾಕುತ್ತ

ಅಲ್ಲಿ ವಾಸಮಾಡುತ್ತಿದ್ದಳೆಂದೂ, ಈಗ ಆ ಸಂಸಾರವು ಬಹಳ ಬಡ ಸ್ಥಿತಿಯಲ್ಲಿರುವುದೆಂದೂ ಡಾಕ್ಟರ ಮಹಾಶಯನು ತಿಳಿದುಕೊಂಡನು.

ಆಗ ರೋಗಿಯ ಸ್ಥಿತಿಯನ್ನು ನೋಡಿ, ಅವನಿಗೆ ದುಃಖವಾಯಿತು. ಅವನ ಹೃದಯದಲ್ಲಿ ದಯಾಸಾಗರವು ಉಕ್ಕಿತು. ಆಗ ಅವನ ಆತ್ಮವು ಅವನ ಹೃದಯಕ್ಕೆ ಹೇಳಲಾರಂಭಿಸಿತು – 'ನೋಡು ನೀನು ಎಂತಹ ಸುಖ ಶಯ್ಯೆಯಲ್ಲಿ ಮಲಗಿ ನಿದ್ರಿಸುತ್ತಿ! ನಿನ್ನ ಪಕ್ಕದಲ್ಲಿಯೆ ಎಂತಹ ಭಯಂಕರ ವಾದ ದೃಶ್ಯವಿದೆ! ನಿನ್ನ ಈ ನಶ್ವರವಾದ ಶರೀರದಿಂದ ಏನು ಪರೋಪ ಕಾರವಾಗಿದೆ? ಈಗಲೂ ನಿನಗೆ ಸಮಯವಿದೆ. ಕಣ್ಣು ಬಿಟ್ಟು ನೋಡು. ಬಡವರ ಮೇಲೆ ದಯೆಯಿಡು, ರೋಗಿಗಳ ಸೇವೆ ಮಾಡು, ಅನಾಥ ಬಾಲಕ ಬಾಲಿಕೆಯರನ್ನೂ ಅನಾಥ ವಿತಂತುಗಳನನ್ನ ಕಾಪಾಡು. ಮನುಷ್ಯ ಶರೀರ ಧಾರಣೆ ಮಾಡಿದ ನಿನಗೆ ಇದೇ ಮೂಲಧರ್ಮ. ಇದೇ ಮನುಷ್ಯತ್ವ! ನಿನ್ನಿಂದ ಬೇರೆಯವರಿಗೆ ಹಿತವೇನೂ ಆಗದಿದ್ದರೆ ನೀನು ಹುಟ್ಟಿ ಫಲ ವೇನು?....'

ಆಗ ಡಾಕ್ಟರ ಮಹಾಶಯನ ಮನಸ್ಸು ಅಲ್ಲೋಲಕಲ್ಲೋಲವಾಗಿ, ಅವನಲ್ಲಿ ಅನೇಕ ಬಗೆಯ ಆಲೋಚನೆಗಳು ತಲೆದೋರಿದುವು. ಅವನು – "ಇಂದು ಇಲ್ಲಿ ನಾನೇನೂ ಮಾಡಲಾರದವನಾಗಿದ್ದೇನೆ. ರೋಗಿಯ ನಾಡಿ ಯನ್ನು ನೋಡಿದೆ. ಔಷಧಗಳಿಂದ ಅವಳಿಗೆ ಯಾವ ಪ್ರಯೋಜನವೂ ಆಗು ವಂತಿಲ್ಲ. ನಾನು ಈ ದುಃಖಿಯಾದ ಮಾತೆಯ ಪಾದಗಳಿಗೆರಗಿ, ನನ್ನ ಐಶ್ವರ್ಯವನ್ನೆಲ್ಲ ಅವಳಿಗೆ ಅರ್ಪಿಸಿ, ಕ್ಷಮೆಯನ್ನು ಬೇಡಿ, "ಅಮ್ಮಾ, ನಿನ್ನ ಪುತ್ರನನ್ನು ಪ್ರೀತಿಸುವುದಕ್ಕಾದರೂ ಬದುಕಮ್ಮಾ! ಇನ್ನು ಮುಂದೆ ನಾನು ನಿನ್ನನ್ನು ಎಂದಿಗೂ ಮರೆಯಲಾರೆ. ನಿನಗೆ ನಾನು ಧರ್ಮಪುತ್ರನಾಗಿದ್ದೇನೆ. ನೀನು ನನ್ನ ಧರ್ಮ ಮಾತೆ, ಇದುವರೆಗೆ ಆದುದನ್ನು ಮರೆತುಬಿಡು, ಅಮ್ಮಾ! ನನ್ನ ಈ ಕ್ಷುಲ್ಲಕ ಹೃದಯದ ಕಾಣಿಕೆಯನ್ನು ಸ್ವೀಕರಿಸು" ಎಂದು ಹೇಳಲೆ!.... ..." ಎಂದು ಚಿಂತಿಸುತ್ತ ಡಾಕ್ಟರು ವ್ಯಾಕುಲಗೊಂಡನು.

ರೋಗಿಯು ಮತ್ತೆ ಬಾಲಕನನ್ನು ಕುರಿತು – "ಮಗು, ಶಂಕರ! ಎಲ್ಲಿ ಪಾಪವೂ, ದುಃಖವೂ ಕಲಹವೂ, ದ್ರೋಹವೂ ಇಲ್ಲವೊ ಅಲ್ಲಿಗೆ ನಾನು ಹೋಗುವೆನು. ಅಲ್ಲಿಯಾವಾಗಲೂ ಆನಂದವಿರುವುದು. ಅಲ್ಲಿ ನಿನ್ನ ಪೂಜ್ಯ ತಂದೆಯೊಂದಿಗೆ ನನ್ನ ಪತಿದೇವನೊಂದಿಗೆ – ಸೇರುವೆನು.' ಮಗು, ನೀನು

ಮಾತ್ರ ದುಃಖಪಡಬೇಡ. ನಾನು ಹೋದಲ್ಲಿ ಸುಖವಾಗಿರುವೆನು. ಮಗೂ, ಗಂಟಲುಒಣಗುತ್ತಿದೆ– ನೀರು.... " ಎಂದಳು.

ಡಾಕ್ಟರು ತನ್ನ ಕೈಯಿಂದಲೆ ಪ್ರಯತ್ನಪೂರ್ವಕವಾಗಿ ನೀರು ಕುಡಿಸಿ, " ನಾನೂ ನಿಮ್ಮ ದೂರದ ಬಂಧುವಮ್ಮಾ, ಕುಡಿಯಿರಿ " ಎಂದು ಕುಡಿಸಿದನು. ಆಗ ರೋಗಿಯು " ಡಾಕ್ಟರೆ! ಇನ್ನು ಔಷಧಿ ಕುಡಿಸಿ ಪ್ರಯೋಜನವಿಲ್ಲ– ನೀರು " ಎಂದಳು. ನೀರು ಕುಡಿದು ರೋಗಿಯು ಮತ್ತೆ– " ಮಗೂ, ಸೀತೆಯನ್ನು ನೋಡಿಕೊ!, ಸೀತೆ, ನೀನು ಮಲಗಿದ್ದಿಯೆ, ಮಲಗಿಕೊ, ಶಂಕರ, ಮಗು, ನೀನು ನಗುತ್ತ ' ಅಮ್ಮಾ! ಹೋಗಿ ಬಾ, ಅನ್ನು " ಎಂದಳು.

ಬಾಲಕನು ಗಟ್ಟಿಯಾಗಿ ಅಳಲಾರಂಭಿಸಿದನು. ಡಾಕ್ಟರು ಸಮಾಧಾನಪಡಿಸಿದ ಮೇಲೆ ಅವನು– " ಇನ್ನು ನಾನು ಎಲ್ಲಿರಲಿ! ಅಮ್ಮಾ, ನಮ್ಮಿಬ್ಬರನ್ನೂ ಬಿಟ್ಟು ಪೋಗುವೆಯಾ? ನಮ್ಮನ್ನು ನೋಡಿಕೊಳ್ಳುವವರಾರು! ನಮ್ಮನ್ನೂ ನಿನ್ನ ಜತೆಗೆ ಕರೆದುಕೊಂಡು ಹೋಗವ್ಮಾ! ಅಮ್ಮಾ, ಅಪ್ಪನಂತೆ ನೀನೂ ನಮ್ಮನ್ನು ಬಿಟ್ಟು ಹೋಗುತ್ತೀಯಾ? " ಎಂದು ಕೂಗಲಾರಂಭಿಸಿದನು. ಆಗ ಶಾಂತಳಾದ ಮಾತೆಯು– " ಮಗು. ಶಂಕರ, ಮೃತ್ಯುಶಯ್ಯೆಯ ಮೇಲೆ ಮಲಗಿರುವ ನಾನು ನಿಮ್ಮಿಬ್ಬರನ್ನೂ ಆಶೀರ್ವದಿಸುವೆನು. ನೀನು ಒಳ್ಳೇ ಭಾಗ್ಯಶಾಲಿಯಾಗುವೆ. ಸೀತೆಯೂ ಅದೃಷ್ಟಶಾಲಿಯಾಗುವಳು. ನಾನು ಬದುಕಿದ್ದು ನಿಮ್ಮ ಸುಖದ ದಿನಗಳನ್ನು ನೋಡುವ ಭಾಗ್ಯವನ್ನು ಪಡೆಯಲಾರದೆ ಹೋದೆನು. ಆದರೆ ಸ್ವರ್ಗದಿಂದ ನಿಮ್ಮ ಸುಖವನ್ನು ನೋಡುವೆನು. ದೇವರು ನನ್ನ ಆಶೀರ್ವಾದವು ನಿಜವಾಗುವಂತೆ ಮಾಡುವನು, ಅಳಬೇಡ " ಎಂದು ಹೇಳಿ ಡಾಕ್ಟರ ಕಡೆ ತಿರುಗಿ– " ಡಾಕ್ಟರರೆ, ನೀವು ದೇವರಂತೆ ಬಂದಿದ್ದೀರಿ. ನನ್ನ ಅನಾಥ ಮಕ್ಕಳ ಮೇಲೆ ದಯೆಯಿಡುವಿರಾ? " ಎಂದು ಕೇಳಿದಳು. ದುಃಖದಿಂದ ಡಾಕ್ಟರನು ಮಾತನಾಡಲಾರದಂತಾದನು. ಅವನ ಕಣ್ಣುಗಳಲ್ಲಿಯೂ ಕಂಬನಿ ತುಂಬಿತು. ಆದರೂ ಡಾಕ್ಟರು ಪ್ರಯತ್ನಪೂರ್ವಕವಾಗಿ ಗದ್ಗದಕಂಠದಿಂದ —" ಆ ಮಕ್ಕಳಿಗಾಗಿ ನನ್ನ ಐಶ್ವರ್ಯವನ್ನು ಅರ್ಪಿಸುವೆನು, ತಾಯಿ, ನೀವು ಚಿಂತಿಸಬೇಡಿ " ಎಂದನು.

ಪತಿವ್ರತೆಯಾದ ಮಾತೆಯು, ದೇವರು ತನ್ನ ಆಸೆಯನ್ನು ನೆರವೇರಿಸಿದನೆಂದು ತಿಳಿದು, ಮಂದಹಾಸದಿಂದ – " ರಾಮ ! ರಾಮ ! ರಾಮ ! ರಾ.... " ಎನ್ನುತ್ತ ಇಹಲೋಕವನ್ನು ತ್ಯಜಿಸಿದಳು.

(೩)

ಡಾಕ್ಟರ್ ಗೋವಿಂದರಾಯನು ಮದ್ರಾಸು ಪಟ್ಟಣದಲ್ಲಿ ಪ್ರಸಿದ್ಧ ಕನ್ನಡಿಗನಾಗಿದ್ದನು. ಅವನ ತಂದೆ ಶಾಮುರಾಯನು ವಕೀಲನಾಗಿದ್ದನು. ವಕೀಲ ವೃತ್ತಿಯಿಂದ ಅತುಳೈಶ್ವರ್ಯವನ್ನು ಸಂಪಾದಿಸಿ, ಮದ್ರಾಸಿನಲ್ಲಿ ಹೆಸರುವಾಸಿಯಾಗಿದ್ದನು. ಆ ಐಶ್ವರ್ಯಕ್ಕೆ ಗೋವಿಂದರಾಯನು ಏಕಮಾತ್ರ ಅಧಿಕಾರಿಯಾಗಿದ್ದನು. ಅವನು ಚಿಕ್ಕವನಾಗಿರುವಾಗಲೆ ಅವನ ತಾಯಿಯು ತೀರಿಕೊಂಡಿದ್ದಳು. ಆದ್ದರಿಂದ ತಂದೆಯ ಪ್ರೀತಿಯಿಂದಲೆ ಬೆಳೆದ ಬಾಲಕನು ಚಿಕ್ಕಂದಿನಿಂದಲೂ ಹಠಿಯೂ, ಮುಂಗೋಪಿಯೂ ಆಗಿದ್ದನು. ಆದರೆ ಅವನ ಬುದ್ಧಿಯು ವಿಶೇಷ ಚುರುಕಾಗಿದ್ದಿತು. ಆದ್ದರಿಂದ ಅವನು ಕ್ರಮವಾಗಿ ಇಂಟರ್, ಬಿ. ಎ., ಪರೀಕ್ಷೆಗಳಲ್ಲಿ ಉಚ್ಚ ತರಗತಿಯಲ್ಲಿ ತೇರ್ಗಡೆ ಹೊಂದಿ, ಮುಂದೆ ಎಂ. ಬಿ ಬಿಎಸ್., ಎಂಬ ಡಾಕ್ಟರ್ ಪರೀಕ್ಷೆಗೆ ಓದಲಾರಂಭಿಸಿದನು. ಅದರಲ್ಲಿಯೂ ಪ್ರತಿ ವರ್ಷ ಉಚ್ಚ ತರಗತಿಯಲ್ಲಿ ತೇರ್ಗಡೆಯಾಗಿ ಅಧ್ಯಾಪಕರುಗಳಿಗೆ ಅಚ್ಚುಮೆಚ್ಚಾಗಿದ್ದನು. ಮುಂದೆ ಅವನು ವೈದ್ಯವೃತ್ತಿಯನ್ನವಲಂಬಿಸಿದಾಗ ಅದರಲ್ಲಿಯೂ ಹೆಸರುವಾಸಿಯಾಗಿ, ವಿಶೇಷ ಧನವನ್ನೂ ಸಂಪಾದಿಸಿದನು. ಇಷ್ಟು ಧನವಿದ್ದರೂ ಅವನು ಧರ್ಮಕಾರ್ಯಗಳಿಗಾಗಿ ಒಂದು ಪೈಯನ್ನೂ ಕೊಡುತ್ತಿರಲಿಲ್ಲ. ಯಾರಾದರೂ ಬಡ ವಿದ್ಯಾರ್ಥಿಗಳು ಬಂದು ಸಹಾಯ ಕೇಳಿದರೆ – " ಈ ಕಾಲದಲ್ಲಿ ಇಂಗ್ಲಿಷ್ ಓದಿ, ಎಲ್ಲರೂ ಇಂಗ್ಲಿಷರಂತೆ ವೇಷವನ್ನು ಧರಿಸಿ ಕೆಡಲಾರಂಭಿಸಿದ್ದಾರೆ. ನಮ್ಮ ದೇಶಕ್ಕೆ ಅದು ಒಳ್ಳೆಯದಲ್ಲ. " ಎಂದು ಕಳುಹಿಸಿಬಿಡುತ್ತಿದ್ದನು. ಆದರೆ ಅವನಿಗೆ ಮಕ್ಕಳೆ ಇರಲಿಲ್ಲ. ಅವನ ಪತ್ನಿಯು ಪರಮಸಾಧ್ವಿಯಾಗಿದ್ದಳು. ಪತಿಸೇವೆಯೆ ಅವಳ ಪರಮವ್ರತವಾಗಿದ್ದಿತು! ಗಂಡನ ಬುದ್ಧಿಯು ಅವಳಿಗೆ ಗೊತ್ತಿದ್ದರೂ ಅವಳು ಒಂದು ಮಾತನ್ನೂ ಆಡುತ್ತಿರಲಿಲ್ಲ.

ದೇವರ ದಯೆಯಿಂದಲೆ ಇಂದು ಗೋವಿಂದರಾಯನ ಹೃದಯವು ಆ ರೋಗಿಯ ಸ್ಥಿತಿಯನ್ನು ಜ್ಞಾಪಿಸಿಕೊಂಡು ದಯಾಭಾವದಿಂದ ತುಂಬಿ ತುಳುಕುತ್ತಿದೆ. ಇದುವರೆಗೆ ಗೋವಿಂದರಾಯನು ತನ್ನ ಡಾಕ್ಟರ್‌ಗಿರಿಯಲ್ಲಿ ಎಷ್ಟೋಜನ ಅನಾಥರ ಗೋಳನ್ನು ಕೇಳಿದ್ದರೂ, ಮೊನ್ನೆಯಂತಹ ಕರುಣಾಜನಕವಾದ ಪ್ರಭಾವವು ಅವನ ಹೃದಯದ ಮೇಲೆ ಆಗಿರಲಿಲ್ಲ. ಇಂದು ಅವನ ಹೃದಯದಿಂದ ಕರುಣೆಯ ಝರಿಯು ಹರಿಯಲಾರಂಭಿಸಿದೆ. ಈಗ ದೀನರು ಮತ್ತು ದುಃಖಿಗಳ ವಿಚಾರದಲ್ಲಿ ಅವನ ಹೃದಯವು ಕೋಮಲವಾಗಿದೆ. ಈಗ ಅವನ ಮೊದಲಿನ ದುರಾಗ್ರಹದ, ಕ್ರೂರವಾದ ಸ್ವಭಾವವು ಮಾಯವಾಗುತ್ತಿದೆ. ಈಗ ಅವನಲ್ಲಾಗಿರುವ ಆತ್ಮವಿಕಾಸವು ಅವನಿಗೇ ತಿಳಿಯದಂತಾಗಿದೆ. ಈಗ ದೇಶದಲ್ಲಿರುವ ಎಲ್ಲ ದುಃಖಿಗಳನ್ನೂ ಅವನ ಬಂಧುಗಳಂತೆ ತಿಳಿಯುತ್ತಿರುವನು. ಈಗ ಡಾಕ್ಟರ್ ಗೋವಿಂದರಾಯನ ಸ್ವಭಾವವು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ. ಗೋವಿಂದರಾಯನು ಈಗ "ನನ್ನ ದುರ್ವಾಸನೆಗಳೆಲ್ಲ ದೂರವಾದವು. ಈಗ ನನಗೆ ಪುನರ್ಜನ್ಮವಾಗಿದೆ" ಎಂದು ತಿಳಿದಿರುವನು. ಅವನು ತನ್ನ ಭವ್ಯವಾದ ಭವನದೆದುರಿನಲ್ಲಿ ಮತ್ತೊಂದು ಸುಂದರವಾದ ಚಿಕ್ಕ ಮನೆಯೊಂದನ್ನು ಕಟ್ಟಿಸಿ, ಅಲ್ಲಿ ಶಂಕರನನ್ನೂ ಸೀತೆಯನ್ನೂ ಇಟ್ಟು ಅವರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾನೆ. ಅವನ ಪತ್ನಿಯೂ ಆಗಾಗ್ಗೆ ಅಲ್ಲಿಗೆ ಬಂದು, ತನ್ನ ಪ್ರೇಮದಿಂದ ಆ ಮಕ್ಕಳ ಮಾತೆಯ ಪ್ರೀತಿಯ ಕೊರತೆಯನ್ನೂ ನಿವಾರಿಸುತ್ತಿರುವಳು.

(೪)

"ಸೀತೆ, ನಿನಗೆ ಅಮ್ಮನ ಜ್ಞಾಪಕವಿದೆಯೆ?"

"ಇಲ್ಲ ಅಣ್ಣ, ಆಗ ನಾನು ಚಿಕ್ಕವಳಾಗಿದ್ದೆ. ಅಮ್ಮ ನಗುತ್ತ ಇದ್ದುದು ಮಾತ್ರ ಸ್ವಲ್ಪ ನೆನಪಿದೆ. ಮತ್ತೇನೂ ನೆನಪಿಲ್ಲ."

"ಸೀತೆ, ಅಮ್ಮನು ಸತ್ತ ರಾತ್ರಿಯನ್ನು ಜ್ಞಾಪಿಸಿಕೊಂಡರೆ ಎದೆ ನಡುಗುವುದು. ಆ ದಿನವೆಲ್ಲಿ— ಈ ದಿನವೆಲ್ಲಿ! ಈಗ ನಾವು ವಿದ್ಯಾವಂತರಾಗಿದ್ದೇವೆ. ಹಿಂದಿನ ಸಂಗತಿಗಳು ಸ್ಪಷ್ಟದಂತೆ ತೋರುತ್ತಿವೆ. ಆದರೆ ಅಮ್ಮನು

ಮಾಡಿದ ಆಶೀರ್ವಾದವು ಸುಳ್ಳಾಗಲಿಲ್ಲ. ದೇವರು ನಮಗೆ ಹೇಗೆ ಸಹಾಯ ಮಾಡುತ್ತಿದ್ದಾನೆ ನೋಡು. ನಾವು ಅವನ ಉಪಕಾರಕ್ಕಾಗಿ ಎಷ್ಟು ವಂದನೆಗಳನ್ನರ್ಪಿಸಿದರೂ ಸ್ವಲ್ಪವೆ. ನಮ್ಮ ಜೀವನದಲ್ಲಿ ಕೇವಲ 'ಪರೋಪಕಾರ'ವೆಂಬ ಒಂದು ವ್ರತದಿಂದಲೆ ಅವನನ್ನು ಸಂತೋಷಪಡಿಸಬಹುದು."

"ಹೌದಣ್ಣಾ! ದೇವರ ದಯೆಯಿಂದ ನಾವು ಇಷ್ಟು ಸುಖಿಗಳಾಗಿದ್ದೇವೆ. ಆದ್ದರಿಂದ ದೀನರ ಉದ್ಧಾರವೆ ನಮ್ಮ ಜೀವನದ ಗುರಿಯಾಗಬೇಕು. ಈ ದುಃಖಮಯ ಜಗತ್ತಿನಲ್ಲಿ ಅದೊಂದೆ ಸಾರ್ಥಕವಾದ ಕಾರ್ಯ."

ಅಷ್ಟರಲ್ಲಿ ಅಂಚೆಯವನು ಒಂದು ಕಾಗದವನ್ನು ಶಂಕರರಾಯನ ಕೈಯಲ್ಲಿ ತಂದುಕೊಟ್ಟನು. ತನ್ನ ವೈದ್ಯವೃತ್ತಿಯಿಂದ ವಿಶ್ರಾಂತಿಹೊಂದಿ, ವೈರಾಗ್ಯಸಾಧನೆಗಾಗಿ ತನ್ನ ಜನ್ಮಭೂಮಿಯಾದ ಉಡುಪಿಯತ್ತ ಕಡೆ ತೆರಳಿದ ಗೋವಿಂಡರಾಯನ ಪತ್ರವದು. ಶಂಕರನು ಪತ್ರವನ್ನೊಡೆದು ಓದಿದನು. ಬಳಿಕ ಅವನು ಸೀತೆಯನ್ನು ಕುರಿತು – "ತಂಗೀ! ಅಮ್ಮನ ಆಶೀರ್ವಾದವು ಅರಳಿ ಹೂವಾಯಿತು. ನಮ್ಮ ಪಾಲಕಪಿತರಾದ ಗೋವಿಂದರಾಯರು ತಮ್ಮ ಆಸ್ತಿಗೆ ನನ್ನನ್ನೆ ಉತ್ತರಾಧಿಕಾರಿಯಾಗಿ ಮಾಡಿ ಪತ್ರವನ್ನು ರಿಜಿಸ್ಟರು ಮಾಡಿದ್ದಾರೆ. ಈಗ ನನಗೆ ಒಳ್ಳೆಯ ವಧುವನ್ನೂ ನಿನಗೊಬ್ಬ ಸುಂದರನೂ ವಿದ್ಯಾವಂತನೂ ಆದ ವರನನ್ನೂ ನೋಡಿರುವರಂತೆ. ನಮ್ಮ ಮುಂದಿರುವ ಭವನದಲ್ಲಿಯೆ ನಮ್ಮ ವಿವಾಹಗಳಾಗಬೇಕಂತೆ. ಅವರು ನಾಳೆ ಅದಕ್ಕಾಗಿ ನಮ್ಮ ಪಾಲಕ ಮಾತೆಯೊಂದಿಗೆ ಬರುವರಂತೆ!" ಎಂದು ಗದ್ಗದಿತನಾಗಿ ಆನಂದಾಶ್ರುಗಳನ್ನು ಸುರಿಸಲಾರಂಭಿಸಿದನು.

ಸೀತೆಯು ಮಾತಿಲ್ಲದ ಮೌನದಿಂದಲೂ ಆಶ್ಚರ್ಯದಿಂದಲೂ ಪತ್ರವನ್ನೆ ನೋಡುತ್ತಿದ್ದಳು.

# ಆತ್ಮ ನಿವೇದನೆ

*

(೧)

ಚಿಕ್ಕಮಗಳೂರಿನಿಂದ ಆರು ಮೈಲಿ ದೂರದಲ್ಲಿ ಒಂದು ವಿಸ್ತಾರವಾದ ಕಾಫಿ ತೋಟದ ಮಧ್ಯದಲ್ಲಿ ಒಂದು ಬಂಗಲೆ. ಅನೇಕ ಕುರ್ಚಿ ಮೇಜು ಕನ್ನಡಿ·ಮತ್ತು ಚಿತ್ರಪಟಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ ಆ ಬಂಗಲೆಯ ವರಾಂಡದಲ್ಲಿ ಕುರ್ಚಿಗಳ ಮೇಲೆ ಇಬ್ಬರು ಕುಳಿತು ಮಾತನಾಡುತ್ತಿದ್ದರು.

ಗಂಭೀರ ಮುದ್ರೆಯನ್ನು ತಾಳಿ ಕಿಟಕಿಯ ಮೂಲಕ ಶೂನ್ಯ ದೃಷ್ಟಿ ಇಂದ ನೋಡುತ್ತಿದ್ದ ಮೋಹನನು,—ಇನ್ನೊಬ್ಬ ವ್ಯಕ್ತಿಯ ಕಡೆ ತಿರುಗಿ ಕೇಳಿದನು. ' ಪ್ರಾಣ ಭಯವೇನೂ ಇಲ್ಲವಷ್ಟೆ ? "—ಇನ್ನೊಬ್ಬರು, ಬೆಂಗಳೂರಿನ ಪ್ರಸಿದ್ಧ ಡಾಕ್ಟರು, ತಲೆಯಲ್ಲಾಡಿಸಿದರು. ಮೋಹನನು ಪುನಃ ಕಾತುರನಾಗಿ ಹೇಳಿದ ' ನೀವಿನ್ನೂ ಎಂಟು ದಿನ ಇಲ್ಲಿದ್ದು ರೋಗಿಯನ್ನು ಸುಸ್ಥಿತಿಗೆ ತಂದು ಅನಂತರ ಹೋಗಿರಿ. ನಿಮ್ಮ ಫೀಜಲ್ಲದೆ ದಿನ ಒಂದಕ್ಕೆ ನೂರು ರೂಪಾಯಿನಂತೆ, ಎಂಟುನೂರು ರೂಪಾಯಿಗಳನ್ನು ಮೈಸೂರು ಬ್ಯಾಂಕಿನಲ್ಲಿ ನಿಮ್ಮ ಹೆಸರಿನಲ್ಲಿ ಡಿಪಾಜಿಟ್ಟು ಈ ದಿನ ಕಟ್ಟಿಸಿದ್ದೇನೆ.'

ಆಶ್ಚರ್ಯದಿಂದ ಕಿಂಚಿತ್ಕಾಲ ಸ್ತಂಭಿತರಾದ ಡಾಕ್ಟರು ಹೇಳಿದರು— " ನಿಮ್ಮಂಥವರನ್ನು ನಾನು ಇದುವರೆಗೂ ನೋಡಿರಲಿಲ್ಲ! ಮೋಹನರಾವ್, ನಾನು ಈ ದಿನ ಬೆಳಿಗ್ಗೆ ನಿಮ್ಮ ನೆರೆ ಕಾಫಿಪ್ಲಾಂಟರಾದ ದೊಡ್ಡೇಗೌಡರ ಬಳಿ ಹೋಗಿದ್ದೆ. ನಿಮ್ಮ ವಿಷಯವಾಗಿ ಅವರು ಹೇಳಿದ ಕೆಲವು ವಿಷಯಗಳು

ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದವು. ಗುಂಡೂರಾಯರು ನಿಮ ಗೇನು ಆಗಿದ್ದರು? ಅವರ ಹಿತಚಿಂತನೆಗಾಗಿ ನೀವೀರೀತಿ ಒದ್ದಾಡುವುದನ್ನು ನೋಡಿದರೆ ನಿಮ್ಮಂತಹ ದಯಾಳುಗಳು ಎಲ್ಲೂ ಸಿಗರೆಂದು ನಂಬಿಕೆಯಾಗುವುಮ! ”

ಮೋಹನನು ಮಾತಾಡಲಿಲ್ಲ, ಅವನ ಗಂಭೀರವಾದ ಮುಖ ಮುದ್ರೆಯಲ್ಲಿ ಹುಸಿನಗೆಯು ಮಿಂಚು ತೋರಿ, ಮಾಯವಾಯಿತು.

ಡಾಕ್ಟರು ಮುಂದರಿಸಿದರು—‘ ಆದರೆ ನೀವೀರೀತಿ ಹೆಚ್ಚು ವೆಚ್ಚ ಮಾಡಿ ನನ್ನನ್ನಿನ್ನೂ ಕೆಲದಿನ ಇಟ್ಟುಕೊಳ್ಳಬೇಕೆನ್ನುವುದರಲ್ಲಿ ಅರ್ಥವಿಲ್ಲ. ಅದೂ ಗುಂಡೂರಾಯನಿಗೆ. ಇದು ವ್ಯರ್ಥ ಖರ್ಚು. ನಿಮಗೆ ತೋಟವನ್ನು ಮಾರಿ ಬಂದ ದುಡ್ಡನ್ನು ಬೆಂಗಳೂರಿಗೆ ಕೊಂಡು ಹೋಗಿ ಸುರಾಪಾನಗಳಲ್ಲೂ ವೇಶ್ಯಾ ಗೃಹಗಳಲ್ಲೂ ದುಂದು ಮಾಡಿ, ಕಾಯಿಲೆ ಸಂಪಾದಿಸಿಕೊಂಡು, ಪಾಪರಾಗಿ ವಾಪಸ್ಸು ಬಂದಾಗ ನೀವಿಲ್ಲಿ ಅವನಿಗೆ ಎಡೆಗೊಟ್ಟುದೇ ಹೆಚ್ಚು! ಅಲ್ಲದೆ ನೀವು ಹಗಲಿರುಳು ಅತಿಶಯ ಶ್ರಮದಿಂದ ದುಡಿದು ನಿರೀಕ್ಷಿಸಲಾಗದ ಲಾಭವನ್ನು ತೋಟದಿಂದ ಗಳಿಸುತ್ತಿರುವಾಗ, ಅವನು ಹಾಯಾಗಿ ದುಡ್ಡನ್ನು ತನ್ನದಕ್ಕಿಂತ ಹೆಚ್ಚಾಗಿ ತಿಳಿದು ಖರ್ಚು ಮಾಡುತ್ತಾ ತನ್ನ ದುರ್ವ್ಯಸನತೆಗಳಲ್ಲಿ ತೊಡಗಿದ್ದರೂ ಅವನನ್ನು ಹೊರದೂಡದಿರುವಿರಿ. ಕೊನೆಗೆ ವ್ಯಭಿಚಾರಾರ್ಜಿತ ರೋಗದಿಂದ ಹಾಸಿಗೆ ಹಿಡಿದಾಗ ಬೆಂಗಳೂರಿನಿಂದ ನನ್ನಂತಹ ಭಾರಿ ಫೀಜಿನ ಡಾಕ್ಟರನ್ನು ಕರೆ ಕಳುಹಿಸಿರುವುದು ಮತ್ತೂ ಹೆಚ್ಚಿನ ವಿಷಯ. ”

ಮೋಹನನ ಗಂಭೀರ ಮುಖ ಮುದ್ರೆಯು ಸ್ವಲ್ಪ ಸಡಿಲವಾಗಿ ಮತ್ತೊಂದು ಬಾರಿ ಅದೇ ಹುಸಿನಗೆಯು ಮೊಗದಲ್ಲಿ ಮಿಂಚಿತು. ಡಾಕ್ಟರು ಪುನಃ ಹೇಳಿದರು—‘ ಗತಿಯಿಲ್ಲದವರಿಗೋ, ಅಕಸ್ಮಾತ್ತಾಗಿ ವಿಪತ್ತಿಗೆ ಗುರಿಯಾದವರಿಗೊ ಸಹಾಯ ಮಾಡುವುದು ಸರಿ. ಆದರೆ ನನ್ನ ಅಭಿಪ್ರಾಯದಲ್ಲಿ,—ಮೋಹನರಾಯರೆ-ನೀವು ಈಗ ಮಾಡುತ್ತಿರುವುದು ಪೋಲು ವೆಚ್ಚ!

ಮೋಹನನು ತಲೆಯಲ್ಲಾಡಿಸುತ್ತಾ—“ ಈ ವೆಚ್ಚದಿಂದ ಪ್ರಯೋಜನವಿದೆ. ಉಪಕಾರ ಎಂದಿಗೂ ವ್ಯರ್ಥವಾಗದು ” ಎಂದನು. ಡಾಕ್ಟರು ಅಪ್ರತಿಭರಾಗಿ ‘ ನೀವೇನೊ ಈ ದುಂದುಗಾರನಿಗೆ ಮತ್ತಾವ ಮನುಷ್ಯನೂ ತೋರಲಾರದಷ್ಟು ಧಾರಾಳತನದಿಂದ ಸಹಾಯ ಮಾಡುತ್ತಿರುವಿರಿ. ಆದರೆ ಉಪಕಾರದ

ನೆನಪನ್ನು ಸಹಾ ಅವನು ಎಂದೂ ಸ್ಮರಿಸಲಾರದವನು. ಗುಂಡೂರಾಯನ ಹತ್ತಿರವಿದ್ದು ನನ್ನೆರಡು ದಿನದ ಅನುಭವದಿಂದಲೇ ನಾನಿದನ್ನು ಮಾತ್ರ ಖಂಡಿತವಾಗಿ ಹೇಳಬಲ್ಲೆ. ನಿಮಗೀ ವ್ಯರ್ಥ ವೆಚ್ಚದಿಂದ ಆಗುವ ಪ್ರಯೋಜನವೇನೊ ನನಗೆ ತೋರಲಿಲ್ಲ" ಎಂದನು.

ಮೋಹನನು ನಿಧಾನವಾಗಿ ಹೇಳತೊಡಗಿದನು—'ನನ್ನ ಕತೆ ಕೇಳಿದರೆ ನೀವು ಹಾಗೆನ್ನುವುದಿಲ್ಲ, ನನಗೆ ಈ ಪ್ರಪಂಚದಲ್ಲಿ ಯಾರೂ ಇಲ್ಲ. ಮೂರು ನಾಲ್ಕು ತಿಂಗಳ ಮಗುವಾದಾಗ ನನ್ನನ್ನು ರೈಲ್ವೇ ಸ್ಟೇಷನ್ ವೇಟಿಂಗ್ ರೂಮ್‌ನಲ್ಲಿ ಯಾರೋ ಬಿಟ್ಟು ಹೋದರಂತೆ! ಯಾರೋ ಪುಣ್ಯಾತ್ಮರು ನನ್ನನ್ನು ಮೈಸೂರು ಅನಾಥಾಲಯಕ್ಕೆ ತಂದುಬಿಟ್ಟರು. ನನ್ನ ಬಾಲ್ಯ ಬಂಧು ಪ್ರೇಮದ ಅರಿವಿಲ್ಲದೆ, ಹೆತ್ತ ಕರುಳಿನ ಮಮತೆ ಕಾಣದೆ ಕಳೆಯಿತು. ಅಂದು ಅನಾಥಾಲಯದ ಬಾಲಕನಾಗಿ ಇಂದು ಈ ಕಾಫಿ ತೋಟದ ಯಜಮಾನನಾಗುವವರೆಗೆ ಯಾರ ಸಹಾಯವೂ ಸಹಾನುಭೂತಿಯೂ ಇಲ್ಲದೆ ನನ್ನ ಮಾರ್ಗವನ್ನು ನಾನೇ ಸರಿಪಡಿಸಿಕೊಂಡಿರುವೆನು. ಆದ್ದರಿಂದ ತಂದೆ ತಾಯಿ ಅಣ್ಣ ತಮ್ಮ ಅಕ್ಕ ತಂಗಿ ಮೊದಲಾದ ಬಂಧುಗಳುಳ್ಳವರನ್ನು ಕಂಡು ನನ್ನಲ್ಲಿ ಸ್ವಾಭಾವಿಕವಾಗಿ ಅಸೂಯೆಯು ತಲೆದೋರಿತು. ನಾನು ಎಲ್ಲಿಂದ ಬಂದನೆಂಬುದೇ ತೋರದಾಯಿತು. ನಾನು ಪ್ರಪಂಚದಲ್ಲಿ ದೊಡ್ಡದೊಂದು ಕೊರತೆಯುಳ್ಳ ಮನುಷ್ಯನಾದೆ. ಗುಂಡೂರಾಯ— ಈ ವಿಷಯದಲ್ಲಿ ಅದೃಷ್ಟಶಾಲಿ. ತಂದೆ, ತಾಯಿ, ಅಕ್ಕ, ತಂಗಿ, ಮೊದಲಾದ ಬಂಧು ಪ್ರೇಮದ ಸವಿಯೂಟವನ್ನುಂಡು ಬೆಳೆದವನು. ಈಗೈದು ವರ್ಷಗಳಿಂದಲೇ ಅವನು ಕೆಟ್ಟ ಸಹವಾಸಕ್ಕೆ ಬಿದ್ದು ಸುರಾಪಾನ ವ್ಯಭಿಚಾರಗಳಿಗೆ ಮೊದಲು ಮಾಡಿ, ಕಳ್ಳತನ ಸುಳ್ಳು ಪತ್ರಗಳಿಗೆ ಕೈಹಾಕಿ ಸಿಕ್ಕಿಬಿದ್ದು ಸಂಕಟಕ್ಕೊಳಗಾದನು. ಅವನ ತಾಯಿ ಕೊರಗಿನಿಂದ ಎದೆಯೊಡೆದು ತೀರಿ ಹೋದಳು. ಸಂಕಟದಿಂದ ಪಾರು ಮಾಡಿಸಿ ಶಿಕ್ಷೆ ತಪ್ಪಿಸಲೋಸುಗವೂ, ತಾಯಿಯ ಮರಣದಿಂದ ನೊಂದು ಇನ್ನು ಸನ್ಮಾರ್ಗಾವಲಂಬಿಯಾಗುವೆನೆಂದು ಶಪಥ ಮಾಡಿದ ಮಗನಿಗೆ ಒಂದು ಜನರಹಿತ ಸ್ಥಳದಲ್ಲಿ ಉದ್ಯೋಗವನ್ನು ಕಲ್ಪಿಸಲೋಸುಗವೂ ಅವನ ತಂದೆ ಇದ್ದಬದ್ದ ಆಸ್ತಿಯನ್ನೆಲ್ಲಾ ಮಾರಿ ಮಗನಿಗೆ ಈ ಕಾಫೀತೋಟ ಕೊಂಡುಕೊಟ್ಟರು. ಮಗಳ ವಿದ್ಯಾಭ್ಯಾಸಕ್ಕಾಗಿ ತಂದೆ ಬೆಂಗಳೂರಿನಲ್ಲೆ

ಉಳಿಯಲು, ಗುಂಡೂರಾಯ ಇಲ್ಲೊಬ್ಬನೇ ಇದ್ದ. ದೃಢ ಸಂಕಲ್ಪವಿಲ್ಲದವನು ಪಟ್ಟಣದಲ್ಲಿದ್ದರೇನು, ಪಟ್ಟಣದಿಂದ ದೂರವಾಗಿದ್ದರೇನು? ಒಂದು ವರ್ಷದೊಳಗೆ ಸುರಾದೇವಿಗೆ ಸಂಪೂರ್ಣ ವಶನಾದ. ಇಂಥವನಿಗೆ ಈ ತೋಟದಲ್ಲಿ ನಷ್ಟವಾದುದರಲ್ಲಿ ಆಶ್ಚರ್ಯವೇನು? ಆಗಲೇ ನಾನಿದನ್ನು ಸುಲಭ ಬೆಲೆಗೆ ಕೊಂಡದ್ದು. ನಾನು ಕೊಟ್ಟ ಹಣವನ್ನೆಲ್ಲಾ ವೆಚ್ಚಮಾಡಿ. ಅವನು ಮತ್ತೆ ನನ್ನ ಬಳಿಗೆ ಬಂದು ತನ್ನ ಕತೆಯನ್ನು ಹೇಳಿಕೊಂಡ. ಅವನ ತಂದೆ, ಮತ್ತು ತಂಗಿಯರಿಗೆ ಇದೆಲ್ಲಾ ಇನ್ನೂ ತಿಳಿದಿಲ್ಲವಂತೆ! ಮಗನು ಸನ್ಮಾರ್ಗದಲ್ಲಿ ಅಭಿವೃದ್ಧಿ ಹೊಂದುತ್ತಿರುವನೆಂದು ತಿಳಿದುಕೊಳ್ಳುವ ಹಾಗೆ ಕಾಗದವನ್ನು ಬರೆಯುತಿದ್ದನಂತೆ! ಈಗಲೂ ಹಾಗೆಯೆ! ಆ ಕೇವಲ ಎರಡು ಜೀವಗಳಿಗಾಗಿ,—ತನ್ನ ನಿಜಸ್ಥಿತಿ ತಿಳಿದರೆ ಅತಿಶಯ ವ್ಯಥೆಗೀಡಾಗುವ ಆ ಎರಡು ಜೀವಗಳಿಗಾಗಿ-ಸುಳ್ಳು ಕಾಗದಗಳನ್ನು-ಇಲ್ಲಿಂದ ಬರೆಯಲು ನನ್ನ ಅಪ್ಪಣೆ ಕೇಳಿದ. ತಂದೆ ಅಥವಾ ತಂಗಿ ಎಂಬ ಬಂಧುಗಳೇನೆಂಬುದನ್ನೇ ಅರಿಯದ ನಾನು ಅವರಿಗಾಗಿ ವ್ಯಸನಪಟ್ಟೆ. ಈಗ ನಿಜಾಂಶವು ತಿಳಿದರೆ ಅವರಿಗೆ ಎಂಥಾ ಪೆಟ್ಟು ತಾಗಿದಂತಾಗುವುದೆಂದು ನಾನು ಯೋಚಿಸಿದೆ. ಅವರ ಪ್ರಾಣ ಉಳಿಯುವುದಕ್ಕಾಗಿ ನಾನು ಅವನ ಕಾಗದಗಳಿಗೆ ಸಮ್ಮತಿಸಿದೆ. ಈಗ ಹೆಚ್ಚು ಖರ್ಚುಮಾಡಿ, ಸರಿಯಾದ ವೈದ್ಯ ಸಹಾಯವನ್ನು ಗುಂಡೂರಾಯನಿಗೆ ಕೊಡಿಸುತ್ತಿರುವುದು ಅದಕ್ಕೋಸ್ಕರವೇ-ಈಗ ಸ್ವರ್ಗ ಸುಖದಿಂದಿರುವ ಎರಡು ಜೀವಿಗಳಿಗೆ ನರಕಯಾತನೆಯ ಅನುಭವ ತಪ್ಪಿಸಲಿಕ್ಕೆ ಈ...."

ಡಾಕ್ಟರನು ಮೋಹನನನ್ನು ಸ್ವಲ್ಪ ಹೊತ್ತು ನೆಟ್ಟ ನೋಟದಿಂದ ನೋಡಿದನು. ಬಳಿಕ ಕಿಂಚಿತ್ ಮಂದಹಾಸದಿಂದ "ನೀವು ಗುಂಡೂರಾಯರ ತಂಗಿಯನ್ನು ನೋಡಿರುವಿರೇನು?" ಎಂದು ಕೇಳಿದನು.

ಮೋಹನನು ಚಕಿತನಾದನು. ಮರುಕ್ಷಣದಲ್ಲಿಯೇ ಗಂಭೀರ ಮುದ್ರೆತಾಳಿ, "ಇಲ್ಲ, ಆಕೆ ಹೇಗಿರುವಳೆಂಬ ಕಲ್ಪನೆ ಸಹ ನನಗಿಲ್ಲ. ನಿಮ್ಮ ಅಭಿಪ್ರಾಯ ನನಗೆ ತಿಳಿಯಿತು, ಆಕೆಯ ಭಾವ ಚಿತ್ರ ನೋಡಿ ನಾನು ಮೋಹಿಸಿರಬಹುದೆಂಬ ಆಲೋಚನೆ ಬಿಟ್ಟು ಬಿಡಿ. ನನಗ್ಯಾರೂ ಬಂಧುಗಳಿಲ್ಲ. ಬಂಧುಗಳುಳ್ಳವರಿಗೆ ಸಹಾಯ ಮಾಡಬೇಕೆಂಬ ಅಭಿಲಾಷೆ

ಯಿಂದಲೇ ನಾನೀ ಕೆಲಸ ಮಾಡುತ್ತಿರುವುದು ಆ ಸಂತೋಷಭಾವ ನೆಯೇ ನನ್ನನ್ನು ಸುಖಿಯಾಗಿಟ್ಟಿರುವುದು!" ಎಂದನು.

ಡಾಕ್ಟರನ ಕಣ್ಣುಗಳಿಂದ ನೀರು ಹನಿಗಳುದುರಿದುವು. ತಲೆದೂಗುತ್ತಾ ಮೋಹನನ ತೇಜಃಪುಂಜವಾದ ಮುಖವನ್ನೇ ನೋಡುತ್ತಿದ್ದನು!

(೨)

ಈ ಮಾತು ಕತೆಗಳಾದ ಆರು ದಿನಗಳ ಮೇಲೆ ಪುನಃ ಡಾಕ್ಟರರೂ ಮೋಹನನೂ ಕುರ್ಚಿಗಳ ಮೇಲೆ ವರಾಂಡದಲ್ಲಿ ಕುಳಿತು ಮಾತಾಡುತ್ತಿದ್ದರು.

'ಗುಂಡುರಾಯನಿಗೆ ಪುನರ್ಜನ್ಮವಾಯಿತೆಂದೇ ಹೇಳಬೇಕು. ಹಾಗೆ ಹೇಳುವುದು ನನ್ನ ಪ್ರತಿಷ್ಠೆಯೆಂದೆನ್ನಬಹುದು. ಆದರೂ ನಾನು ಬಂದುದರಿಂದ ಅವನ ಜೀವಉಳಿಯಿತೆಂದು ಹೇಳದಿರಲಾರೆ. ಇನ್ನು ಕೆಲದಿನಗಳಲ್ಲೇ ಅವನೆದ್ದು ಓಡಾಡಬಹುದು. ಅದುವರೆಗೂ ಅವನನ್ನಾರ್ಯರೂ ಮಾತನಾಡಿಸ ಕೂಡದು. ಈಗ ಅವನಲ್ಲಿ ಒಳ್ಳೆಯೋಚನೆಗಳು ಮೂಡಿರುವಂತೆ ತೋರುತ್ತದೆ. ಆದರೆ ಪುನಃ ಹಿಂದಿನ ಕತೆಗೆ ಎಂದು ಆರಂಭಿಸುತ್ತಾನೋ ಹೇಳಲಾಗುವುದಿಲ್ಲ'—ಎಂದು ಡಾಕ್ಟರು ಹೇಳುತಿದ್ದಾಗ ಟಪ್ಪಾಲು ಬಂದಿತು. ಗುಂಡೂರಾಯನಿಗೊಂದು ಕವರು ಅದರಲ್ಲಿತ್ತು.

'ಈಗ ಈ ಕಾಗದ ರೋಗಿಗೆ ಕೊಡಬೇಡಿ' ಎಂದು ಹೇಳುತ್ತಾ ಡಾಕ್ಟರು ಕವರನ್ನು ತೆಗೆದುಕೊಂಡು ಕೈಯಲ್ಲಿ ತೂಗಿನೋಡಿದನು. ಕವರಿನ ಮೇಲಿನ ವಿಳಾಸ ನೋಡುತ್ತಾ ಸ್ವಲ್ಪ ಚಕಿತನಾಗಿ 'ಗುಂಡೂರಾಯನ ತಂಗಿಯ ಹೆಸರೇನು?' ಎಂದು ಕೇಳಿದನು.

'ಮನೋರಮಾಬಾಯಿ,' ಎಂದು ತಕ್ಷಣ ಮೋಹನನು ಉತ್ತರವಿತ್ತು, ಸ್ವಲ್ಪಹೊತ್ತು ಬಿಟ್ಟು, 'ಏಕೆ' ಎಂದು ಪ್ರಶ್ನಿಸಿದನು

ಇದು ಆಕೆಯ ಕಾಗದ ಎಂದೆನ್ನುತ್ತ ಡಾಕ್ಟರು ಕವರನ್ನು ಮೋಹನನ ಕೈಗೆ ಕೊಟ್ಟನು.

ಇದೇನು! ಕವರಿನ ಮೇಲೆ ಚಿಕ್ಕಮಗಳೂರಿನ ಅಂಚೆಯ ಮುದ್ರೆಯಿದೆ. ಅಣ್ಣನನ್ನು ನೋಡಲು ಆಕೆಯೇ ಬಂದಿರುವಳೋ ಏನೋ? ಈ

ಕಾಗದ ನಾವೇ ಓದಿ ನೋಡುವುದು ಒಳ್ಳೇದು ಎಂದೆನ್ನುತ್ತಾ ಮೋಹದನು ಕಾಗದವನ್ನು ಒಡೆದನು. ಒಳಗೆ ಈರೀತಿ ಬರೆದಿತ್ತು—

ಶ್ರೀ

೧೦೫, ರಥದ ಬೀದಿ,
ಚಿಕ್ಕಮಗಳೂರು.
೨-೪-೧೮

ಶ್ರೀ॥ ಸ॥ ಅಣ್ಣನಿಗೆ. ಮನೋರಮಾ ಮಾಡುವ ನಮಸ್ಕಾರಗಳು.

ಈ ಕಾಗದವನ್ನು ನೋಡಿ ನಿನಗೆ ಆಶ್ಚರ್ಯವಾಗಬಹುದು. ನನ್ನೊಂದಿಗೆ ಕಾಲೇಜಿನಲ್ಲಿ ಓದುತ್ತಿರುವ ಈ ಊರಿನ ಸ್ನೆಹಿತೆಯೊಂದಿಗೆ ನಾನು ಈಗಲೇ ಒಂದು ಗಂಟೆಯ ಹಿಂದೆ ಇಲ್ಲಿಗೆ ಬಂದೆನು.

ಹೋದ ತಿಂಗಳು ತಂದೆಯವರೊಂದಿಗೆ ಎರಡು ದಿನ ಮದ್ರಾಸಿಗೆ ಹೋಗಿದ್ದೆ. ದುರ್ಬಲರಾಗಿ ಆರೋಗ್ಯ ಸರಿಯಾಗಿಲ್ಲದೆ, ಅವರು ಯಾವ ಉದ್ವೇಗಕರವಾದ ಯೋಚನೆಯನ್ನು ಮಾಡಕೂಡದೆಂಬುನಾಗಿ ಡಾಕ್ಟರು ಹೇಳಿದರು. ಅಗತ್ಯದ ಕೆಲಸಕ್ಕಾಗಿ ಮದ್ರಾಸಿಗೆ ಅವರು ಹೋಗಲೇ ಬೇಕೆಂದುದರಿಂದ ನಾನೂ ಸಂಗಡಹೋದೆ. ಅಲ್ಲಿ ತಾತಯ್ಯನವರ ಮನೆ ಯಲ್ಲೆ ಇಳಿದುಕೊಂಡಿದ್ದೆವು. ನಾವು ಹೋದ ಮರುದಿನವೇ ತಾತಯ್ಯನವರ ಬಂಧುಗಳ್ಯಾರೊ ಚಿಕ್ಕಮಗಳೂರಿನಿಂದ ಬಂದಿದ್ದವರೊಡನೆ ತಂದೆಯವರು ನಿನ್ನ ವಿಚಾರವಾಗಿ ಮಾತನಾಡತೊಡಗಿದರು. ನಾನು ಒಳಕ್ಕೆ ಹೋಗಲೆಂದು ಎರಡು ಹೆಜ್ಜೆ ಇಡುವಹೊತ್ತಿಗೆ ತಂದೆಯವರು—'ಅಯ್ಯೋ ಗುಂಡಾ, ಗುಂಡಾ!' ಎಂದು ಚೀರಿದ ಶಬ್ದ ಕೇಳಿಸಿ ನಾನು ಕೊಠಡಿಯೊಳಕ್ಕೆ ಹೋಗಿ ನೋಡುವ ಹೊತ್ತಿಗೆ ಜ್ಞಾನ ಶೂನ್ಯರಾಗಿ ಬಿದ್ದಿದ್ದರು. ಶೈತ್ಯೋಪಚಾರ ನಡೆದ ಮೇಲೆ ನೀನು ಕೆಟ್ಟುಹೋದೆಯೆಂದೂ ಪುನಃ ನಿನ್ನ ಮುಖ ನೋಡುವುದಿಲ್ಲವೆಂದೂ ವಿಧವಿಧವಾಗಿ ಹಲುಬಿದರು! ನಿನ್ನನ್ನು ಶಪಿಸಿದರು! ನನಗೆ ಬಹಳ ದುಃಖಕರವಾದರೂ ನಿನ್ನ ವಿಷಯವಾಗಿ ಯಾರೋ ಬಂದ ವರು ಹೇಳಿದುದು ನನಗೆ ನಂಬಿಕೆಯಾಗಲಿಲ್ಲ. ನೀನು ಬರೆಯುತ್ತಿದ್ದ

ಕಾಗದಗಳನ್ನೆಲ್ಲ ಜ್ಞಾಪಿಸಿಕೊಂಡು ನೀನೆಂದಿಗೂ ದುರ್ಮಾರ್ಗಿಯಾಗಿಲ್ಲ ವೆಂದ್ದು ನಾನು ಎಷ್ಟು ಹೇಳಿದರೂ ತಂದೆಯುವರು ನಂಬಲಿಲ್ಲ. ಇನ್ನೂ ಕೋಪದಲ್ಲೆ ಇದ್ದಾರೆ. ನನಗೇನೋ ನಿನ್ನಲ್ಲಿ ಸಂಪೂರ್ಣ ನಂಬಿಕೆ ಇದ್ದರೂ ತಂದೆಯವರಿಗಾಗಿ ನಿನ್ನನ್ನು ಒಂದು ಸಲ ಕಣ್ಣಮುಟ್ಟ ನೋಡಿ ಹೋಗ ಬೇಕೆಂದು ಬಂದೆ. ಈ ಒಂದು ತಿಂಗಳು 'ಕ್ರಿಸ್‌ಮಸ್' ರಜೆ ಬರುವವರೆಗೂ ತಡೆಯುವುದೆ ನನಗೆ ಬಹಳ ಕಷ್ಟವಾಯಿತು. ಕಾಲೇಜಿನಲ್ಲೆಲ್ಲಾ ನಿನ್ನ ಯೋಚನೆ ನನಗೆ. ಇಲ್ಲಿ ನನ್ನ ಸಹಾಧ್ಯಾಯಿನಿಯ ಮನೆಯಲ್ಲಿ ಉಳಿದಿದ್ದೇನೆ. ನನ್ನ ಕೈಯಲ್ಲಿನ ಹಣ ಮುಗಿದಿದ್ದರಿಂದ ನಾನೇ ಗಾಡಿ ಮಾಡಿಕೊಂಡು ತೋಟಕ್ಕೆ ಬರಲಾಗಲಿಲ್ಲ. ನೀನೀ ಕಾಗದ ಕಂಡ ಕೂಡಲೇ ಬಂದು ಕರೆದುಕೊಂಡು ಹೋಗಿ ನನ್ನ ಸಂದೇಹಗಳನ್ನೆಲ್ಲಾ ನಿರ್ಮೂಲಗೊಳಿಸುವಿ ಯೆಂದು ಕಾದಿರುವ,

ನಿನ್ನ ಪ್ರಿಯ ಸಹೋದರಿ,
ಮನೋರಮಾ.

ಕಾಗದವನ್ನೋದಿದ ಮೇಲೆ, ಎರಡು ನಿಮಿಷಗಳು ಒಬ್ಬರೂ ಮಾತಾಡಲಿಲ್ಲ 'ಈಗೇನು ಮಾಡುವಿರಿ ?' ಎಂದರು ಡಾಕ್ಟರು. 'ನಾನು ಕಾರಿನಲ್ಲಿ ಹೋಗಿ ಆಕೆಯನ್ನು ಕರೆತರುತ್ತೇನೆ. ನಿಜ ಸಂಗತೀನ ಇನ್ನು ಮರೆ ಮಾಚಲಾಗುವುದಿಲ್ಲ. ನೀವಿಲ್ಲೇ ಗುಂಡೂರಾಯನನ್ನು ನೋಡಿಕೊಂಡಿರಿ. ಸತ್ಯವನ್ನು ಹೇಳುವುದು ಸಂತೋಷಪ್ರದವಲ್ಲದ ಈ ಪ್ರಸಂಗಕ್ಕೆ ಏನು ಹೇಳೋಣ ?' ಎಂದೆನ್ನುತ್ತಾ ಮೋಹನನು ಹೊರಡಲನುವಾದನು.

(೩)

ಅರ್ಧ ಗಂಟೆಯ ಬಳಿಕ ಮೋಹನನು ಚಿಕ್ಕಮಗಳೂರಿನಲ್ಲಿ ಮನೋರಮೆ ಇಳಿದಿದ್ದ ಮನೆಯ ಮುಂದೆ ಕಾರು ನಿಲ್ಲಿಸಿ ಆ ಮನೆಯಲ್ಲಿ ವಿಚಾರಿಸಿದನು.

ಒಬ್ಬ ಮುದುಕನು "ಅವರಿಲ್ಲಿಯೇ ಇಳಿದಿದ್ದಾರೆ, ನಿಮ್ಮ ಹೆಸರೇನು ?" ಎನ್ನಲು, ಮೋಹನನು "ಗುಂಡೂರಾಯರ ಕಡೆಯಿಂದ ಬಂದವರೆಂದು ತಿಳಿಸಿ"

ಎಂದು ಹೇಳಿ ಹೊರಗಡೆ ಮುದುಕನು ತೋರಿಸಿದ ಒಂದು ಕುರ್ಚಿಯ ಮೇಲೆ ಕಾಯುತ್ತ ಕುಳಿತನು.

ಮೋಹನನು ಮುಂದೇನು ಮಾಡಬೇಕೆಂಬುದನ್ನು ಇನ್ನೂ ನಿರ್ಧರಿಸಿರಲಿಲ್ಲ. "ನಿಜವಾದ ಸಂಗತಿಯನ್ನು ತಿಳಿಸುವುದೆ? ಅಣ್ಣನ ಕಾಗದಗಳನ್ನೆಲ್ಲಾ ಸುಳ್ಳಿನ ಕಂತೆಗಳೆಂದು ಹೇಳುವುದು ಹೇಗೆ? ಗುಂಡೂರಾಯ ದುಂದುಗಾರ, ವ್ಯಭಿಚಾರಿ ಅಸಾಧ್ಯವಾದ ಕಾಹಿಲೆಯಿಂದ ಹಾಸಿಗೆ ಹಿಡಿದಿರುವನು, ಅವನ ತಂದೆಗೆ ತಿಳಿದ ಸಮಾಚಾರ ನಿಜ ಎಂದು ಹೇಳುವುದೇ? ಹೇಳಿದ ಕೂಡಲೇ ಅವಳು ಜ್ಞಾನತಪ್ಪಿ ಬಿದ್ದರೆ? ಅಳುವುದಕ್ಕಾರಂಭಿಸಿದರೆ?" ಇವೇ ಮೊದಲಾದ ಆಲೋಚನೆಗಳು ಮೋಹನನನ್ನು ಬಾಧಿಸತೊಡಗಿದುವು. ಅವನು ಹೆಂಗಸರ ಸ್ವಭಾವವನ್ನರಿಯನು. ಎಂದೂ ಹೆಂಗಸರೊಡನೆ ವ್ಯವಹರಿಸಿದ್ದಿಲ್ಲ. ಪ್ರೇಮವೆಂಬುದು ಅನೇಕವೇಳೆ ಅವನ ಪಕ್ಕದಲ್ಲಿ ಹಾದುಹೋಗಿತ್ತೇ ವಿನಾ ಅವನನ್ನು ಸೋಕಿರಲಿಲ್ಲ.

ಮನೋರಮೆ ಬಾಗಿಲು ತೆಗೆದುಕೊಂಡು ಬಂದಳು. ಒಂದು ಅಂಚಿಲ್ಲದ ಕರೀಸೀರೆ ಅವಳ ತೆಳುವಾದ ದೇಹವನ್ನಲಂಕರಿಸಿತ್ತು. ಗೌರವರ್ಣ, ವಿಶಾಲವಾದ ನೇತ್ರಗಳು; ಉದ್ದವಾದ ಜಡೆ; ಹಣೆಯ ಮೇಲಿನ ಕುಂಕುಮದ ಬಟ್ಟು ಅದಳ ಸೌಂದರ್ಯವನ್ನು ಇಮ್ಮಡಿಯಾಗಿ ಹೆಚ್ಚಿಸಿದ್ದುವು. ಮೋಹನನ ಕಣ್ಣುಗಳಿಗವಳು ಮನೋಹರಳಾಗಿಯೂ ಮುಗ್ಧಳಾಗಿಯೂ ಕಾಣಿಸಿದಳು.

"ಅಣ್ಣ ಏಕೆ ಬರಲಿಲ್ಲ? ನೀವುಯಾರು? ಅವನೇ ಬರುತ್ತಾನೆಂತ ಇದ್ದೆ" ಎಂದು ತೊದಲುತ್ತ ಹೇಳಿದಳು. ಈಗ ನಿಜವಾದ ಸಂಗತಿ ತಿಳಿಸಿದರೆ ಅವಳ ಎದೆಯೊಡೆಯುವುದು! ಅವಳಿಗಾಗಬಹುದಾದ ಯಾತನಾವೇಗದ ಸೂಚನೆಯು ಅವಳ ಆ ದುಃಖ ಪೂರ್ಣವಾದ ಮುಖವನ್ನು ನೋಡಿದಕೂಡಲೆ ಮೋಹನನಿಗೆ ತಿಳಿಯಿತು. ಇದುವರೆಗೆ ತಾನು ಸುಖಿಯಾಗಿಟ್ಟಿದ್ದವಳನ್ನು ಈಗ ದುಃಖಸಾಗರದಲ್ಲಿ ದೂಡುವುದು ಮೋಹನನ ಮನಸ್ಸಿಗೆ ಬರಲಿಲ್ಲ. ಅವನು ಗಂಭಿರವಾಗಿ "ಅವರು ಬರುವುದಕ್ಕಾಗಲಿಲ್ಲ. ನನ್ನನ್ನು ಕರೆತರಲು ಕಳುಹಿಸಿದರು" ಎಂದು ಸುಳ್ಳು ಹೇಳಿದನು.

'ಕ್ಷೇಮವಾಗಿದ್ದಾನಷ್ಟೆ?'

ಮೋಹನನು ಅವಳ ಕಣ್ಣುಗಳನ್ನೇದಿಟ್ಟಿಸಿ ನೋಡುತ್ತಾ "ಆರೋಗ್ಯ ವಾಗಿದ್ದಾರೆ. ಇನ್ನೊಂದು ಕಾಫಿ ತೋಟವನ್ನು ಕೊಳ್ಳಲು ಖರೀದಿ ನಿಶ್ಚಯಿ ಸಲು ಈ ದಿನವೇ ಹೋಗಬೇಕಾದುದರಿಂದ ಬರಲಾಗಲಿಲ್ಲ. ನಿಮ್ಮನ್ನು ಬೇಗ ಕರೆತರಲು ನನ್ನನ್ನು ಕಾರಿನೊಂದಿಗೆ ಕಳುಹಿಸಿದ್ದಾರೆ" ಎಂದನು.

ಕ್ಷಣಕಾಲ ಮನೋರಮೆಯ ಮುಖ ಅಣ್ಣನ ಉತ್ಕರ್ಷಸ್ಥಿತಿಯನ್ನು ಕೇಳಿ ಹಿಗ್ಗಿತು. ಮರುಕ್ಷಣದಲ್ಲಿ ಮನಸ್ಸಿನಲ್ಲಿ ಸಂದೇಹ ತೋರಿ ದೇಹ ಕಂಪಿಸಿತು ಒಂದುಬಾರಿ ಮೋಹನನ ಮುಖವನ್ನು ಕಪಟಭೇದಕ ದೃಷ್ಟಿ ಯಿಂದ ನೋಡಿದಳು. ಮೋಹನನು ನಡುಗಲಿಲ್ಲ. ಮನೋರಮೆಯು ಕೂಡಲೇ ಎಚ್ಚೆತ್ತವಳಂತೆ ಕಣ್ಣುಗಳ ಮೇಲೆ ಬೆರಳುಗಳನ್ನಾಡಿಸಿಕೊಂಡು ಮಂದಹಾಸದಿಂದ "ನಡೆಯಿರಿ, ಹಾಗಾದರೆ ಹೋಗೋಣ" ಎಂದಳು.

(೪)

'**ಬೇಬಿ** ಆಸ್ಟಿನ್' ಎರಡು ಸೀಟರನ್ನು ಹತ್ತುವಾಗ ಮನೋರಮೆಗೆ ಸ್ವಲ್ಪ ಅಧೈರ್ಯವಾದರೂ, ಮೋಹನನ ಗಂಭೀರ ಮುಖಮುದ್ರೆ ಅವಳಿಗೆ ನಂಬುಗೆಯನ್ನುಂಟುಮಾಡಿತು. ಅಣ್ಣನನ್ನು ನೋಡುವ ಕಾತುರತೆ ಬೇರೆ, ಅಲ್ಲದೆ ತಾನು ಕಾಲೇಜು ಹುಡುಗಿಯಲ್ಲವೇ? ಧೈರ್ಯದಿಂದ ಹತ್ತಿ ಮೋಹನನ ಪಕ್ಕದಲ್ಲಿ ಕುಳಿತಳು. ದಾರಿಯಲ್ಲಿ ಅವಳ ಅಣ್ಣನ ವಿಷಯ ವಾಗಿ ಏನೇನೋ ಪ್ರಶ್ನೆ ಕೇಳಿದಳು. ಮೋಹನನು ಸುಳ್ಳಿಗೆ ಸುಳ್ಳು ಸೇರಿಸಿ ಗುಂಡೂರಾಯನ ಭಾಗ್ಯವನ್ನು ವರ್ಣಿಸುತ್ತಾ ಹೋದಹಾಗೆಲ್ಲಾ ಮನೋ ರಮೆಯ ಕಣ್ಣುಗಳರಳಿದುವು, ವರ್ಣ ಬದಲಾಯಿತು. ತಾನೂ ಧಾರಾಳವಾಗಿ ಮಾತನಾಡಲು ಮೊದಲು ಮಾಡಿದಳು. ತಾನೂ ಕಾಲೇಜು ಹುಡುಗ ರೊಂದಿಗೆ ಹೋದ ಟ್ರಿಪ್‌ಗಳ ವಿಚಾರ ಹೇಳುತ್ತಾ ಹೋಗುವಾಗ ಅವಳಿಗೆ ಮೋಟಾರು ಎಷ್ಟುದೂರ ಹೋಯಿತೆಂದು ತಿಳಿಯಲಿಲ್ಲ. "ಈಗಲಾದರೂ ನಿಜ ಹೇಳಲೇ? ಇಲ್ಲ– ಆಗದು. ಸಮಯ ಮಿಂಚಿಹೋಯಿತು. ತನ್ನ ಸುಳ್ಳಿನ ಪರ್ಯವಸಾನಕ್ಕೆ ತಕ್ಕ ಫಲವನ್ನು ತಾನೇ ಅನುಭವಿಸಬೇಕೆಂದು" ಮನಸ್ಸಿನಲ್ಲೇ ಮೋಹನನು ಸಂಕಲ್ಪಿಸಿದನು. ಕಾರು ಒಂದು ಜನ ನಿಬಿಡವಾರ ಕಾನನ ಮಧ್ಯದಲ್ಲಿ ನಿಂತಿತು.

"ತೋಟ ಬಂದಿತೇ ?" ಎಂದಳು ಮನೋರಮೆ.

ಮೋಹನನು ಕಾರಿನಿಂದಿಳಿದು ಅವಳಿಗಾಗಿ ಬಾಗಿಲನ್ನು ತೆರೆಯುತ್ತಾ "ನನ್ನ ವಿಷಯದಲ್ಲಿ ನಿಮಗೇನೂ ಸಂದೇಹಬರಲಿಲ್ಲವೇ? ನಾನು ಮೋಸಗಾರನಾಗಿರಬಹುದೆಂದು ಒಂದು ಬಾರಿಯೂ ನಿಮಗೆ ಯೋಚನೆ ಬರಲಿಲ್ಲವೇ ?" ಎಂದು ಕೇಳಿದನು.

ಮನೋರಮೆಯು ಬೆಚ್ಚಿಬಿದ್ದು–'ಇಲ್ಲ, ಹಾಗೆಂದರೇನು ?' ಎಂದಳು.

'ನಾನು ಹೇಳಿದ್ದೆಲ್ಲಾ ಸುಳ್ಳೆಂದು ಇಟ್ಟುಕೊಳ್ಳಿ.'

ಮನೋರಮೆಯು ಮತ್ತಷ್ಟು ಗಾಬರಿಯಾಗಿ 'ಸುಳ್ಳೆ!' ಎಂದು ಕೇಳಿದಳು.

"ನಿಮ್ಮಣ್ಣ ನಿಮ್ಮ ಕಾಗದ ನೋಡಲಿಲ್ಲ. ನಾನೇ ಒಡೆದು ನೋಡಿದೆ. ಅವರ ಕಾರನ್ನು ತೆಗೆದುಕೊಂಡು ನಾನೇ ನೀವಿದ್ದ ಬಳಿಗೆಬಂದೆ. ನಿಮ್ಮಣ್ಣನ ಬಳಿಗೆ ಹೋಗುವಿರೆಂದು ಮೋಸಹೋಗಿ ನೀವು ನನ್ನೊಡನೆ ಬಂದು, ನನ್ನ ಜತೆಯಲ್ಲಿದ್ದೀರಿ. ಗುರುತಿಲ್ಲದವರ ಉಪಾಯ! ಇನ್ನು ಮೇಲೆ ಮೋಸಹೋಗಬೇಡಿ. ನನ್ನ ಕೈಗೆ ಈಗ ಸಂಪೂರ್ಣವಾಗಿ ಸಿಕ್ಕಿದಿರಿ !"

ಮನೋರಮೆಯು ಆಶ್ಚರ್ಯಭಯಗಳಿಂದ ಸ್ತಬ್ಧಳಾದಳು. ನಿರ್ಜನವಾದ ಆ ಕಾಡಿನಲ್ಲಿ ಯಾರ ಸಹಾಯವನ್ನೂ ಕೋರುವಂತೆ ಇರಲಿಲ್ಲ. ಮೋಹನನ ಮುಖಮುದ್ರೆಯಿಂದ ಅವನು ಘಾತುಕನೆಂದು ಹೇಳಲಾಗುವುದಿಲ್ಲ. ಅಲ್ಲದೆ ತನ್ನನ್ನು ಇನ್ನೂ ಬಹುವಚನದಲ್ಲೇ ಮಾತನಾಡಿಸುತ್ತಿರುವನು ಎಂದು ಯೋಚಿಸಿ "ನನ್ನನ್ನು ಹೀಗೆ ಮೋಸದಿಂದ ಕರೆತಂದು ನೀವೇನು ಮಾಡಬೇಕೆಂದಿರುವಿರಿ ? "ಎಂದು ಧೈರ್ಯದಿಂದ ಕೇಳಿದಳು.

"ಹಣ"

"ಆದರೆ ನಾನು............"

"ನಿಮ್ಮಣ್ಣನ ಹತ್ತಿರ ಬೇಕಾದಷ್ಟಿದೆ. ಅತನು ನಿಮ್ಮನ್ನು ನೋಡಬೇಕಾದರೆ ಈಗ ಹೆಚ್ಚು ಹಣ ಖರ್ಚುಮಾಡಬೇಕು.

"ಅವನಿಂದ ನಿಮಗೆ ಹಣಬರುವವರೆಗೂ ನಾನು ನಿಮ್ಮ ಸೆರೆಯಾಳಾಗಿರಬೇಕೋ ? "

"ಅದೇ ಅಭಿಪ್ರಾಯ."

"ನಿಮ್ಮ ಮುಖ ನೋಡಿದರೆ ನೀವು ನಿಜವಾಗಿಯೂ ದುಷ್ಕರ್ಮಿಗಳೆಂದು ನನಗೆ ನಂಬಿಕೆಯಾಗುವುದಿಲ್ಲ. ನಡೆಯಿರಿ, ಏನು ಮಾಡುತ್ತೀರೊ ಮಾಡಿ!" ಎಂದಳು.

"ಮುಖ ಮುದ್ರೆಯಿಂದ ಅನೇಕರು ಅನೇಕವೇಳೆ ಮೋಸಹೋಗುವುದುಂಟು. ಈಗ ಮಾತನಾಡಲು ಹೆಚ್ಚು ಸಮಯವಿಲ್ಲ. ನನ್ನ ಮಾತನ್ನು ಕೇಳಿದರೆ ನಿಮಗೆ ಹಿತವಾಗುವುದು. ನನ್ನ ಹಿಂದೆ ಬನ್ನಿ!"

ಕಾರನ್ನು ತೋಟದ ದಾರಿಯಲ್ಲೇ ಬಿಟ್ಟು ಆವಳನ್ನು ತೋಟದೊಳಕ್ಕೆ ಕರೆದುಕೊಂಡು ಮೋಹನನು ಹೊರಟನು. ಹದಿನೈದು ನಿಮಿಷಗಳಾದ ಬಳಿಕ ಒಂದು ತಗಡು ಹೊದಿಸಿದ್ದ ಮನೆಯ ಬಳಿಗೆ ಬಂದು 'ಇದೇ ನಿಮ್ಮ ಸೆರೆಮನೆ. ಇಲ್ಲಿ ನೀವು ಸುಖವಾಗಿರುವುದಕ್ಕೆ ಎಲ್ಲಾ ಏರ್ಪಾಡು ಮಾಡುವೆನು' ಎಂದನು.

ಮುಂದೆ ಐದು ನಿಮಿಷಗಳಲ್ಲಿ ಅಲ್ಲಿಗೆ ಒಂದು "ಕ್ಯಾಂಪ್‌ಕಾಟ್" ಕುರ್ಚಿ, ಮೇಜು, ಹಾಸಿಗೆ ಮತ್ತು ಭೋಜನ ಸಾಮಗ್ರಿಗಳು ಬಂದವು! ಮನೋರಮೆಯು ಈ ಸಮಸ್ಯೆಯನ್ನು ಬಿಡಿಸಲಾರದಾದಳು. ಮೋಹನನೆ ಅಲ್ಲಿಗೆ ತಿಂಡಿ, ಕಾಫಿ, ಭೋಜನ ಸಾಮಗ್ರಿಗಳನ್ನು ನಿತ್ಯವೂ ತಂದುಕೊಡುತ್ತಿದ್ದನು. ಅಲ್ಲಿ ಬೇರೆ ಮನುಷ್ಯರ ಸುಳಿವೂ ಸಹಾ ಇರಲಿಲ್ಲ. ರಾತ್ರಿ ಮಲಗುವುದಕ್ಕೆ ಒಬ್ಬ ಮೂಕ ಹೆಂಗಸು ಮಾತ್ರ ಬರುತ್ತಿದ್ದಳು!

೫

ಎರಡು ದಿನಗಳು ಕಳೆದ ನಂತರದ ಮಾತು. ಡಾಕ್ಟರು ಸುಮಾರು ಹತ್ತು ನಿಮಿಷಗಳವರೆಗೂ ಮೋಹನನನ್ನೇ ನೋಡುತ್ತಿದ್ದು "ಏನಿದು ಹುಚ್ಚು ಮಾತು! ನೀವು ಹೇಳುವುದು ಅಸಾಧ್ಯ" ಎಂದರು.

'ಅಸಾಧ್ಯವೇನು ಬಂತು? ಗುಂಡೂರಾಯನಿಗೆ ಈಗ ಸ್ವಲ್ಪ ಶಕ್ತಿ ಬಂದಿದೆ. ಆಕೆಯನ್ನು ನಮ್ಮ ತೋಟದ ಈಶಾನ್ಯ ಮೂಲೆಯಲ್ಲಿರುವ ಒಂದು ಚಿಕ್ಕ ಬಂಗಲೆಯಲ್ಲಿ ಇಟ್ಟಿದ್ದೇವೆ. ನೀವು ನನಗಿಷ್ಟು ಮಾತ್ರ ಉಪಕಾರ ಮಾಡಬೇಕು. ಅವಳನ್ನು ಕರೆದು ತಂದು ಗುಂಡೂರಾಯನ ಭೇಟಿ ಮಾಡಿಸಬೇಕು.

" ನೀವು ? "

" ನಾನಿನ್ನು ನನ್ನ ಪಾಡಿಗೆ ಹೋಗುವೆನು. ಮೊದಲಿಗೆ ಹೇಗಿದ್ದನೋ ಹಾಗೇ ಹೋಗುವೆನು. ಗುಂಡೂರಾಯನ ವಿಷಯದಲ್ಲಿ ನಾನು ಮನೋರಮೆಗೆ ಹೇಳಿದುದು ನಿಜವಾಗಲೆಂದೇ ನಾನೀಗ ಎಲ್ಲಾ ತೋಟವನ್ನೂ ಗುಂಡೂರಾಯನ ಹೆಸರಿಗೆ ಬರೆದುಕೊಟ್ಟಿರುವುದು. ಮನೋರಮೆಯ ಮನೋವೇದನೆಯನ್ನು ತಪ್ಪಿಸುವುದರಿಂದ ನನಗಾಗುವ ಸಂತೋಷಕ್ಕಾಗಿ ನಾನು ಏನುಬೇಕಾದರೂ ಮಾಡಬಲ್ಲೆ.

ನಿಜವನ್ನು ಎಷ್ಟುದಿನ ಮರೆಮಾಚಲಾಗುವುದು ? ಅದು ಅವಳಿಗೇಕೆ ಗೊತ್ತಾಗಬೇಕು ? ಗುಂಡೂರಾಯನಿಗೆ ನೀವು ಬುದ್ಧಿ ಹೇಳಿ. ಅವನು ಸನ್ಮಾರ್ಗಾವಲಂಬಿಯಾಗುವನೆಂಬ ಭರವಸೆಯಿಂದಲೇ ತೋಟವನ್ನು ಅವನಿಗೆ ಕೊಟ್ಟಿದ್ದೇನೆ. ಅವನು ತಂಗಿಗೆ ಏನೂ ಹೇಳುವುದಿಲ್ಲ. "

ಡಾಕ್ಟರು ಬಾಯಿದೆರೆದು ಕಣ್ಣರಳಿಸಿಕೊಂಡು ಮೋಹನನ ಮುಖವನ್ನು ನೋಡಿದರು— ' ಏನು ! ನೀವು ಕಷ್ಟಪಟ್ಟು ಸಂಪಾದಿಸಿರುವ ದೊಡ್ಡ ಆಸ್ತಿಯನ್ನು ಗುಂಡೂರಾಯನಿಗೆ ಬಿಟ್ಟುಬಿಡುವಿರಾ ! ನಿಮ್ಮ ಸರ್ವಸ್ವವನ್ನೂ ಆ ಮನುಷ್ಯನಿಗೆ ಸಮರ್ಪಿಸುವಿರಾ ? '

" ಹೌದು, ಏಕಾಗಬಾರದು ? ಗುಂಡೂರಾಯನು ಸನ್ಮಾರ್ಗಾವಲಂಬಿಯಾದರೆ—ಅವನ ತಂಗಿ ಸುಖಿಯಾಗುವುದಾದರೆ—ಮುದುಕ ತಂದೆಗೆ ಕೊನೆಗಾಲದಲ್ಲಿ ಸಂತೋಷವಾಗುವುದಾದರೆ—ನನಗೆ ಪುಣ್ಯ ಬರುವುದಿಲ್ಲವೇ? ಒಂಟಿಯಾದ ನಾನು ಈ ಆಸ್ತಿಯನ್ನು ಕಟ್ಟಿಕೊಂಡು ಮಾಡುವುದೇನು ? ಅಲ್ಲದೆ ಈ ಜಗತ್ತಿನಲ್ಲಿ ಒಂಟಿಯಾಗಿ ಬಂದವನು ನಾನು ಮತ್ತೆ ಕಷ್ಟಪಟ್ಟು ಆಸ್ತಿಸಂಪಾದಿಸಬಲ್ಲೆನು. ಆದರೆ ನೀವು ಮಾತ್ರ ಗುಂಡೂರಾಯನ ಮನಸ್ಸನ್ನು ತಿರುಗಿಸಬೇಕು.'

ಡಾಕ್ಟರು ಆಶ್ಚರ್ಯ ಯುಕ್ತರಾಗಿ, ಗದ್ಗದ ಕಂಠದಿಂದ "ಒಳ್ಳೆಯದು, ನಾನು ನನ್ನ ಪ್ರಯತ್ನಮಾಡುವೆನು. ಆದರೆ ನಿಮ್ಮಂಥ ತ್ಯಾಗಿಗಳನ್ನು ನಾನೆಲ್ಲೂ ಕಾಣಲಿಲ್ಲ. ಪುಣ್ಯಕಾರ್ಯವೆಂಬುದು ನಿಜವಾಗಿದ್ದರೆ, ಉಪಕಾರವೆಂಬುದಕ್ಕೆ ತಕ್ಕ ಫಲವಿರುವುದು ಸತ್ಯವಾಗಿದ್ದರೆ—ಮುಂದೆ ನಿಮಗೆ ಚಿನ್ನದ ಗಣಿ ಸಿಕ್ಕುವುದು. ನಿಮ್ಮ ಜೀವನದಲ್ಲಿ ಕೊರತೆ ಎಂದು ತೋರುವ ಬರಿ

ಬಂಧುಪ್ರೇಮವು ಗುಂಡೂರಾಯನಿಂದಲೂ ಅವನತಂಗಿಯಿಂದಲೂ ನಿಮಗೆ ದೊರೆಯಬಹುದು. ನನಗಂತೂ ನೀವೊಬ್ಬ ದೇವತಾ ಪುರುಷರಂತೆ ಕಾಣು ವಿರಿ' ಎಂದರು.

"ಅದಿರಲಿ ಡಾಕ್ಟರ್, ನಿಮಗೆ ವಹಿಸಿರುವ ಜವಾಬ್ದಾರಿ ನಿರ್ವಹಣೆಗೆ ಇದಿರಲಿ ನಿಮ್ಮ ಹತ್ತಿರ" ಎಂದು ಮೋಹನನು ಡಾಕ್ಟರಿಗೆ ಒಂದು ಲಕ್ಷೋಟಿ ಕೊಟ್ಟನು.—

ಮನೋರಮೆಯ ಕಾಗದ ಬಂದ ದಿನದಿಂದ ಆರು ದಿನಗಳು ಕಳೆದಿವೆ. ಇಂದು ಏಳನೆಯ ದಿನ, ಗುಂಡೂರಾಯನು ಸಶಕ್ತನಾಗಿ ಮೋಹನನ ಬಂಗಲೆಯ ಮುಂಭಾಗದಲ್ಲಿ ನಿಂತಿದ್ದಾನೆ. ಈಗ ಆತನಲ್ಲಿ ಮುಂಚಿನ ರೋಗದ ಕಳೆಯಿಲ್ಲ. ಮುಖವು ಮಾತ್ರ ಇನ್ನೂ ಬಿಳಚಿಕೊಂಡಿದೆ.

ಡಾಕ್ಟರು ತನ್ನ ಮಾತಿನಂತೆ ಎಲ್ಲ ಕೆಲಸವನ್ನೂ ನೆರವೇರಿಸಿದನು. ಮೋಹನನೂ ತನ್ನ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿದ್ದಾನೆ. ಇನ್ನು ಈಗ ಅದೃಷ್ಟವಶಾತ್ ದೊರೆತಿರುವ ಅನುಕೂಲದಿಂದ ಗುಂಡೂರಾಯನು ಸನ್ಮಾರ್ಗವನ್ನವಲಂಬಿಸುವುದೊಂದು ಕಾರ್ಯವು ಉಳಿದಿದೆ. ಗುಂಡೂರಾಯನಿಗೆ ಜ್ಞಾನಬಂದಮೇಲೆ ಮೋಹನನು ಅವನ ಮುಖವನ್ನು ನೋಡಲಿಲ್ಲ, ನೋಡಲಪೇಕ್ಷಿಸಲೂ ಇಲ್ಲ. ಡಾಕ್ಟರೆ ಎಲ್ಲ ಸಂಗತಿಗಳನ್ನು ಅವನಿಗೆ ತಿಳಿಸಿ ಅವನ ಮನಸ್ಸನ್ನು ಸರಿಪಡಿಸಿದ್ದರು. ತನ್ನ ಕೃತಜ್ಞತೆಯನ್ನು ಮೋಹನನಿಗೆ ಸೂಚಿಸುವುದು ಹೇಗೆ ಎನಿಸಿತು, ಗುಂಡೂರಾಯನಿಗೆ. ಆದರೆ ಮೋಹನನ ಹೆಸರನ್ನು ನೆನಸಿಕೊಂಡ ಕೂಡಲೇ ಗುಂಡೂರಾಯನಿಗೆ ಲಜ್ಜೆಯೂ ಭಯವೂ ಉಂಟಾಗುತ್ತಿತ್ತು. ಈಗಲಾದರೂ ತಾನು ಮಾತಿತ್ತಂತೆ ಸನ್ಮಾರ್ಗಾವಲಂಬಿಯಾದರೆ ಮೋಹನನಿಗೆ ತನ್ನ ಕೃತಜ್ಞತೆಯನ್ನು ಸೂಚಿಸಿದಂತಾಗುವುದೆಂದು ಗುಂಡೂರಾಯನು ತಿಳಿದನು. ಇನ್ನು ಅವನಿಗೆ ಮೋಹನನ ದರ್ಶನವಾಗದೆಂದು ಡಾಕ್ಟರು ತಿಳಿಸಿದ್ದರು.

## (೬)

'**ಬೇಬಿ ಆಸ್ಟಿನ್**' ಕಾರಿನಲ್ಲಿ ಮನೋರಮೆಯು ಕುಳಿತಿದ್ದಾಳೆ ಡಾಕ್ಟರು ಅದನ್ನು ನಡೆಸುತ್ತಿದ್ದಾರೆ! ಕಾರು ಬಂಗಲೆಯ ಮುಂದೆ ನಿಂತಿತು.

ಗುಂಡೂರಾಯನ ಮುಖವನ್ನು ನೋಡಿದ ಕೂಡಲೆ ಮನೋರಮೆಯು ಕಾರಿನ ಬಾಗಿಲು ತೆರೆದು ಹಾರಿ, 'ಅಣ್ಣಾ' ಎಂದು ಓಡಿಹೋಗಿ ಅನವ ಕೈಗಳನ್ನು ಹಿಡಿದುಕೊಂಡಳು. ಮತ್ತೆ "ಕೊನೆಗೆ ಇಲ್ಲಿಗೆ ಬಂದು ಸೇರಿದೆನಪ್ಪಾ. ಏನೇನೋ ಸಾಹಸ ಮಾಡಿದ್ದಾಯಿತು. ನನಗೆ ಯೋಚನೆಯೇನೂ ಇರಲಿಲ್ಲ. ನೀನು ಕ್ಷೇಮವಾಗಿರುವೆ ಎಂದು ತಿಳಿದೇ ಇದ್ದೆ" ಎಂದಳು.

ಆಗ ಎಂಟು ಗಂಟೆಯ ಸಮಯ. ಶುಕ್ಲಪಕ್ಷ ಚತುರ್ದಶಿ ರಾತ್ರಿ. ಚಂದ್ರನು ತನ್ನ ಶೀತಲವಾದ ಕಿರಣಗಳಿಂದ ಶುಭ್ರವಾಗಿ ಪ್ರಕಾಶಿಸುತ್ತಿದ್ದಾನೆ. ಕಾರಿನಿಂದಿಳಿದ ತಂಗಿಯ ಕೈಗಳನ್ನು ಹಿಡಿದುಕೊಂಡಿದ್ದ ಗುಂಡೂರಾಯನು ನೋಡುತ್ತಿದ್ದ ಹಾಗೆಯೇ ಅವನೆದುರಿಗಿದ್ದ ಉನ್ನತವಾದ ವೃಕ್ಷಗಳ ಮಧ್ಯೆ ವ್ಯಕ್ತಿಯೊಬ್ಬನು ರಸ್ತೆಯ ಕಡೆಗೆ ಹೋದುದನ್ನು ನೋಡಿದನು. ಆ ಮನುಷ್ಯನು ಬಂಗಲೆಯ ಕಡೆಗೆ ಒಂದು ಭಾರಿ ನೋಡಿದನು. ಮತ್ತೆ ತೋಟದ ಕಡೆ ನೋಡಿ ಮುಂದೆ ಹೆಜ್ಜೆ ಇಟ್ಟನು. ಅವನ ಕೈಯಲ್ಲಿ ಎರಡು ಕಂಬಳಿಗಳು ಒಂದು ಬಟ್ಟೆಯ ಗಂಟು ಇದ್ದುವು.

ಗುಂಡೂರಾಯನು ಆ ವ್ಯಕ್ತಿಯನ್ನು ದೂರದಿಂದ ನೋಡುತ್ತ, ಗುರುತಿಸುತ್ತ ತಂಗಿಯ ಮಾತಿಗೆ ನಿರುತ್ತರನಾಗಿ ನಿಂತಿದ್ದಾನೆ. ಅವನ ಶಕ್ತಿಯು ಉಡುಗುತ್ತಿರುವಂತೆ ಭಾಸವಾಗುತ್ತಿದೆ. "ಅಣ್ಣಾ, ಏನು ಏನಾಗಿದೆ? ನಿನ್ನ ಮೈಯಲ್ಲಿ ಸ್ವಸ್ಥವಿಲ್ಲವೆ"—ಗುಂಡೂರಾಯನು ಒಂದು ಬಾರಿ ನಡುಗಿದನು. ಅವನು ಒಂದು ಬಗೆಯ ವೇದನೆಯನ್ನನುಭವಿಸುತ್ತಿರುವಂತೆ ಅವನ ಕಣ್ಣುಗಳಿಂದ ವ್ಯಕ್ತವಾಯಿತು. ಅವನ ಹಣೆಯಲ್ಲಿ ಬೆವರು ಹನಿಗಳು ತುಂಬಿ ಕೈ ನಡುಗಲಾರಂಭಿಸಿತು. ಆಗವನು–"ಇಲ್ಲ – ಇಲ್ಲ – ನಾನಷ್ಟು ನೀಚನಾಗಲಾರೆ' ಎಂದು ಹಾಗೆಯೇ ಕುರ್ಚಿಯಲ್ಲಿ ಕುಳಿತು ಬಿಕ್ಕಿಬಿಕ್ಕಿ ಅಳುತ್ತ ತಂಗಿಗೆ ನಿಜವಾದ ಸಂಗತಿಯನ್ನೆಲ್ಲಾ ಹೇಳಿಬಿಟ್ಟನು.

ಮೋಹನನು ನಿಧಾನವಾಗಿ ಚಿಕ್ಕಮಗಳೂರಿನ ಕಡೆ ರಸ್ತೆಯಲ್ಲಿ ಹೋಗುತ್ತಿದಾನೆ. ಇಂದು ಜಗತ್ತು ಅವನನ್ನುಮೂರ್ಖನೆನ್ನುವುದು. ಒಂದು ಸುಳ್ಳಿಗಾಗಿ – ಅಲ್ಲ – ಒಬ್ಬ ಮಾನವನ ಶೀಲವನ್ನು ನೇರ್ಪಡಿಸಿ, ಅವನಿಂದ ಅವನ ತಂಗಿ ತಂದೆ ಸುಖಿಗಳಾಗಲು ಅವನು ತನ್ನ ಸರ್ವಸ್ವವನ್ನೂ ತ್ಯಾಗ

ಮಾಡಿದನು. ಆದರೆ, ಆ ಆತ್ಮ ನಿವೇದನೆಯಿಂದ ಮೋಹನನಿಗೆ ಇಂದು ತೃಪ್ತಿ! ಯಾರಿಗೆ ಅದೃಷ್ಟವು ಇಂದು ದುಃಖವನ್ನೂ ನಿರಾಶೆಯನ್ನೂ ಉಂಟುಮಾಡಲು ಸಿದ್ಧವಾಗಿತ್ತೋ ಅಂಥವರಿಗೆ ತಾನು ಸುಖವನ್ನಿತ್ತು ಅದೃಷ್ಟದ ಗತಿಯನ್ನೆ ತಾನು ಬದಲಾಯಿಸಿರುವನೆಂದು – ಅವನಿಗೆ ಒಂದು ಬಗೆಯ ಹೆಮ್ಮೆ!!

ಈಗ ಅವನಿಗೆ ತಾನು ಏಕಾಂಗಿ ಎಂಬ ಭಾವನೆ ಹೋಗಿದೆ. ತನ್ನನ್ನು ಯಾರಾದರೂ ಜ್ಞಾಪಿಸಿಕೊಂಡು ಕನಿಕರಪಡುವರೆಂಬ ಸ್ಮರಣೆಯೇ ಅವನಿಗೆ ಧನವಾಗಿದೆ! 'ನನ್ನನ್ನು ಇದುವರೆಗೆ ನೆನೆಸುವವರಾರಿದ್ದರು! ಇಂದಿನಿಂದ ನನ್ನ ವಿಚಾರವಾಗಿ ಚಿಂತಿಸುವ ಬಂಧುಗಳು ಬಂದರಲ್ಲ' ಎಂಬ ಭಾವನೆಯಿಂದ ಅವನು ಬಾಬಾಬುಡನ್ ಗಿರಿಯ ಕಡೆ ಹೊರಟನು.

ಮನೋರಮೆಯೂ ಗುಂಡೂರಾಯನೂ ಡಾಕ್ಟರೂ ಮೋಹನನನ್ನು ಹುಡುಕಲು ಯತ್ನಿಸಿದರು. ಸಫಲರಾಗಲಿಲ್ಲ.

# 'ಅದಕ್ಕೇ ಅದೃಷ್ಟ ಅನ್ನೋದು!'

*

(೧)

ಅನಂತಯ್ಯನು ಬಡವನಾದರೂ ಸತ್ಯವಂತ, ಪ್ರಾಮಾಣಿಕ. ಪರರ ಒಡವೆಯೆಂದರೆ ಅವನಿಗೆ ಮಣ್ಣಿಗಿಂತಲೂ ಕಡೆ. ಅಂತಹ ಮನುಷ್ಯರು ದೊರೆಯುವುದು ಅಪರೂಪ. ಆದರೆ ಹಣೆಯ ಬರಹ ಅಂತವರ ಸುಖಕ್ಕೂ ಅಡ್ಡಿಯನ್ನು ತಂದೊಡ್ಡುವುದು, ಅವರನ್ನು ಕಷ್ಟಕ್ಕೆ ಗುರಿಮಾಡುವುದು. ಅವರು ದೇವರಿಗೆ ಬೇಕಾದ ಮನುಷ್ಯರು. ಆದ್ದರಿಂದ ದೇವರು ಈ ರೀತಿಯಿಂದ ಪರೀಕ್ಷಿಸುವನೋ ಏನೋ? ಅದಕ್ಕೆ ನಾವು ಹಣೆಯಬರೆಹ ಅಂತೇವೋ ಏನೋ?

ಸಾಹುಕಾರ ಶಿವನಾಗಪ್ಪನವರಿಗೆ ಅನಂತಯ್ಯನ ಮೇಲೆ ಬಹಳ ವಿಶ್ವಾಸ. ಅವನು ಅವರ ಅಂಗಡಿ ಗುಮಾಸ್ತನಾಗಿದ್ದರೂ ಖಜಾನೆ ಬೀಗದ ಕೈ ಅವನ ಕೈಲೇ ಇರುವುದು. ಹೀಗಿರುವಾಗ ಸಾಹುಕಾರರ ಬಾಯಿಂದ ತನ್ನ ವಿಚಾರದಲ್ಲಿ ಇವತ್ತು ಬಹು ಕ್ರೂರವಾದ ಮಾತುಗಳನ್ನು ಕೇಳಿ, ಅವನ ಕಿವಿಯಲ್ಲಿ ಕುದಿಯುವ ಎಣ್ಣೆ ಸುರಿದ ಹಾಗಾಯಿತು. ಇಂತಹ ಮಾತುಗಳನ್ನು ತಾನು ಕೇಳುತ್ತೇನೆಂದು ಅವನು ಕನಸು ಮನಸ್ಸಿನಲ್ಲಿಯೂ ನೆನೆಸಿರಲಿಲ್ಲ. ಸಾಹುಕಾರರು ತನ್ನ ವಿಚಾರದಲ್ಲಿ ಅವಿಶ್ವಾಸ ತೋರುವ ಕೆಲಸವನ್ನೇ ಅವನು ಮಾಡಿರಲಿಲ್ಲ. ಹೀಗಿರುವಾಗ ಇಂಥಾ ಮಾತುಗಳನ್ನಾಡಲು ಕಾರಣವೇನು?

"ಇವತ್ತು ತಿಂಗಳ ಕೊನೀ ತಾರೀಖು. ಸಾಯಂಕಾಲ ನಿಮ್ಮ ಕೆಲಸ ಮುಗಿದ ಮೇಲೆ ನನ್ನ ರೂಮಿಗೆ ಬನ್ನಿ. ಅಲ್ಲಿ ನನ್ನ ಮೇಜಿನ ಮೇಲಿರುವ ಮಾಡದೊಳಗೆ ನಿಮ್ಮ ಸಂಬಳದ ರೂಪಾಯಿ ಇಟ್ಟಿರ್ತೀನಿ. ಅದನ್ನ ತೊಗೊಂಡು ಮನೀ ಹಾದಿ ಹಿಡೀರಿ. ಪೆಟಗೀ ಮಾತ್ರ ಮುಟ್ಟಬ್ಯಾಡಿ. ನಿಮ್ಮನ್ನ ಕೆಲಸಕ್ಕೆ ಇಟ್ಕೊಂಡಾಗಲೇ 'ನೀವು ಮೈಸೂರೀ ಮಂದೀನ ಇಡಬ್ಯಾಡ್ರಿ. ಯಾರಾದರೂ ನಿಮ್ಮ ಜಾತಿಯವರ್ನೇ ನೇಮಿಸ್ಕೊಳ್ರೀ. ಈ ಬ್ರಾಮ್ನ ಯಾವಾಗ ದಗಾ ಕೊಡ್ತಾನೋ ಗೊತ್ತಿಲ್ಲ!' ಅಂತ ಮಂದೀ ಅಂತಿದ್ರು. ಆದರೆ ನಾನದರ ಕಡೆ ಲಕ್ಷ್ಯಕೊಡಲಿಲ್ಲ. ನಿಮ್ಮ ಮೆತ್ತಗಿನ ಮಾತು, ಮುಖದ ಮೇಲಿನ ಸೌಮ್ಯ ಕಳೆ ನೋಡಿ, ವಿಶ್ವಾಸದಿಂದ ಆಶ್ರಯ ಕೊಟ್ಟೆ, ಅದಕ್ಕೆ ಫಲಕೊಟ್ರಿ. ಈಗ ಹೋಗ್ರೀ, ನಿಮ್ಮ ಕೆಲಸಕ್ಕೆ ಸುರು ಹಚ್ರಿ."

"ಶಿವನಾಗಪ್ಪನವರೇ! ನೀವು ಹೇಳುವ ಮಾತಿನ ಅರ್ಥವೇ ನನಗೆ ಗೊತ್ತಾಗಲಿಲ್ಲ. ನನಗೆ ಅಕಸ್ಮಾತ್ತಾಗಿ ಹೀಗೆ ಅಪ್ಪಣೆಕೊಡಲು ನಾನು ಏನು ಅಪರಾಧಮಾಡಿದ್ದೇನೆ?"

ಅನಂತಯ್ಯನು ಭಯದಿಂದ ತೊದಲುತ್ತ ಈ ಮಾತುಗಳನ್ನಾಡಿದನು. ಆಗ ಅವನ ಅವಸ್ಥೆ ಹೇಗಿತ್ತು ಎನ್ನುವುದು ಕಷ್ಟವನ್ನ ಬಲ್ಲವರಿಗೇ ಗೊತ್ತು. ಪಾಪ! ಅನ್ನದ ಬಾಯಿಗೆ ಮಣ್ಣುಬೀಳುವುದು! ಅದಕ್ಕೆ ಕಾರಣವೇನೋ ಅದವನಿಗೆ ತಿಳಿಯದು. ಹೀಗಿರುವಾಗ ಅವನ ಮನಸ್ಸಿನ ಸ್ಥಿತಿಯೂ ವಿಪರೀತವಾದುದು ಸಹಜವಾಗಿಯೇ ಇತ್ತು.

ಪಾಠಕರೇ, ನಿಮ್ಮಲ್ಲಿ ಯಾರಿಗಾದರೂ ಬಡತನವೇನೆಂದರೇನು ಗೊತ್ತಿದೆಯೇ? ಇಲ್ಲದಿದ್ದರೆ ಒಳ್ಳೆಯದು. ಬಡತನವೆಂದರೆ 'ಇವತ್ತು ಕಾಫೀಕ್ಲಬ್ಬಿಗೆ ದುಡ್ಡಿಲ್ಲದಂತಾಗಿದೆ' ಎಂಬ ಬಡತನವಲ್ಲ. ಬಡತನವೆಂದರೆ ಸುದಾಮನ ಬಡತನ, ಅಗಸನಿಂದ ಬಟ್ಟೆ ಒಗೆಸಿದರೆ ದುಡ್ಡುಕೊಡಲು ಗತಿಯಿಲ್ಲವೆಂಬುದು ಮಾತ್ರವಲ್ಲ. ಬಟ್ಟೆ ಹರಿದಿದ್ದರೆ ಅದನ್ನ ಹೊಲೆಯು ವುದಕ್ಕೆ ಸೂಜೀದಾರವನ್ನು ಕೂಡಾ ಕೊಂಡುಕೊಳ್ಳಲು ಗತಿಯಿಲ್ಲದ ಬಡತನ! ಧನಿಕರಾದ ಸ್ನೇಹಿತರು ಬೀದಿಯಲ್ಲಿ ತನ್ನ ಹರಕು ಬಟ್ಟೆಯನ್ನು ಎಲ್ಲಿ ನೋಡುವರೋ ಎಂದು ತಲೆ ತಪ್ಪಿಸಿಕೊಂಡು ಓಣಿಗಳಲ್ಲಿ ಓಡಿ ಹೋಗು

ವಂತಹ ಬಡತನ! ಒಪ್ಪತ್ತು ಜೀವಧಾರಣೆಮಾಡಲು ಆಹಾರ ದೊರೆಯುವುದು ಹೇಗೆ ಎಂಬ ಚಿಂತೆಯಿಂದ ದೇಹವು ದಹಿಸುವಂತಿರುವ ಬಡತನ! ಇಂತಹ ಬಡತನನನ್ನು ಅನುಭವಿಸುವವರಿಗೇ ಅನಂತಯ್ಯನಿಗೆ ಆ ಸಮಯದಲ್ಲಾದ ಮನಸ್ಸಿನ ಸ್ಥಿತಿಯು ಅನುಭವ ಉಂಟಾಗುವುದು, ಬೇರೆಯವರಿಗೆ ಅದು ತಿಳಿಯಲಾರದು. ಮನೆಯಲ್ಲಿ ಹೆಂಡತಿ, ಮೂರು ಜನ ಮಕ್ಕಳು, ಅವರೆಲ್ಲರ ಜೀವನವೂ, ಅನಂತಯ್ಯನ ೧೫ ರೂಪಾಯಿ ಸಂಬಳದಲ್ಲೇ ಜರುಗಬೇಕು! ಅದು ಕೂಡಾ ಇವತ್ತಿನಿಂದ ನಿಂತುಹೋಗುವುದು! ಮುಂದೇನು?

ಅನಂತಯ್ಯನ ಬಾಯಲ್ಲಿ ಮಾತೇ ಹೊರಡದು. ಆದರೂ ಸ್ವಲ್ಪ ತಡವರಿಸಿಕೊಂಡು ಮತ್ತೆ ಹೀಗೆಂದನು—"ಸಾಹುಕಾರರೇ! ಅಕಸ್ಮಾತ್ತಾಗಿ, ಎಂದೂ ಇಲ್ಲದೆ ಇವತ್ತು ಹೀಗೆ ಕಠೋರತ್ವವನ್ನು ತೋರುವುದಕ್ಕೆ ನಾನೇನಾದರೂ ತಪ್ಪುಮಾಡಿದ್ದೇನೆಯೇ? ನನಗೆ ಏನೂ ತೋರದಂತಾಗಿದೆ!" ಇದನ್ನು ಕೇಳಿ ಸಾಹುಕಾರರ ಕೋಪ ಹೆಚ್ಚಿತು

"ಇಲ್ಲ, ಅದು ತೋರೋದಿಲ್ಲ! ನನ್ಬಾಯಿಂದೇ ಸ್ಪಷ್ಟ ಹೇಳಿದರೆ ನೆಟ್ಟಗೆ ಕಾಣಸ್ತದೇನು? ಆದರೂ ಹೇಳ್ತೀನಿ, ಕೇಳ್ರಿ. ಅನಂತಪ್ಪ, ನನ್ನ ಕೋಣ್ಯಾಗೆ ನನ್ನ ಮೇಜಿನ ಮ್ಯಾಲೆ ಇಟ್ಟಿರೋ ಪೆಟ್ಟಿಗಿ ಒಳಗಿಂದ ದಿನಾ ಹತ್ತೂ ಹದಿನೈದು ರೂಪಾಯಿ ಮಾಯಾ ಆಗ್ತಾವೆ! ಅದೆಲ್ಲಿ ಹೋಗಗ್ ಬೇಕು? ನಮ್ಮ ಮನೀ ಒಳಗಿನ ಮಂದೀ ಮತ್ತಾರಾದರೂ ಅಲ್ಲಿ ಬರ್ತಾರೆ? ನೀವು, ನಾನು, ನಮ್ಮ ಹುಡುಗ ಸಿದ್ರಾಮಪ್ಪ – ಇಷ್ಟು ಮಂದಿ ಶಿವಾಯಿ ಮತ್ಯಾರಾದರೂ ಬರ್ತಾರೇ? ದುಡ್ಡಿನ ಪೆಟ್ಟಗೀ ತೆಗೀತಾರೇ? ಇಲ್ಲ. ಮತ್ತೆ ನೀವು ಈಗ ಕುದರೀ ಜೂಜಿಗೆ ಹೋಗ್ತಾ ಇದ್ದೀರಿ ಅಂತ ನಿನ್ನೆ ಸಿದ್ರಾಮಪ್ಪ ಹೇಳಿದಾ. ಅದು ಖರೇ ಆಗಿದ್ರೆ ಪೆಟಗ್ಯಾಗಿನ ರೊಕ್ಕ ಎಲ್ಲಿ ಹೋಗ್ತಾವೆ ಅಂತ ಸಂಶಯಬೇಕೇನು?"

ಬಡತನ ಅನ್ನೋದು ಬಲುಕೆಟ್ಟದು. ವೇದಾಂತಿಗಳೇನೋ ಬಡತನವೇ ಭಕ್ತಿಮಾರ್ಗಕ್ಕೆ ಸೋಪಾನವೆಂದು ಹೇಳುವರು. ಆದರೆ ಬಡವರೆಲ್ಲರೂ ಭಕ್ತರೆಂದು ಯಾರೂ ತಿಳಿಯುವುದಿಲ್ಲ. ಅಷ್ಟೇಕೇ? ಬಡತನವೆಂಬುದು ದೊಡ್ಡ ಪಾಪವೆಂದು ಅನೇಕರ ಭಾವನೆಯಲ್ಲವೇ? ಈ ಪ್ರಪಂಚ

ದಲ್ಲಿ ಬಡವರ ಗೋಳನ್ನು ಕೇಳುವವರಾರು ? ಬಡವನು ಎಷ್ಟು ಪ್ರಾಮಾಣಿಕನಾಗಿದ್ದರೂ ಲೋಕವು ಆ 'ಪ್ರಾಮಾಣಿಕ' ಶಬ್ದಕ್ಕೆ ಗೌರವ ಕೊಡುವಷ್ಟು ಆ ಗುಣಕ್ಕೆ ಕೊಡುವುದಿಲ್ಲ. ಅದಕ್ಕೆ ಕಾರಣ ಅದರೊಂದಿಗಿರುವ ಬಡತನ.

(೨)

ಶಿವನಾಗಪ್ಪನವರ ಕೊನೆಯ ಮಾತು ಕೇಳಿ ಅನಂತಯ್ಯನು ಸಿಡಿಲು ಬಡಿದ ಹಾಗೆ ನಿಂತಿದ್ದನು. ಹಿಂದೆ ಒಂದು ದಿನ ಈ ಬಡತನದಿಂದ ಅವನ ಮನಸ್ಸು ಬೆಂದುಹೋಗಿತ್ತು. ಆಗ ಈ ಕೆಲಸದಿಂದೇನು ಪ್ರಯೋಜನ? ಸಾಯುವವರೆಗೆ ಇದರಲ್ಲಿದ್ದರೆ ಬಡವನಾಗಿ ಸಾಯಬೇಕು. ಹೇಗಾದರೂ ಮಾಡಿ ಐಶ್ವರ್ಯವಂತನಾಗಿ ತನ್ನ ಸಾಹುಕಾರರಂತೆ ದೊಡ್ಡ ವ್ಯಾಪಾರಿಯೆನಿಸಿಕೊಳ್ಳಬೇಕು ಎಂದು ಸವಿಗನಸನ್ನು ಕಂಡಿದ್ದನು. ಆ ಆಲೋಚನೆಗೆ ತಕ್ಕಂತೆ ಸಾಹುಕಾರ ಮಗ ಸಿದ್ರಾಮಪ್ಪನು, "ಅನಂತಯ್ಯನವರೇ, ನೀವು ಕುದ್ರಿ ಜೂಜಿಗೆ ಯಾಕೆ ಬರಬಾರದು. ಅದರಲ್ಲಿ ಸ್ವಲ್ಪ ಹಣ ಹಾಕಿದ್ರೆ ಸ್ವಲ್ಪ ದಿನಗಳಲ್ಲೇ ಸಾವುಕಾರ್ರಾಗಬಹುದು. ನಾಳೆ ನನ್ನ ಜತೀಲಿ ಬರ್ರಿ" ಎಂದು ಹೇಳಿದನು. ಅದರಂತೆ ಮರುದಿನ ಅನಂತಯ್ಯನು ರೇಸ್‌ಕೋರ್ಸಿಗೆ ಹೋಗಿ ತನ್ನಲ್ಲಿದ್ದ ಹತ್ತು ರೂಪಾಯಿಗಳನ್ನು ಕಳೆದುಕೊಂಡುಬಂದನು. ಅಂದಿನಿಂದ ಅವನು ರೇಸ್‌ಕೋರ್ಸ್ ಕಡೆ ಮತ್ತೆ ಮುಖವನ್ನು ತಿರುಗಿಸಿರಲಿಲ್ಲ. ಆದರೆ ತಾನು ಒಂದೇ ಸಾರಿ ಮಾಡಿದ ಈ ತಪ್ಪು ಸಾಹುಕಾರ್ರ ಕಿವಿಗೆ ಹೇಗೆ ಸೇರಿತು ? ಇದಲ್ಲದೆ ಅವನು ಕಳೆದುಕೊಂಡ ದುಡ್ಡು ಅವನದೇ ಆಗಿತ್ತು. ಆದ್ದರಿಂದ ಈಗ ತನಗಾದ ಶಿಕ್ಷೆಯ ರಹಸ್ಯವೇನೆಂದು ಅವನಿಗೆ ತಿಳಿಯಲಿಲ್ಲ.

ಇನ್ನು ಮನೆಗೆ ಹೋದಕೂಡಲೇ ಹೆಂಡತಿಗೆ ಏನು ಹೇಳಬೇಕು. ಅವನ ಹೆಂಡತಿ ರತ್ನಮ್ಮನು ಅವನ ಪಾಲಿಗೆ ನಿಜವಾದ ರತ್ನವಾಗಿದ್ದಳು. ಅವಳ ಮನಸ್ಸನ್ನು ಸಂತೋಷವಾಗಿಡುವುದಕ್ಕೆ ಅವನು ಎಷ್ಟು ಶ್ರಮಪಟ್ಟಾದರೂ ಕೆಲಸ ಮಾಡುತ್ತಿದ್ದನು. ಅವಳ ಮನಸ್ಸಿಗೆ ಅಥವಾ ಶರೀರಕ್ಕೆ ಏನಾದರೂ ದುಃಖವಾದರೆ ಇವನ ಶರೀರಕ್ಕೆ ಘಾಯವಾದಂತೆ ಭಾವಿಸುತ್ತಿದ್ದನು. ರತ್ನಮ್ಮನು ದೊಡ್ಡವರ ಮನೆ ಹೆಣ್ಣಾದರೂ ಗಂಡನೆಂದರೆ ತನ್ನ

ಸರ್ವಸ್ವ ಎಂದು ತಿಳಿದಿದ್ದಳು. ಅವಳೂ ವಿದ್ಯಾವಂತೆ, ಹೊಲಿಗೆ ಕಸೂ ಮೊದಲಾದ ಕಲೆಗಳಲ್ಲಿ ಪ್ರವೀಣಳಾಗಿದ್ದಳು. ಅತ್ತೆ ಮನೆಗೆ ಬಂದನಂತ ತಾನು ದೊಡ್ಡವರ ಮನೆ ಹುಡುಗಿ ಎಂಬುವದನ್ನು ಮರೆತು, ಕಡು ಬಡ ಳಂತೆ ಹೆಮ್ಮೆಯಿಲ್ಲದೆ, ಗಂಡನ ಮನಸ್ಸು ಸಂತೋಷದಿಂದಿದ್ದರೆ ತನಗದೆ ಪರಮಭಾಗ್ಯವೆಂದು ತಿಳಿದು, ಸಂಸಾರವನ್ನೆಲ್ಲಾ ೧೫ ರೂಪಾಯಿಗಳಲ್ಲಿಯೆ ಸಾಗಿಸುತ್ತಿದ್ದಳು, ಮೊದಲು ಅನಂತಯ್ಯನಿಗೆ ಕೆಲಸ ಸಿಕ್ಕಿರಲಿಲ್ಲ, ಆ ತನ್ನ ಮೈಮೇಲಿದ್ದ ಅಮೌಲ್ಯವಾದ ಆಭರಣಗಳನ್ನೆಲ್ಲಾ ಮಾರಿ, ಸಂಸಾ ವನ್ನು ತೂಗಿಸಬೇಕಾಯಿತು. ಆಗ ಅವಳಿಗೆ ಸ್ವಲ್ಪವೂ ದುಃಖವಾಗಿರಲಿಲ್ ಈಗ ಮೂರು ಜನ ಮಕ್ಕಳು. ಸಂಸಾರ ಬೆಳೆದಿತ್ತು, ೧೫ ರೂಪಾಯಿಯ ಸಂಸಾರ ಸಾಗುವುದು ಹೇಗೆ? ಅದಕ್ಕಾಗಿ ತನ್ನ ನೆರೆಹೊರೆಯವರ ಸೀ ಕುಪ್ಪುಸಗಳಿಗೆ ಕಸೂತಿ ಹಾಕಿ ಕೊಡುವುದು, ಮಕ್ಕಳ ಬಟ್ಟೆಗಳನ್ನು ಅಂ ವಾಗಿ ಹೊಲಿದುಕೊಡುವುದು – ಇವೇ ಮೊದಲಾದ ಕೆಲಸದಿಂದಲು ಕೆಲವು ಸಮಯದಲ್ಲಿ ಬೀಸುವುದು, ಕುಟ್ಟುವುದು ಈ ಕೆಲಸಗಳಿಂದಲ ಹಣವನ್ನು ಸಂಪಾದಿಸಿ ಸಂಸಾರವನ್ನು ಸಾಗಿಸುತ್ತಿದ್ದಳು. ಇವಳು ಇಷ ಕಷ್ಟ ಪಡುವುದು ಗಂಡನಿಗೆ ತಿಳಿದರೆ ಅವನ ಮನಸ್ಸಿಗೆ ಬಡತನ ಯೋಚನೆ ಎಲ್ಲಿ ಬಂದು ನೊಂದುಕೊಳ್ಳುವನೋ ಎಂದು, ಅವನಿಗೆ ತಿಳಿ ದಂತೆ ಕೆಲಸ ಮಾಡುತ್ತಿದ್ದಳು. ಅನಂತಯ್ಯ ತಾನು ಕಷ್ಟಪಡುವು ರತ್ನಮ್ಮನಿಗೆ ತಿಳಿದರೆ ಎಲ್ಲಿ ನೊಂದುಕೊಳ್ಳುವಳೋ ಎಂದು ಮನೆ ಬರುವಾಗ ಎಷ್ಟು ಆಯಾಸವಾಗಿದ್ದರೂ ನಗುಮುಖದಿಂದ ಮನೆಗೆ ಬ ತ್ತಿದ್ದನು. ಬಡತನದಿಂದ ಒಂದುವೇಳೆ ಅನಂತಯ್ಯನ ಬಾಯಿಂದ ನಿರಾಶೆ ಮಾತುಗಳು ಹೊರಟರೆ, ಅವನಿಗೆ ವೇದಾಂತದ ಮಾತನ್ನು ಕೇಳಿ ಸಮ ಧಾನ ಪಡಿಸುತ್ತಿದ್ದಳು.

ಆದರೆ ಇವತ್ತು ಅವನ ಮನಸ್ಸಿನ ಸ್ಥಿತಿಯೇ ಬೇರೆಯಾಗಿತ್ತು ಮನೆಯಲ್ಲಿ ಮಾರಲು ಯೋಗ್ಯವಾದ ವಸ್ತುವಾವುದೂ ಇನ್ನು ಉಳಿದಿರಲಿಲ್ ಸಾಹುಕಾರನ ಕೊನೆಯ ಮಾತನ್ನು ಕೇಳುವಾಗ ಅವನಿಗೆ ರತ್ನಮ್ಮ ಮತ್ತು ಮೂರು ಮಕ್ಕಳ ನೆನಪಾಯಿತು. ಮುಂದೆ ಅವರ ಗತಿಯೇನು ಎಂದು ಆಲೋಚಿಸಿದನು. ಕೊನೆಗೆ ನಿಜವಾದ ಸಂಗತಿಯನ್ನು ಹೇಳಿದ

ಶಿವನಾಗಪ್ಪನವರಿಗೆ ದಯೆ ಬರಬಹುದೆಂದು ತಿಳಿದು ಹೀಗೆಂದನು:— "ಸಾಹುಕಾರರೇ, ಒಂದು ತಪ್ಪುಮಾಡಿದ್ದೇನೋ ನಿಜ. ಅದನ್ನು ದಯೆಯಿಟ್ಟು ಕ್ಷಮಿಸಬೇಕು. ಆದರೆ ತಾವು ನನ್ನ ಮೇಲೆ ಏನುಕಾರಣ ದೂರನ್ನು ಹೊರಿಸಿರುವಿರಿ. ನಿಮ್ಮ ಪೆಟ್ಟಿಗೆಯಿಂದ ಒಂದು ಕಾಸನ್ನಾದರೂ ನಾನು ಸ್ವಂತಕ್ಕೆ ಉಪಯೋಗಿಸಿಲ್ಲವೆಂದು ನಾನು ಪ್ರಮಾಣ ಮಾಡಿ ಹೇಳಬಲ್ಲೆನು. ನನಗೆ ನಾಲ್ಕು ದಿನ ಪುರಸತ್ತುಕೊಡಿ. ಅಷ್ಟರೊಳಗೆ ನಿಮ್ಮ ಪೆಟ್ಟಿಗೆಯ ದುಡ್ಡು ಹೇಗೆ ಹೋಗುವುದೆಂಬುದನ್ನು ಕಂಡು ಹಿಡಿಯುವೆನು. ಅನ್ಯಾಯವಾಗಿ ನನ್ನನ್ನು ಕಳ್ಳನೆಂದು ಕರೆದು ಅವಮಾನ ಗೊಳಿಸಕೂಡದೆಂದು ಬೇಡಿಕೊಳ್ಳುವನು "

ಶಿವನಾಗಪ್ಪನವರ ಮನಸ್ಸಿನ ಮೇಲೆ ಈ ಮಾತುಗಳಿಂದ ಏನೂ ಪರಿಣಾಮವಾಗಲಿಲ್ಲ. ಅವರು ಹೀಗೆಂದರು :—"ಅನಂತಯ್ಯ, ಇನ್ನು ನಿಮ್ಮ ಮಾತಿಗೆ ನಾನು ಮೋಸಹೋಗುವವನಲ್ಲ ನಿಮ್ಮ ಮಾತ್ಕೇಳಿ ನನ್ನ ಮನಸ್ಸು ಮತ್ತಷ್ಟು ನೊಂದದೆ. ಹೆಚ್ಚು ಮಾತಾಡಿ ಯಾಕೆ ಗಂಟ್ಲು ಒಣಗಿಸ್ಕೋತೀರಿ. ಈಗ ಹೋಗಿ ನಿಮ್ಮ ಕೆಲಸಕ್ಕೆ ಷುರುಹಚ್ಚಿರಿ. ನಿಮ್ಮನ್ನ ಈಗಿಂದೀಗೇ ಕಳ್ಸಬೇಕು. ಆದರೆ ಜನರ ಮನಸ್ಸಿಗೆ ನಿಮ್ಮ ವಿಚಾರದಲ್ಲಿ ಸಂಶಯ ಬರಬಾರ್ದಂತ ಇವತ್ತ ಸಂಜೇವರೆಗೆ ಕೆಲಸಾ ಮಾಡ್ರಿ ಅಂತ ಹೇಳಿನಿ. ಕೆಲಸ ಮಾಡಿ, ಸಂಜೀ ಮುಂದೆ ನನ್ನ ಕೋಣೇ ಒಳಗೆ ನಿಮ್ಮ ಸಂಬಳ ಇಟ್ಟಿರ್ತೀನಿ, ಅದನ್ನು ತೊಗೊಂಡು ಹೋಗ್ರಿ. ಇನ್ನು ನಾಳಿನಿಂದ ನಿಮ್ಮ ಮಾರಿ ನನಗೆ ತೋರಿಸಬ್ಯಾಡ್ರಿ."

(೩)

ಅನಂತಯ್ಯನು ಸಾಯಂಕಾಲದವರೆಗೆ ಹೇಗೋ ಕೆಲಸಮಾಡಿದನು. ಹೊತ್ತು ಮುಳುಗಿ ಕತ್ತಲೆಯಾಗುತ್ತಾ ಬಂದಿತು. ಆಗ ಆಳು ಒಂದು ದೀಪವನ್ನು ಹಚ್ಚಿಟ್ಟನು. ಅನಂತಯ್ಯನು ಲೆಕ್ಕದ ಪುಸ್ತಕಗಳನ್ನೆಲ್ಲಾ ತೆಗೆದಿಟ್ಟು ಸಾಹುಕಾರ ಹೇಳಿದಂತೆ ಅವರ ಕೋಣೆಯೊಳಗೆ ಹೋಗಿ ತನ್ನ ಸಂಬಳದ ರೂಪಾಯಿಗಳನ್ನು ತೆಗೆದುಕೊಳ್ಳಬೇಕೆಂದು ಹೊರಟನು, ಕೋಣೆಯ ಹತ್ತಿರ ಹೋದಕೂಡಲೇ, ಬೆಳಿಗ್ಗೆ ನಡೆದ ಸಂಗತಿಗಳೆಲ್ಲಾ

ನೆನಪಿಗೆ ಬಂದು ಕೈ ನಡುಗಲಾರಂಭವಾಯಿತು. ಆಗವನು ಅಲ್ಲಿಯೇ ನಿಂತುಬಿಟ್ಟನು. ಆಗ ಒಳಗೆ ಏನೋ ಶಬ್ದವಾಗುತ್ತಿತ್ತು. ಅದನ್ನು ಕೇಳಿ ಸಾಹುಕಾರರೇ ಒಳಗಿರಬಹುದೆಂದು ಭಾವಿಸಿ ಬಾಗಿಲನ್ನು ಮೆಲ್ಲಕ್ಕೆ ಹಿಂದಕ್ಕೆ ನೂಕಿದನು. ಒಳಗಿನ ದೃಶ್ಯವನ್ನು ಕಂಡು ನಡುಗಿ ಸ್ವಲ್ಪಹೊತ್ತು ಸುಮ್ಮನೆ ನಿಂತುಬಿಟ್ಟನು. ಒಳಗೆ ಸಾಹುಕಾರ ಮಗ ಸಿದ್ರಾಮಪ್ಪನು ಸಾಹುಕಾರರ ಪೆಟ್ಟಿಯನ್ನು ತೆರೆದು ಅದರಿಂದ ಕೆಲವು ರೂಪಾಯಿಗಳನ್ನು ತನ್ನ ಜೇಬಿಗೆ (ಕಿಸೆಗೆ) ಸೇರಿಸುತ್ತಿದ್ದಾನೆ. ಕೈಯಲ್ಲಿ ಎರಡು ಹತ್ತು ರೂಪಾಯಿ ನೋಟುಗಳನ್ನು ಹಿಡಿದಿದ್ದಾನೆ ಇನ್ನೂ ಹತ್ತು ರೂಪಾಯಿ ಗಳನ್ನೆತ್ತುವ ಭರದಲ್ಲಿ ಅವನು ಅನಂತಯ್ಯನನ್ನು ನೋಡಲೇ ಇಲ್ಲ. ಅವನು ನೋಟುಗಳನ್ನು ಜೇಬಿಗೆ ಸೇರಿಸುತ್ತಾ "ನಾಳೆಯಿಂದ ನನಗೆ ಕಷ್ಟ ವಾಗುವುದು. ಏಕೆಂದರೆ ಅನಂತಯ್ಯನು ಬರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಎಂದಾದರೊಂದು ದಿನ ನಾನು ಸಿಕ್ಕಬೇಕಾಗುವುದು, ಇವತ್ತು ದಕ್ಕಿದಷ್ಟೇ ಲಾಭ. ಹ್ಯಾಗೂ ಇವತ್ತು ಅನಂತಯ್ಯನು ಸಂಬಳ ತೆಗೆದು ಕೊಂಡು ಹೋಗುವುದಕ್ಕೆ ಬಂದನು ಈ ರೂಪಾಯಿಗಳನ್ನು ಕದ್ದಿದ್ದಾನೆಂದು ನಮ್ಮಪ್ಪನು ಊಹಿಸುವನು." ಎಂದುಕೊಳ್ಳುತ್ತಿದ್ದನು. ಅವನ ಊಹೆ ಮುಗಿಯುವುದರೊಳಗೆ ಅನಂತಯ್ಯನು ಆವೇಶದಿಂದ ಮುಂದೆ ನುಗ್ಗಿ— "ಲೋ ಮೋಸಗಾರ! ನಿಮ್ಮಪ್ಪನ ಪೆಟ್ಟಿಗೆಯಿಂದ ನಿತ್ಯವೂ ಹೀಗೆ ದುಡ್ಡನ್ನು ಕದ್ದು ನನ್ನ ಮೇಲೆ ದೂರು ಹೊರೆಸುತ್ತಿದ್ದೀಯಾ ? ತಾಳು, ಈಗ"— ಎಂದು ಅವನ ಕೈಯ್ಯನ್ನು ಭದ್ರವಾಗಿ ಹಿಡಿದುಕೊಂಡನು.

ಅನಂತಯ್ಯನು ಕೈಹಿಡಿದ ಪಟ್ಟನ್ನು ಅನುಭವಿಸಿ, ಸಿದ್ರಾಮಪ್ಪನ ಮುಖಕ್ಕೆ ಬಿಳುಪೇರಿತು. ಆಗವನು ಅನಂತಯ್ಯನನ್ನು ಕುರಿತು, "ಅನಂತಯ್ಯನವರೇ ಇವತ್ತೊಂದು ದಿನ ಕ್ಷಮಿಸಿಬಿಡಿ. ನಿಮ್ಮ ದಮ್ಮಯ್ಯ, ಈ ಸಂಗತಿಯನ್ನು ಯಾರಿಗೂ ಹೇಳಬೇಡಿ. ನೀವು ಕೈಬಿಟ್ಟರೆ, ನಾನು ತೆಗೆದುಕೊಂಡು ರೂಪಾಯಿಗಳನ್ನೆಲ್ಲಾ ಅಲ್ಲಿಯೇ ಇಟ್ಟುಬಿಡ್ತೀನಿ. ಆಮ್ಯಾಲೆ ನೀವು ಹೇಳಿದ ಕೆಲಸವನ್ನು ಮಾಡ್ತೀನಿ. ಇವತ್ತಿಗೆ ಕ್ಷಮಿಸಿ ಬಿಡ್ರಿ. ಈ ಸಂಗತೀನ ಅಪ್ಪಾ ಅವರಿಗೆ ತಿಳಿಸಬ್ಯಾಡ್ರಿ." ಎಂದು ಕೇಳಿ ಕೊಂಡನು. ಅನಂತಯ್ಯನು ಕೈಬಿಟ್ಟನು. ಅವನು ಪೆಟ್ಟಿಗೆಯಲ್ಲಿ ಎಲ್ಲ

ರೂಪಾಯಿಗಳನ್ನು ಹಾಕಿ, ಬೀಗಹಾಕಿ, ಅನಂತಯ್ಯನ ಕಡೆ ತಿರುಗಿ— "ಏನ್ರಪ್ಪಾ! ಇನ್ನನ್ಮಾಲೆ ಚಾಡೀ ಹ್ಯಾಂಗೆ ಹೇಳ್ತೀರಿ? ಆಗಲಿ, ನಾನೂ ಹೇಳ್ತೀನಿ. ಯಾರ ಮಾತು ನಂಬ್ತಾರೋ ನೋಡೋಣ. ಇವತ್ತು ನೀವು ಸಂಬ್ಳ ತೊಗೊಂಡು ಹೋಗಲಿಕ್ಕೆ ಬರ್ತೀರಿ ಅಂತ ತಿಳಿದು ನಾನು ಮುಚ್ಚಿಟ್ಕೊಂಡಿದ್ದೆ; ನೀವು ಪೆಟ್ಟಿಗೆ ತೆಗೆಯುವಾಗ ನಾನು ಬೀಗದಕೈ ಕಿತ್ಕೊಂಡೆ. ಇವತ್ತು ಹ್ಯಾಗಿದ್ದರೂ ಕೊನೆ ದಿವ್ಸಾ ಅಂತ ನಿಮ್ಮ ಕೈಗೆ ಸಿಕ್ಕಷ್ಟು ರೂಪಾಯಿ ತೊಗೊಂಡು ಹೋಗೋಣ ಅಂತ ಮಾಡಿದ್ರೇನು? ಇದನ್ನು ನಮ್ಮಪ್ಪಗೆ ಹೇಳ್ತೀನಿ ಅಂತಂದರೆ, ನನ್ನ ಹಿಡಿಕೋತೀರಾ ಇರ್ರೀ ಅಪ್ಪಾ ಅವರು ಬರೋ ತನಕ ನೀವು ಹೋಗಬಾರ್ದು! ಹಾಂಗೆ ಹೋಗ್‌ಬೇಕೂಂತಿದ್ರೆ ನಿಮ್ಮ ಸಂಬ್ಳಾ ನನ್ನ ಕೈಗೆ ಕೊಟ್ಟು ಮರ್ಯಾದೆ ಯಿಂದ ಮನೇಹಾದೀ ಹಿಡೀರಿ ಎಂದನು."

ಆಗ ತನ್ನ ಮಾತಿಗಿಂತಲೂ ಸಿದ್ರಾಮಪ್ಪನ ಮಾತಿಗೆ ಬೆಲೆ ಸಿಕ್ಕುವು ದೆಂದು ಅನಂತಯ್ಯನಿಗೆ ಹೊಳೆಯಿತು. ಅನಂತರ ತನ್ನ ಅವಸ್ಥೆ ಏನಾಗ ಬೇಕು? ಎಂದು ಆಲೋಚಿಸುತ್ತಾ ಹೊರಗೆ ಹೊರಟನು. ಆದರೆ ಸಿದ್ರಾ ಮಪ್ಪನು ಅವನ ಕೈಹಿಡಿದು ನಿಲ್ಲಿಸಿ "ಏನು ಹೇಳ್ತೀರಿ? ನಿಮ್ಮ ಸಂಬ್ಳದ ದುಡ್ಡು ನನ್ನ ಕೈಗೆ ಕೊಡ್ತೀರೋ, ಅಪ್ಪಾ ಅವರ ಮುಂದೆ ಹೇಳ್ಲೋ!" ಎಂದನು. ಸಿದ್ರಾಮಪ್ಪನಿಗೆ ಇನ್ನೂ ೨೦-೨೧ ವರುಷ ವಯಸ್ಸು. ಆ ವಯಸ್ಸಿಗೇ ಜೂಜು, ವೇಶ್ಯೆಯರ ವ್ಯಸನಗಳು ಅವನನ್ನು ಆಕ್ರಮಿಸಿದ್ದುವು. ಇದರ ಮೇಲೆ ದುಷ್ಟ ಸಂಗದಿಂದ ಅವನು ಬೇಕಾದ್ದು ಮಾಡಬಲ್ಲವ ನಾಗಿದ್ದನು. ಅನಂತಯ್ಯನು ಮಾತಾಡದೆ ತನ್ನ ಸಂಬಳದ ದುಡ್ಡನ್ನು ಅವನ ಕೈಲಿಟ್ಟು ಹೊರಟನು.

"ಸದ್ಯಕ್ಕೆ ಶನಿ ತೊಲಗಿದ ಹಾಗಾಯಿತು. ಮಾನಕ್ಕಿಂತಲೂ ಹಣ ಹೆಚ್ಚೇ? ಈಗ ಮನೆಗೆ ಹೋಗಿ ಹೆಂಡತಿ ಮಕ್ಕಳಿಗೆ ಏನು ಹೇಳಲಿ! ಪಾಪ, ಆಕೆಯ ಮನಸ್ಸು ಎಷ್ಟು ನೋಯುವುದೋ!" ಇವೇ ಮುಂತಾಗಿ ಆಲೋಚಿಸುತ್ತಾ, ಅನಂತಯ್ಯನು ಹೇಗೋ ರಾತ್ರಿ ೯ ಘಂಟೆಗೆ ಮನೆ ಸೇರಿದನು. ನಡೆದ ಸಂಗತಿಯನ್ನು ಪತ್ನಿಗೆ ಹೇಳಿದರೆ, "ನಾಳೆಯ ಅನ್ನಕ್ಕೆ

ಕಲ್ಲುಬಿದ್ದುದ್ದಲ್ಲದೆ ಅದರ ಜೊತೆಗೆ ಈ ಅವಮಾನವೂ ಆಯಿತೇ! ಎಂದು ತಿಳಿದು ಆಕೆಗೆ ಎಷ್ಟು ದುಃಖವಾಗುವುದೋ" ಎಂದು ಅನಂತಯ್ಯನು ಯೋಚಿಸಲಾರಂಭಿಸಿದನು. ಆದರೆ ಇದುವರೆಗೆ ಅವನ ಹೆಂಡತಿಗೆ ಯಾವ ಮಾತನ್ನೂ ತಿಳಿಸದೆ ಇರುತ್ತಿರಲಿಲ್ಲ. ಊಟವಾದ ಮೇಲೆ ಇಬ್ಬರೂ ಕೂತು ಕೊಂಡರು. ರತ್ನಮ್ಮನು "ಇದೇಕೆ ಇವತ್ತು ಸಪ್ಪಗಿದ್ದೀರಿ"? ಎಂದಳು. ಅನಂತಯ್ಯನು ಎಲ್ಲವನ್ನೂ ಬಿಚ್ಚಿ ಹೇಳಿಬಿಟ್ಟನು.

ಸ್ತ್ರೀಯರ ಮನಸ್ಸು ಮಲ್ಲಿಗೆ ಹೂವಿಗಿಂತಲೂ ಮೃದುವಾಗಿರುವು ದೆಂದು ಒಬ್ಬ ಕವಿಯು ವರ್ಣಿಸಿದ್ದಾನೆ. ಪತಿವ್ರತೆಯರ ಅಂತಹ ಮೃದು ವಾದ ಮನಸ್ಸು ಸಂಕಷ್ಟ ಸಮಯದಲ್ಲಿ ವಜ್ರಕ್ಕಿಂತಲೂ ಕಠೋರವಾಗುವು ದೆಂದು ಮತ್ತೊಬ್ಬ ಕವಿಯು ವರ್ಣಿಸಿದ್ದಾನೆ. ಅನಂತಯ್ಯನಿಗೆ ಈ ಎರಡು ಮಾತುಗಳ ಅನುಭವವು ಇವತ್ತು ಉಂಟಾಯಿತು. ತನ್ನ ಸ್ಥಿತಿಯನ್ನು ಹೆಂಡತಿಗೆ ಹೇಳಲು ಅವನಿಗೇ ಧೈರ್ಯವಿರಲಿಲ್ಲ. ಅವನ ಮಾತುಗಳನ್ನು ಕೇಳಿ ರತ್ನಮ್ಮನು ಸ್ವಲ್ಪಹೊತ್ತು ಮೌನದಿಂದಿದ್ದು, ಅನಂತರ ಹೀಗೆಂ ದಳು :—"ಅಯ್ಯೋ ಬೆಂಗಳೂರಂಥ ದೊಡ್ಡ ಪಟ್ಟಣದಲ್ಲಿ ಕೆಲಸಕ್ಕೆ ಕಡಿಮೆಯೇ? ಯಾಕೆ ಯೋಚನೆ ಮಾಡ್ತೀರಿ, ಸುಮ್ನಿರಿ. ಇದೆಲ್ಲ ದೇವರ ಪರೀಕ್ಷೆ" ಎಂದು ಬಿಟ್ಟಳು. ಅನಂತಯ್ಯನು, ಸಿದ್ರಾಮಪ್ಪನ ವರ್ತನೆಯನ್ನು ಅವನ ತಂದೆಗೆ ತಿಳಿಸಿ, ಅವನಿಗೆ ಶಿಕ್ಷೆ ಮಾಡಿಸಬೇಕೆಂದನು. ರತ್ನಮ್ಮನು—"ಅಂತಹ ಕೆಲಸಕ್ಕೆ ಹೋಗಬೇಡಿ. ಅದರಿಂದ ನಿಮ್ಮ ಮೇಲೆ ಸಾಹುಕಾರರ ಕೋಪ ಹೆಚ್ಚಬಹುದು, ಅವರು ದುಡ್ಡಿದ್ದವರು, ಬೇಕಾದ ಅನ್ಯಾಯ ಮಾಡಿ ಜಯಿಸಬಹುದು. ನಾವು ಹಾಗೆ ಮಾಡಿದರೆ ಆಗತ್ತೇನು? ದೇವರೇ ಹುಡುಗನಿಗೆ ತಕ್ಕ ಶಿಕ್ಷೆ ಕೊಡುತ್ತಾನೆ. ಸುಮ್ನಿರಿ. ನಾಳೆ ಬೆಳಗ್ಗೆ ಹೋಗಿ ನನ್ನ ಬೆಳ್ಳಿಡಾಬು ಮಾರಿಕೊಂಡು, ಮನೆಗೆ ಕೆಲವು ದಿನಗಳ ಸಾಮಾನು ಒಟ್ಟಿಗೆ ತಂದುಹಾಕಿ. ನಿಮ್ಮ ಕೆಲಸ ಸಿಕ್ಕುವವರೆಗೆ ಹೇಗೋ ಕಾಲಕಳೆದರಾಯಿತು !" ಎಂದು ಬಿಟ್ಟಳು.

ಮಾರನೆಯ ದಿನ ರತ್ನಮ್ಮನು ಆಗ ತಾನಿದ್ದ ಮನೆಯನ್ನು ಬಿಟ್ಟು ಮುನಿಸಿಪಲ್ ಪೂರ್ ಹೌಸಿನ ಬ್ಲಾಕಿನಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಎಲ್ಲರೂ ಅಲ್ಲಿಗೆ ಹೊರಟುಹೋದರು. ಅಲ್ಲಿಂದ ರತ್ನಮ್ಮನು

ದಿನಾಗಲೂ ಬೆಳಿಗ್ಗೆ ಅಡಿಗೆ ಮಾಡಿ ಹಾಕುವುದು, ಅನಂತಯ್ಯನು ಊಟ ಮಾಡಿ, ಕೆಲಸಕ್ಕಾಗಿ ಅಲೆಯಹುವುದು. ಸಾಯಂಕಾಲದವರೆಗೆ ಅಲೆದು ದಣಿದು ಮನೆಗೆ ಬರುವುದು. ಬಂದಕೂಡಲೇ " ಇವತ್ತೇನಾದರೂ ಸಿಕ್ಕಿತೇ" ಎಂದು ರತ್ನಮ್ಮ ಕೇಳುವುದು ಅವನು " ಇಲ್ಲ" ಎಂದು ನಿಟ್ಟುಸಿರು ಬಿಡುವುದು. ಹೀಗೇ ೪೫ ದಿನಗಳು ಕಳೆದುವು. ಡಾಬಿನಿಂದ ಬಂದ ದುಡ್ಡೆಲ್ಲ ಮುಗಿಯಿತು. ಅದರೊಂದಿಗೆ ರತ್ನಮ್ಮನು ಸಂಪಾದಿಸುತ್ತಿದ್ದ ಕಸೂತಿ, ಹೊಲಿಗೆ ಕೆಲಸಗಳ ದುಡ್ಡು ಸೇರಿಸಿದ್ದರಿಂದ ಇಷ್ಟು ಕಾಲ ತಳ್ಳಿದ್ದಾಯಿತು. ಅನಂತಯ್ಯನು " ನಾಳೆಗೆ ಏನಾದರೂ ಇದೆಯೇ ? " ಎಂದನು ರತ್ನಮ್ಮನು ನಿಮಗದರ ಯೋಚನೆ ಯಾಕೆ ? ಸುಮ್ಮನೆ ಯೋಚಿಸಿ ಪ್ರಯೋಜನವೇನು ? ಇವತ್ತು ಮೈಯಲ್ಲಿ ಸ್ವಸ್ಥವಿಲ್ಲ ಅಂದ್ರಿ, ನಾಳೆಗೆ ಸ್ವಲ್ಪ ಅಕ್ಕಿ ಉಳಿದಿದೆ. ಕಸೂತಿ ಕೆಲಸದಿಂದ ನಾಲ್ಕಾಣೆ ಬಂದಿದೆ. ನೀವೆರಡಾಣೆ ತೆಗೆದುಕೊಂಡು ಹೋಗಿ, ಮಾರ್ಕೆಟ್ಟಿನವರೆಗೆ ಬಸ್ಸಿನಲ್ಲಿ ಹೋಗಿ, ಅಲ್ಲಿಂದ ದೊಡ್ಡಪೇಟೆ, ಚಿಕ್ಕಪೇಟೆ ಸುತ್ತಿ ವಿಚಾರಿಸಿ ನೋಡಿ. ಬರುವಾಗ ಮತ್ತೆ ಬಸ್ಸಿನಲ್ಲಿ ಬಂದು ಬಿಡಿ. ನನಗೆ ಇವತ್ತು ರಾತ್ರಿ ಬೀಸುವ ಕೆಲಸ ಬಂದಿದೆ. ಅದರ ದುಡ್ಡು ಇವತ್ತುಳಿದ ಎರಡಾಣೆ ಸೇರಿಸಿ ನಾಡಿದ್ದು ಅಕ್ಕಿ, ರಾಗಿ ತಂದರಾಯಿತು ! " ಎಂದಳು.

ಅನಂತಯ್ಯನು ಸಾಯಂಕಾಲದವರೆಗೆ ಎಂದಿನಂತೆ ಸುತ್ತಿ ಸುತ್ತಿ ಜ್ವರ ಬಂದು ಕೋಟೆಯ ಬಳಿ ದೊಡ್ಡಣ್ಣನವರ ಸ್ಕೂಲಿನ ವರಾಂಡದಲ್ಲಿ ಮಲಗಿ ಕೊಂಡಿದ್ದನು. ಸಾಯಂಕಾಲ ೬ ಘಂಟೆ ಹೊತ್ತಿಗೆ ಜ್ವರವಿಳಿಯಿತು. ಅಲ್ಲಿಂದೆದ್ದು ಬಸ್ಸಿನಲ್ಲಿ ಮನೆಗೆ ತಲುಪಿದನು. ರತ್ನಮ್ಮನು ಕೇಳುವುದಕ್ಕೆ ಮುಂಚೆಯೇ ಅವನು " ಇವತ್ತು ಹೆಚ್ಚು ಸುತ್ತುವುದಕ್ಕಾಗಲಿಲ್ಲ. ಜ್ವರ ಬಂದುಬಿಟ್ಟಿತು? "....ಎಂದು ಮಾತು ಪೂರೈಸುವುದರೊಳಗಾಗಿ, ರತ್ನಮ್ಮನು " ಅಯ್ಯೋ ಕೆಲಸದ ಮನೆ ಹಾಳಾಯಿತು. ನಿಮ್ಮ ದೇಹವೊಂದು ಘಟ್ಟಿ ಯಾಗಿದ್ದರೆ ಕೆಲಸಕ್ಕೇನು ಕಡಿಮೆ ! ಬನ್ನಿ ಕಾಲು ತೊಳೆದುಕೊಂಡು ಬಿಸಿ ಅನ್ನ ; ತಿಳಿ ಸಾರು ಸ್ವಲ್ಪ ಊಟಮಾಡಿ ; ಮಕ್ಕಳನ್ನು ಮಲಗಿಸಿಕೊಂಡು ನೀವು ಮಲಗಿರಿ. ನನಗೆ ಬೀಸುವ ಕೆಲಸವಿದೆ. ಪಕ್ಕದ ಮನೆಯಾಕೆ ಆರು ಸೇರು ಅಕ್ಕಿ ಬೀಸುವುದಕ್ಕೆ ಕೊಟ್ಟಿದ್ದಾರೆ. ಅದನ್ನು ಬೀಸಿಕೊಟ್ಟರೆ

ನಾಳೆ ಕಥೆ ಕಳೆಯುವುದು, ನಾಳೆ ವಿಶ್ರಾಂತಿ ತೆಗೆದುಕೊಳ್ಳಿ ಎಂದಳು ". ತನ್ನ ಕೆಲಸ ಹೋದಾಗಿನಿಂದ ತನ್ನ ಹೆಂಡತಿಯು ಹೇಗೆ ಕಷ್ಟಪಡುತ್ತ ಸಂಸಾರ ಸಾಗಿಸುತ್ತಿರುವಳೆಂಬುದನ್ನು ನೆನೆಸಿಕೊಂಡು ಅನಂತಯ್ಯನ ಕಣ್ಣು ಗಳಲ್ಲಿ ನೀರು ತುಂಬಿತು. ರತ್ನಮ್ಮನು ಹತ್ತಿರ ಬಂದು, ತಾಯಿಯಂತೆ ಅವನ ತಲೆಯ ಮೇಲೆ ಕೈಯಾಡಿಸುತ್ತಾ, ಇದು ಸರಿಯಲ್ಲ; ನೀವೇ ಹೀಗೆ ಅಧೈರ್ಯ ಹೊಂದಿದರೆ ಹೇಗೆ? ನೀವು ಹೀಗೆ ಮಾಡಿದರೆ ನನ್ನ ಕೈಯಾಡು ವುದು ಹೇಗೆ? ದೇವರು " ಇವತ್ತಿಲ್ಲ ನಾಳೆಯಾದರೂ ಕಣ್ಣುಬಿಟ್ಟು ನೋಡು ತ್ತಾನೆ! ಏಳಿ, ಕಾಲು ತೊಳೆದುಕೊಂಡು ದೇವರಿಗೆ ಮಂಗಳಾರತಿ ಮಾಡಿ, ಊಟಮಾಡಿ ಮಲಗಿಕೊಳ್ಳಿ. ನಾನೂ ಬೇಗ ಬೀಸುವ ಕೆಲಸ ಮುಗಿಸಿ ಕೊಳ್ಳುತ್ತೇನೆ!" ಎಂದಳು.

( ೪ )

ರತ್ನಮ್ಮನ ಉಪಚಾರ ಮತ್ತು ಸವಿಮಾತುಗಳಿಂದಲೂ, ನಿದ್ದೆ ಯಿಂದಲೂ ಅನಂತಯ್ಯನ ಮನಸ್ಸಿಗೆ ವಿಶ್ರಾಂತಿ ಸಿಕ್ಕಿತು. ಮರುದಿನ ಬೆಳಗ್ಗೆ ಅವನು ಏಳುವ ಹೊತ್ತಿಗೆ ಸರಿಯಾಗಿ, ನಿದ್ರೆಯಲ್ಲಿ ಅವನನ್ನು ಯಾರೋ ಕರೆದಂತಾಯಿತು. ಕಣ್ಣುಬಿಟ್ಟು ನೋಡಿದನು. ಯಾರೋ ಬಾಗಿಲು ತಟ್ಟುತ್ತಿದ್ದರು. ರತ್ನಮ್ಮನು ಬಾಗಿಲು ತೆರೆದಳು. ಬಾಗಿಲಲ್ಲಿ ಕರಿಯ ದಿರಸನ್ನು ಕೆಂಪು ರುಮಾಲನ್ನು ಧರಿಸಿ, ಕೈಯಲ್ಲಿ ಚಬುಕನ್ನು ಹಿಡಿದಿದ್ದ ಸಿಪಾಯಿಯೊಬ್ಬನು, " ಅನಂತಪ್ಪಾ, ಅನಂತಪ್ಪಾ! ಕೌನ್ ಹೈ? ತುಮಕೋ ಅಭೀಹಿ ಸಾವಕಾರ್ ಬುಲಾತೇ ಹೈ " ಎಂದನು. ಅವನನ್ನು ನೋಡಿ ಸತಿಪತಿಯರಿಬ್ಬರಿಗೂ ಎದೆ ಒಡೆದಂತಾಯಿತು. ಇದುವರೆಗೆ ಬಡತನದ ಯೋಚನೆಯೊಂದೇ ಇತ್ತು. ಈಗ ಇದೇನು ಹೊಸ ಆಪತ್ತು ಬಂತು ಎಂದುಕೊಂಡರು ಅನಂತಯ್ಯನು " ಯಾವ ಸಾಹುಕಾರರಪ್ಪಾ? " ಎಂದನು. ಸಿಪಾಯಿಯು " ಶಿವನಾಗಪ್ಪಾ ಸಾಹುಕಾರ್ " ಎಂದನು. " ಅವರ ಕೆಲಸ ಬಿಟ್ಟು ಎರಡು ತಿಂಗಳಾ ಯಿತಲ್ಲ. ಈಗ ಏತಕ್ಕೆ ಹೇಳಿ ಕಳುಹಿಸಿದರು? " ಎಂದು ಅನತಂ ಯ್ಯನು ಮನಸ್ಸಿನಲ್ಲೇ ಅಂದುಕೊಂಡನು. ರತ್ನಮ್ಮನು " ಹೋಗಿಬನ್ನಿ

ಅಧೈರ್ಯರಾಗಬೇಡಿ. ಬಂದ ಸಂಕಟಗಳಿಗೆ ಎದೆಯೊಡ್ಡಿ ನಿಂತರೇ ನಾವು ಮನುಷ್ಯರಾದ್ದಕ್ಕೆ ಸಾರ್ಥಕ" ಎಂದಳು. ಅನಂತಯ್ಯನು ಮನೆ ಬಿಟ್ಟು ಹೊರಗೆ ಬಂದನು. ಅಲ್ಲಿ ಸಿಪಾಯಿ ತಂದಿದ್ದ ಗಾಡಿ ನಿಂತಿತ್ತು. ಅವನು ಅನಂತಯ್ಯನಿಗೆ 'ಹೆಚ್ಚು ಸಮಯವಿಲ್ಲ. ನೀವು ಬೇಗ ಬರಬೇಕೆಂದು ಸಾಹುಕಾರರು ಗಾಡಿ ಕೊಟ್ಟು ಕಳುಹಿಸಿದ್ದಾರೆ, ಬೇಗ ಹತ್ತಿ!" ಎಂದನು.

ಗಾಡಿಯು ಸಾಹುಕಾರರ ಮನೆಯ ಹತ್ತಿರ ಬಂದಿತು. ಅನಂತಯ್ಯನು ನಡುಗುತ್ತಾ ಒಳಕ್ಕೆ ಹೋದನು. ಸಿಪಾಯಿಯು ಅವನನ್ನು ಸಾಹುಕಾರರು ಮಲಗುವ ಕೋಣೆಗೆ ಕರೆದುಕೊಂಡು ಹೋದನು. ಅಲ್ಲಿ ಸಾಹುಕಾರರ ಬಂಧುಗಳೆಲ್ಲಾ ನೆರೆದಿದ್ದರು. ಸಾಹುಕಾರರು ಮರಣೋನ್ಮುಖರಾಗಿ ಮಲಗಿದ್ದಾರೆ. ಅನಂತಯ್ಯನನ್ನು ಕಂಡಕೂಡಲೇ ಅವರು ಎಲ್ಲರಿಗೂ ಹೊರಗೆ ಹೋಗುವಂತೆ ಹೇಳಿದರು. ಅನಂತರ ಅನಂತಯ್ಯನನ್ನು ಸಮೀಪಕ್ಕೆ ಕರೆದು ಅವನ ಕೈಯೊಂದನ್ನು ತಮ್ಮ ಕೈಲಿಟ್ಟುಕೊಂಡು,—" ಅನಂತಪ್ಪ, ನಾನು ನಿಮ್ಮ ವಿಚಾರದಲ್ಲಿ ದೊಡ್ಡ ಅಪರಾಧ ಮಾಡಿದ್ದೇನೆ, ಕ್ಷಮಿಸಬೇಕು. ನನ್ನ ಖಜಾನೆ ಪೆಟ್ಟಿಗೆಯಿಂದ ದುಡ್ಡು ಹ್ಯಾಗೆ ಹೋಗುತ್ತಿದೆಯೆಂಬುದನ್ನು ಕಂಡು ಹಿಡಿದೆ. ಅದನ್ನು ನಾನೇ ಪ್ರತ್ಯಕ್ಷ ನೋಡಿದೆ. ನಿನ್ನೆ ನಾನು ಉಯಿಲು ಬರೆದಿದ್ದೇನೆ. ಆದು ವಕೀಲ ಲಕ್ಷ್ಮೀಪತಯ್ಯನವರ ಹತ್ತಿರ ಇದೆ. ನೀವು ನನ್ನನ್ನು ಕ್ಷಮಿಸಿ, ಉಯಲಿನಲ್ಲಿ ಬರೆದಿರುವಂತೆ ವ್ಯವಸ್ಥೆ ಮಾಡತೀನಿ ಅಂತ ಮಾತುಕೊಟ್ಟರೆ ನಾನು ಸುಖವಾಗಿ ಪ್ರಾಣ ಬಿಡುತ್ತೇನೆ!" ಎಂದರು. ಮುಂದೆ ಒಂದು ಗಂಟೆಯೊಳಗೆ ಶಿವನಾಗಪ್ಪನವರು ಕೈಲಾಸಕ್ಕೆ ತೆರಳಿದರು.

ಸಾಹುಕಾರರು ಹೇಳಿದಂತೆ ಅವರ ಮಗನೇ ಅವರ ಪೆಟ್ಟಿಗೆಯಿಂದ ದುಡ್ಡು ಕದಿಯುವಾಗ ಅವರೇ ನೋಡಿದ್ದರು. ಅನಂತರ ಅವನ ದುರ್ನಡತೆಯ ವಿಚಾರವೂ ಅವರಿಗೆ ತಿಳಿಯಿತು. ಅಂದಿನಿಂದ ಅವರು ತಮ್ಮ ಕೋಣೆಯಲ್ಲಿ ಅವನು ಕಾಲಿಡಕೂಡದೆಂದು ಕಟ್ಟುಮಾಡಿ ತಮ್ಮ ಆಸ್ತಿಯನ್ನು ಇನ್ನೂ ಚಿಕ್ಕವನಾಗಿದ್ದ ತಮ್ಮ ಎರಡನೆಯ ಮಗನ ಹೆಸರಿಗೆ ಬರೆದಿಟ್ಟರು. ಅನಂತಯ್ಯನ ವಿಚಾರದಲ್ಲಿ ತಾವು ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತವೆಂದು ತನ್ನ ೮-೧೦ ಲಕ್ಷ ರೂಪಾಯಿ ಆಸ್ತಿಗೆ ಅವನನ್ನೇ ಮೇಲ್ವಿಚಾರಕ

ನನ್ನಾಗಿ ನೇಮಿಸಿದ್ದರು. ಅದಕ್ಕಾಗಿ ಅವನು ಪ್ರತಿ ತಿಂಗಳೂ ೧೫೦ ರೂಪಾಯಿ ತನ್ನ ಮನೆ ಖರ್ಚಿಗೆ ಉಪಯೋಗಿಸಿಕೊಳ್ಳಬೇಕೆಂದು ಮೃತ್ಯು ಪತ್ರದಲ್ಲಿ ಬರೆದಿದ್ದರು. ಮತ್ತೆ ಅದರಲ್ಲಿ ಈ ವಾಕ್ಯಗಳೂ ಇದ್ದುವು.:—
" ದೊಡ್ಡ ಮಗನಿಗೆ ಮದುವೆ ಮಾಡಕೂಡದು. ಅವನ ಹೊಟ್ಟೆ ಖರ್ಚಿಗಾಗಿ ತಿಂಗಳಿಗೆ ೨೦ ರೂಪಾಯಿಗಳನ್ನು ಸಲ್ಲಿಸತಕ್ಕದ್ದು, ಚಿಕ್ಕಮಗನು ವಯಸ್ಸಿಗೆ ಬರುವವರೆಗೆ ಅವನ ವಿದ್ಯಾಭ್ಯಾಸದ ಏರ್ಪಾಡನ್ನು ಅನಂತಯ್ಯನೇ ಮಾಡ ತಕ್ಕದ್ದು. ಅವನೂ ಕೂಡ ದೊಡ್ಡಮಗನಂತೆ ದುರ್ನಡತೆಯವನಾದರೆ ಅವನ ಹೊಟ್ಟೆಯ ಖರ್ಚಿಗಾಗಿ ಜೀವಾವಧಿ ತಿಂಗಳೊಂದಕ್ಕೆ ೨೦ ರೂಪಾಯಿ ಸಲ್ಲುವಂತೆ ಮಾಡಿ, ಉಳಿದ ಆಸ್ತಿಯನ್ನು ವಿದ್ಯಾಪ್ರಚಾರಕ ನಿಧಿಗೆ ಕೊಡ ಬೇಕು. ಆ ನಿಧಿಯ ಸದಸ್ಯ ಮಂಡಳಿಯಲ್ಲಿ ಅನಂತಯ್ಯನೂ ಇರಬೇಕು." ಇತ್ಯಾದಿ.

ಆದರೆ ಅನಂತಯ್ಯನ ಮೇಲ್ವಿಚಾರಣೆಯಲ್ಲಿ ಸಾಹುಕಾರರ ಎರಡನೆಯ ಮಗ ಗಂಗಾಧರಪ್ಪನು ವಿದ್ಯಾವಂತನೂ, ಸದ್ಗುಣ ಸಂಪನ್ನನೂ ಆದನು. ಅಮೇರಿಕಾ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣ ಹೊಂದಿ ಬಂದು ದೇಶೀಯ ಕೈಗಾರಿಕೆಯ ಕಾರ್ಖಾನೆಯನ್ನು ತೆರೆದನು. ಗಂಗಾಧರಪ್ಪನು ಅನಂತಯ್ಯನನ್ನೂ ಪಾಲುಗಾರನನ್ನಾಗಿ ಮಾಡಿಕೊಂಡನು. ಅನಂತಯ್ಯನ ಪ್ರಾಮಾಣಿಕ ಕೆಲಸದಿಂದ ಆ ಕಾರ್ಖಾನೆಯಲ್ಲಿ ತಿಂಗಳೊಂದಕ್ಕೆ ೮-೧೦ ಸಾವಿರ ರೂಪಾಯಿ ಲಾಭ ಬರುತ್ತಿದೆ. ಅನಂತಯ್ಯನ ಮನೆ ಈಗ ' ಪೂರ್ ಹೌಸ್ ಬ್ಲಾಕಿನಲ್ಲಿಲ್ಲ'. ಕಾರ್ಖಾನೆಯ ಹತ್ತಿರ ಅವನ ದೊಡ್ಡ ಬಂಗಲೆ ಯಿರುವುದು.

ಒಂದು ದಿನ ಸಾಯಂಕಾಲ ಅನಂತಯ್ಯನೂ ರತ್ನಮ್ಮನೂ ಮಕ್ಕಳೊಂದಿಗೆ ಆಟವಾಡುತ್ತಾ ಕುಳಿತಾಗ, ಅನಂತಯ್ಯನು " ರತ್ನಾ, ಮೊದಲು ನಮ್ಮನ್ನು ದೇವರು ಎಷ್ಟು ಪರೀಕ್ಷಿಸಿದನು ? " ಎಂದನು. ರತ್ನಮ್ಮನು " ನಾನು ಹೇಳಿರಲಿಲ್ಲವೇ ? ಇದೆಲ್ಲವೂ ದೇವರ ಪರೀಕ್ಷೆಯಂತ ! ನಾವು ಈ ಸ್ಥಿತಿಗೆ ಬರ್‍ತೇವೆಯಂತ ನೀವು ನೆನೆಸಿದ್ದಿರಾ ? " ಇದಕ್ಕೇ ಅದೃಷ್ಟ ಅನ್ನೋದು ! " ಅಂದುಬಿಟ್ಟಳು.

# ಸುಧಾರಿತ ರಮಾ-ಮಾಧವ

*

ಘನತೊಂದಿದ ಗೋವಿಂದರಾಯರು ದಿಲ್ಲಿ, ಸಿಮ್ಲಾ ಅಸೆಂಬಿಗಳ ಸದಸ್ಯರು. ಹೇರಳವಾಗಿ ಹಣವುಳ್ಳವರು. ರಸಿಕರು. ಸ್ತ್ರೀ ವಿದ್ಯಾಭ್ಯಾಸ, ಸ್ತ್ರೀ ಸ್ವಾತಂತ್ರ್ಯ ವಿಚಾರಗಳಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿ, ದೊಡ್ಡ ಸುಧಾರಕರೆನಿಸಿಕೊಂಡಿದ್ದರು. ಇವರ ಬಾಷಣಗಳೆಲ್ಲ ಆವೇಶಪೂರ್ಣವಾಗಿ ಸ್ತ್ರೀ ಸ್ವಾತಂತ್ರ್ಯ ಪ್ರೋತ್ಸಾಹಕವಾಗಿರುತ್ತಿದ್ದವು. ಇವರ ಭಾಷಣಗಳನ್ನು ಪ್ರಕಟಿಸದಿದ್ದ ಪತ್ರಿಕೆಗಳೇ ಇರಲಿಲ್ಲ. ಇವರ ವಾಸಸ್ಥಾನ ಬೆಳಗಾವಿ. ಟಿಳಕವಾಡಿಯಲ್ಲಿ ಭವ್ಯವಾದ ಇವರ ಬಂಗಲೆ. ಅದರ ಸುತ್ತಲೂ ದೊಡ್ಡ ಕಾಂಪೌಂಡು. ಬಂಗಲೆಯೊಳಗೆ ಪ್ರವೇಶಿಸುವಾಗಲೆ, ಎಡ ಬಲಪಾರ್ಶ್ವಗಳಲ್ಲಿ ಎರಡು ಕೋಣೆಗಳು. ಮಧ್ಯೆ ಸೋಫಾ, ಕುರ್ಚಿ, ದುಂಡುಮೇಜುಗಳಿಂದ ಅಲಂಕೃತವಾದ ಬೈಠಕಖಾನೆ ( ಡ್ರಾಯಿಂಗ್‌ರೂಂ). ಅಲ್ಲಿ ಒಂದು ದಿನ ೨೪ ವರ್ಷದ ತರುಣಿಯೊಬ್ಬಳು ತಲೆ ಬಾಗಿಸಿಕೊಂಡು ಕೂತಿದ್ದಾಳೆ. ಅವಳ ಮುಖದಮೇಲೆ ಯಾವುದೊ ದುಃಖಕರವಾದ ಹಿಂದಿನ ನೆನಪಿನ ಛಾಯೆಯು ಆವರಿಸಿದೆ. ದೊಡ್ಡ ಅರಳಿದ ಕಣ್ಣುಗಳು. ಮುಂಗುರುಳುಗಳು ಹಣೆಯ ಮೇಲೆ ಗಾಳಿಯಿಂದ ಮೆಲ್ಲಗೆ ಅಲುಗಾಡುತ್ತ, ಆ ಸುಂದರ ತರುಣಿಯ ದುಃಖವನ್ನು ಶಮನಗೊಳಿಸಲೆತ್ನಿಸುತ್ತಿರುವಂತೆ ಕಾಣುತ್ತಿದ್ದವು. ತರುಣಿಯ ಎದುರಿಗೆ ಮೇಜಿನ ಮೇಲೆ ಸಾಸರ್ ( ಬಸಿ ) ನಲ್ಲಿದ್ದ 'ಟೀ' ಆರಿ ತಣ್ಣಗಾಗುತ್ತಿತ್ತು. ತರುಣಿಯು ಅದರ ಕಡೆ ಲಕ್ಷ್ಯವಿಡದೆ ಬಾಗಿದ ನೋಟದಿಂದ ಎನೋ ಚಿಂತಿಸುತ್ತಿರುವಂತೆ ಕಾಣುತ್ತಿತ್ತು. ಅವಳೆದುರಿಗೆ ೨೮-೩೦ ವರುಷದ ಪುರುಷನೊಬ್ಬನು ಮಾತಾಡುತ್ತ ಕುಳಿತಿದ್ದನು.

"ರಮಾ, ನಿಮ್ಮ ಫಾದರ್ ಪರ್ಮಿಷನ್ನಿಂದಲೆ ನಾನು ಇಷ್ಟು ಸಲಿಗೆಯಿಂದ ಬಂದು ನಿನ್ನನ್ನು ಮಾತಾಡಿಸುತ್ತಿರುವದು. ನೀನು ಹಳೆಯ ನೆನಪನ್ನು ಬಿಟ್ಟುಬಿಡು. ನಿಮ್ಮ ಅಜ್ಜಿಯ ಒತ್ತಾಯದಿಂದ ನಿಮ್ಮ ಅಪ್ಪನು ನಿನಗೆ ೧೨ ವರ್ಷಗಳ ಹಿಂದೆಯೇ ಮದುವೆ ಮಾಡಿದನು. ನೀನು ಇಂಟರ್ ಪಾಸುಮಾಡಿದೆ. ಇಷ್ಟೊತ್ತಿಗೆ ಬಿ. ಎ. ಡಿಗ್ರೀನೂ ಹೊಡೆದು ಇಂಗ್ಲೆಂಡಿಗೆ ಹೋಗಲು ಸ್ಕಾಲರ್‌ಷಿಪ್ ದೊರಕಿಸಿಕೊಳ್ಳಬಹುದಾಗಿತ್ತು. ಆ ಗಾಂಧೀ ಲೆಕ್ಚರು ಕೇಳಿ, ನಿನ್ನ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಕೊಟ್ಟೆ. ಈಗ ಯಾವಾಗ ನೋಡಿದರೂ ಚರಖವನ್ನು ತಿರುಗಿಸುತ್ತ ಕೂತಿರುತ್ತಿ. ಆ 'ಯಂಗ್ ಇಂಡಿಯಾ' ಓದಬೇಡ ಅಂದರೆ ಓದುತ್ತಿ. ನಿಮ್ಮ ತಂದೆ ಸ್ಟೇಟಸ್ ಏನು? ದೊಡ್ಡ ಸುಧಾರಕನೆಂದು ಆತನು ಖ್ಯಾತಿಗೊಂಡಿದಾನೆ ಎಂಬುದನ್ನು ನೀನು ಯೋಚಿಸಿದ್ದೀಯಾ? ಆತನಿಗೆ ನೀನೊಬ್ಬಳೇ ಮಗಳು. ನಿನ್ನನ್ನು ಕೀರ್ತಿಶಾಲಿಯಾಗಿ ಮಾಡಬೇಕೆಂದು ಆತನಿಗೆ ಎಷ್ಟು ಆಸೆ. ನಿನ್ನ ತಾಯಿ ಹೋದಲಾಗಾಯಿತು ಎಷ್ಟು ಕಷ್ಟದಿಂದ ನಿನ್ನನ್ನು ಸಾಕಿ ಸಲಹಿದನು. ಈಗ ನಿನ್ನ ಜೀವನವನ್ನು ಸುಖಮಯವಾಗಿ ಮಾಡಬೇಕೆಂದು ಆತನಿಗೆ ಎಷ್ಟು ಆಸೆ ಅದಕ್ಕಾಗಿಯೆ ಆತನು ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವುದು. ಇನ್ನಾದರೂ ಆ ಹುಚ್ಚ ಗಾಂಧಿಯ ತತ್ವಗಳನ್ನು ಬಿಟ್ಟುಬಿಡು. ನನ್ನ ಮಾತು ಕೇಳು. ಮದುವೆ ಕಾಲದಲ್ಲಿ ಎಲ್ಲೋ ಒಂದೆರಡು ದಿನ ಮುಖ ತೋರಿಸಿದ ಆ ನಿನ್ನ ಪತಿಯನ್ನು ಮರೆತು, ಹೊಸ ಉತ್ಸಾಹದಿಂದ ನವಜೀವನವನ್ನು ಪ್ರವೇಶಿಸು...."

ರಮಾ—"ದಯೆಯಿಟ್ಟು ಸಾಕು, ನಿಲ್ಲಿಸಿ. ನೀವು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರಿ ಪಾಸುಮಾಡಿ ಬಂದಾಕ್ಷಣ ನಿಮ್ಮ ಬುದ್ಧಿ ಹೆಚ್ಚಿದಂತಾಗಲಿಲ್ಲ. ಇಂದು ಗಾಂಧೀಜಿಯು ನಿಮಗೆ ಹುಚ್ಚರಂತೆ ತೋರಬಹುದು. ಮುಂದೆ ನಿಮ್ಮಂಥವರು ಆತನನ್ನೆ ಅನುಸರಿಸುವ ದಿನ ಬರಬಹುದು. ನಿಮ್ಮ ಹೃದಯದಲ್ಲಿ ನಿಮ್ಮ ದೇಶದ, ನಿಮ್ಮ ಜನಗಳ, ನಿಮ್ಮ ಸಂಸ್ಕೃತಿಗಳ ವಿಚಾರವಾಗಿ ಏನಾದರೂ ಯೋಚನೆಯಿದ್ದರೆ ನೀವು ಹೀಗೆ ಮಾತಾಡುತ್ತಿರಲಿಲ್ಲ. ನೀವು ನನ್ನ ಜೀವನವನ್ನು ಸುಖಮಯಗೊಳಿಸುವಿರೊ? ನಿಮ್ಮ ಜೀವನಕ್ಕೆ

ಸುಖವನ್ನು ತಂದುಕೊಳ್ಳಲಾರದ ನೀವು ನನ್ನ ಜೀವನವನ್ನು ಸುಧಾರಿಸುವುದಕ್ಕೆ ಬಂದಿರೋ? ಕ್ಲಬ್ಬಿಗೆ ಹೋಗಿ ನಿಮಗೆ ಬೇಕಾದ ಬ್ರಾಂಡ್ ಬ್ರಾಂಡಿ ಕುಡಿದರಾಯಿತು, ನೀವೊಬ್ಬ ಸುಧಾರಕರು! ನಮ್ಮಪ್ಪ ಒಬ್ಬ ಸುಧಾರಕ! ನಿಮಗೆ ಬೇಕುಬೇಕಾದ ಹೆಂಗಸರೊಡನೆ ನೀವು ಸಲಿಗೆಯಿಂದ ವರ್ತಿಸಬೇಕೆಂದು ಸ್ತ್ರೀ ಸ್ವಾತಂತ್ರ್ಯಕ್ಕಾಗಿ ನೀವು-ಪುರುಷರಾದ ನೀವು-ಸುಧಾರಕರು ಹೊಡೆದಾಡುವುದು! ನಿಮ್ಮ ಜೀವನಕ್ರಮವು ನನಗೆ ಗೊತ್ತಿಲ್ಲವೆ? ನಮ್ಮಪ್ಪನು ಮೂರು ಜನ ವಿತಂತುಗಳನ್ನು ಇದುವರೆಗೆ ಮೋಸಗೊಳಿಸಿದ್ದಾನೆ. ನೀವು ಇಂಗ್ಲೆಂಡಿನಿಂದ ಬಂದ ಹೊಸದರಲ್ಲಿ ಅಲ್ಲಿನ ಆಂಗ್ಲ ರಮಣಿಯೊಬ್ಬಳ ಜೀವನಾಂಶಕ್ಕೆಂದು ನಿಮ್ಮ ಸಲುವಾಗಿ ನಿಮ್ಮಪ್ಪನು ೧,೦೦೦ಪೌಂಡು ದಂಡ ತೆತ್ತದ್ದು ಮರೆತುಹೋಯಿತೋ?—ನನ್ನ ಹಳೆ ಮದುವೆಯನ್ನು ನಾನು ಮರೆತುಬಿಡಲೋ? ನಮ್ಮಪ್ಪನು ಮಾಡಿದ ತಪ್ಪಿಗಾಗಿ ನಾನು ಕೈಹಿಡಿದ ಪತಿಯನ್ನು ಬಿಟ್ಟು, ನಿಮ್ಮ ಹಿಂದೆ ಹೋಗಬೇಕೊ?"

ಶೇಖರ—"ರಮಾ, ಸಿಟ್ಟಿಗೇಳಬೇಡ, ನನ್ನ ಮಾತನ್ನು ಕೇಳು. ನಿಮ್ಮ ತಂದೆಯ ಐಶ್ವರ್ಯ, ನಮ್ಮ ತಂದೆಯ ಸಂಪತ್ತುಗಳು ಸೇರಿದರೆ, ಮುಂದೆ ನಮ್ಮ ಜೀವನವು ಎಷ್ಟು ಸುಖಮಯವಾಗುವುದು! ನೋಡು, ಯೋಚಿಸು......."

ರಮಾ—"ಸಾಕು, ನಿಲ್ಲಿಸಿ, ಮಾನ ಮರ್ಯಾದೆ ಇಲ್ಲದವರೊಂದಿಗೆ ಮಾತಾಡಿ ಪ್ರಯೋಜನವೇನು? ನೀವು ಇನ್ನು ಹೊರಡಿ, ಇನ್ನು ಮೇಲೆ ನಿಮಗೆ ನಾನು ಭೇಟಿಯಾಗಲಾರೆನು. ನನ್ನ ತಂದೆಗೂ ನಾನು ಬೇಡವಾದರೆ, ನನ್ನ ತಂದೆಯ ದ್ವೇಷಕ್ಕೆ ಪಾತ್ರರಾಗಿರುವ ನನ್ನ ಪತಿಯ ಬಳಿಗೆ ನಾನೇ ಹೋಗಿ ಬೇಡಿಕೊಂಡಿರೆ ಆತನು ನನ್ನನ್ನು ನಿರಾಕರಿಸಲಾರರೆಂದು ನನಗೆ ನನ್ನ ಆತ್ಮವು ಹೇಳುತ್ತಿದೆ. ಹೀಗೆಂದು ನಾನು ಹೇಳಿದೆನೆಂದು ನನ್ನ ತಂದೆಗೂ ತಿಳಿಸಿಬಿಡಿ, ಹೊರಡಿ?"

ಹೀಗೆಂದು ಕ್ರೋಧದಿಂದ ನುಡಿದು ರಮೆಯು ಒಳಕ್ಕೆ ಹೊರಟುಹೋದಳು. ರಮೆಯು ಘನಹೊಂದಿದ ಗೋವಿಂದರಾಯನ ಏಕಮಾತ್ರ ಪುತ್ರಿ. ಈಕೆಯ ಮದುವೆಯಾದ ೧ ವರುಷದಲ್ಲಿ ಅವಳ ಮಾತೆಯು ಮೃತಳಾದಳು.

ರಮೆಗೆ ಮದುವೆಯಾದಾಗ ೧೨ ವರುಷ ವಯಸ್ಸು. ಗೋವಿಂದರಾಯನ ತಾಯಿಯು ತಾನು ಸಾಯುವುದಕ್ಕೆ ಮುಂಚೆ ತನ್ನ ಮೊಮ್ಮಗಳ ಮದುವೆಯನ್ನು ನೋಡಬೇಕೆಂದು ಆಸೆ ಪಟ್ಟದ್ದರಿಂದ ಗೋವಿಂದರಾಯನು ತನ್ನ ಮಗಳಿಗೆ ಮದುವೆ ಮಾಡಿಬಿಟ್ಟನು. ರಮೆಯ ತಾಯಿಯು ಮೃತಳಾದ ಬಳಿಕ ಗೋವಿಂದರಾಯನು ಸಮಾಜ ಸುಧಾರಕನಾಗಲಾರಂಭಿಸಿದನು. ಅನಂತರ ಪಾಶ್ಚಾತ್ಯ ಸುಧಾರಣೆ ಸಂಸ್ಕೃತಿಗಳ ಕಡೆ ಅವನ ಒಲವು ಹೆಚ್ಚಿತು ಅವನು ಬೆಳಗಾವಿಯಲ್ಲಿದ್ದ ಯೂರೋಪಿರ್ಯ ಕ್ಲಬ್ ಮೆಂಬರನೂ ಆದನು. ಅಲ್ಲಿ ಅವನಿಗೆ ಸುರಾದೇವಿಯ ಪರಿಚಯವೂ ಆಯಿತು. ಮುಂದೆ ಅವನು ವಿಧವಾ ವಿವಾಹ ಸಮಾಜದ ಅಧ್ಯಕ್ಷನೂ ಆದನು. ಕ್ರಮೇಣ ಸಂಪತ್ತಿನ ಬಲದಿಂದ ಅವನು ಪ್ರಾಂತಿಕ ನ್ಯಾಯವಿಧಾಯಕ ಸಭೆ, ಅನಂತರ ಕೇಂದ್ರ ಶಾಸನ ಸಭೆಯ ಸದಸ್ಯನೂ ಆದನು. ಮತ್ತೆ, ಇವನ ಧನ ಸಹಾಯದಿಂದ ಹಲವು ವರ್ತಮಾನ ಪತ್ರಿಕೆಗಳೂ ಇವನ ಕಾರ್ಯಕಲಾಪಗಳನ್ನು ಹೊಗಳಲಾರಂಭಿಸಿದವು. ಹೀಗಾಗಿ ಗೋವಿಂದರಾಯನ ಕೀರ್ತಿ ಪತ್ರಿಕಾ ಪ್ರಪಂಚದಲ್ಲಿ ನೆಲೆಗೊಂಡಿತು.

— ೨ —

“ **ಮಾಧವಾ!** ಇಲ್ಲಿ ಬಾ”

“ ಏಕಪ್ಪಾ, ಕರೆದಿರಿ ? ”

“ ನಿನ್ನ ಎದುರಿಗೆ ಇಂದು ಒಂದು ಗುಟ್ಟಿನ ಮಾತನ್ನು ಆಡಬೇಕಾಗಿದೆ ಕೂತುಕೊ. ನನ್ನ ಮಾತು ಕೇಳು, ನಿಧಾನವಾಗಿ ಆಲೋಚಿಸಿ ನಿನ್ನ ತೀರ್ಮಾನವನ್ನು ಹೇಳು. ನಿನ್ನ ಮದುವೆಯಾದ ವರುಷದಲ್ಲಿ ನಿನ್ನ ತಾಯಿ ತೀರಿಕೊಂಡಳು. ಎರಡನೆಯ ವರುಷ ನಿನ್ನ ತಂದೆ ತೀರಿಕೊಂಡನು. ತಂದೆಯು ಸಾಯುವಾಗ ನಿನ್ನ ಕೈಯನ್ನು ನನ್ನ ಕೈಲಿಟ್ಟು “ ಇವನನ್ನು ನಿಮ್ಮ ಮಗನೆಂದು ತಿಳಿದು ಸಾಕಿ ಸಲಹಬೇಕು. ನನ್ನ ಆಸ್ತಿಯ ಇತರ ವಿಚಾರಗಳನ್ನು ನನ್ನ ಉಯಲಿನಲ್ಲಿ ಬರೆದಿರುವೆನು” ಎಂದು ಹೇಳಿದ್ದು ನಿನಗೆ ನೆನಪಿದೆಯೆ ? ”.

“ ಹೌದು, ನನ್ನ ಕೈಯನ್ನು ನಿಮ್ಮ ಕೈಲಿಟ್ಟದ್ದು ನೆನಪಿದೆ. ಆದರೆ ಅವರಾಡಿದ ಮಾತುಗಳು ನೆನಪಿಲ್ಲ. ”

"ಅದಿರಲಿ, ಈಗ ನೀನು ಅಮೆರಿಕಾಕ್ಕೆ ಹೋಗಿ ಕೃಷಿ ಶಾಸ್ತ್ರ ಶಿಕ್ಷಣ ಪಡೆದು ಬಂದು ನಿನ್ನ ಭೂಮಿ ಕಾಣಿಯನ್ನು ಅಭಿವೃದ್ಧಿಗೊಳಿಸುತ್ತ, ಈ ಊರ ರೈತರಿಗೂ ಪರ ಊರ ರೈತರಿಗೂ ಎಷ್ಟೋ ಸಹಾಯ ಮಾಡುತ್ತಿರುವೆ. ಅದರಿಂದ ಜನರಿಗೆ ಬೇಕಾದವನಾಗಿರುವೆ. ಮತ್ತೆ ನನಗೆ ಇಂಗ್ಲೀಷು, ಬರದಿದ್ದರೂ ಮಹಾತ್ಮಾಗಾಂಧೀಯ 'ಯಂಗ್ ಇಂಡಿಯಾ' ಎಂಬ ಪತ್ರಿಕೆ ಯಲ್ಲಿ ನೀನು ಆಗಾಗ್ಗೆ ಬರೆಯುತ್ತಿರುವ ಲೇಖನಗಳ ವಿಚಾರವನ್ನೂ ಕೇಳಿ ರುವೆನು. ಅದರ ಮೇಲೆ ಗಾಂಧೀಜಿಯವರು ತಮ್ಮ ಸಮ್ಮತಿಯನ್ನು ಸೂಚಿಸಿ ನಿನ್ನೊಂದಿಗೆ ಆಗಾಗ್ಗೆ ಪತ್ರವ್ಯವಹಾರ ಮಾಡುತ್ತಿರುವುದನ್ನು ಕೇಳಿದ್ದೇನೆ. ಮುಖ್ಯ ನೀನು ವಿದ್ಯಾವಂತನಾಗಿ, ನಾಲ್ಕು ಜನರಿಗೆ ಸಹಾಯಕನಾಗಿ ಕೀರ್ತಿ ಪಡೆಯಬೇಕೆಂತಲೇ ನನ್ನ ಆಸೆಯಿತ್ತು. ಅಷ್ಟು ನೆರವೇರಿದರೆ ಸ್ವರ್ಗ ದಲ್ಲಿರುವ ತಂದೆಗೆ ನಾನು ಕೊಟ್ಟ ಮಾತು ಮುಟ್ಟಿಸಬೇಕೆಂದಿದ್ದೆ. ಅದು ಇಂದಿಗೆ ನೆರವೇರಿದಂತಾಯಿತು. ಇನ್ನು ನನಗೂ ವಯಸ್ಸಾಯಿತು, ನಿನ್ನ ಹೊರತು ನನಗೆ ಬೇರೆ ಸಂಸಾರವಿಲ್ಲ, ಮಕ್ಕಳಿಲ್ಲ.. ಈ ಇಳಿ ವಯಸ್ಸಿನಲ್ಲಿ ಕೆಲಕಾಲ ಕಾಶಿ, ರಾಮೇಶ್ವರ ಮುಂತಾದ ಪುಣ್ಯಕ್ಷೇತ್ರಗಳಿಗೆ ಹೋಗಿಬರ ಬೇಕೆಂದಿದೇನೆ. ಆದರೆ ಆ ಯಾತ್ರೆಯನ್ನು ಕೈಕೊಳ್ಳುವ ಮುಂಚೆ ನಿನ್ನ ಮದುವೆಯ ವಿಚಾರ ಒಂದು ನನ್ನನ್ನು ಪೀಡಿಸುತ್ತಿದೆ."

"ಅಪ್ಪಾ, ನನಗೆ ಮದುವೆ ಆಗಿದೆಯಲ್ಲ."

"ಹೌದು, ಮದುವೆಯಾಗಿದೆ, ನಿಜ. ಆದರೆ ಆ ವಿಚಾರದಲ್ಲಿ ನಾನು ನಿನ್ನ ತಂದೆಗೆ ಕೊಟ್ಟ ಮಾತನ್ನು ನಡೆಸಬೇಕೆಂದು ಒಂದು ತಪ್ಪು ಕೆಲಸ ಮಾಡಿದೆನೆಂದು ತೋರುತ್ತದೆ. ಆಗ ನಾನು ಮಾಡಿದ್ದೆ ಸರಿಯೆಂದು ತೋರಿತು. ಈಗ ನಿನ್ನ ಸರಳ ಜೀವನ, ಸರಳ ಸ್ವಭಾವ, ಪರೋಪಕಾರ ಬುದ್ಧಿ, ವಿದ್ಯಾಸಂಪನ್ನತೆ ವಿನಯಗಳನ್ನು ನೋಡಿ, ಆಗ ನಾನು ತಪ್ಪು ಮಾಡಿದೆನೆಂದು ತೋರುತ್ತದೆ."

"ಅದೇನು ನೀವು ಮಾಡಿದ ತಪ್ಪು. ಅಪ್ಪಾ, ಸ್ವರ್ಗಸ್ಥರಾಗಿರುವ ತಂದೆ ತಾಯಿಗಳ ಸ್ಥಾನದಲ್ಲಿ ನೀವು ನಿಂತು ನನಗೆ ವಿದ್ಯಾಭ್ಯಾಸಮಾಡಿಸಿ, ನನ್ನ ಸ್ವಂತ ಅಭಿವೃದ್ಧಿಗೂ, ಲೋಕೋಪಕಾರಕ್ಕೂ ಸಹಾಯಕವಾಗುವಂಥ

ವಿದ್ಯಾಭ್ಯಾಸವನ್ನು ನವಗೆ ಮಾಡಿಸಿದಿರಿ. ಅದರಿಂದ ನನಗೆ ಬಂದಿರುವ ಕೀರ್ತಿ ಗೌರವಗಳು ನಿಜವಾಗಿ ನಿಮಗೆ ಸಲ್ಲತಕ್ಕವು. ನಾನು ನಿಮ್ಮಲ್ಲಿ ಯಾವಾಗಲೂ ತಪ್ಪನ್ನೆಣಿಸಿಲ್ಲ. ನೀವು ಮೇಲುಪಂಕ್ತಿ ಹಾಕಿಕೊಟ್ಟಂತೆ ನಾನು ನನ್ನ ಜೀವನಕ್ರಮವನ್ನು ಸರಳವಾಗಿಯೂ ಪವಿತ್ರ ಭಾವನೆಯಿಂದಲೂ ನಡೆಸಿಕೊಂಡಿರುವೆನು ”.

“ನನ್ನಲ್ಲಿ ನಿನಗಿರುವ ಭಕ್ತಿಯಿಂದ ನೀನು ಹೀಗೆ ನುಡಿಯುವುದು ಸಹಜವಾಗಿದೆ. ಆದರೆ ನಿನ್ನ ತಂದೆಯು ತೀರಿಕೊಂಡಬಳಿಕ, ನೀನು ಕಾಲೇಜಿನಲ್ಲಿ ಓದುತ್ತಿದ್ದಾಗ ನಿಮ್ಮ ಮಾವನು “ನಮ್ಮ ಅಳಿಯನನ್ನು ನಮ್ಮ ಬಳಿಗೆ ಕಳುಹಿಸಬೇಕು. ಮತ್ತು ಅವನ ತಂದೆಯು ಸಾಯುವಾಗ ನಿಮಗೆ ಒಪ್ಪಿಸಿದ ಸ್ಥಿರಚರಸ್ವತ್ತುಗಳನ್ನು ನಮಗೆ ಒಪ್ಪಿಸಬೇಕು” ಎಂದು ಕಾಗದ ಬರೆದನು. ಆಗ ಅವನು ಸಮಾಜ ಸುಧಾರಕನಾಗಲಾರಂಭಿಸಿದ್ದನು. ಮತ್ತು ಸುರಾದೇವಿಯ ಉಪಾಸನೆಯನ್ನು ಮಾಡಲಾರಂಭಿಸಿದ್ದನೆಂದು ನಾನು ಬೆಳಗಾವಿಯಲ್ಲಿರುವ ನನ್ನ ಸ್ನೇಹಿತರ ಮೂಲಕ ಅರಿತಿದ್ದೆನು. ಆದ್ದರಿಂದ ಆ ಅವಸ್ಥೆಯಲ್ಲಿ ನಿನ್ನನ್ನು ಅವನಿಗೊಪ್ಪಿಸಿದರೆ ನಾನು ನಿನ್ನ ತಂದೆಗೆ ಕೊಟ್ಟ ಮಾತಿಗೆ ತಪ್ಪಿದಂತಾಗುವುದೆಂದು ತಿಳಿದು “ನಾನು ಹುಡುಗನ ವಿದ್ಯಾಭ್ಯಾಸಕ್ಕೆ ಪೂರ್ಣ ಬದ್ಧನಾಗಿರುವುದರಿಂದಲೂ ಹುಡುಗನ ತಂದೆಗಾಗಿ ನನ್ನ ಕರ್ತವ್ಯವನ್ನು ನೆರವೇರಿಸಬೇಕಾಗಿರುವುದರಿಂದಲೂ ಹುಡುಗನನ್ನು ನಾನು ನಿಮಗೆ ಒಪ್ಪಿಸಲಾಗುವುದಿಲ್ಲ. ಬೇಕಾಗಿದ್ದರೆ ನಿಮ್ಮ ಮಗಳನ್ನು ಇಲ್ಲಿಗೆ ಕರೆತಂದು ಬಿಟ್ಟು ಹೋಗಬಹುದು. ನಾನು ಆಕೆಯನ್ನು ನನ್ನ ಸ್ವಂತ ಮಗಳಂತೆ ನೋಡಿಕೊಳ್ಳುವೆನು” ಎಂದು ಬರೆದೆನು. ಅದಕ್ಕೆ ಆತನು “ನಮ್ಮ ಮಗಳಿಗೆ ಕಾಲೇಜಿನ ಶಿಕ್ಷಣ ಕೊಡಿಸಬೇಕೆಂದು ಈಗ ವಿದ್ಯಾಭ್ಯಾಸ ಮಾಡಿಸುತ್ತಿದ್ದೇನೆ. ಅವಳನ್ನು ನಿಮ್ಮಂಥ ಶುದ್ಧ ವೈದಿಕ ಗೊಡ್ಡುಗಳ ಮನೆಯಲ್ಲಿ ತಂದುಬಿಡಲು ನನಗೆ ಮನಸ್ಸಿಲ್ಲ. ಮತ್ತೆ ನಿಮ್ಮ ಪಾಲಿತ ಪುತ್ರನನ್ನು ನೀವು ನನಗೊಪ್ಪಿಸದಿದ್ದರೆ, ನನ್ನ ಮಗಳು ಸುಶಿಕ್ಷಿತಳಾಗಿ, ಪದವೀಧರಳಾದಬಳಿಕ ಅವಳಿಗೆ ನಾನು ಬೇರೆ ಲಗ್ನಮಾಡಿಸುವ ಯೋಚನೆ ಮಾಡಬೇಕಾದೀತು. ಸ್ತ್ರೀ ಸ್ವಾತಂತ್ರ್ಯ ವಿಚಾರದಲ್ಲಿ ನಾನು ದೊಡ್ಡ ಚಳವಳ ಹೂಡಿರುವುದು ನಿಮಗೆ ಗೊತ್ತಿರಬಹುದು. ಆದ್ದರಿಂದ

ಈ ಕಾಗದ ಕಂಡ ಕೂಡಲೇ ನೀವು ನನ್ನ ಮಾತಿನಂತೆ ನಡೆದುಕೊಳ್ಳಬೇಕು” ಎಂದು ಬರೆದನು. ಅದಕ್ಕೆ ನಾನು “ ನಿಮ್ಮ ಮನಸ್ಸು ಬಂದಂತೆ ಮಾಡ ಬಹುದು. ನಿಮ್ಮ ಹುಡುಗಿಗೆ ಬೇರೆ ಲಗ್ನ ಮಾಡುವುದಾದರೆ, ನಮ್ಮ ಹುಡು ಗನಿಗೂ ಬೇರೆ ಲಗ್ನವಾಗಬಹುದು ” ಎಂದು ಬರೆದೆನು. ಅನಂತರ ಅವ ನಿಂದ ಈವರೆವಿಗೆ ಕಾಗದವಿಲ್ಲ. ಆದರೆ ಅವನ ಮಗಳು ಈಗ ‘ ಇಂಟರ್ ’ ಪರೀಕ್ಷೆ ಪಾಸಾಗಿದ್ದಾಳೆ. ಗಾಂಧೀಜಿಯ ಅಸಹಕಾರ ಚಳವಳದಲ್ಲಿ ಸೇರಿ ಮುಂದೆ ಓದುವುದನ್ನು ಬಿಟ್ಟಿರುವಳಂತೆ. ಮತ್ತೆ ಯಾವಾಗಲೂ ಚರಕ ದಿಂದ ನೂಲುಮಾಡುತ್ತ, ಗಾಂಧಿಜಿಯುವರ ಲೇಖನಗಳನ್ನೂ ಪುಸ್ತಕಗ ಳನ್ನೂ ಓದುತ್ತಿರುವಳಂತೆ. ಆಗ ನಿನ್ನ ಲಗ್ನಕಾಲದಲ್ಲಿ ತೆಗೆಸಿದ್ದ ಭಾವ ಚಿತ್ರವೊಂದನ್ನು ಗೀತೆಯ ಪುಸ್ತಕದಲ್ಲಿಟ್ಟುಕೊಂಡು ತಾನು ಒಬ್ಬಳೇ ಅದನ್ನೇ ನೋಡುತ್ತಾ ಕಣ್ಣೀರು ಸುರಿಸುವಳಂತೆ. ಅವಳ ತಂದೆಯ ಸುಧಾ ರಣೆಯ ಮಾರ್ಗವು ಅವಳಿಗೆ ಸರಿಹೋಗಿಲ್ಲವಂತೆ. ಅವಳ ತಂದೆಯ ಕುಡು ಕತನದಿಂದ ಅವನ ಆಸ್ತಿಯೆಲ್ಲ ಹೆರರ ಪಾಲಾಗಿ, ಅವನ ಸ್ನೇಹಿತನಾದ ಗಿರಿ ಧರನ ಹತ್ತಿರ ಅವನಿಗೆ ೨೦ ಸಾವಿರ ಸಾಲವಾಗಿದೆಯಂತೆ. ಅದಕ್ಕಾಗಿ ಅವನು ಈಗ ಅವನು ತನ್ನ ಮಗಳನ್ನು ಇಂಗ್ಲೆಂಡಿಗೆ ಹೋಗಿ ಬಾರಿಸ್ಟರಿ ಪಾಸುಮಾಡಿಕೊಂಡು ಬಂದು ಗಿರಿಧರನ ಮಗ ಶೇಖರನಿಗೆ ಒಪ್ಪಿಸಬೇಕೆಂದಿ ದ್ದನಂತೆ. ಆದರೆ ಅವಳು ಅವನನ್ನು ನಿರಾಕರಿಸಿ, ನಿನ್ನ ಧ್ಯಾನದಲ್ಲಿಯೇ ಮಗ್ನಳಾಗಿರುವಳಂತೆ. ಇದೆಲ್ಲ ನನಗೆ ಖಚಿತವಾಗಿ ಗೊತ್ತು. ಇದರಲ್ಲಿ ನಿನ್ನದೂ ತಪ್ಪಿಲ್ಲ, ನಿನ್ನ ಪತ್ನಿಯದೂ ತಪ್ಪಿಲ್ಲ. ತಪ್ಪು ಇದ್ದರೆ ಅದು ನನ್ನದು ಮತ್ತು ಗೋವಿಂದರಾಯನದು. ಆದ್ದರಿಂದ ನಿರಪರಾಧಿನಿಯಾದ ಆ ರಮೆಯನ್ನು ನೀನು ಪತ್ನಿಯಾಗಿ ಸ್ವೀಕರಿಸಿ ನೀನು ಅವಳನ್ನು ಕರೆದು ಕೊಂಡು ಬರಬೇಕು ನಿಮ್ಮಿಬ್ಬರನ್ನೂ ಈ ಮನೆಯಲ್ಲಿ ಒಂದೆಡೆಯಲ್ಲಿ ನೋಡಿದ ಬಳಿಕ ನನ್ನ ಮನಸ್ಸು ಸುಸ್ಥಿರವಾಗುವುದು.”

“ ಆಗಲಿ, ಆದರೆ ಇನ್ನು ಮೂರು ದಿನಕ್ಕೆ ಮುಂಬೈಯಲ್ಲಿ ಎ ಐ. ಸಿ. ಸಿ. ಮೀಟಿಂಗು ಇದೆ. ಅದಕ್ಕೆ ನಾನು ಬರಬೇಕೆಂದು ಗಾಂಧಿಜಿಯುವರು ಬರೆದಿ ದ್ದಾರೆ. ಅದಕ್ಕೆ ನಾನು ಹೋಗಿ ಬಂದಮೇಲೆ ಇದರ ವಿಚಾರ ಮಾಡೋಣ.”

೨೭-೨೮ ವರುಷ ವಯಸ್ಸಿನ ಸುಂದರನಾದ ಯುವಕನು ಸುಮಾರು ೬೦ ವಯಸ್ಸಿನ ತೇಜಸ್ವಿಯಾದ ಪುರುಷನಿಗೆ ಉತ್ತರಕೊಡುತ್ತಿದ್ದಾನೆ. ಯುವಕನ ಹೆಸರು ಮಾಧವನೆಂದು ಹೇಳಬೇಕಾಗಿಲ್ಲ. ಮಾಧವನು ಈಗ ಆರಡಿ ಎತ್ತರವುಳ್ಳವನಾಗಿ ಅಚ್ಚುಕಟ್ಟಾದ ಮೈಕಟ್ಟುಳ್ಳವನಾಗಿದ್ದನು. ನಿತ್ಯವೂ ಅವನು ಮಾಡುತ್ತಿದ್ದ ವ್ಯಾಯಾಮ, ಅವನ ಸರಳ ಜೀವನಗಳಿಂದ ಅನಾರೋಗ್ಯವೇ ಅವನ ಬಳಿ ಸುಳಿದಿರಲಿಲ್ಲ, ಅವನು ಮುಂಬೈ ವಿಶ್ವವಿದ್ಯಾಲಯದ ಬಿ.ಎ., ಪದವೀಧರನಾದ ಬಳಿಕ ಅಮೆರಿಕಾದಲ್ಲಿ ಕೃಷಿಶಾಸ್ತ್ರಾಭ್ಯಾಸಕ್ಕಾಗಿ ಅವನಿಗೆ ಒಂದು ವಿದ್ಯಾರ್ಥಿ ವೇತನವು ದೊರೆಯಿತು. ಅವನು ಅಮೇರಿಕಾಕ್ಕೆ ಹೋಗಿ ಅಲ್ಲಿ ಕೃಷಿಶಾಸ್ತ್ರದಲ್ಲಿ ಪಾರಂಗತನಾಗಿ ಹೊಮಿಯೊಪತಿ ಚಿಕಿತ್ಸಾ ಪದ್ಧತಿಯನ್ನೂ ಕಲಿತುಕೊಂಡು ಬಂದನು. ಅವನು ಈ ದೇಶಕ್ಕೆ ಹಿಂತಿರುಗಿ ಕಾಲಿಡುವಾಗಲೆ ಇಲ್ಲಿ ಮಹಾತ್ಮ ಗಾಂಧಿಯವರ ಅಸಹಕಾರ ಚಳುವಳವು ಆರಂಭವಾಗಿತ್ತು. ಆಗ ಸರಕಾರದವರು ಅವನಿಗೆ ವ್ಯವಸಾಯ ಖಾತೆಯಲ್ಲಿ ದೊಡ್ಡ ಹುದ್ದೆ ಕೊಡಲು ಸಿದ್ಧರಾಗಿದ್ದರೂ ಅವನು ಅದನ್ನು ನಿರಾಕರಿಸಿ, ತನ್ನ ಸ್ವಂತ ಹಳ್ಳಿಯನ್ನೇ ಒಂದು 'ಮಾಡೆಲ್ ವಿಲೇಜ್' ಮಾಡಿ ತೋರಿಸಬೇಕೆಂದು ನಿಶ್ಚಯಿಸಿ, ಬೊಮ್ಮನ ಹಳ್ಳಿಯಲ್ಲಿ ನೆಲೆಸಿದನು. ಆ ಹಳ್ಳಿಯು ಧಾರವಾಡ ಜಿಲ್ಲೆಯ ಹಾನಗಲ್ಲ ತಾಲ್ಲೂಕಿಗೆ ಸೇರಿದ್ದು. ಅವನು ಹಳ್ಳಿಯಲ್ಲಿ ನೆಲೆಸಿದ ೧೨ ವರ್ಷಗಳಲ್ಲಿ ಬೇಸಾಯಕ್ರಮ, ಹಳ್ಳಿಯ ಜನರ ಆರೋಗ್ಯ, ನಿರಕ್ಷರತೆಯನ್ನು ನಿವಾರಿಸುವುದು ಇವೇ ಮೊದಲಾದ ವಿಚಾರಗಳಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದನು. ಗಾಂಧಿಯವರು ಕರ್ನಾಟಕದಲ್ಲಿ ಸಂಚರಿಸುವಾಗ ಬೊಮ್ಮನ ಹಳ್ಳಿಯ ಕೀರ್ತಿಯನ್ನು ಕೇಳಿ ಅಲ್ಲಿಗೂ ಸಂದರ್ಶನವನ್ನಿತ್ತರು. ಅಂದಿನಿಂದ ಮಾಧವನು ಗಾಂಧಿಜಿ ಶಿಷ್ಯರಲ್ಲೊಬ್ಬನಾದನು. ಅನೇಕ ಸುಶಿಕ್ಷಿತ ತರುಣರಿಗೆ ಗಾಂಧಿಜಿಯವರು ಕರ್ನಾಟಕದ ಯುವಕ ಮಾಧವನನ್ನು ಅನುಸರಿಸಿರೆಂದು ತಮ್ಮ ಪತ್ರಿಕೆಯಲ್ಲಿ ಬರೆಯುತ್ತಿದ್ದರು. ಬೊಮ್ಮನ ಹಳ್ಳಿಗೆ ಬಂದಾಗ ಗಾಂಧಿಜಿಯವರಿಗೆ ಮಾಧವನು ತನ್ನ ಪಾಲಕ ತಂದೆ ಮತ್ತು ಗುರುವಾದ ರಾಮದೀಕ್ಷಿತರ ಪರಿಚಯವನ್ನು ಮಾಡಿಸಿದ್ದನು. ಆಗ ಮೊಣಕಾಲಿನವರೆಗೆ ಖಾದಿಯ ತುಂಡುಪಂಚೆಯನ್ನು ಧರಿಸಿ, ಮೈಮೇಲೆ ಒಂದು ಖಾದಿಯ ತುಂಡನ್ನು ಹಾಕಿಕೊಂಡಿದ್ದ

ದಿವ್ಯ ತೇಜಸ್ವಿಗಳಾಗಿದ್ದ, ವಯಸ್ಸಾದರೂ ತರುಣರಂತೆ ಉತ್ಸಾಹಶಾಲಿಗಳಾಗಿದ್ದ ರಾಮದೀಕ್ಷಿತರನ್ನು ಕಂಡು ಗಾಂಧಿಯವರಿಗೆ ಪರಮಾನಂದವಾಯಿತಂತೆ. ಅವರೊಂದಿಗೆ ಸ್ವಲ್ಪ ಹೊತ್ತು ಸಮಾಜ ಶಾಸ್ತ್ರಗಳ ವಿಚಾರ ಮಾತನಾಡಿದ ಬಳಿಕ ಗಾಂಧೀಜಿಯು "ನಮ್ಮ ಹಿಂದೂಸ್ಥಾನದ ಬ್ರಾಹ್ಮಣರೆಲ್ಲ ರಾಮದೀಕ್ಷಿತರಂತೆ ಕರ್ತವ್ಯ ಧರ್ಮಪರರಾಗಿದ್ದರೆ ಇಂದು ನಾವು ಈ ದುರವಸ್ಥೆಯಲ್ಲಿರುತ್ತಿರಲಿಲ್ಲ" ಎಂದರಂತೆ. ಮುಂದೆ ಮಾಧವನಿಗೆ ಪತ್ರಬರೆದಾಗಲೆಲ್ಲ "ರಾಮದೀಕ್ಷಿತರಿಗೆ ನನ್ನ ಪ್ರಣಾಮಗಳನ್ನು ಮರೆಯದೆ ತಿಳಿಸು" ಎಂದು ಬರೆಯುತ್ತಿದ್ದರಂತೆ.

— ೩ —

ಪೂನಾ ರೈಲ್ವೇ ಸ್ಟೇಷನ್ನಿನ ರಿಫ್ರೆಶ್‌ಮೆಂಟಿನ ರೂಮಿನಲ್ಲಿ ಒಂದು ಮೇಜಿನ ಮುಂದೆ, ಮೂವರು ಪುರುಷರೂ ಒಬ್ಬ ಯುವತಿಯೂ ಕುಳಿತಿದ್ದಾರೆ. ಬಟ್ಲರನು ಮೂವರ ಮುಂದೆ ಬ್ರಾಂದಿಯ ಬಾಟಲಿ, ಗ್ಲಾಸುಗಳನ್ನೂ ಯುವತಿಯ ಮುಂದೆ ಕೆಲವು ಬಿಸ್ಕತ್ತು ಮತ್ತು ಒಂದು ಕಪ್ ಚಹವನ್ನೂ ತಂದಿಟ್ಟು ಹೋದನು.

"ತೆಗೊಳ್ಳಿ ಗೋವಿಂದ್ರಾವ್, ಸುರುಮಾಡಿ, ಇಲ್ಲಿ ನಮ್ಮ ಪೆಟ್ ಬ್ರಾಂಡಿ ಸಿಕ್ಕಿತು".

"ನೀವೂ ತೆಗೊಳ್ಳಿ ಮಿ॥ ಶೇಖರ್, ಮಿ॥ಗಿರಿಧರ್, ಈ ಬ್ರಾಂಡಿ ಹಿಸ್ಟರೀ ಬಹಳ ದೊಡ್ಡದಾಗಿದೆ. ದೃಷ್ಟಿಗೂ ರುಚಿಗೂ ಇದು ಮಧುರವಾಗಿರುವಷ್ಟೆ, ಅದರ ಹಿಸ್ಟ್ರಿಯೂ ಮನೋರಂಜಕವಾಗಿದೆ.

ಶೇಖರ—"ನಮ್ಮ ಗಾಂಧಿಯೈಟ್ ರಮಾ ಸುಮ್ಮನೆ ಕೂತುಬಿಟ್ರಲ್ಲಾ ಮುಂದೆ ಚಹಾ ಬಿಸ್ಕತ್ತು ಇಟ್ಟುಕೊಂಡು! ಸುರುಮಾಡು ರಮಾ."

ರಮೆಯು ತಲೆಬಾಗಿಸಿ ಬಿಸ್ಕತ್ತುಗಳನ್ನು ಚಹಾದಲ್ಲಿ ಅದ್ದಿ ತಿಂದು ಚಹಾ ಕುಡಿದಳು. ಮೂವರೂ ನಿಧಾನವಾಗಿ ಬಾಟ್ಲಿಗಳಲ್ಲಿದ್ದ ಬ್ರಾಂಡಿಯನ್ನು ಮುಗಿಸಿದರು. ಗಿರಿಧರನೂ, ಗೋವಿಂದರಾಯನೂ ಎದ್ದು ಹೊರಗೆ ಹೊರಟರು. ಅವರ ಹಿಂದೆ ರಮೆಯೂ ಎದ್ದಳು. ಆಗ ಗೋವಿಂದರಾಯನು "ರಮಾ ಇಲ್ಲೇ ಕೂತಿರು ನಾನು ಎರಡು ಪ್ಯಾಕ್ ಸಿಗರೇಟು ತೆಗೆದುಕೊಂಡು ಈಗ ಬರತ್ತೇನೆ" ಎಂದನು. ರಮೆಯು ಕುಳಿತಳು. ಶೇಖರನು ಅವಳ

ಮುಖವನ್ನೇ ನೋಡುತ್ತ ಬಟ್ಲರನಿಗೆ 'ಬಾಯ್, ಔರ್ ಏಕ್ ಬಾಟ್ಲೀ ಲಾವ್' ಎಂದು ಅದನ್ನು ಬರಿಗುಮಾಡಿಬಿಟ್ಟನು. ಆಗ ಅವನಿಗೆ ಪ್ರಪಂಚವು ಸುತ್ತುತ್ತಿರುವಂತೆಯೂ ಅದರಲ್ಲಿ ತಾನು ರಮೆಯನ್ನು ಅಪ್ಪಿಕೊಳ್ಳಲು ಹೋಗುತ್ತಿದ್ದಂತೆಯೂ ರಮೆಯು ಅವನಿಂದ ತಪ್ಪಿಸಿಕೊಂಡು ಹೋಗುತ್ತ ಆಟವಾಡಿಸುತ್ತಿದ್ದಂತೆಯೂ ಭಾಸನಾಗಿ ಏನೇನೋ ಮಾತಾಡಲಾರಂಭಿಸಿದನು. ರಮೆಯು ಮೆಲ್ಲನೆ ಆ ಸ್ಥಳದಿಂದೆದ್ದು ಪ್ಲಾಟ್ ಫಾರಮ್ಮಿಗೆ ಬಂದಳು. ಶೇಖರನು ಎದ್ದು ಅವಳು ಓಡಿಹೋದಳೆಂದು ತಿಳಿದು ಹೊರಗೆ ಬಂದು, ರಮೆಯನ್ನು ನೋಡಿ, ಓಡಿಬಂದು Oh darling! how can you escape? ಎಂದು ಅಪ್ಪಿಕೊಳ್ಳಲು ಬಂದನು. ರಮೆಯು ಅವನಿಂದ ತಪ್ಪಿಸಿಕೊಳ್ಳಲೆತ್ನಿಸಿ, ಪಕ್ಕಕ್ಕೆ ಸರಿಯುವಾಗ ಬೇರೆ ಪ್ರಯಾಣಿಕರೊಬ್ಬರ ಗಂಟನ್ನು ಎಡವಿ ಬಿದ್ದಳು. ಬೀಳುವಾಗ ಅವಳ ಪಕ್ಕದಲ್ಲಿ ಒಬ್ಬ ಯುವಕ ಪೋಲೀಸ್ ಅಧಿಕಾರಿಯೂ ಮತ್ತೊಬ್ಬ ಖಾದಿ ಧರಿಸಿದ ಸುಂದರ ಯುವಕನೂ ಜತೆಯಲ್ಲಿ ತಮ್ಮ ಗಾಡಿ ಕಡೆ ಹೋಗುತ್ತಿದ್ದರು. ರಮೆಯು ಬೀಳುತ್ತಿರುವುದನ್ನು ಕಂಡು ಆ ಸುಂದರ ಯುವಕನು ತನ್ನ ಕೈಚಾಚಿ ತಡೆದನು. ಆಗ ರಮೆಯು ಶೇಖರನ ಕಡೆ ಕೈತೋರಿಸಿ–"ನೋಡಿ, ಆ ನೀಚನು ನನ್ನನ್ನು ಹೇಗೆ ಪೀಡಿಸುತ್ತಿರುವನು." ಎಂದಳು. ಖಾದಿಧಾರಿಯಾಗಿದ್ದ ರಮೆಯನ್ನೂ ನಖಶಿಖಾಂತದವರೆಗೆ ವಿದೇಶಿ ವಸ್ತ್ರಧಾರಿಯಾಗಿ ಶೇಖರನನ್ನೂ ನೋಡಿ ಆ ಯುವಕರಿಬ್ಬರಿಗೂ ಸಂದೇಹವಾಯಿತು. ಖಾದಿಧಾರಿಯಾದ ಸ್ತ್ರೀಯು ಒಬ್ಬಳೆ ಇರುವುದನ್ನು ಕಂಡು ಈ ನರಪಿಶಾಚಿಯು ಹೀಗೆ ವರ್ತಿಸುತ್ತಿರಬಹುದೆಂದು ಅವರಿಗೆ ಭಾಸವಾಯಿತು. ಅಷ್ಟರಲ್ಲಿಯೆ ಶೇಖರನು ಮದಿರೆಯ ಮಹಿಮೆಯಿಂದ ಜೋಲಾಡುತ್ತ ಮುಂದೆ ಬಂದು, "Who are you to hug my dove" ಎಂದು ರಮೆಯ ಕೈಹಿಡಿಯಲು ಕೈಚಾಚಿದನು. ಸುಂದರ ಯುವನು ಅವನ ಕೈಗಳನ್ನು ಗಟ್ಟಿಯಾಗಿ ಹಿಡಿದ ಕೂಡಲೆ ಅವನು 'Oh devil, ಬಿಡು ನನ್ನ ಕೈ ಬಿಡು, ನಿನ್ನಗತಿ ಏನುಮಾಡತ್ತೀನೋ ನೋಡು' ಎಂದನು. ಯುವಕನ ಸ್ನೇಹಿತನಾದ ಪೋಲೀಸ್ ಅಧಿಕಾರಿಯು ಪ್ಲಾಟ್ ಫಾರ್ಮ್ ಮೇಲಿದ್ದ ಬೇರೆ ಕಾನ್‌ಸ್ಟೇಬಲರಿಬ್ಬರನ್ನು ಕರೆದು ಶೇಖರನನ್ನು ಸೆಕೆಂಡ್ ಕ್ಲಾಸ್ ವೈಟಿಂಗ್ ರೂಮಿಗೆ ಕರೆದುಕೊಂಡು

ಹೊಗುವಂತೆ ಸಂಜ್ಞೆ ಮಾಡಿದನು. ಅವರು ಶೇಖರನನ್ನು ಕೈಹಿಡಿದು ಕರೆದುಕೊಂಡು ಹೋದರು.

ಇತ್ತ ಸುಂದರ ಯುವಕನು ರಮೆಯ ಮುಖವನ್ನು ನೋಡಿದ ಕೂಡಲೆ, ಆ ಮುಖದ ಪರಿಚಯವು ಬಹಳ ಹಳೆಯದೆಂದು ಭಾಸವಾಯಿತು. ಅನಂತರ ಅವನು ಅವಳನ್ನು "ನೀವು ಒಬ್ಬರೇ ಇದ್ದೀರಾ? ನಿಮ್ಮ ಜತೆಯಲ್ಲಿ ಬೇರೆ ಗಂಡಸರಿಲ್ಲವೇ? ನೀವು ಎಲ್ಲಿಗೆ ಹೋಗಬೇಕು?" ಎಂದು ಕೇಳಿದನು. ಪೋಲೀಸ್ ಅಧಿಕಾರಿಯು ಅವನ ಕಿವಿಯಲ್ಲಿ ಮೆತ್ತಗೆ ಏನನ್ನೊ ಉಸಿರಿದನು. ರಮೆಯು ಸಂಕ್ಷೇಪವಾಗಿ ತನ್ನ ವಿಚಾರವನ್ನು ತಿಳಿಸಿ, ತನ್ನನ್ನು ತಂದೆಯು ಈ ನರರಾಕ್ಷಸನಿಗೆ ಬಲಿ ಕೊಡುವುದಕ್ಕಾಗಿ ಮುಂಬೈಗೆ ಕರೆದುಕೊಂಡು ಹೋಗುತ್ತಿರುವುದಾಗಿಯೂ ಆದರೆ ಅಲ್ಲಿ ಎ. ಐ. ಸಿ. ಸಿ. ಮೀಟಿಂಗ್ ನಡೆಯುವಾಗ ತನ್ನ ಪತಿಯು ಅಲ್ಲಿಗೆ ಬಂದರೆ ಆತನನ್ನು ಕಾಣುವ ಭಾಗ್ಯವು ತನಗೆ ಲಭಿಸಬಹುದೆಂಬ ಆಸೆಯಿಂದ ತಾನು ಅವರೊಂದಿಗೆ ಹೊರಟಿರುವುದಾಗಿಯೂ ತನ್ನ ಪತಿಯನ್ನು ಕಾಣಲಾಗದಿದ್ದರೆ ತಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಉದ್ದೇಶಿಸಿರುವುದಾಗಿಯೂ ತಿಳಿಸಿದಳು. ಪೋಲೀಸ್ ಅಧಿಕಾರಿಯು ಸುಂದರ ಯುವಕನ ಕೈ ಹಿಸುಕಿ "so much trouble saved by you!" ಎಂದನು. ಸುಂದರ ಯುವಕನು ರಮೆಯನ್ನು ಕುರಿತು– "ನಾನು ಮುಂಬೈಗೆ ಎ. ಐ. ಸಿ. ಸಿ. ಮೀಟಿಂಗಿಗೆ ಹೋಗುತ್ತಿದ್ದೇನೆ. ನನ್ನಲ್ಲಿ ವಿಶ್ವಾಸವಿದ್ದರೆ ನನ್ನೊಂದಿಗೆ ಬರಬಹುದು. ಅಲ್ಲಿ ನಿಮ್ಮ ಪತಿಯನ್ನು ಗುರುತಿಸಬಹುದು" ಎಂದನು. ರಮೆಯು "ನಿಮಗೆ ಪುಣ್ಯ ಬರಲಿ. ನಾನು ನಿಮ್ಮೊಂದಿಗೆ ಬರುವೆನು" ಎಂದಳು. ಅಷ್ಟರಲ್ಲಿ ಗೋವಿಂದರಾಯನು ರಮೆಯಿದ್ದಲ್ಲಿಗೆ ಬಂದು 'ಇಲ್ಲಿ ಏಕೆ, ರಮಾ?' ಎಂದನು. ಪೋಲೀಸ್ ಅಧಿಕಾರಿಯು ಗೋವಿಂದರಾಯನ ಕೈಹಿಡಿದು ಅತ್ತತ್ತ ಕರೆದುಕೊಂಡು ಹೋಗಿ, ಸ್ವಲ್ಪ ಹೊತ್ತು ಮಾತನಾಡಿ, ಗೋವಿಂದರಾಯನಿಂದ ರಮೆಯ ಟಿಕೀಟನ್ನು ಇಸಕೊಂಡು ಬಂದು ರಮೆಯ ಕೈಗೆ ಕೊಟ್ಟನು. ಅದನ್ನು ನೋಡಿ ಸುಂದರ ಯುವಕನು "ಓಹೋ ನಿಮ್ಮದು ಸೆಕೆಂಡ್ ಕ್ಲಾಸ್ ಟಿಕೀಟೋ, ನನ್ನದು ಇಂಟರ್, ಆಗಲಿ ಏಕ್ಸ್‌ಚೆಂಜ್ ಮಾಡುತ್ತೇನೆ" ಎನ್ನು

ವಾಗ ಪೋಲೀಸ್ ಅಧಿಕಾರಿಯು ಮುಂದೆ ಬಂದು "ಬೇಡ, ಮಾಧವರಾವ್, ನಾನು ಗಾರ್ಡಿಗೆ ಹೇಳುತ್ತೇನೆ. ಮುಂದಿನ ಸ್ಟೇಷನ್‌ನಲ್ಲಿ ಆತನೆ ನಿಮಗೆ ಟಿಕೆಟ್ ಎಕ್ಸ್‌ಚೇಂಜ್ ಮಾಡಿಕೊಡುತ್ತಾನೆ. ನಾನು ಕೂತಿದ್ದ ಕಂಪಾರ್ಟ್‌ಮೆಂಟನಲ್ಲೆ ನೀವು ಕೂತುಕೊಳ್ಳಿ. ನಾನು ನೆಕ್ಸ್ಟ್ ಟ್ರೇನಿಗೆ ಇವರ ತಂದೆಯೊಂದಿಗೆ ಬರುತ್ತೇನೆ. ಆ ಆಸಾಮಿ ನಿಷಾ ಇನ್ನೂ ಇಳಿದಿಲ್ಲ. ಡಾಕ್ಟರು ಅವನಿಗೆ ಚಿಕಿತ್ಸೆ ಮಾಡುತ್ತಿದ್ದಾರೆ" ಎಂದು ಒಬ್ಬ ಕಾನ್‌ಸ್ಟೇಬಲ್ಲನ್ನ ಕರೆದು ಮಾಧವರಾವ್ ಮತ್ತು ರಮೆಯ ಸಾಮಾನುಗಳನ್ನು ತಾನು ಕೂತಿದ್ದ ಕಂಪಾರ್ಟ್‌ಮೆಂಟಿಗೆ ಹಾಕಿಸಿದನು. ರಮೆಯು 'ಮಾಧವರಾವ್' ಎಂಬ ಹೆಸರು ಕೇಳಿದ ಕೂಡಲೆ ರೋಮಾಂಚಿತಳಾಗಿ, ಮಾಧವನ ಮುಖವನ್ನೆ ನೋಡುತ್ತಿದ್ದಳು. ಮಾಧವನೂ ರಮೆಯೂ ಗಾಡಿಯಲ್ಲಿ ಕುಳಿತರು. ಡೆಕ್ಕನ್ ಕ್ವೀನ್ ಮೆಯಿಲು ಹೊರಟಿತು.

ರಮೆಯ ಮನಸ್ಸಿನಲ್ಲಿ ಅನೇಕ ಯೋಚನಾತರಂಗಗಳು ಹುಟ್ಟಿದವು. ಬಾಂಬೆ ಕ್ರಾನಿಕಲ್‌ನಲ್ಲಿ 'ರೂರಲ್ ಇಂಪ್ರೂವ್‌ಮೆಂಟ್' ವಿಚಾರದ ಲೇಖನ ಜತೆಗೆ ಪ್ರಕಟವಾಗಿದ್ದ 'ಮಾಧವರಾವ್ ಬೊಮ್ಮನಹಳ್ಳಿ' ಭಾವಚಿತ್ರವು ಈ ವ್ಯಕ್ತಿಯದೆ ಎಂದು ಕ್ರಮವಾಗಿ, ಸ್ಪಷ್ಟವಾಗಿ ಅವಳಿಗೆ ಭಾಸವಾಯಿತು. ಆದರೂ ಒಂದುಬಾರಿ ಕೇಳಿ, ತಾನು ಕ್ಷಮೆಯನ್ನು ಬೇಡಬಾರದೇಕೆ ಎಂದೆನಿಸಿತು. ಆಗ ಮೃದುವಾಗಿ-"ತಮ್ಮಿಂದ ನನಗೆ ಬಹಳ ಉಪಕಾರವಾಯಿತು" ಎಂದಳು. "ಉಪಕಾರವೇನು, ನನ್ನ ಕರ್ತವ್ಯಮಾಡಿದೆ, ಅಷ್ಟೆ".

"ನೀವು ನಮ್ಮ ಕನ್ನಡನಾಡಿನವರೆಂದು ಕಾಣುತ್ತದೆ."

"ಹೌದು ಅಚ್ಚ ಕನ್ನಡ ಹಳ್ಳಿ-ಬೊಮ್ಮನಹಳ್ಳಿ; ಧಾರವಾಡ ಜಿಲ್ಲೆ.

ಇರಲಿ, ರಾತ್ರಿ ಪ್ರಯಾಣದಿಂದ ನಿಮಗೆ ಹೆಚ್ಚು ಆಯಾಸವಾಗಿರಬಹುದು, ಸ್ವಲ್ಪ ಫಲಾಹಾರ ಮಾಡಿ ವಿಶ್ರಮಿಸಿಕೊಳ್ಳಿ" ಎಂದು ಮಾಧವನ್ನು ಅವಳ ಮುಖವನ್ನೇ ದೃಷ್ಟಿಸಿ ನೋಡುತ್ತ "ಮುಂಬೈಯಲ್ಲಿ ನಿಮ್ಮ ಪತಿಯು ಸಿಕ್ಕಿದರೆ ನೀವು ಖಂಡಿತವಾಗಿ ಅವರನ್ನು ಗುರುತಿಸುವಿರಾ?" ಎಂದನು.

ರಮೆ—ಅದಕ್ಕೆ ನಿಮ್ಮ ಸಹಾಯವೂ ಬೇಕು.

ಮಾಧವ—ನಾನು ಏನು ಸಹಾಯ ಮಾಡಬಲ್ಲೆ. ನಿಮ್ಮ ಲಗ್ನವಾದ ಬಳಿಕ ಅವರನ್ನು ನೀವೇ ನೋಡಿಲ್ಲವೆನ್ನುವಿರಿ. ನಾನು ನೋಡಿ ಗುರುತಿಸುವುದು ಹೇಗೆ ?

ರಮಾ—ಅವರೂ ನಿಮ್ಮ ಹೆಸರಿನವರೆ-ಅವರು ಅಮೆರಿಕಾಕ್ಕೆ ಹೋಗಿ ಶಿಕ್ಷಣಪಡೆದು ಬಂದಿದಾರೆ. ಮತ್ತೆ ಅವರೂ ಬೊಮ್ಮನಹಳ್ಳಿಯವರೆ. ಅವರ ಚಹರೆಯೂ ನಿಮ್ಮ ಚಹರೆಯಂತೆಯೆ. ಇಲ್ಲಿನೋಡಿ; ಎಂದು ಕ್ರಾನಿಕಲ್ ನಲ್ಲಿದ್ದ ಫೋಟೋ ತೋರಿಸಿದಳು.

ಮಾಧವ—ಇದು ನನ್ನ ಲೇಖನ, ನನ್ನ ಭಾವಚಿತ್ರ, ನಮ್ಮ ಬೊಮ್ಮನಹಳ್ಳಿಯಲ್ಲಿರುವ ಮಾಧವ ನಾನೊಬ್ಬನೆ.

ರಮೆಗೆ ಇನ್ನು ತಡೆದುಕೊಳ್ಳಲಾಗಲಿಲ್ಲ. ಅವಳಿಗೆ ಸ್ವರ್ಗವೇ ಲಭಿಸಿದಂತಾಯತು. ತನ್ನ ಊಹೆಗಳೆಲ್ಲ ಸರಿ ಎಂದು ಭಾಸವಾಯಿತು. ಕೂಡಲೆ ಎದ್ದು ಮಾಧವನ ಕಾಲುಗಳನ್ನು ಹಿಡಿದು ಅಳಲಾರಂಭಿಸಿ— " ನನ್ನನ್ನು ಇನ್ನು ಪರೀಕ್ಷಿಸ ಬೇಡಿ " ಎಂದಳು.

ಮಾಧವ—" ರ....ಮಾ " ಎಂದು ಗದ್ಗದ ಕಂಠದಿಂದ ರಮೆಯನ್ನು ಹಿಡಿದೆತ್ತಿ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡನು.

— ೪ —

" **ಮಾ**ಧವಾ – ರಮಾ – ಇಲ್ಲಿ ಬನ್ನಿ "

ಇಬ್ಬರೂ ಬಂದು ರಾಮದೀಕ್ಷಿತರಿಗೆ ನಮಸ್ಕರಿಸಿ " ಏನು ?" ಎಂದರು.

" ನಿಮ್ಮಿಬ್ಬರನ್ನೂ ಸಂಸಾರದಲ್ಲಿ ಕೂಡಿಸಿದ್ದು ನನಗೆ ಸಂತೋಷವಾಯಿತು. ನಿಮ್ಮಿಬ್ಬರ ಸಂಸಾರವನ್ನೂ ಇಷ್ಟು ದಿವಸ ನೋಡಿದೆ. ಈಗ ನನ್ನ ಚಿಂತೆ ದೂರವಾಯಿತು ಮಾಧವಾ, ನಿನ್ನ ವಿದ್ಯಾಭ್ಯಾಸಕ್ಕಾಗಿ ವೆಚ್ಚಮಾಡಿದ ಹಣವಲ್ಲದೆ, ನಿನ್ನ ಜಮಿನಿನಿಂದಲೂ ನನ್ನ ಜಮಿನಿನಿಂದಲೂ ಇದುವರೆಗೆ ಬಂದ ಹಣವನ್ನು ಕಾರಣಾಂತರದಿಂದ ನಿನಗೆ ತೋರಿಸಲಿಲ್ಲ. ಈಗ ದೇವರ ಮನೆಯಲ್ಲಿಟ್ಟಿರುವ ಕಬ್ಬಿಣದ ಪೆಟ್ಟಿಗೆಯಲ್ಲಿ ೩೨,೦೦೦ ರೂಪಾಯಿಗಳಿವೆ. ನನಗೆ ಮಗ, ಮಗಳು, ಸೊಸೆ, ಅಳಿಯ ಎಲ್ಲ ನೀವೆ. ಆದ್ದರಿಂದ ಆ ಹಣ

ವನ್ನೂ ಎಲ್ಲ ಜಮೀನನ್ನೂ ನಿಮ್ಮ ವಶಕ್ಕೆ ಒಪ್ಪಿಸಿದ್ದೇನೆ. ನಾಳೆ ನಾನು ಯಾತ್ರೆ ಹೊರಡುವುದಕ್ಕೆ ನೀವು ಅನುಮತಿ ಕೊಡಬೇಕು”.

“ ನೀವು ತಿರುಗಿ ಬರುವಂತಿದ್ದರೆ ಮಾತ್ರ ನಮ್ಮ ಅನುಮತಿ ಇದೆ.”

“ ಹಾಗೆ ಆಗಲಿ, ಇನ್ನು ೩ ತಿಂಗಳೊಳಗಾಗಿ ಬರುವೆನು. ದೇವರು ನಿಮಗೆ ಆರೋಗ್ಯಭಾಗ್ಯಗಳನ್ನೀಯಲಿ.”

# ನಿ ತ ಂ ತು

*

" ಏನು ? ಗರ್ಭನಿಂತಿತೆ ? ನಿಜವೆ ? "

" ನಾನೇಕೆ ಸುಳ್ಳು ಹೇಳಲಿ, ಈಗ ಐದನೆಯ ತಿಂಗಳು ! "

" ನನ್ನನ್ನು ಇಂಥಾ ಸಂಕಟಕ್ಕೆ ತಂದಿಟ್ಟೆಯಲ್ಲಾ, ಇದುವರೆಗೆ ಏಕೆ ಮುಚ್ಚಿಟ್ಟುಕೊಂಡೆ ? "

ಭಗಿನಿಯರೆ ? ಇದು ನಮ್ಮಿಬ್ಬರ ಸಂಭಾಷಣೆ. ಅವನು ಯಾರೆಂಬುದು ನಿಮಗೆ ತಿಳಿದಿರಬಹುದು. ನಾನು ಯಾರು ? ನಾನು ಹೆಂಗಸು. ನನ್ನ ದುಃಖದ ಕಥೆಯನ್ನು ಕೇಳುವಿರೇನು ? ನನಗೋಸ್ಕರ ಎರಡು ತೊಟ್ಟು ಕಣ್ಣೀರು ಸುರಿಸುವಿರೇನು ? ನನಗೋಸ್ಕರ ಒಂದು ದೊಡ್ಡ ನಿಟ್ಟುಸಿರು ಬಿಡುವಿರೇನು ? ಹಾಗಾದರೆ ಕೇಳಿ. ಮನಸ್ಸಿನಲ್ಲಿರುವ ಕಷ್ಟವನ್ನು ಬೇರೆಯವರೆದುರಿಗೆ ಹೇಳಿಕೊಂಡರೆ, ಅದೇನೊ, ಮನಸ್ಸಿಗೆ ಸ್ವಲ್ಪ ಶಾಂತವಾಗುವುದು ಮನುಷ್ಯ ಸ್ವಭಾವ ! ಅದಕ್ಕೋಸ್ಕರ ನಿಮ್ಮೆದುರಿಗೆ ಹೇಳಿಕೊಳ್ಳಬೇಕೆಂಬ ಆಸೆ. ಆದರೆ ಇದನ್ನು ಕೇಳಿ ನಿಮ್ಮ ಹೃದಯವು ಒಡೆದುಹೋಗದಿರಲಿ, ಕಣ್ಣೀರಿನಿಂದ ನಿಮ್ಮ ಕಣ್ಣು ಮಂಜಾಗದಿರಲಿ, ನನ್ನ ದುಃಖದಿಂದ ನಿಮ್ಮ ಮನಸ್ಸಿನೊಳಗಿನ ಆನಂದವನ್ನು ಹಾಳುಮಾಡುವುದಿಲ್ಲ. ಆದರೆ ನನ್ನ ಕಷ್ಟವನ್ನೆಲ್ಲ ಹೇಳಿಕೊಂಡರೆ ನೀವು " ಅಯ್ಯೊ ಪಾಪ ! " ಎಂದು ಸಹಾನುಭೂತಿ ತೋರಿಸುತ್ತೀರೇನೊ ಎಂದು ಆಸೆ.

ನಿರ್ಭಾಗ್ಯಳಾದ ನಾನು ಮೈಸೂರು ಸೀಮೆಯಲ್ಲಿ ಹುಟ್ಟಿ ಬೆಳೆದವಳು. ನನ್ನ ತಂದೆ ಒಬ್ಬ ದೊಡ್ಡ ಹೆಸರಾದ ಲಾಯರು. ಆತನಿಗೆ ನಾನೇ ಹಿರಿಯ ಮಗಳು. ನನ್ನ ಹೆಸರು ರಮೆ. ನಾನಿನ್ನೂ ಹತ್ತುವರ್ಷದ ಹುಡುಗಿಯಾಗಿದ್ದಾಗ,

ನಮ್ಮಪ್ಪನು ನನ್ನನ್ನು ಒಬ್ಬ ದೊಡ್ಡ ಇಂಜಿನಿಯರ ಮಗನಿಗೆ ಕೊಟ್ಟು ಮದುವೆ ಮಾಡಿದರು. ನನ್ನ ಪತಿಯು ನನಗಿಂತ ೪ ವರ್ಷ ಹಿರಿಯರು. ಆದರೆ ಮದುವೆಯಾದ ಒಂದು ವರ್ಷ ತುಂಬುವುದರೊಳಗಾಗಿ ನನ್ನ ಪತಿ ಸ್ವರ್ಗಕ್ಕೆ ಹೊರಟುಹೋದರು.

ನನ್ನ ಪತಿಯ ಮೃತ್ಯುವಿನ ಸಮಾಚಾರದ ಕಾಗದವು ನಮ್ಮಪ್ಪನ ಕೈಸೇರಿದಾಗ ನಾನು ವರಾಂಡದಲ್ಲಿ ಕೂತುಕೊಂಡಿದ್ದೆ. ಮೇಸ್ಟ್ರು ನನಗೆ ಪಾಠ ಹೇಳಿ ಕೊಡುತ್ತಿದ್ದರು. ಆಗ ಒಬ್ಬ ತಂತೀ ಜವಾನನು ಬೈಸಿಕಲ್ ಮೇಲೆ ಬಂದನು. ತಂತಿಯನ್ನು ಓದಿದ ಕೂಡಲೆ ನಮ್ಮಪ್ಪ ನಿಂತಿದ್ದಾಗ ಕೆಳಗೆ ಧೊಪ್ಪನೆ ಬಿದ್ದುಬಿಟ್ಟನು. ಅದುವರೆಗೆ ಸುಮ್ಮನೆ ಓದುತ್ತ ಕೂತಿದ್ದವಳು, ನಮ್ಮಪ್ಪನು ಬಿದ್ದ ಕೂಡಲೆ ಓಡಿಹೋದೆ, ಗಟ್ಟಿಯಾಗಿ ಕೂಗಿದೆ. ನಾನು ಕೂಗಿದ್ದನ್ನು ಕೇಳಿ ಮನೆಯವರೆಲ್ಲರೂ ಗಾಬರಿಯಾಗಿ ಓಡಿಬಂದರು. ಆಮೇಲೆ ಮನೆಯ ತುಂಬ ರೋದನವೇ ತುಂಬಿತು.

ಎಲ್ಲರೂ ಅಳುತ್ತಿರುವರೆಂದು ನಾನೂ ಅಳಲಾರಂಭಿಸಿದೆ. ಹತ್ತನೆಯ ವಯಸ್ಸಿನಲ್ಲಿ ಮದುವೆಯಾಯಿತು ಹನ್ನೊಂದನೆಯ ವಯಸ್ಸಿನಲ್ಲಿ ನಾನು ವಿಧವೆಯಾದೆನು! ಆಗ ಗಂಡನೆಂದರೆ ಎಂಥಾವಸ್ತುವೆಂಬುದು ನನಗೆ ಗೊತ್ತಿರಲಿಲ್ಲ. ಮದುವೆಯಾಗುವಾಗ ನಾನಿನ್ನೂ ಚಿಕ್ಕವಳು. ಹಾಡುವುದು, ಕುಣಿಯುವುದು, ಆಟವಾಡುವುದು, ಯಾರಾದರೂ ಒಳ್ಳೊಳ್ಳೆ ಬಟ್ಟೆಗಳನ್ನು ಹಾಕಿಕೊಂಡರೆ ನಾನು ಅದನ್ನು ಹಾಕಿಕೊಳ್ಳಬೇಕೆನ್ನುವುದು, ಹಾಕಿಕೊಂಡು ಸಂತೋಷಪಡುವುದು, ಇಷ್ಟೇ ನನಗೆ ಗೊತ್ತಿದ್ದುದು. ನಾನು ವಿಧವೆಯಾದ ೧೦ನೆಯ ದಿನ ನಮ್ಮ ತಾಯಿ ಮೊದಲಾದ ಮುದುಕಿಯರೆಲ್ಲ ಸೇರಿ ನನ್ನ ಬಳೆಗಳನ್ನು ಒಡೆದರು. ಆಮೇಲೆ ನನ್ನ ಹಣೆಯ ಮೇಲಿನ ಕುಂಕುಮದ ಬಟ್ಟು ಅಳಿಸಿದರು. ಕೂದಲು ಗಂಟು ಬಿಚ್ಚಿ ಬಿರಿಹಾಕಿದರು. ಮೈಮೇಲಿದ್ದ ಆಭರಣಗಳನ್ನೆಲ್ಲ ತೆಗೆದರು. ಕೊರಳಲ್ಲಿದ್ದ ಕರೀಮಣಿ ತಾಳಿ ಕಿತ್ತರು. ಎಲ್ಲರೂ ನನ್ನ ಬಾಲ-ಪತಿಗೋಸ್ಕರ ಅತ್ತರು. ನಾನೂ ಅತ್ತೆ-ನನ್ನ ಅಲಂಕಾರವನ್ನೆಲ್ಲ ತೆಗೆದುಬಿಟ್ಟರೆಂದು. ಅಯ್ಯೋ! ನನ್ನ ಅಲಂಕಾರವನ್ನೂ ಭವಿಷ್ಯಜ್ಜೀವನದ ಸುಖವನ್ನೂ ಆ ಬಾಲ ಪತಿಯ ಮೃತ್ಯುವು ಕೊಂಡುಹೋಯಿತೆಂದು ನನಗೆ ಆ ವಯಸ್ಸಿನಲ್ಲಿ ಹೇಗೆ ಗೊತ್ತಾಗಬೇಕು?

ನನ್ನ ಪತಿಯು ತೀರಿಹೋದನಂತರ ಅಪ್ಪನು ಮನೆಯಲ್ಲಿಯೇ ನನಗೆ ಪಾಠ ಹೇಳಲಾರಂಭಿಸಿದರು. ಒಬ್ಬ ಮೇಷ್ಟರನ್ನಿಟ್ಟು ಕನ್ನಡ, ಸಂಸ್ಕೃತ, ಇಂಗ್ಲೀಷು ಕಲಿಸುವುದಕ್ಕಾರಂಭಿಸಿದರು. ನಾನೂ ಬೇಗ ಬೇಗ ಮೇಷ್ಟ್ರು ಕೊಟ್ಟ ಪಾಠಗಳನ್ನು ಕಲಿಯುತ್ತಿದ್ದನಲ್ಲದೆ, ವಿರಾಮ ಕಾಲದಲ್ಲಿ ಅನೇಕಾನೇಕ ಪುಸ್ತಕಗಳನ್ನು ಓದಿದೆ. ಆದರೆ ಒಂದು ವಿಷಯದಲ್ಲಿ ಮಾತ್ರ ನನಗೆ ಸ್ವಲ್ಪ ವ್ಯಸನ. ನನ್ನ ತಂಗಿಯರು, ಗೆಳತಿಯರು, ಅಕ್ಕಪಕ್ಕದ ಮನೆ ಹುಡುಗಿಯರೆಲ್ಲ ಒಳ್ಳೊಳ್ಳೆಯ ಆಭರಣಗಳನ್ನು ಹಾಕುತಿದ್ದರು. ಬೇಕಾದ ಹಾಗೆ ಅಲಂಕಾರ ಮಾಡಿಕೊಳ್ಳುತ್ತಿದ್ದರು. ಹಬ್ಬದ ದಿನಗಳಲ್ಲಿ ಮಕ್ಕಳಿಗೆ ಆರತಿ ಬೆಳಗುತ್ತಿದ್ದರು. ಆ ಸಮಯದಲ್ಲಿ ನಾನು ಎಂದರೆ ಅಸ್ಪೃಶ್ಯ ಜಾತಿಯವಳೊ ಏನೊ ಎಂಬಹಾಗೆ ವರ್ತಿಸುತ್ತಿದ್ದರು. ನನ್ನನ್ನು ಯಾರೂ ಮುಟ್ಟುತ್ತಿರಲಿಲ್ಲ! ನಾನೇನುಮಾಡಬೇಕು ಹೇಳಿ! ಏಕಾಂತದಲ್ಲಿ ಕೂತುಕೊಂಡು ಅಳುತ್ತ, ನನ್ನ ಹಣೆಯ ಬರಹವನ್ನು ನಿಂದಿಸಿಕೊಳ್ಳುತ್ತಿದ್ದೆನು!

ನನಗೆ ಬೇರೆ ಅಣ್ಣತಮ್ಮಂದಿರು ತಂಗಿಯರು ಇದ್ದರು. ಆದರೆ ಅವರೆಲ್ಲರಿಗಿಂತಲೂ ನಾನೇ ಹೆಚ್ಚು ಸುಂದರಿಯಾಗಿದ್ದೆ. ನನ್ನನ್ನು ನೋಡುವುದಕ್ಕೆ ಬಂದ ಹೆಂಗಸರೆಲ್ಲರೂ ನನಗೋಸ್ಕರ ದುಃಖವನ್ನು ಸೂಚಿಸುತ್ತಿದ್ದರು. ನಮ್ಮಮ್ಮನೂ ಹಗಲೂ ರಾತ್ರಿ ಅಳುತ್ತಾ, "ಇವಳಿಗೆ ಈ ರೂಪವಿನ್ನು ಏನು ಪ್ರಯೋಜನ?" ಎನ್ನುವಳು. ಆದರೆ ದೇವರು ಕೊಟ್ಟ ಸೌಂದರ್ಯವನ್ನು ಯಾರು ಕಡಮೆ ಮಾಡಬಲ್ಲರು?

ನಾನು ಅತ್ತೆಮನೆಯ ಮುಖವನ್ನೇ ನೋಡಿದವಳಲ್ಲ. ಅತ್ತೆಮನೆಯವರೂ ನನ್ನನ್ನು ನೋಡಿರಲಿಲ್ಲ. ಆದರೆ ಅಲ್ಲಿಂದ ಕಾಗದಪತ್ರಗಳೇನೋ ಆಗ್ಗಾಗ್ಗೆ ಬರುತ್ತಿದ್ದವು, ಅಲ್ಲಿಗೆ ಹೋಗುತ್ತಿದ್ದವು. ಆದುದರಿಂದ ಎರಡು ಕಡೆಯ ಸಮಾಚಾರಗಳೂ ತಿಳಿಯುತ್ತಿದ್ದವು. ನಾನು ಇಪ್ಪತ್ತು ವರುಷದವಳಾದೆನು. ನನ್ನನ್ನು ಕರೆದುಕೊಂಡು ಹೋಗುವುದಕ್ಕೆ ನನ್ನ ಮೈದುನನನ್ನು ಕಳಿಸಿದರು. ಆಗ ನನ್ನನ್ನು ಕಳಿಸುವುದಕ್ಕೆ ನಮ್ಮಮ್ಮನಿಗೂ ನಮ್ಮಪ್ಪನಿಗೂ ಮನಸ್ಸೇ ಇರಲಿಲ್ಲ. ಆದರೆ ಮುಂದೆ ಲೋಕಾಪವಾದ ಬಂದೀತೆಂದು ಅಮ್ಮನು ಹೆದರಿದಳು. ಕೊನೆಗೆ ಅತ್ತೂ ಅತ್ತೂ "ಹೋಗಿ ಬಾಮ್ಮ" ಎಂದಳು. ನಾನೂ ಅತ್ತೆ. ಬಹಳ ಅತ್ತೆ. ಅತ್ತೂ ಅತ್ತೂ ಗಂಟಲು ಕಟ್ಟಿ

ಕೊಂಡಿತು. ಅಯ್ಯೋ! ಆ ನನ್ನ ಅಳು, ನನ್ನ ದುಃಖ ಅಮ್ಮನ ಪ್ರೀತಿ, -ಎಲ್ಲಾ ಕೊನೆಯದೆಂದು ಆಗ ನನಗೆ ಹೇಗೆ ಗೊತ್ತಾಗಬೇಕು?

ಕೊನೆಗೆ ಅತ್ತೆಮನೆ ಸೇರಿದೆ, ನಾನು ಗಾಡಿ ಇಳಿಯುವುದನ್ನು ನೋಡಿದ ಕೂಡಲೇ ನನ್ನ ಅತ್ತೆಯು ಗಟ್ಟಿಯಾಗಿ ಅಳುವುದಕ್ಕಾರಂಭಿಸಿದರು. ನನ್ನ ವಾರಗಿತ್ತಿಯು ಬಂದು ನನ್ನನ್ನು ಒಳಗೆ ಕರೆದುಕೊಂಡುಹೋದಳು. ನಮ್ಮ ಅತ್ತೆ ಅಳುತ್ತಾ ಒಳಗೆ ಬಂದಳು. ನಾನು ಆಕೆಯ ಕಾಲಿಗೆರಗಿದೆನು. ಆಗ ಮನೆಯಲ್ಲಿದ್ದ ಚಾಕರ ನೌಕರರೆಲ್ಲ ನನ್ನ ನೋಡುವುದಕ್ಕೆ ಬಂದರು. ನಾನು ಬಿಳಿಯವಸ್ತ್ರವನ್ನುಟ್ಟಿದ್ದೆನು. ಅಲಂಕಾರಹೀನಳಾಗಿದ್ದೆನು. ನಮ್ಮ ಅತ್ತೆಯು ನನ್ನ ಮುಖದಮೇಲಿನ ಮುಸುಕನ್ನು ತೆಗೆದು ಹಾಕಿದ ಕೂಡಲೆ ನನ್ನ ಅನುಪಮ ಸೌಂದರ್ಯವನ್ನು ನೋಡಿ ಎಲ್ಲರೂ ಸ್ತಬ್ಧರಾದರು. ಆದರೆ ನಮ್ಮ ಅತ್ತೆಯೂ ನಾದಿನಿಯರೂ–'ಅಯ್ಯೋ! ಈ ರೂಪ ತೊಗೊಂಡು ಏನು ಮಾಡಬೇಕೇ, ಈಗ! ಈ ರೂಪ ಸುಟ್ಟುಹೋಗಬಾರದಿತ್ತೆ! ನಮ್ಮ ಹುಡುಗ ಇವತ್ತು ಬದುಕಿದ್ದರೆ, ಒಬ್ಬ ಕಪ್ಪು ಸೊಸೆಯಾದರೂ ಬರುತ್ತಿದ್ದಳಲ್ಲೆ! ಅವಳೇ ನನ್ನ ಪಾಲಿಗೆ ಲಕ್ಷ್ಮಿಯಾಗಿರುತ್ತಿದ್ದಳು. ಅಯ್ಯೋ! ಈ ರೂಪ ತೊಗೊಂಡು ಏನು ಮಾಡಬೇಕೇ?' ಎಂದು ಅಳುತ್ತಿದ್ದರು. ವಿಧಾತನು ವಿಧಿಸಿದ್ದಕ್ಕೆ ನಾನೇನು ಮಾಡಬಲ್ಲೆನು?

ಅತ್ತೆಯ ಮನೆಯಲ್ಲಿ ನಾನಿರುವುದಕ್ಕೆ ಒಂದು ಮಹಡಿಯ ಮೂಲೆಯಲ್ಲಿನ ಕೋಣೆಯನ್ನು ಕೊಟ್ಟರು. ನಾನು ಅಲ್ಲಿಯೆ ನಮ್ಮ ತೌರುಮನೆಯಿಂದ ಬಂದಿದ್ದ ದಾಸಿಯರೊಂದಿಗೆ ವಾಸಿಸುತ್ತಿದ್ದೆನು. ರಾತ್ರಿಯಲ್ಲಿ ನನ್ನ ನಾದಿನಿಯು ಬಂದು ನನ್ನೊಂದಿಗೆ ಮಲಗುತ್ತಿದ್ದಳು.

ನನ್ನ ಪತಿಯೆ ಹಿರಿ ಮಗ. ಆದ್ದರಿಂದ ನಾನೇ ಆ ಮನೆ ಮಕ್ಕಳೆಲ್ಲರಿಗೂ ಹಿರಿಯಳೊ ಎಂಬಂತಿದ್ದೆನು. ಮೂರು ಜನ ಮೈದುನರಿದ್ದರು. ಅವರಲ್ಲಿಬ್ಬರು ಇನ್ನೂ ಚಿಕ್ಕವರು. ಒಬ್ಬನು ಮಾತ್ರ–ಮಾಧವನೆಂಬುವನು೨೨ ವರ್ಷ ವಯಸ್ಸಿನವನು. ಅವನು ದೊಡ್ಡ ಲಂಪಟ, ದುರಾಚಾರಿಯಾಗಿದ್ದನು. ನಾನು ಇಲ್ಲಿಗೆ ಬಂದಾಗಿನಿಂದಲೂ ಆವನ ನಡತೆ ನೋಡಿ ಬಹಳ ದುಃಖಿತಳಾಗಿದ್ದೆನು.

ಒಂದು ದಿನ ಸ್ನಾನಮಾಡಿ, ಬಿಸಿಲು ಮಾಳಿಗೆಯ ಮೇಲೆ ನನ್ನ ಉದ್ದವಾದ ಕೂದಲುಗಳನ್ನು ಒಣಗಿಸಿಕೊಳ್ಳುತ್ತಿದ್ದೆನು. ಮಾಧವನು ಅಕಸ್ಮಾತ್ತಾಗಿ ಅಲ್ಲಿಗೆ ಬಂದನು. ನಾನು ಮಾಧವನನ್ನು ನೋಡಿದ ಕೂಡಲೆ ಸೆರಗು ಸರಿಮಾಡಿಕೊಂಡೆನು ಏಕೆಂದರೆ ಮಾಧವನು ನನ್ನ ಹತ್ತಿರ ಬಂದಾಗಲೆಲ್ಲ ಕಣ್ಣು ಮಿಟುಕಿಸುವುದು, ನಸುನಗುವುದು ಹೀಗೆಲ್ಲ ಮಾಡುತ್ತಿದ್ದನು ಅದರಿಂದ ನಾನು ನಾಚಿಕೊಂಡು ಎದ್ದು ಹೋಗುತ್ತಿದ್ದೆನು. ಎಂದಿನಂತೆ ಇಂದೂ ಎದ್ದು ಹೋಗಲಾರಂಭಿಸಿದೆನು. ಆದರೆ ಮಾಧವನು ಅಡ್ಡಗಟ್ಟಿ—"ಅತ್ತಿಗೆ, ಇಷ್ಟು ರೂಪ ತೊಗೊಂಡು ಏನು ಮಾಡ್ತೀ ? ಈ ರೂಪವನ್ನ ಸಾರ್ಥಕಪಡಿಸೋದಿಲ್ಲವೇ? "—ಎಂದನು. ನನಗೆ ಆಗ ಅವನ ಮಾತಿನ ಅರ್ಥ ಗೊತ್ತಾಗಲಿಲ್ಲ. ಆಗ ನಾನು—"ಏನು ಮಾಡೋದು ? ದೇವರಿಗೆ ಅರ್ಪಿಸುತ್ತೇನೆ ಅವನೇ ನನ್ನ ಪತಿ ಈಗ" ಎಂದೆನು.

— ೨ —

ಅಕ್ಕಗಳಿರಾ, ಅಮ್ಮಗಳಿರಾ, ನಾನು ಅಲಂಕಾರ ಶಾಸ್ತ್ರವನ್ನು ಓದಿರುವೆನು. ಆದರೆ ನನ್ನ ಚರಿತ್ರೆಯನ್ನು ಒಂದು ಕಾವ್ಯವಾಗಿ ಮಾಡಬೇಕೆಂದು ನನಗೆ ಅಪೇಕ್ಷೆಯಿಲ್ಲ. ಆದುದರಿಂದ ನಡೆದುದೆಲ್ಲವನ್ನು ಒಂದು ಮಾತಿನಲ್ಲಿ ಹೇಳುವೆನು. ಹೆಚ್ಚು ಮಾತುಗಳಿಂದ ಪ್ರಯೋಜನವೇನು? ಆಗುವುದು ಆಗಿಹೋಯಿತು. ಆ ಲಂಪಟನಾದ ಮಾಧವನು ನನ್ನನ್ನು ಬಲೆಯಲ್ಲಿ ಸಿಕ್ಕಿಸಿದನು ! ಅವನಾವಾಗ್ಜಾಲದಿಂದ ನಾನು ತಪ್ಪಿಸಿಕೊಳ್ಳಲಾಗಲಿಲ್ಲ. ಹೇಗೆ ತಪ್ಪಿಸಿಕೊಳ್ಳಬೇಕು ? ಏಕಾಂತದಲ್ಲಿ ಅವನು ನನ್ನನ್ನು ಸತಾಯಿಸುತ್ತಿದ್ದನು, ಹೆದರಿಸುತ್ತಿದ್ದನು. ಮತ್ತು—"ನೀನು ನನ್ನ ಮಾತು ಕೇಳದಿದ್ದರೆ ನಾನು ನಿನ್ನ ಹೆಸರನ್ನು ಕೆಡಿಸುವೆನು. ನೀನು ನನ್ನ ಮಾತು ಕೇಳಿದರೆ ನೋಡು, ಈ ಮನೆಯ ರಾಜಶ್ರೀಯೆಲ್ಲ ನಿನ್ನದಾಗುವುದು. ನಾನು ನಿನ್ನ ದಾಸಾನು ದಾಸನಾಗಿರುವೆನು. ಇದರ ಮೇಲೂ ನೀನು ಕೇಳದಿದ್ದರೆ ಮುಂದೆ ಏನಾಗುವುದೋ ನೋಡಿಕೊ" ಎಂದನು. ನಿರ್ಭಾಗ್ಯಳಾದ ನಾನು ಅತ್ತೆನು, ಕ್ಷಮೆ ಬೇಡಿದೆನು, ಮತ್ತೆ "ನಾನು ನಿನಗೆ ಯೋಗ್ಯಳಲ್ಲ, ನೋಡು, ನಿನ್ನ ಧರ್ಮದ ಮೇಲೆ ದೃಷ್ಟಿಯಿಡು" ಎಂದು ಬೇಡಿಕೊಂಡೆನು. ಆದರೆ

ಆ ದುರುಳನು ನನ್ನ ಬಿನ್ನಹವೊಂದನ್ನೂ ಲಕ್ಷಿಸಲಿಲ್ಲ. ಅಬ್ಬಾ! ಆ ಸಮಯವನ್ನು ಈಗ ನೆನೆಸಿಕೊಂಡರೂ ನನ್ನ ಮೈಯೆಲ್ಲ ಉರಿಯುವುದು. ನನ್ನ ಮೇಲೇ ನನಗೇ ತಿರಸ್ಕಾರ ಹುಟ್ಟುವುದು. ಅವನು ಕೇವಲ ನನ್ನ ಸಾಧುತ್ವ ಮತ್ತು ರೂಪಲಾವಣ್ಯಗಳ ಲಾಭವನ್ನು ಮಾತ್ರ ಅಪೇಕ್ಷಿಸುತ್ತಿದ್ದನೆಂದು ನನಗೆ ಆಗ ಹೇಗೆ ಗೊತ್ತಾಗಬೇಕು. ನಾನೂ ಏನೂ ತಿಳಿಯದವಳು. ಅವನು ನನಗೆ ಮೊದಲು ಅನೇಕ ಪ್ರೇಮ ವಚನಗಳಿಂದ ಮನಸ್ಸು ಕರಗುವಂತೆ ಮಾಡುತ್ತಿದ್ದನು, ಕೈ ಹಿಡಿಯುತ್ತಿದ್ದನು, ಕಣ್ಣೀರು ಸುರಿಸುತ್ತಿದ್ದನು. ಆದಾಗ್ಯೂ ನಾನು ಅವನ ಕೈ ಹಿಡಿಯಲಿಲ್ಲ. ಆಗವನು ನರಪಿಶಾಚನಾದನು.

ವಿಧಿಯೂ ವಿಚಿತ್ರವಾಗಿತ್ತು. ನಮ್ಮತ್ತೆಯೂ ವಾರಗಿತ್ತಿಯರೂ ಬೇರೆ ಊರಿನಲ್ಲಿ ಮದುವೆಯಿದ್ದುದರಿಂದ ಅವರು ಅಲ್ಲಿಗೆ ಹೋಗಿದ್ದರು. ನಾನೊಬ್ಬಳೇ ಮನೆಯಲ್ಲಿ ಮಲಗಿದ್ದೆ. ಮಧ್ಯರಾತ್ರಿ ೧೨ ಗಂಟೆ ರಾತ್ರಿಯಲ್ಲಿ ಅವನು ಮದ್ಯದ ನಿಷೆಯಿಂದ ತೂರಾಡುತ್ತ ನನ್ನ ಕೋಣೆಯೊಳಗೆ ಬಂದನು. ನಾನು ಅವನ ಚಹರೆಯನ್ನು ನೋಡಿ ಹೆದರಿದೆ, ಮತ್ತೆ ಎದ್ದು ಓಡಲೆತ್ನಿಸಿದೆ. ಆಗ ಆ ನರಪಿಶಾಚಿಯು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ನಗುತ್ತ "ಇವತ್ತು ಇನ್ನೆಲ್ಲಿಗೆ ಓಡಿ ಹೋಗುತ್ತೀಯೆ. ಬಾ, ನನ್ನ ಆಸೆಯನ್ನು ಪೂರೈಸು" ಎಂದು ಎಳೆದನು.

ಅಕ್ಕಂದಿರಾ! ಆಗ ನನಗುಂಟಾದ ದುರ್ದೆಸೆಯು ದೇವರಿಗೇ ಗೊತ್ತು. ಆಯಿತು. ಆಯಿತು, ಅಂದಿನಿಂದ ಆ ವ್ಯಭಿಚಾರಿಯು ತನಗೆ ಬೇಕಾದಾಗಲೆಲ್ಲ ನನ್ನಲ್ಲಿ ತನ್ನ ಮೃಗತೃಷ್ಣೆಯನ್ನು ತೀರಿಸಿಕೊಳ್ಳುತ್ತಿದ್ದನು.

ಒಂದು ದಿನ ನನಗೆ ತಲೆನೋವಾಯಿತು. ಒಬ್ಬರಿಬ್ಬರು ದಾಸಿಯರು ಹತ್ತಿರ ಕೂತಿದ್ದರು. ಅವರಲ್ಲೊಬ್ಬಳು–"ಅಮ್ಮಾ! ಇದು ಗರ್ಭಿಣಿಯ ಲಕ್ಷಣವಮ್ಮಾ" ಎಂದಳು. ನಾನು ಚಕಿತಳಾದೆನು. ಇನ್ನು ಉಪಾಯವೇನಿದೆ? ಮನಸ್ಸು ದಣಿಯುವಷ್ಟು ಅತ್ತೆನು. ಅತ್ತಮತ್ತು ಮನಸ್ಸು ಶಾಂತವಾಗುತ್ತ ಬಂದಿತು. ಆಗ ಆಲೋಚಿಸಿದೆ. ಈಗ ಮಾಧವನ ಹೊರತು ನನಗೆ ಎಲ್ಲಿಯೂ ನಿಸ್ತಾರವಿಲ್ಲ. ಏಕೆಂದರೆ ನನ್ನ ಹೆಸರು ಕೆಡಬಾರದೆಂದು ಅವನಿಗೆ ಮನಸ್ಸಿಲ್ಲವೆ? ಸಮಾಜವು ನನಗೆ ಶಿಕ್ಷೆಯನ್ನು ಕೊಡುವುದಾದರೆ, ಅವನಿಗೆ ಬಿಡುವುದೆ? ಏಕೆಂದರೆ ಒಂದು ದಿನ ಅವನು "ನಮ್ಮ ಜಾತಿಯವರು,

ನನ್ನ ತಂದೆತಾಯಿಗಳು ನಿನ್ನನ್ನು ಇಟ್ಟುಕೊಳ್ಳದಿದ್ದರೆ ನಾನು ನಿನ್ನನ್ನು ಕರೆದುಕೊಂಡು ದೇಶಾಂತರಕ್ಕೆ ಹೋಗಿ ಭಿಕ್ಷೆಯನ್ನೆತ್ತುವೆನು" ಎಂದಿದ್ದನು. ಇಂದು ಈ ದುಃಖದಿಂದ ಅವನು ನನ್ನನ್ನುದ್ಧರಿಸಲಾರನೆ? ನಿಜವಾಗಿಯೂ ಉದ್ಧರಿಸುವನು. ನನ್ನನ್ನು ಪಾಪಮಾರ್ಗಕ್ಕೆ ಸೆಳೆದವನೇ ಅವನು. ಅವನು ನನ್ನನ್ನು ರಕ್ಷಿಸದಿದ್ದರೆ, ಅವನ ಹೆಸರನ್ನು ಕೆಡಿಸುವೆನೆಂದು ನಾನೂ ಹೆದರಿಸುವೆನು, ಆಗ ಅವನು ಏನು ಹೇಳುವನೊ ನೋಡುತ್ತೇನೆ. ಇವೇ ಮುಂತಾದ ಆಲೋಚನೆಗಳು ಹೊಳೆದವು. ಆದರೆ ಈ ದೇಶದಲ್ಲಿ ಸಮಾಜವು ದೋಷವನ್ನೆಲ್ಲ ಅಬಲೆಯರ ಮೇಲೆ ಹೊರಿಸಿ ಸಬಲರನ್ನೆಲ್ಲ ಸ್ವತಂತ್ರವಾಗಿ ಬಿಡುವುದು. ನ್ಯಾಯಸ್ಥಾನದಲ್ಲಿ ನಿರ್ಗತಿಕರಾದ ನಿರಪರಾಧಿಗಳೆ ಅಪರಾಧಿಗಳಾಗಿ, ಬಲಿಷ್ಠರಾದ ಧನಾಢ್ಯರೆಲ್ಲ ತಪ್ಪಿಸಿಕೊಂಡು ಹೋಗುವಂತೆ, ಕಟುಕರು ಸಾಧುವಾದ ದನ, ಕುರಿ, ಮೇಕೆ ಮೊದಲಾದ ಪ್ರಾಣಿಗಳನ್ನು ಲಕ್ಷಗಟ್ಟಲೆಯಾಗಿ ಕೊಲ್ಲುವ ಹಾಗೆ ಹುಲಿ ಸಿಂಹ ಆನೆ ಮೊದಲಾದ ಬಲಿಷ್ಠ ಮೃಗಗಳನ್ನು ನಿತ್ಯದ ಆಹಾರಕ್ಕಾಗಿ ಕೊಲ್ಲುವುದಿಲ್ಲ. ಇದೇ ಪ್ರಪಂಚದ ನ್ಯಾಯ, ಧರ್ಮ. ಅಯ್ಯೊ ಧರ್ಮವೆ! ನ್ಯಾಯವೆ! ದುಷ್ಟರ ದಮನ, ಶಿಷ್ಟರ ಪಾಲನೆಯೆ ಧರ್ಮದ ಧ್ಯೇಯವಲ್ಲವೆ? ಎಂದು ಆಲೋಚಿಸುತ್ತಿರುವಾಗ, ನನ್ನೆದುರಿಗೆ ಮಾಧವನು ನಿಂತು ನಸುನಗೆಯಿಂದ ನನ್ನನ್ನು ನೋಡುತ್ತಿದ್ದನು. ದಾಸಿಯರೆಲ್ಲರೂ ಹೊರಟು ಹೋಗಿದ್ದರು.

ನಿತ್ಯವೂ ನಾನು ಮಾಧವನನ್ನು ನೋಡಿದ ಕೂಡಲೆ ತಿರಸ್ಕಾರದಿಂದ ಮುಖವನ್ನು ತಿರುಗಿಸಿಕೊಳ್ಳುತ್ತಿದ್ದವಳು ಇವತ್ತು ಬಹು ಪ್ರೇಮವನ್ನು ತೋರುವವಳಂತೆ ನಸುನಗೆಯನ್ನು ತೋರಿದೆನು. ನನ್ನ ನಸುನಗೆಯನ್ನು ನೋಡಿ, ಅವನು ನನ್ನ ಕೈ ಹಿಡಿದುಕೊಂಡು-"ಏನು? ಇಂದು ಬಹಳ ಸಂತೋಷದಲ್ಲಿದ್ದೀಯೆ? ಏಕೆ?" ಎಂದನು. ನಾನು "ಹೌದು, ಏಕೆ ಸಂತೋಷವಾಗಿರಬಾರದು. ಅದನ್ನು ಕೇಳಿದರೆ ನಿನಗೂ ಸಂತೋಷವಾಗುವುದು" ಎಂದೆನು.

"ತಡವೇಕೆ, ಬೇಗ ಹೇಳು, ಏನದು?"

"ಏಕೆ ನಿನಗೆ ಗೊತ್ತಿಲ್ಲವೆ?"

"ನಿಜವಾಗಿಯೂ ನನಗೆ ಗೊತ್ತಿಲ್ಲ, ಹೇಳು, ಏನದು?"

" ನಿಜವೇನು, ಸುಳ್ಳೇನು ! ನೀನು ನನ್ನ ಪ್ರೀತಿಸುತ್ತೀಯೆಂದು ಎಲ್ಲರಿಗೂ ಗೊತ್ತಿದೆ. ಒಳ್ಳೇದು ಕೇಳು, ನಾನು ಗರ್ಭಿಣಿಯಾಗಿದ್ದೇನೆ."

ಅವನು ನನ್ನ ಮಾತನ್ನು ಕೇಳಿ ಚಕಿತನಾದನು. ಮತ್ತೆ ಚೇಳು ಕಡಿದವನಂತಾಗಿ ನನ್ನ ಕೈ ಬಿಟ್ಟು—" ನಿಜವೆ ! ನೀನು ಗರ್ಭಿಣಿಯಾಗಿರುವೆಯಾ ? "

" ನಿನ್ನ ಎದುರಿಗೆ ಸುಳ್ಳು ಹೇಳಬೇಕೆ ? ಈಗ ನಡೆಯುತ್ತಿರುವುದು ಐದನೆಯ ತಿಂಗಳು ! "

ಅವನು ಹೆದರಿ—" ನೀನು ನನ್ನನ್ನು ಎಂಥಾ ಸಂಕಟಕ್ಕೆ ಗುರಿಮಾಡಿದೆಯಲ್ಲ! ಇದುವರಿಗೆ ನೀನು ಈ ಸಂಗತಿಯನ್ನೇಕೆ ಮುಚ್ಚಿಟ್ಟೆ ? "

ನಾನು ಆಶ್ಚರ್ಯದಿಂದ " ಎಲ್ಲಿ ಮುಚ್ಚಿಟ್ಟೆ, ನನಗೇನು ಗೊತ್ತು. ನಾನು ಗರ್ಭಿಣಿಯಾದದ್ದು ? ಈಗ ಆ ಲಕ್ಷಣಗಳು ತೋರಲಾರಂಭಿಸಿವೆ. ಹೊಟ್ಟೆಯೂ ದೊಡ್ಡದಾಗುತ್ತಿದೆ. ಇದರಲ್ಲಿ ಸಂಕಟವೇನು ಬಂತು. ಬೇರೆಯವರಿಂದ ನಾನು ಗರ್ಭಿಣಿಯಾದೆನೆ? ಮಗನಾಗಲಿ, ಮಗಳಾಗಲಿ ಹುಟ್ಟಬಹುದು. ಏನು ಹುಟ್ಟಿದರೂ ಅದು ನಿನ್ನ ಮಗುವೆ."

ಅವನು ಹೆಚ್ಚು ಆಶ್ಚರ್ಯದಿಂದ-" ಏನು ಹುಚ್ಚುಚ್ಚಾಗಿ ಮಾತಾಡುತ್ತೀಯೆ? ಆ ಮಗುವು ನನ್ನದು ಹೇಗೆ ಆದೀತು ? ನನ್ನ ಹೆಂಡತಿಯೇನಾದರೂ ನನ್ನಿಂದ ಗರ್ಭಿಣಿಯಾದಳೇನು ? ನಿನ್ನ ಹೊಟ್ಟೆಯಲ್ಲಿ ಹುಟ್ಟುವ ಮಗು ನಿನ್ನದೆ, ಅದಕ್ಕೆ ನನ್ನದೇನು ಸಂಬಂಧ" ಎಂದನು.

ಆಗ ನಾನು ಸ್ವಲ್ಪ ಸ್ವರವನ್ನು ಬದಲಾಯಿಸಿ–"ಏಕೆ ಹೀಗೆ ಮಾತಾಡುವೆ ? ಈ ಗರ್ಭವು ನಿನ್ನಿಂದ ಉತ್ಪನ್ನವಾಗಲಿಲ್ಲವೆ ? ಈ ಸಂಗತಿಯನ್ನು ನೀನು ಒಪ್ಪಿಕೊಳ್ಳುವುದಿಲ್ಲವೆ ? " ಎಂದು ಕೇಳಿದೆನು.

ಅವನು ಮತ್ತಷ್ಟು ಕ್ರೂರವಾಗಿ—" ನಾನೇಕೆ ಒಪ್ಪಿಕೊಳ್ಳಲಿ ? ನಾನೊಪ್ಪಿಕೊಂಡರೂ ಅದರಿಂದ ನನಗೇನು ನಷ್ಟ ? ಏನಾದರೂ ನಿನಗೆ ಆಗುವುದು. ವಿಧವೆಯರ ಚರಿತ್ರೆ ಯಾರಿಗೆ ಗೊತ್ತಿಲ್ಲ."

ನಾನು ಉಗ್ರಸ್ವರದಲ್ಲಿ—" ನನಗೆ ದುರ್ದೆಶೆಯಾಗುವುದಾದರೆ ನಿನಗೂ ಆಗುವುದು. ಏಕೆಂದರೆ ನಿನ್ನನ್ನು ಪಾಪಕರ್ಮಕ್ಕೆ ಪ್ರೇರಿಸಿದವಳು ನಾನಲ್ಲ. ನೀನೇ ನನ್ನನ್ನು ಈ ಪಾಪಕರ್ಮಕ್ಕೆ ಸೆಳೆಯಲಿಲ್ಲವೆ ? ನೀನೇ ನನಗೆ ಈ

ಮಾರ್ಗವನ್ನು ತೋರಿಸಲಿಲ್ಲವೆ? ನೀನೇ ಧರ್ಮವನ್ನು ಬಿಟ್ಟು ಈ ಕುಕರ್ಮವನ್ನು ಮಾಡಲಿಲ್ಲವೆ? ಇಷ್ಟು ಮಾಡಿಯೂ ನೀನು ನಿರಪರಾಧಿಯೊ? ನಾನು ನನ್ನ ದುರ್ದೆಶೆಯ ಕಥೆಯನ್ನು ಎಲ್ಲರಿಗೂ ಹೇಳಲಾರೆನೊ? ನನ್ನ ಮಾತಿನಲ್ಲಿ ಯಾರೂ ವಿಶ್ವಾಸವಿಡುವುದಿಲ್ಲವೊ? ನಾನು ಮೊದಲು ದುಶ್ಚರಿತ್ರಳಾಗಿದ್ದೆನೆ? ದುಶ್ಚರಿತ್ರಳನ್ನಾಗಿ ಮಾಡಿದವನು ನೀನಲ್ಲವೆ?" ಎಂದೆನು.

ನನ್ನ ಮಾತುಗಳನ್ನು ಕೇಳಿ ಅವನು ಉಪೇಕ್ಷೆಯಿಂದ ನಗುತ್ತ–'ಭಲೆ! ಭಲೆ! ನನ್ನ ತಂದೆತಾಯಿಗಳೂ, ಜಾತಿಯವರೂ ನಿನ್ನೊಂದಿಗೆ ನನ್ನನ್ನೂ ಬಿಟ್ಟುಬಿಡುವರೆಂದು ತಿಳಿದೆಯಾ? ಹಾಗೆಂದಿಗೂ ತಿಳಿಯಬೇಡ. ನಮ್ಮ ಶಾಸ್ತ್ರವನ್ನು ಮಾಡಿದ ಋಷಿಗಳು ಅಷ್ಟು ಮೂರ್ಖರೆಂದು ತಿಳಿಯಬೇಡ. ಅವರು ಪುರುಷರ ಪಾಪಕಾರ್ಯಗಳಿಗೆ ಎಂದಿಗೂ ಶಿಕ್ಷೆಯನ್ನು ವಿಧಿಸುವವರಲ್ಲ. ಹಾಗಿದ್ದರೆ ಅವರ ಶಾಸ್ತ್ರವನ್ನಾರು ಕೇಳುತಿದ್ದರು. ಏನು ದುರ್ಗತಿಯಾದರೂ ಅದರ ಭಾರವೆಲ್ಲ ಸ್ತ್ರೀಯರಮೇಲೆ ಇರುವಂತೆ ಶಾಸ್ತ್ರವನ್ನು ಬರೆದಿದ್ದಾರೆ! ಆದ್ದರಿಂದ ನಮಗೇನೂ ಹೆದರಿಕೆಯಿಲ್ಲ, ನಾನು ಮುಂಚಿನಂತೆಯೆ ನನ್ನ ತಂದೆತಾಯಿಗಳಿಗೆ ಮುದ್ದುಮಗನಾಗಿ, ಸಮಾಜದಲ್ಲಿಯೂ ದೇಶದಲ್ಲಿಯೂ ಆದರವನ್ನು ಪಡೆಯುವೆನು. ಮತ್ತೆ ಯಾವ ಸ್ತ್ರೀಯು ಮನೋಹರಳಾಗಿ ಕಾಣುವಳೊ ಅವಳಲ್ಲಿ ನನ್ನ ಆಸೆಯನ್ನು ತೀರಿಸಿಕೊಳ್ಳುವೆನು. ಈ ಪೊಳ್ಳು ಬೆದರಿಕೆಯನ್ನು ಯಾರಿಗೆ ತೋರಿಸುವೆ? ಬೇಕಾದರೆ ನಿನಗೋಸ್ಕರ ನೀನೇ ದುಃಖಿಸಿಕೊ! ನಮ್ಮಪ್ಪ ಅಮ್ಮನಿಗೆ ಈ ಸುದ್ಧಿಯು ತಿಳಿದ ಕೂಡಲೆ ಅವರು ನಿನ್ನನ್ನು ಮನೆ ಬಿಟ್ಟೋಡಿಸುವರು. ಆಮೇಲೆ ನಿನ್ನ ತಂದೆತಾಯಿಯವರು ಮನೆ ಬಿಟ್ಟೋಡಿಸುತ್ತಾರೆ. ಅನಂತರ ನಿನ್ನನ್ನು ಮುಟ್ಟುವರಾರು? ನಿನ್ನನ್ನು ನೋಡಿ ಮಾತಾಡುವುದು ಹಾಗಿರಲಿ, ನಿನ್ನ ಮುಖವನ್ನು ಕೂಡ ನೋಡುವುದಿಲ್ಲ. ಕೊನೆಗೆ ನೀನು ಮನೆಮನೆ ತಿರುಗಿ ಭಿಕ್ಷೆ ಬೇಡಬೇಕಾಗುವುದು! ತಿಳಿದುಕೋ!' ಎಂದನು.

ನನ್ನ ತಲೆಯು ಸಿಡಿದು ಹೋಗುವಂತಹ ಅವನ ಮಾತುಗಳನ್ನು ಕೇಳಿ ಮೊದಲೇ ವ್ಯಥಿತಳಾಗಿದ್ದೆನು. ಇಗ ಅವನ ಮಾತುಗಳು ಅಸಹಸೀಯವಾದವು. ಎದೆಯು ಡವಡವ ಎಂದು ಹೊಡೆದುಕೊಳ್ಳಲಾರಂಭಿಸಿತು. ಕಣ್ಣುಗಳಲ್ಲಿ ನೀರು ಹರಿಯಲಾರಂಭವಾಯಿತು. ಮನಸ್ಸಿನಲ್ಲಿ ಒಂದು ಚೂರಿ ಸಿಕ್ಕಿ

ದರೆ ಅವನ ಎದೆಯನ್ನು ಇರಿದುಬಿಟ್ಟು ಹೃದಯವನ್ನು ಶಾಂತಗೊಳಿಸಬೇಕೆನಿಸಿತು. ಅಷ್ಟರಲ್ಲಿ ಅವನು ಎದ್ದು ನಿಂತು ತಿರಸ್ಕಾರ ದೃಷ್ಟಿಯಿಂದ, ಬಾಗಿಲಿನ ಕಡೆಗೆ ತಿರುಗಿದನು. ಅವನು ಹೋಗುತ್ತಿದ್ದುದನ್ನು ನೋಡಿ ನಾನು ಸಿಟ್ಟಿಗೆದ್ದ ನಾಗರಹಾವಿನಂತೆ ಬುಸುಗುಟ್ಟುತ್ತ, ಎದ್ದುನಿಂತು, ಬಾಗಿಲನ್ನು ತಡೆದು, "ಎಲೋ! ನೀನು ಈಗ ಹೋಗುವೆಯಾ? ನನ್ನನ್ನು ದುಶ್ಚರಿತ್ರಳನ್ನಾಗಿ ಕಳಂಕಿನಿಯಾಗಿ ಮಾಡಿ ನೀನು ಹೋಗುವೆಯಾ? ನಿಜವಾಗಿ ಹೇಳು – ನೀನು ಪಾಪಾಚರಣೆ ಮಾಡಬೇಕೆಂದು ಕಂಬನಿಗರೆದು ಪ್ರೇರಿಸಲಿಲ್ಲವೆ? ಬಿನ್ನಹ ಮಾಡಿಕೊಳ್ಳಲಿಲ್ಲವೆ? ನಾನೇನಾದರೂ ನಿನ್ನನ್ನು ದುರ್ಮಾರ್ಗಕ್ಕೆಳೆದೆನೆ? ನೀನೇ ನನ್ನನ್ನು ಹೆದರಿಸಿ ಮೋಸಗೊಳಿಸಲಿಲ್ಲವೆ? ನನ್ನ ಧರ್ಮವನ್ನು ನೀನೆ ನಾಶಮಾಡಲಿಲ್ಲವೆ? ಸಮಾಜದಲ್ಲಿ ನೀನು ನಿರಪರಾಧಿಯೆಂದು ಪ್ರಮಾಣ ಮಾಡುವೆಯಾ? ನಿನಗೆ ಶಿಕ್ಷೆಯೆ ಇಲ್ಲವೆ? ಅಯ್ಯೋ! ನಿನ್ನ ಹೃದಯದಲ್ಲಿ ಇಷ್ಟು ಮೋಸ! ಇಷ್ಟು ಕಪಟ! ನೀನಿಂಥ ಪಾಷಂಡಿಯಾಗಿ ನನ್ನ ಭವಿಷ್ಯಜೀವನವನ್ನು ನಾಶಗೊಳಿಸಿದೆ ಯಾಕೆ? ಒಳ್ಳೆಯದು- ನೀನು ನನ್ನ ಹೃದಯದಲ್ಲಿ ಹೊತ್ತಿಸಿದ ಬೆಂಕಿಯು ನಿಜವಾಗಿ ಜ್ವಲಿಸುವುದಾದರೆ, ನಿನ್ನ ಪಾಪಕಾರ್ಯಗಳಿಗೆ ದೇವರು ಸಾಕ್ಷಿಯಾಗಿದ್ದುದು ನಿಜವಾಗಿದ್ದರೆ ನನ್ನ ಈ ಶಾಪವು ಫಲಿಸಲಿ. ನಿನಗೆ ಎಂದಿಗೂ ಸದ್ಗತಿಯುಂಟಾಗದಿರಲಿ! ನಿನ್ನ ಹೃದಯವು ಯಾವಾಗಲೂ ಬೆಂಕಿಯ ಉರಿಯನ್ನನುಭವಿಸಲಿ! ನಿನ್ನ ಮನಸ್ಸಿಗೆ ಶಾಂತಿಯೇ ಸಿಕ್ಕದಿರಲಿ! ನಿನ್ನ ಅಧರ್ಮಕ್ಕಾಗಿ, ನಿನ್ನ ಪಾಪಕ್ಕಾಗಿ, ನಿನ್ನ ದುಷ್ಕಾರ್ಯಕ್ಕಾಗಿ ನಿನ್ನ ದೇಹವೆಲ್ಲ ಕೊಳೆತು ಕೊಳೆತು ಸಾಯಿ. ನನ್ನನ್ನು ವ್ಯರ್ಥವಾಗಿ ಕಲಂಕಿತಳನ್ನಾಗಿ ಮಾಡಿದುದಕ್ಕೆ, ಭಯಾನಕ ಅಪರಾಧದಲ್ಲಿ ಅಪರಾಧಿಯನ್ನಾಗಿ ಮಾಡಿದುದಕ್ಕೆ, ದೋಷದಲ್ಲಿ ಭಾಗಿಯಾಗಿ ಮಾಡಿದುದಕ್ಕೆ ನಿನಗೆ ಆಗುವ ಶಿಕ್ಷೆಯು ಇದೊಂದೇ ಜನ್ಮದಲ್ಲಿ ಮುಗಿಯದಿರಲಿ! ಛೀ ನಾಯಿ! ನನಗೆ ದೊರೆಯಬೇಕಾದ ಶಿಕ್ಷೆಯು ದೊರೆಯಿತು. ಇನ್ನು ನಿನಗಾಗುವ ಶಿಕ್ಷೆಯನ್ನು ನೋಡಿಕೊ." ಅಃ ದೇವರೆ!........ಮಾತಾಡುತ್ತಿರುವಾಗ ನನ್ನ ತಲೆಯು ತಿರುಗಿ, ಮೆಯ್ಮೇಲೆ ಎಚ್ಚರಿಕೆಯಿಲ್ಲದೆ ಕೆಳಗೆ ಬಿದ್ದು ಬಿಟ್ಟೆನು. ನಾನು ಎಷ್ಟೊತ್ತು ಹಾಗೆ ಬಿದ್ದಿದ್ದೆನೊ ತಿಳಿಯದು. ಆದರೆ ಎಚ್ಚರಿಕೆಯಾದಾಗ ಕಣ್ದೆರೆದು ನೋಡಿದಾಗ ನಮ್ಮತ್ತೆಯು ಬಾಯಿಗೆ

ಬಂದಂತೆ ಬೈಯುತ್ತ ನಿಂತಿದ್ದರು.—"ಕಳ್ಳ ಮುಂಡೆ! ಇನ್ನು ನಮ್ಮನೆಯ ಲ್ಲಿರ್ತೀಯೇನೆ ನೀನು? ನಡೀ ಮನೆಬಿಟ್ಟು ಹೊರಗೆ! ನಿನ್ನ ಚಾಲು ನನಗೆ ಮೊದಲೇ ಗೊತ್ತಾಗಿತ್ತು. ನೀನು ಬದ್‌ಮಾಷ ಹೆಂಗಸು, ಸೂಳೇರಂತೆ ಅಂತ ತಿಳಿದೇ ಇದ್ದೆ. ಲುಚ್ಚ ರಂಡೆ! ನಿಮ್ಮಪ್ಪನಿಗೆ ಟೆಲಿಗ್ರ್ರಾಫ್ ಕೊಟ್ಟದೆ. ಅವನೂ ಬರ್ತ್ತಾನೆ. ಬರೋವರೆಗೆ ಏಳು, ಕೆಳಗೆ ಬೀದೀಲಿ ಕೂತುಕೊಂಡಿರು. ನಿನ್ನಾ ಒಂದು ಘಳಿಗೇನು ಮನೇಲಿಟ್ಕೊಂಡಿರಲಾರೆ. ಅಯ್ಯೊ! ನಮ್ಮ ಮನೆ ಹೆಸರೇ ಕೆಡಿಸಿಬಿಟ್ಟೆಯಲ್ಲೆ. ಕಸಬಿಮುಂಡೆ, ಸೂಳೆ ಮಗಳೆ! ನೀನು ವ್ಯಭಿಚಾರ ಮಾಡ್ಬೇಕೂ ಅಂತಾನೇನೆ ಇಲ್ಲಿಗೆ ಬಂದದ್ದು?" ಹೀಗೆ ಸಹಸ್ರ ನಾಮ ಜಪಿಸುತ್ತ ದಾಸಿಯರನ್ನು ಕರೆದು–"ಇವಳು ಇಲ್ಲಿಂದ ಏಳ್ದಿದ್ದರೆ, ಕತ್ತ್ಹಿಡಿದು ಇವಳನ್ನು ಕೆಳಗೆ ಬೀದಿ ಮುಂದಿರೋ ಕೋಣೇಲಿ ಕೂಡ್ಸಿ. ಇವ ಳಪ್ಪ ಬರ್ತ್ತಾನೆ, ಅವನು ಕರಕೊಂಡು ಹೋಗ್ತಾನೆ. ಅಯ್ಯೋ! ಇವಳು ನನ್ನ ಮನೇನೇ ಕೆಡಿಸಿಬಿಟ್ಳಲ್ಲಾ!" ಎಂದರು.

ನನಗೆ ಸ್ಮೃತಿ ತಪ್ಪಿತು. ಇಬ್ಬರು ಮೂವರು ದಾಸಿಯರು ಹಿಡಿದೆತ್ತಿ ನನ್ನನ್ನು ಕೆಳಗಿನ ಕೋಣೆಯಲ್ಲಿ ಹಾಕಿ ಹೊರಟು ಹೋದರು!

— ೩ —

ಎಚ್ಚರಿಕೆಯಾದಾಗ ನಾನು ಒಂದು ಕೋಣೆಯಲ್ಲಿ ಜೌಗು ನೆಲದ ಮೇಲೆ ಮಲಗಿರುವೆನೆಂದು ತಿಳಿಯಿತು. ಆಗ ಬಿಕ್ಕಿ ಬಿಕ್ಕಿ ಅತ್ತೆನು. ನನ್ನ ಕಣ್ಣೀರಿನಿಂದ ನಾನು ಮಲಗಿದ್ದ ಜಾಗದ ನೆಲವು ನೆನೆಯಿತು. ಮೈ ನಡುಗ ಲಾರಂಭಿಸಿತು. ಹೃದಯವು ಡಬಡಬ ಹೊಡೆದುಕೊಳ್ಳಲಾರಂಭಿಸಿತು. ಕಣ್ಣುಗಳು ಬಾತವು. 'ಅಯ್ಯೊ! ಇನ್ನು ನಮ್ಮಪ್ಪನು ಬಂದು ಏನು ಮಾಡ್ತ್ರ ವನೊ?' ಎಂಬ ಯೋಚನೆ ಹತ್ತಿತು. ಅವನು ಹೊಡೆದು ಬಲಿ ಹಾಕಿದರೂ ಚಿಂತೆಯಿಲ್ಲ, ಮನೆಯಲ್ಲಿಟ್ಟುಕೊಂಡರೆ ಸಾಕು. ಅದಿಲ್ಲದೆ ನನ್ನನ್ನು ನಾಯಿ ಯೆಂದು ತಿಳಿದು ಹೊರದೂಡಿದರೆ, ಅಯ್ಯೋ-ನಾನೆಲ್ಲಿಗೆ ಹೋಗಲಿ? ಯಾರ ಮನೆಮುಂದೆ ನಿಂತುಕೊಳ್ಳಲಿ! ಎಲ್ಲಿರಲಿ? ಆ ಮೇಲೆ ನನ್ನ ವಿಚಾರಿಸುವ ರ್‍ಯಾರು? ಹೇ ಭಗವಂತ! ಯಾವ ಪಾಪಿಯು ನನ್ನ ಧರ್ಮವನ್ನು ನಾಶಗೊ ಳಿಸಿದನೊ, ಯಾವನು ಅಧರ್ಮಮಾರ್ಗಕ್ಕೆಳೆದನೊ, ಯಾವನು ನನ್ನ ಮುಖಕ್ಕೆ ಮಸಿ ಬಳಿದನೋ, ಯಾವನು ನನ್ನನ್ನು ಹೆದರಿಸಿ ಅತ್ಯಾಚಾರ

ಮಾಡಿದನೊ, ಯಾವನು ನನ್ನಲ್ಲಿ ಈ ಪ್ರವೃತ್ತಿಯನ್ನುಂಟು ಮಾಡಿದನೋ, ಅವನು ಇಷ್ಟು ಪಾಪವನ್ನು ಘೋರ ಪಾಪವನ್ನು–ಮಾಡಿದ್ದರೂ ತನ್ನ ಗೆಳೆಯರೊಂದಿಗೆ ಕೂಡಿ ಮೋಜು ಮಾಡುತ್ತಿರುವನು! ನಾನು ಇಲ್ಲಿ ಜೌಗು ನೆಲದ ಮೇಲೆ ಬಿದ್ದು ಅಳುತ್ತಿರಬೇಕೆ? ಅತ್ತೆಮಾವಂದಿರು ತ್ಯಜಿಸಿದರು, ಸಮಾಜವು ತ್ಯಜಿಸಿದೆ, ಕುಲಪರಿವಾರವೆಲ್ಲ ತ್ಯಜಿಸಿತು, ದಾಸ ದಾಸಿಯರು ತ್ಯಜಿಸಿದರು, ನನ್ನನ್ನು ಪ್ರಾಣಪ್ರಿಯಳೆಂದು ಕರೆಯುತ್ತಿದ್ದಾ ಪಾಪಿಯೂ ನನ್ನನ್ನು ತ್ಯಜಿಸಿದನು! ಅಯ್ಯೋ ಹಿಂದೂ ಧರ್ಮವೆ! ನಿನ್ನ ಸತ್ಯನಾಶವು ಹೀಗಾಗುವುದಾದರೆ, ಪರಧರ್ಮವು ಎಷ್ಟೊ ಒಳ್ಳೆಯದಾಗಿರುವುದು! ನಾನು ಮನೆಯಿಂದ ಹೊರದೂಡಲ್ಪಟ್ಟ ದಿನ ಅರ್ಧರಾತ್ರಿಯಲ್ಲಿ ನಮ್ಮ ಮಾವನ ಗಾಡಿ ಹೊಡೆಯುವ ಬುಡನ್ ಸಾಬಿಯು ಬಂದ-ಯಾಕಳ್ತೀಯಾ ಬೀ ಬೀ! ಅತ್ತು ಪ್ರಯೋಜನವೇನು? ನಡೀ ನಮ್ಮನ್ಗೇ. ನೀನೇ ನಮ್ಮನೆ ಯಜಮಾನ್ತಿ ಯಾಗಿ ಸುಖವಾಗಿರಬಹುದು," ಎಂದನು. ನಾನು ಅವನ ಮಾತನ್ನು ಕೇಳಿ, ಮತ್ತಷ್ಟು ದುಃಖದಿಂದ ಅಳುತ್ತಾ–"ಕತ್ತೇ, ನಡೀ ಆಚೆ, ನನ್ನೆದುರಿಗೆ ನಿಂತ್ಕೋಬೇಡ" ಎಂದೆನು. ಅವನು ಹೊರಟು ಹೋದನು. ಆದರೆ ನನ್ನ ದುಃಖವೇನೂ ಕಡಿಮೆಯಾಗಲಿಲ್ಲ. ನಾನು ಮತ್ತಷ್ಟು ಅಧೀರಳಾಗಿ ಹಲವು ಬಗೆಯಾಗಿ ಚಿಂತಿಸಲಾರಂಭಿಸಿದೆನು

ನಾನು ಮಲಗಿಕೊಂಡೇ ಅಲೋಚಿಸುತ್ತಿರುವಾಗ ನಮ್ಮಪ್ಪ ಸಾಕ್ಷಾತ್ ಅಗ್ನಿ ದೇವನಂತೆ ಬಂದು, ನನ್ನನ್ನು ಎರಡು ಸಾರಿ ಒದ್ದು–" ಲೇ ಲುಚ್ಚಿ! ನಿನು ನನ್ನ ಮನೆತನದ ಹೆಸರನ್ನೇ ಕೆಡಿಸಿ ಬಿಟ್ಟೆಯಲ್ಲೇ? ನನ್ನ ಮುಖಕ್ಕೆ ಕಪ್ಪು ಹತ್ತೋ ಹಾಗೆ ಮಾಡ್ಬಿಟ್ಟೆಯಲ್ಲೇ? ಹೊರಗೆ ಮುಖ ತೋರಿಸದ ಹಾಗೆ ಮಾಡಿದೆಯಲ್ಲೇ? ಅಯ್ಯೋ, ವ್ಯಭಿಚಾರದ ಮುಂಡೆ! ನನಗೆ ಮೊದಲೇ ಯಾಕೆ ಹೇಳ್ಲಿಲ್ವೇ? ನೀನಿಂಥ ಪಿಶಾಚಿರಂಡೆ ಆಗ್ತೀಯಾ ಅಂತ ತಿಳಿದಿದ್ರೆ ನಿನಗೆ ವಿಷ ಕೊಟ್ಟು ಸಾಯಿಸ್ತಾ ಇದ್ದನಲ್ಲೆ! ಉರಿಯೊ ಚಿತೆಯಮೇಲೆ ಸುಟ್ಟು ಬಿಡ್ತಾ ಇದ್ದನಲ್ಲೆ! ಸೂಳೆಮುಗಳೆ! ವ್ಯಭಿಚಾರ ಮಾಡೋಕೆ ನಿನಗೆ ನಾಚಿಗೆ ಬರ್ಲಿಲ್ಲವೇನೆ? ಇತ್ಯಾದಿ-ಇತ್ಯಾದಿ-ಇತ್ಯಾದಿ, ಎಷ್ಟೋ ಬೈಗಳನ್ನು ಬೈದನು. ನಾನು ಅಳುವನ್ನು ಗಟ್ಟಿಯಾಗಿ ಹಿಡಿದಿದ್ದೆನು. ಮಧ್ಯದಲ್ಲಿ ಒಂದು ಸಲ "ಅಪ್ಪಾಜಿ, ನಂದೇನೂ ತಪ್ಪಿಲ್ಲ, ಆ ಪಿಶಾಚಿಯಾದ ಮೋಹನನೇ ನನ್ನ

ಹೆದರಿಸಿ ಧರ್ಮ ನಾಶ ಮಾಡಿದ"ಎಂದೆನು. ಆದರೆ ಆಗ ನನ್ನ ಮಾತು ಕೇಳು ವರಾರು ? ತಂದೆಯು ಆಳುಗಳಿಗೆ ಹೇಳಿ ಗಾಡಿತರಿಸಿ, ನನ್ನನ್ನೂ ಕರೆದು ಕೊಂಡು ರೈಲು ಸ್ಟೇಷನಿಗೆ ಬಂದನು. ಸಾಯಂಕಾಲ ೬ ಘಂಟೆ ಸಮಯ. ಗಾಡೀ ಬಂದಿತು. ಆಗ 'ಎಷ್ಟೇ ಆಗಲಿ ಹಡೆದ ಕರುಳು,ಮಗಳ ಮೇಲೆ ಅಪ್ಪ ನಿಗೆ ದಯೆಬರಬಹುದು. ತನ್ನ ಜತೇಲಿ ನನ್ನ ಮನೇಗೆ ಕರಕೊಂಡು ಹೋ ಗಬಹುದು' ಅಂತ ಅಂದುಕೊಂಡಿದ್ದೆ. ಆದರೆ ನಮ್ಮಪ್ಪನು ರೈಲುಗಾಡಿ ಹತ್ತು ವಾಗ ನನ್ನ ಕೈಲಿ ೫೦ ರೂಪಾಯಿ ನೋಟುಕೊಟ್ಟು "ತೊಗೋ ಹಾದರಗಿತ್ತಿ, ಇದನ್ನು ತೆಗೊಂಡೂ ಎಲ್ಲಿಗೆಬೇಕೊ ಅಲ್ಲಿಗೆ ಹೋಗಿ ಹಾದರಮಾಡಿಕೊ? ಇನ್ನೂ ಯಾವ ಮುಖದಿಂದ ಮನೆಗೆ ಬರ್ತೀಯಾ ನಡೀ" ಎಂದು ಹೇಳಿ ಬಾಗಿಲು ಹಾಕಿಕೊಂಡು ಕಂಪಾರ್ಟಮೆಂಟಿನಲ್ಲಿ ಕೂತುಕೊಂಡನು. ನಾನು ಗಟ್ಟಿಯಾಗಿ, "ಅಪ್ಪಾಜಿ! ಒಂದು ಸಲ ನನಗೆ ಅಮ್ಮನ ಮುಖ ತೋರಿಸು" ಅಂದೆ. ಆದರೆ ನನ್ನ ಮಾತಿಗೆ ಉತ್ತರ ಕೊಡುವರಾರು? ಗಾಡಿ ಅಷ್ಟೊತ್ತಿಗೆ ಹೊರಟು ಹೋಗಿತ್ತು.

ಅಕ್ಕಂದಿರಾ! ಆಗ ನನಗೆ ವಯಸ್ಸು ೧೫ ವರ್ಷ. ಆಗ ನಡೆದ್ದನ್ನ ಬರೆಯುವಾಗ ಈಗಲೂ ಎದೆ ಒಡೆದು ಹೋಗುವಹಾಗೆ ಆಗುವುದು. ದೊಡ್ಡ ಮನೆತನಸ್ಥರ ಮಗಳು, ದೊಡ್ಡ ಮನೆಯವರ ಸೊಸೆ ! ಆದರೆ ಅಯ್ಯೋ! ಇವತ್ತು ನಾನು ಅನಾಥಳು. ಇಂದು ನನಗೆ ಅತ್ತೆಮನೆಯೂ ಇಲ್ಲ, ತೌರು ಮನೆಯೂ ಇಲ್ಲ. ಪಶುಬಲಿಕ್ಕೆ ಬಲಿಯಾದ ನನ್ನಂತಹ ನಿರ್ಭಾಗ್ಯೆಯರು ದೇಶದಲ್ಲೆಷ್ಟು ಜನರಿರುವರೊ ? ಅಯ್ಯೋ ದೇಶವೇ ! ಹಿಂದೂ ಸಮಾಜವೇ ! ವಿಧರ್ಮಿಗಳನ್ನು ಪಿಶಾಚಿಗಳೆಂದೂ ಪಶುಗಳೆಂದೂ ಬೈಯ್ಯುವ ಹಿಂದೂಗಳಲ್ಲಿ ಈ ಬಗೆಯಾಗಿರುವ ನರಪಿಶಾಚಿಗಳ ಅತ್ಯಾಚಾರಕ್ಕೆ ಬಲಿಯಾಗಿ ನನ್ನಂತೆ ಸಮಾಜದಿಂದ ತ್ಯಜಿಸಲ್ಪಟ್ಟವರೆಷ್ಟು ಜನರಿರುವರೋ ? ಅಯ್ಯೋ! ದೇವರೆ ಹಿಂದೂಗಳ ಕಣ್ದೆರೆಯ ಬಾರದೆ ?

ತಂದೆಯೂ ಕ್ರೂರನಾಗಿ ನನ್ನನ್ನು ತ್ಯಜಿಸಿ ಹೋದ್ದರಿಂದ ನನ್ನ ದುಃಖ ವು ಇಮ್ಮಡಿಯಾಯಿತು. ಏಕೆಂದರೆ ಆಗ ನನ್ನ ಸ್ಥಿತಿಯು ಬಹಳ ಕೆಟ್ಟಿತ್ತು. ಮೂರು ದಿನಗಳಿಂದ ಹಸಿದಿದ್ದೆನು, ಶೋಕ ಸಂತಪ್ತಳಾಗಿದ್ದೆನು. ಇದರ

ಮೇಲೆ ಬಸುರಿ. ಮೈಯಲ್ಲಿ ಆಯಾಸವು ಹೆಚ್ಚಿತು. ಒಂದು ಹೆಜ್ಜೆಯನ್ನೂ ಮುಂದಿಡಲಾರದವಳಾಗಿದ್ದೆನು. ಆದುದರಿಂದ ಯಾವುದಾದರೂ ನದಿಯಲ್ಲಾಗಲಿ ಕೆರೆಯಲ್ಲಾಗಲಿ ಬಿದ್ದು ಮೃತ್ಯುಮುಖಳಾಗಿ ಈ ಅಸಹನೀಯವಾದ ಜ್ವಾಲೆಯಿಂದ ಬಿಡುಗಡೆ ಹೊಂದಬೇಕೆಂದು ಆಸೆಯುಂಟಾಯಿತು. ಆದರೆ ಸಾಯುವುದಕ್ಕೆ ಧೈರ್ಯ ಬರಲಿಲ್ಲ. ಕೆರೆಯನ್ನು ನೋಡಿದ ಕೂಡಲೆ ಹೆದರಿಕೆಯಾಯಿತು, ಇನ್ನೂ ನನ್ನ ಹಣೇಲಿ ಏನು ಬರೆದಿತ್ತೊ?

ಕೊನೆಗೆ ಧೈರ್ಯಮಾಡಿ, ಆ ಪಾಪಿ ದೇಶವನ್ನು ಬಿಟ್ಟು ನೆಟ್ಟಗೆ ಬೊಂಬಾಯಿಗೆ ಬಂದು ಸೇರಿದೆ. ಅಲ್ಲಿಗೆ ಸೇರಿದಾಗ ರಾತ್ರಿ ಸಮಯ, ಸ್ಟೇಷನಿನಲ್ಲಿ ವಿಪರೀತ ಗದ್ದಲ. ಗಾಡಿಯಿಂದಿಳಿದವರೆಲ್ಲರೂ ಅವರವರ ಮನೆ ಕಡೆಗೆ ಹೊರಟರು. ಆದರೆ ನನಗೆ ಮನೆಯೆಲ್ಲಿ, ಬಾಗಿಲೆಲ್ಲಿ? ಅಂತೂ ಸ್ಟೇಷನು ಬಿಟ್ಟು ಹೊರಗೆ ಬಂದೆ. ಬಂದವಳು ಜನರು ವಿಶೇಷವಾಗಿ ಓಡಾಡುತ್ತಿದ್ದ ಕಡೆ ಹೊರಟೆನು. ಎಷ್ಟು ದೂರ ನಡೆದೆನೊ ಗೊತ್ತಾಗಲಿಲ್ಲ ಕೊನೆಗೆ ಆಯಾಸ ಹೆಚ್ಚಿತು. ಎಲ್ಲಿಯಾದರೂ ಕೂತುಕೊಳ್ಳಬೇಕೆಂದೆನಿಸಿತು. ಮುಂದೆ ಒಂದು ನಾಲ್ಕಂತಸ್ತಿನ ಮನೆ ಇತ್ತು. ಅದರಲ್ಲಿ ಮೇಲಿನಿಂದ ಸಂಗೀತವಾದ್ಯಗಳ ಧ್ವನಿಯು ಕೇಳಿ ಬರುತ್ತಿತ್ತು. ನನಗೆ ಆಗ ಗಾನವು ಬಹು ಮಧುರವಾಗಿ ಕಂಡಿತು. ನಾನು ನೆಟ್ಟಗೆ ಆ ಮನೆಯ ಬಾಗಿಲ ಹತ್ತಿರ ಹೋದೆನು. ಬಾಗಿಲು ತೆಗೆದಿತ್ತು. ಒಳಗೆ ಹೋದೆ. ಕೆಳಗಡೆ ಜನರ್‍ಯಾರೂ ಇರಲಿಲ್ಲ. ಅಲ್ಲಿ ಕೈಸಾಲೆಯಲ್ಲಿ ಸ್ವಲ್ಪ ಹೊತ್ತು ಕೂತು ಮಲಗಿದೆ. ಮಲಗಿದ ಕೂಡಲೆ ನಿದ್ರೆ ಬಂದುಬಿಟ್ಟಿತು!

ಆ ದಿನ ಬಂದಂಥ ನಿದ್ರೆ ನನಗೆ ಎಷ್ಟೋ ತಿಂಗಳುಗಳಿಂದ ಬಂದಿರಲಿಲ್ಲ. ಕೊನೆಗೆ ಕಣ್ತೆರೆದು ನೋಡುವಾಗ ನನ್ನ ಮುಖದ ಮೇಲೆ ಒಂದು ಕಿಟಕಿಯಿಂದ ಸೂರ್ಯ ಕಿರಣಗಳು ಬಿದ್ದಿವೆ ಇಬ್ಬರು ಮೂವರು ದಾಸಿಯರೊಡನೆ ಒಬ್ಬ ಮಧ್ಯ ವಯಸ್ಕಳಾದ ಸುಂದರಿಯು ನನ್ನನ್ನು ಬಹು ಆಶ್ಚರ್ಯದಿಂದ ನೋಡುತ್ತ ನಿಂತಿರುವಳು. ನಾನು ಕಣ್ತೆರೆದುದನ್ನು ನೋಡಿ ದಾಸಿಯರಲ್ಲೊಬ್ಬಳು "ಎಲ್ಲೋ ಕಳ್ಳತನ ಮಾಡೋಕೆ ಬಂದಿದ್ಲು, ಏನೂ ಸಿಕ್ಕಿಲ್ಲ, ಮಲಕ್ಕೊಂಬಿಟ್ಲು" ಎಂದಳು. 'ಕಳ್ಳತನ' ಎಂಬ ಶಬ್ದ ಕೇಳಿದ ಕೂಡಲೆ

ನಾನು ಅಳುವುದಕ್ಕಾರಂಭಿಸಿದೆ. ನಾನು ಅಳುವುದನ್ನು ನೋಡಿ ಯುವತಿಯು, ದಾಸಿಯರನ್ನು ಗದರಿಸಿ, ಕರುಣೆಯ ಸ್ವರದಲ್ಲಿ 'ನೀನು ಯಾರಮ್ಮಾ? ಯಾಕಿಲ್ಲಿಗೆ ಬಂದೇ?' ಎಂದು ಕೇಳಿದಳು. ನಾನು ಅಳುತ್ತ-ತಾಯಿಾ! ನಾನು ಯಾರೂ ಅಂತ ಹೇಳಲಿ? ನಾನೊಬ್ಬಳು ಪಾಪಿ!' ಏಂದೆನು. ಅವಳು ದೊಡ್ಡ ನಿಟ್ಟುಸಿರುಬಿಟ್ಟು 'ಬೊಂಬಾಯಿಯಲ್ಲಿ ನಿನ್ನವರಾರೂ ಇಲ್ಲವೆ?' ಎಂದಳು. ನಾನು 'ದೇವರನ್ನು ಬಿಟ್ಟು ನನಗೆ ಯಾರೂ ಇಲ್ಲವಮ್ಮ' ಎಂದೆನು. ಆಗವಳು 'ಒಳ್ಳೇದು ಇಲ್ಲಿ ನಿನ್ನವರ್ಯಾರಿಲ್ಲದಿದ್ದರೂ ನಾಸಿದ್ದೇನೆ ನಾನು ನಿನ್ನನ್ನು ಇಟ್ಟುಕೊಳ್ಳುತ್ತೇನೆ, ನನ್ನ ಹಿಂದೆ ಬಾ' ಎಂದು ಮುಂದೆ ಮುಂದೆ ಹೋದಳು. ನಾನು ಮೆಲ್ಲಮೆಲ್ಲನೆ ಅವಳ ಹಿಂದೆ ಮೇಲಕ್ಕೆ ಹತ್ತಿಹೋದೆನು. ಮಹಡಿಯ ಮೇಲೆ ಒಂದು ಒಳ್ಳೇ ಚೆನ್ನಾಗಿ ಅಲಂಕರಿಸಲ್ಪಟ್ಟಿದ್ದ ಕೋಣೆಯಲ್ಲಿರು, ನಿನ್ನ ಸೇವೆಗೋಸ್ಕರ ಇಬ್ಬರು ದಾಸಿಯರನ್ನು ಕಳುಹಿಸುತ್ತೇನೆ. ಇದು ನಿನ್ನ ಮನೆ ಅಂತ ತಿಳಕೊಂಡು ಸುಖವಾಗಿರು. ನಿನಗೆ ಸ್ವಲ್ಪವಾದರೂ ಕಷ್ಟವಾಗದು' ಎಂದಳು.

ನಾನು ಕಣ್ಣೀರು ಸುರಿಸುತ್ತ, ಮೇಲೆ ಹೊದ್ದಿದ್ದ ಹೊದಿಕೆಯನ್ನು ತೆಗೆದು—'ತಾಯಿಾ! ನಿಮ್ಮ ಸಂತಾನ ಸಾವಿರವಾಗಲಿ. ಇವತ್ತು ನನ್ನಂಥ ಅನಾಥಳಿಗೆ ಮಾಡಿದ ಉಪಕಾರಕ್ಕೆ ತಕ್ಕ ಫಲವನ್ನು ದೇವರು ನಿಮಗೆ ಬೇಗ ಅನುಗ್ರಹಿಸುವನು' ಎಂದೆನು. ಮೇಲಿನ ಹೊದಿಕೆಯನುನ್ನು ತೆಗೆದನಂತರ ವನ್ನ ಉದರವು ದಪ್ಪವಾಗಿದ್ದುದನ್ನು ನೋಡಿ. 'ನೀನು ಬಸುರೇನಮ್ಮಾ?' ಎಂದು ಕೇಳಿದಳು, ನಾನು ಕಂಬನಿಗಳನ್ನುದರಿಸುತ್ತ 'ಹೌದು' ಎಂದೆನು. ಅದಕ್ಕವಳು 'ವಿಧವೆಯೇನು' ಎಂದಳು. ನಾದು 'ಹೌದು' ಎಂದೆನು. ಆಗವಳು ನಿಟ್ಟುಸಿರುಬಿಟ್ಟು 'ಸರಿ, ತಿಳಿಯಿತು. ಇನ್ನು ನೀನು ಹೇಳಬೇಕಾದ ಆವಶ್ಯಕತೆಯಿಲ್ಲ. ಇನ್ನೂ ಎಷ್ಟು ಜನ ಭಗಿನಿಯರು ನಿನ್ನಂತೆ ಅತ್ಯಾಚಾರಿಗಳ ಬಲೆಗೆ ಸಿಕ್ಕಿ ಬಳಲುತ್ತ ಹಿಂದೂಧರ್ಮದಿಂದ ಬಹಿಷ್ಕೃತರಾಗಿರುವರೊ, ದೇವರೇ ಬಲ್ಲನು. ಇಯ್ಯೋ ಹಿಂದೂದೇಶವೇ! ನಿನ್ನ ಸತ್ಯನಾಶವಾಗತ್ತಿರುವುದಲ್ಲಲ್ಲಿ! ಅತ್ಯಾಚಾರಿಗಳನ್ನು ದಂಡಿಸದೇ ಅಬಲೆಯರನ್ನು ಸಂಕಷ್ಟಗಳಿಗೀಡುಮಾಡುವ ಧರ್ಮವು ಧರ್ಮವೆ?' ಎಂದಳು.

ನಾನು ಸುಖವಾಗಿ ವಾಸಿಸಲಾರಂಭಿಸಿದ ಮನೆಯು ಬೊಂಬಾಯಿಯ ಸುಪ್ರಸಿದ್ಧ ಶ್ರೀಮಂತಳಾದ ರಾಧಾಸಾನಿಯ ಮನೆಯಾಗಿತ್ತು. ಅದು ವೇಶ್ಯೆಯ ಮನೆಯೆಂದು ತಿಳಿದ ಮೇಲೆ ನಾನು ನನ್ನ ಹಾಳು ಹಣೇಬರೆಹಕ್ಕಾಗಿ ಅತ್ತೆನು. ಆದರೆ ಆ ಅಳುವು ನಾಲ್ಕಾರು ದಿನಗಳಲ್ಲಿ ಮಾಯವಾಯಿತು. ಏಕೆಂದರೆ ರಾಧೆಯು ನನ್ನನ್ನು ವಿಶೇಷ ಏಕಾಂತದಲ್ಲಿಟ್ಟಿದ್ದಳು. ಮತ್ತು ನನ್ನೊಂದಿಗೆ ಇಬ್ಬರು ದಾಸಿಯರನ್ನು ಬಿಟ್ಟಿದ್ದಳು. ನನ್ನ ಊಟ ಮಲಗುವುದು, ಎಲ್ಲ ಬೇರೆಯೆ ಆಗಿತ್ತು. ನಾನು ವೇಶ್ಯೆಯ ಮನೆಯಲ್ಲಿದ್ದೇನೆಂದು ನನಗೆ ಗೊತ್ತಾಗುವಂತಿರಲಿಲ್ಲ. ನಿತ್ಯವೂ ರಾಮಾಯಣ ಮತ್ತು ಭಗವದ್ಗೀತೆಗಳು ಓದುವುದಕ್ಕೆ ದೊರೆಯುತ್ತಿದ್ದವು. ಒಟ್ಟಿನಲ್ಲಿ ನನಗಾವ ಕಷ್ಟವೂ ಇಲ್ಲದೇ, ನನ್ನ ಮನಸ್ಸಿಗೆ ತೋರಿದಂತೆ ಸುಖವಾಗಿದ್ದೆನು. ರಾಧೆಯೂ ನನ್ನೊಂಡಿಗೆ ಎಂದೂ ಅನುಚಿತವಾಗಿ ಮಾತಾಡಲಿಲ್ಲ. ಅವಳು ಆಗಿಂದಾಗ್ಗೆ ನನಗೆ ಧರ್ಮೋಪದೇಶ ಮಾಡುತ್ತಿದ್ದಳು. ಅವಳು ಓದು ಬರೆಹ ಬಲ್ಲವಳು. ವಿಶೇಷವಾಗಿ ಓದಿದ ವಿದುಷಿಯಾಗಿದ್ದಳು. ಈಗಿನ ಕಾಲದ ವರ್ತಮಾನ ಪತ್ರಿಕೆಗಳನ್ನೆಲ್ಲ ಅವಳು ತರಿಸುತ್ತಿದ್ದಳು. ತಾನು ಓದಿದನಂತರ ಅವುಗಳನ್ನೆಲ್ಲ ನನ್ನ ಕಡೆಗೆ ಕಳುಹಿಸುತ್ತಿದ್ದಳು. ಇವುಗಳಲ್ಲದೆ ಅವಳ ಮನೆಯಲ್ಲಿ ಒಂದು ದೊಡ್ಡ ಪುಸ್ತಕ ಭಾಂಡಾರವೂ ಇದ್ದಿತು. ಅವುಗಳಲ್ಲಿ ಕೆಲವನ್ನಾರಿಸಿ ನನ್ನ ಮುಂದೆ ಓದುತ್ತಿದ್ದಳು. ನಾನೂ ಓದಬೇಕೆಂದು ಹೇಳುತ್ತಿದ್ದಳು. ಅವಳು ಧರ್ಮಮಾರ್ಗದಲ್ಲಿ ವಿಶೇಷ ಭಕ್ತಿಯುಳ್ಳವಳಾಗಿದ್ದಳು. ಆದರಿಂದ ಇವಳು ವೇಶ್ಯೆ ಹೇಗಾದಳೆಂದು ನನಗೇ ಆಶ್ಚರ್ಯವಾಗುತ್ತಿತ್ತು!

ರಾಧೆಗೆ ೫ ವರ್ಷದ ಒಬ್ಬ ಸುಂದರಳಾದ ಮಗಳಿದ್ದಳು. ಅವಳ ಹೆಸರು ಕಮಲೆ. ನಾನೂ ಒಂದು ಹೆಣ್ಣು ಮಗುವನ್ನು ಹೆತ್ತಿದ್ದೆನು. ಅದಕ್ಕೆ ಲೀಲಾ ಎಂದು ಹೆಸರಿಟ್ಟಿದ್ದೆನು. ಇಬ್ಬರು ಹುಡುಗಿಯರೂ ಸುಂದರಿಯರು, ಅಕ್ಕತಂಗಿಯರ ಹಾಗೆ ಕಾಣಿಸುತ್ತಿದ್ದರು. ಇಬ್ಬರೂ ಒಟ್ಟಿಗೆ ಆಡುತ್ತ ಬೆಳೆದರು. ಕಮಲೆಯು ದೊಡ್ಡ ವಿದುಷಿಯಾಗಬೇಕೆಂತಲೂ ತನ್ನ ವೇಶ್ಯಾವೃತ್ತಿಯ ಕಲಂಕವನ್ನು ಹೋಗಡಿಸಬೇಕೆಂತಲೂ ರಾಧೆಗೆ ಆಸೆ. ನಾನು ಕಮಲೆಗೂ ಲೀಲೆಗೂ ಒಳ್ಳೊಳ್ಳೆಯ ಕಥೆಗಳನ್ನು ಹೇಳುತ್ತ, ರಾಮಾಯಣ ಪದ್ಯಗಳನ್ನೂ ಜೈಮಿನಿ ಪದ್ಯಗಳನ್ನೂ ಕಲಿಸುತ್ತ, ನಾನೇ ಊಟ ತಿಂಡಿಗ

ಳನ್ನು ಕೊಟ್ಟು ಪಾಲಿಸಲಾರಂಭಿಸಿದೆನು. ಅವಳು ನನ್ನನ್ನು "ಚಿಕ್ಕಮ್ಮಾ" ಎಂದು ಮುದ್ದಾಗಿ ಕರೆಯುತ್ತಿದ್ದಳು. ಅದನ್ನು ನೋಡಿ ಲೀಲೆಯೂ ನನ್ನನ್ನು ಅದೇ ಹೆಸರಿನಿಂದ ಕರೆಯಲಾರಂಭಿಸಿದಳು.

ರಾಧೆಯ ಮನೆಯಲ್ಲಿ ನಾನು ಬಹು ಆನಂದವಾಗಿದ್ದೆನು. ಆದರೆ ನನ್ನ ಹೃದಯದಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯು, ಹೊಗೆಯಾಡುತ್ತಿದ್ದ ಚಿತೆಯು, ಅಶಾಂತಿಯ ವೇದನೆಯು ನನ್ನ ಆನಂದವನ್ನು ಆಗಿಂದಾಗ ಕುಗ್ಗಿಸುತ್ತಿದ್ದವು. ಅಯ್ಯೋ! ನಾನೆಂಥಾ ಶ್ರೇಷ್ಠ ಮನೆತನದವಳು, ಎಷ್ಟು ದೊಡ್ಡವರ ಸೊಸೆ. ಅಯ್ಯೋ! ಇಂದು ನಾನು ಎಂಥಾ ದುಸ್ಥಿತಿಯಲ್ಲಿರುವೆನು. ಎಂಥ ಭಯಾನಕ ವೇದನೆಗೊಳಗಾಗಿರುವೆನು ? ಎಂಥಾ ನರಕಯಾತನೆಯನ್ನನುಭವಿಸುತ್ತಿರುವೆನು? ಇದೆಲ್ಲ ಏತಕ್ಕಾಗಿ? ಇಷ್ಟಕ್ಕೋಸ್ಕರ-ನಾನು ಹೆಂಗಸು-ಅಬಲೆ-ವಿಧವೆ-ಆಗಿರುವೆನು. ಅದಕ್ಕೋಸ್ಕರ ಈ ಯಾತನೆ! ಪಾಪಿಯೂ ಕ್ರೂರನೂ, ಕಾಮಿಯೂ ಆದ ಆ ಮಾಧವನು ಮೋಜು ಮಾಡುತ್ತ ನಲಿಯುತ್ತಿರುವನು. ಅವನಿಗೆ ತಂದೆ ತಾಯಿ, ಬಂಧು ಬಳಗ, ಸಮಾಜ-ಮೊದಲಾಗಿ ಯಾರ ಭಯವೂ ಇಲ್ಲ. ಏಕೆಂದರೆ ಅವನು ಗಂಡಸು, ಸಬಲನು; ಆದುದರಿಂದ ಸ್ತ್ರೀಯರ ಸತೀತ್ವವನ್ನು ಹರಣ ಮಾಡುತ್ತ, ಅವನು ಬಲಪ್ರಕಾಶಪಡಿಸುತ್ತ ತಿರುಗುತ್ತಿರಬೇಕು. ಆದರೆ ಅವನ ಪಾಪದ ದಂಡನೆಗೆ ನಿರ್ಭಾಗ್ಯಳಾದ ಸ್ತ್ರೀಯು ಭಾಗಿಯಾಗಬೇಕು! ಅಯ್ಯೋ! ಎಂಥಾ ಅನ್ಯಾಯ! ನಾನೇನಾದರೂ ಅವನನ್ನು ಸೆಳೆದಿದ್ದೆನೆ? ಅದೂ ಹೋಗಲಿ, ಎಂದಾದರೂ ಪಾಪದೃಷ್ಟಿಯಿಂದ ನೋಡಿದ್ದೇನೆ ? ಏನಾದರೂ ಎರಡು ಮಾತನ್ನಾದರೂ ಅವನೊಂದಿಗೆ ಆಡಿದ್ದೆನೆ ? ಯಾವುದೂ ಇಲ್ಲ. ನಾನು ಕೇವಲ ನಿರಪರಾಧಿ. ನಿರ್ದೋಷಿಯಾಗಿದ್ದೆನು. ಅದಕ್ಕೆ ಪುರಸ್ಕಾರ ರೂಪವಾಗಿ ನಾನು ದೇಶ, ಊರು, ಮನೆ ಬಾಗಿಲು, ತಂದೆ ತಾಯಿ, ಅತ್ತೆ ಮಾವ, ಬಂಧು ಬಳಗದವರೆಲ್ಲರಿಗೂ ತ್ಯಾಜ್ಯಳಾಗಿದ್ದೇನೆ. ಅಯ್ಯೋ ! ಈ ರಾಧೆಯು, ದಯಾಮಯಿಯಾದ ರಾಧೆಯು, ಇಲ್ಲದಿದ್ದರೆ, ನನ್ನ ಗತಿಯೇನಾಗುತ್ತಿತ್ತು ? ಎಲ್ಲಿ ಅಲೆದಾಡಬೇಕಾಗಿತ್ತು, ಆಗ ನನ್ನ ಅವಸ್ಥೆಯೇನಾಗುತ್ತಿತ್ತು. ಪರಮಾತ್ಮನೆ? ನನ್ನ ಮೇಲೆ ಮೊದಲಿನಿಂದಲೂ ಪಾಪದ ದೃಷ್ಟಿಯನ್ನು ಬೀರಿದ, ನನ್ನಲ್ಲಿ ಪಾಪ

ವಾಸನೆಯ ಇಚ್ಛೆಯನ್ನು ತೀರಿಸಿಕೊಳ್ಳಲು ಅನೇಕ ಸುಳ್ಳು ಪ್ರೇಮ ವಚನ ಗಳಿಂದ ಒಲಿಸಿಕೊಳ್ಳಲೆತ್ನಿಸಿ ಕೊನೆಗೆ ಅಂಜಿಕೆಯನ್ನು ತೋರಿಸಿ, ಬಲವನ್ನು ಪ್ರಯೋಗಿಸಿ, ಪಾಶವಿಕ ಅತ್ಯಾಚಾರದ ಮೂಲಕ ತನ್ನ ಕಾಮವನ್ನು ತೃಪ್ತಿ ಗೊಳಿಸಿಕೊಂಡ-ಆ ಮಾಧವನು ಇಂದಿಗೂ ಸ್ವತಂತ್ರನಾಗಿ ಧೀರನಾಗಿ ಸ್ತ್ರೀ ಸಮಾಜದ ವಕ್ಷ ಸ್ಥಳದಲ್ಲಿ ಪಾದಪ್ರಹಾರ ಮಾಡುತ್ತಿರುವನಲ್ಲ! ಇದು ನ್ಯಾಯವೆ, ನೀತಿಯೆ? ಸ್ತ್ರೀಯರೆಲ್ಲರಿಗೂ "ದುರ್ಬಲೋ ದೈವ ಘಾತಕಃ" ಎಂಬ ನಿಯಮವೇ? ಅಯ್ಯೋ, ಆ ದಿನದ ವಿಷಯವನ್ನು ನೆನಸಿಕೊಂಡರೆ ಈಗಲೂ ಹೃದಯವು ಒಡೆದು ಹೋಗುವುದಲ್ಲ! ಪಾಪಿಯಾದ ನನ್ನ ತಂದೆಯು ನನ್ನನ್ನು ಒದ್ದು ಹೊಡೆದು ಗಾಡಿಯಲ್ಲಿ ಕೂಡಿಸಿದಾಗ ಆ ಚಂಡಾಲನಾದ ಮಾಧವನು ತನ್ನ ಸ್ನೇಹಿತರೊಂದಿಗೆ ನನ್ನನ್ನು ನೋಡಿ ನಗುತ್ತ ನಿಂತಿದ್ದನಲ್ಲ! ಏಕೆ? ಹಿಂದೂ ಧರ್ಮವು ತನ್ನನ್ನು ಶಿಕ್ಷಿಸಲಾರದೆಂದೊ? ನಾನೇ ಅವನನ್ನು ಪಾಪಾಚರಣೆಗೆ ಸೆಳೆದಿದ್ದರೂ ಅವನೇನೂ ಪಾಪಮಾಡಲಿಲ್ಲವೆ? ನಾನೆಷ್ಟು ಪಾಪಿಯೊ ಅವನೂ ಅಷ್ಟೇ ಪಾಪಿ! ಹೀಗಿದ್ದೂ ಅವನು ಸ್ವತಂತ್ರನಾಗಿರಬೇಕು. ನಾನು ಬೀದಿ ಬೀದಿ ಅಲೆಯುತ್ತಿರಬೇಕೆ! ಇಂಥಾ ದೇಶಕ್ಕೂ ಇಂಥಾ ಸಮಾಜಕ್ಕೂ, ಇಂಥಾ ಧರ್ಮಕ್ಕೂ ಧಿಕ್ಕಾರ!-ಧಿಕ್ಕಾರ!-ಧಿಕ್ಕಾರ ವಿರಲಿ. ಇದು ವಿಶೇಷ ಪಕ್ಷಪಾತ ಪೂರ್ಣವಾದ ಅತ್ಯಾಚಾರ-ಹೇ ಪರ ಮಾತ್ಮನ್!"

ನಾನು ಹೀಗೆ ಆಲೋಚಿಸುತ್ತಿರುವಾಗ ರಾಧೆಯು ನನ್ನ ಕೋಣೆಯನ್ನು ಪ್ರವೇಶಿಸಿದಳು. ಕ್ರೋಧ ಮತ್ತು ಗ್ಲಾನಿಯುಕ್ತವಾದ ನನ್ನ ಮುಖವನ್ನು ನೋಡಿ-"ಏಕೆ ಭಾನುಮತಿ? ಇವತ್ತು ಇಷ್ಟೇಕೆ ಉದ್ವಿಗ್ನಳಾಗಿರುವೆ?" ಎಂದು ಕೇಳಿದಳು.

ನಾನು ದುಃಖಪೂರ್ಣವಾದ ಕಂಠದಿಂದ-"ರಾಧಕ್ಕ! ನನ್ನನ್ನು ಭಾನು ಮತಿಯೆಂದು ಕರೆಯಬೇಡ. ನಾನು ಆ ಹೆಸರಿಗೆ ಇವತ್ತೇ ತಿಲೋದಕ ವನ್ನು ಕೊಟ್ಟಿರುವೆನು."

ರಾಧೆ—"ಏಕೆ?"

ನಾನು—"ನಿನಗಿನ್ನೂ ತಿಳಿಯಲಿಲ್ಲವೆ? ನನ್ನನ್ನು ತಾಯಿ ತಂದೆ ತ್ಯಜಿಸಿದರು, ಆತ್ಮೀಯರು ಬಹಿಷ್ಕರಿಸಿದರು, ಬಂಧು ಬಳಗದವರೆಲ್ಲರೂ

ತ್ಯಜಿಸಿದರು. ದೇಶವೂ ತ್ಯಜಿಸಿತು. ಸಮಾಜವೂ ತ್ಯಜಿಸಿತು, ಧರ್ಮ ಕರ್ಮಗಳೂ ತ್ಯಜಿಸಿದವು, ಕಾಯಿದೆ-ಕಾನೂನೂ ತ್ಯಜಿಸಿತು. ಇನ್ನು ಆ ಹೆಸರೇಕೆ? ನಾನು ಬಿಡುವುದಕ್ಕಿರುವುದು ಹೆಸರೊಂದೇ! ಭಾನುಮತಿಯು ವಿಧವೆಯಾಗಿದ್ದಳು, ಗುಣಹೀನಳಾಗಿದ್ದಳು, ವ್ಯಭಿಚಾರಿಣಿಯಾಗಿದ್ದಳು, ನಾಚಿಕೆಯಿಲ್ಲದವಳಾಗಿದ್ದಳು, ಅಸತಿಯಾಗಿದ್ದಳು, ಕುಲಟೆಯಾಗಿದ್ದಳು, ವೇಶ್ಯೆಯಾಗಿದ್ದಳು. ಈಗ ನಾನು ಕೇವಲ ದೀನ ದುಃಖಿಗಳಿಗೆ, ಅನಾಥ ವಿಧವೆಯರಿಗೆ ನಿಜವಾಗಿ ಸಹಾಯಕಳಾಗಿರುವ "**ಶಾಂತಿ**" ಯಾಗಿರುವೆನು. ನನ್ನನ್ನು ಶಾಂತಿಯೆಂದು ಕರೆ. ಇನ್ನು ಆ ಪಾಪಿಯ ಹೆಸರನ್ನುಚ್ಚರಿಸ ಬೇಡ."

ರಾಧೆಯು ಆಶ್ಚರ್ಯದಿಂದ-"ಒಳ್ಳೆಯದು, ದೇವಿ! ಶಾಂತಿ, ನಿನ್ನ ಹೇಳಿಕೆಗೆ ನನ್ನ ಸಹಾನುಭೂತಿಯಿರುವುದು." ಎಂದಳು.

ನಾನು ಉಚ್ಚಸ್ವರದಲ್ಲಿ—"ಏನು! ನಿಜವಾಗಿ ಸಹಾನುಭೂತಿಯಿ ದೆಯೇ? ಎಂದೆನು. ಅವಳು-"ಹೌದು, ಹೌದು, ನಿಜವಾಗಿಯೂ! ನಾನೂ ನಿನ್ನ ಹಾಗೆ ಸಮಾಜದಿಂದ ಪರಿತ್ಯಕ್ತಳಾದವಳು," ಎಂದಳು.

ನನಗೆ ಆಶ್ಚರ್ಯವಾಗಿ—'ಏನು? ನೀನೂ ಸಮಾಜದಿಂದ ಪರಿತ್ಯ ಕ್ತಳೆ? ಅದು ಹೇಗೆ?' ಎಂದೆನು. ಆಗ ರಾಧೆಯು—'ಹಾಗಾದರೆ, ಕೇಳು! ಇಂದಿಗೆ ೨೦ ವರ್ಷಗಳ ಹಿಂದಿನ ಮಾತು. ನಾನು ವಿಧವೆಯಾಗಿದ್ದೆ. ನಮ್ಮ ಣ್ಣನ ಮನೆ ಪುರೋಹಿತನಾದ ಬ್ರಾಹ್ಮಣನೊಬ್ಬನು ನನ್ನ ಸತೀತ್ವವನ್ನು ನಾಶಗೊಳಿಸಿದನು. ನಾನು ಗರ್ಭವತಿಯಾದೆನು. ಆಗ ಪಾಪಿಯಾದ ನನ್ನ ಅಣ್ಣನು ನನ್ನನ್ನು ಈ ಊರಿಗೆ ಕರೆತಂದು ಇಲ್ಲಿ ಬಿಟ್ಟುಹೋದನು. ದೈವವಶಾತ್ ಲಕ್ಷ್ಮೀಪ್ರಸಾದಿ ವೇಶ್ಯೆಯು ನನ್ನನ್ನು ಕಂಡಳು. ನಾನು ಸುಂದ ರಿಯೂ ಯುವತಿಯೂ ಆಗಿದ್ದುದನ್ನು ನೋಡಿ ತನ್ನ ಜತೆಯಲ್ಲಿ ಈ ಮನೆಗೆ ಕರೆತಂದು, ನನಗೆ ಹಾಡುವುದಕ್ಕೂ ಸಂಗೀತ ವಾದ್ಯಗಳನ್ನು ನುಡಿಸುವು ದಕ್ಕೂ ಕಲಿಸಿದಳು. ದೇವರ ದಯದಿಂದ ನಾನು ಗಾಯನವಾದನ ಕಲೆ ಯಲ್ಲಿ ಪ್ರವೀಣಳಾದೆನು. ಅಲ್ಲಲ್ಲಿ ನನ್ನ ಸಂಗೀತ ಕಚೇರಿಗಳಾಗಲಾರಂಭಿ ಸಿದವು. ಆದರಿಂದ ಅವಳ ವರಮಾನವು ಹೆಚ್ಚಿತು. ಆಗವಳು ನನ್ನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸಲಾರಂಭಿಸಿದಳು. ಕೊನೆಗೆ

ಸಾಯುವಾಗ ತನ್ನ ಆಸ್ತಿಪಾಸ್ತಿಯೆಲ್ಲವನ್ನೂ ನನಗೆ ಕೊಟ್ಟು ಹೋದಳು. ನಾನೂ ಧನ ಸಂಪಾದನೆ ಮಾಡಿದೆನು. ಆದರೆ ಅದೆಲ್ಲವನ್ನೂ ಕೇವಲ ಸಂಗೀತಕಲೆಯ ಸಹಾಯದಿಂದ ಸಂಗ್ರಹಿಸಿರುವೆನು. ಇಬ್ಬರು ಮೂವರು ಯುವಕರು ನನ್ನನ್ನು ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಂಡಿದ್ದರು. ಕೊನೆಗೆ ಅವರ ಹೃದಯವನ್ನು ತಿಳಿದು ಅವರನ್ನೋಡಿಸಿದೆನು. ಇದು ನನ್ನ ಸಂಕ್ಷಿಪ್ತ ಜೀವನ ಚರಿತ್ರೆ. ಹೀಗಿರುವಾಗ ನಿನ್ನೊಂದಿಗೆ ಸಹಾನುಭೂತಿಯನ್ನು ತೋರಿಸಲಾರೆನೆ?' ಎಂದಳು. ನಾನು ಆಶ್ಚರ್ಯದಿಂದ 'ಅಕ್ಕಾ ನಿಜವಾಗಿಯೂ ನಿನ್ನ ಕಥೆಯು ವಿಚಿತ್ರವೂ ದುಃಖಪೂರ್ಣವೂ ಆಗಿರುವುದು. ಆದುದರಿಂದ ಈಗ ನಾನು ನನ್ನ ವಿಚಾರವನ್ನು ಪುಷ್ಟೀಕರಿಸುವೆನು. ನಾನು ಪುರುಷರ ಸಮಾಜವನ್ನು ತಿರಸ್ಕರಿಸುವೆನು ಮತ್ತು ನನ್ನ ಅನಾಥ ಭಗಿನೀ ಬಂಧುಗಳ ಉದ್ಧಾರವನ್ನು ಮಾಡಬೇಕೆಂದಪೇಕ್ಷಿಸುವೆನು, ಹೇಳು, ನೀನು ನನಗೆ ಸಹಾಯ ಮಾಡುತ್ತೀಯೊ?' ಎಂದು ಕೇಳಿದೆನು. ಅವಳು—ಓಹೊ, ಅಗತ್ಯವಾಗಿ' ಎಂದಳು. ನಾನು—'ಒಳ್ಳೆಯದು, ಹಾಗಾದರೆ ನೀನು ಸಹಾಯ ಮಾಡುವುದಕ್ಕೆ ಸಿದ್ಧಳಾಗಿದ್ದರೆ, ತಡಮಾಡಬೇಡ. ಇಂದಿನಿಂದ ವೇಶ್ಯಾವೃತ್ತಿಯನ್ನು ಬಿಟ್ಟುಬಿಡು. ದಳ್ಳಾಳಿಗಳೂ ವ್ಯಭಿಚಾರಿಗಳೂ ನಾಯಿಗಳೆಂದು ತಿಳಿ. ರಾಧೆಯು ಸತ್ತಳು, ಈಗ ನೀನು **ಸುಮತಿ** ಆಗಿರುವೆ ಎಂದು ತಿಳಿ. ನೀನು ಪುರುಷರ ಮೂಲಕ ಸಂಗ್ರಹಿಸಿರುವ ಈ ಐಶ್ವರ್ಯವನ್ನೆಲ್ಲ ಆ ಪುರುಷರ ಮೂಗು ಕುಯ್ಯುವುದಕ್ಕೆ ಉಪಯೋಗಿಸು. ಇನ್ನು ತಡಮಾಡಬೇಡ. ನನ್ನ ಹೃದಯವು ದುಃಖದಿಂದ ಬೆಂದು ಹೋಗುತ್ತಿರುವದು. ನೀನು ಈಗ ಮಾಡುತ್ತಿರುವುದು ಪಾಪಕಾರ್ಯವಲ್ಲವಾದರೆ ನೀನು ಸಮಾಜಚ್ಯುತಳಾಗಿ ವೇಶ್ಯೆ ಎಂದೇಕೆ ಅನ್ನಿಸಿಕೊಳ್ಳುತ್ತಿದ್ದೆ? ಆ ಪುರುಷರು ನಿನ್ನೊಂದಿಗೆ ಪುಣ್ಯಕಾರ್ಯವನ್ನು ಮಾಡಲು ಬಂದು ಮೋಜು ಮಾಡುವರೇನು? ಇಂಥಾ ಜೀವನಕ್ಕೆ ಧಿಕ್ಕಾರವಿರಲಿ!' ಎಂದೆನು.

ಆಗವಳು—'ನಾನು ನಿನ್ನ ಅಪ್ಪಣೆಯಂತೆ ಇಂದಿನಿಂದ ಎಲ್ಲ ಕಾರ್ಯಗಳನ್ನು ಮಾಡುವೆನು. ಆದರೆ ನೀನು ಈಗೇನು ಮಾಡಬೇಕೆಂದಿರುವೆ?' ಎಂದಳು. ನಾನು ಗರ್ಜಿಸುತ್ತ—'ನಾನೇನು ಮಾಡಬೇಕೆಂದಿರುವೆನೆಂದು ನಿನಿಗಿನ್ನೂ ತಿಳಿಯಲಿಲ್ಲವೆ! ನಾನು ಒಂದು ಅನಾಥಾಲಯವನ್ನೂ ಒಂದು

ವಿಧವಾಶ್ರಮವನ್ನೂ ಸ್ಥಾಪಿಸಲಪೇಕ್ಷಿಸುವೆನು. ಅದರಲ್ಲಿ ಮುಖ್ಯವಾಗಿ ನಿರ್ಭಾಗ್ಯೆಯರಾದ ವಿಧವೆಯರಿಗೂ, ಅನಾಥ ಬಾಲಿಕೆಯರಿಗೂ ಎಲ್ಲ ಬಗೆಯ ಶಿಕ್ಷಣ ಕೊಡುವೆನು. ಆದರೆ ಅದರಲ್ಲಿ ಒಬ್ಬ ಗಂಡಸನ್ನೂ ಸೇರಿಸುವುದಿಲ್ಲ. ಸ್ತ್ರೀಯರಾಗಿದ್ದರೆ ಮಾತ್ರ, ಅವರು ಹಿಂದುಗಳಾಗಲಿ, ಕ್ರೈಸ್ತರಾಗಲಿ, ಪಾರ್ಸಿಯವರಾಗಲಿ; ಯಾರೇ ಆಗಿರಲಿ, ಅವರನ್ನು ಮಾತ್ರ ಸೇರಿಸುವೆನು. ಅವರು ಸ್ವತಂತ್ರ ಜೀವಿಗಳಾಗುವಂತೆ ಶಿಕ್ಷಣವನ್ನು ಕೊಟ್ಟು, ಮುಂದೆ ಅವರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಡುವೆನು. ಈ ಬಗೆಯಾಗಿ ಉಚ್ಚ ಶಿಕ್ಷಣದ ಮೂಲಕ ದೇಶದ ಅಧಿಕಾಂಶ ನಿರ್ಭಾಗ್ಯರಾದ ಸ್ತ್ರೀಯರನ್ನು ಉದ್ಧಾರ ಮಾಡುವ ವ್ರತವನ್ನು ಕೈಕೊಳ್ಳಬೇಕೆಂದಿರುವೆನು."-ಎಂದೆನು.

— ೪ —

ಭಗವಂತನ ಅಪಾರವಾದ ಅನುಗ್ರಹದಿಂದ ಅನಾಥಾಲಯವೂ ವಿಧವಾಶ್ರಮವೂ ಸ್ಥಾಪಿತವಾದವು ನೂರಾರು ವಿಧವೆಯರೂ ಬಾಲಿಕೆಯರೂ ನನ್ನ ಸಂಸ್ಥೆಗೆ ಬಂದು ಸೇರಿದರು. ಅವರ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಸಂಬಳವನ್ನು ಕೊಟ್ಟು ಸುಶಿಕ್ಷಿತೆಯರಾದ ಅಧ್ಯಾಪಿಕೆ ಮಹಿಳೆಯರನ್ನು ನೇಮಿಸಿದೆನು. ಇನ್ನೇನಾಗಬೇಕು? ೪-೫ ವರ್ಷಗಳಲ್ಲಿ ಅನಾಥೆಯರೂ ನಿರ್ಭಾಗ್ಯೆಯರೂ ಆಗಿದ್ದ ಸ್ತ್ರೀಯರು ಶಿಲ್ಪಕಾರಿಗಳೂ ಚಿತ್ರಕಾರಿಣಿಯರೂ ಅಧ್ಯಾಪಿಕೆಯರೂ ವೈದ್ಯೆಯರೂ ಆಗಿ ಸುಪ್ರಸಿದ್ಧರಾದರು. ಅವರ ಪ್ರಶಂಸೆಯಿಂದ ವರ್ತಮಾನ ಪತ್ರಿಕೆಗಳ ಕಲಮುಗಳು ತುಂಬಲಾರಂಭಿಸಿದವು. ನನ್ನ ಇಚ್ಛೆಯು ನೆರವೇರಿತು. ನನ್ನ ಸಂಸ್ಥೆಗಳಲ್ಲಿ ಪುರುಷ ಸಮಾಜದ ಬಹಿಷ್ಕಾರವು ಪ್ರತ್ಯಕ್ಷ ರೂಪವನ್ನು ತಳೆಯಿತು. ಕಮಲೆಯೂ ಲೀಲೆಯೂ ಈಗ ಎಮ್. ಎ. ತರಗತಿಯಲ್ಲಿ ಓದುತ್ತಿರುವರು. ನನ್ನ ಸಂಸ್ಥೆಗಳು ಈಗ ಚೆನ್ನಾಗಿ ನಡೆಯುತ್ತಿರುವವು. ಸಂಕಷ್ಟಗಳೆಲ್ಲ ದೂರವಾದವು. ಈಗ ಮುಂಬೈ ಪ್ರಾಂತದಲ್ಲಿ-ಅಷ್ಟೇಕೆ-ಸಮಗ್ರ ಭಾರತ ವರ್ಷದಲ್ಲಿ-ನಮ್ಮ ಸಂಸ್ಥೆಗಳ ಕೀರ್ತಿಯು ಹಬ್ಬಿತು.

ನನ್ನ ಸಂಸ್ಥೆಗಳಲ್ಲಿ ಪುರುಷರಿಗೆ ಪ್ರವೇಶವಿರಲಿಲ್ಲ. ಆದರೆ ಅದರ ಕೀರ್ತಿಯನ್ನು ಕೇಳಿ, ದೊಡ್ಡ ದೊಡ್ಡ ಧುರೀಣರೂ ಪತ್ರಸಂಪಾದಕರೂ ಮುಕ್ತಕಂಠದಿಂದ ಅದರ ಪ್ರಶಂಸೆ ಮಾಡುವುದನ್ನು ಕೇಳಿ, ಅನೇಕ ಪುರು

ಷರು ನನ್ನ ಸಂಸ್ಥೆಗಳನ್ನು ನೋಡುವುದಕ್ಕೂ ಅದರೊಳಗಿನ ವಿದುಷಿಯ ರೊಂದಿಗೆ ಸಂಭಾಷಿಸುವುದಕ್ಕೂ ಆತುರರಾಗಿ "ಇಂಟರ್‌ವ್ಯೂ" ಗಾಗಿ ನನ್ನ ಮೇಲೆ ಕಾಗದಗಳ ಮಳೆಯನ್ನು ಸುರಿಸಿದರು. ಕೆಲವರು "ನೀವು ದೇವತಾ ಸಮಾನರು, ನಿಮ್ಮ ದರ್ಶನಲಾಭದಿಂದ ನಮ್ಮ ಜನ್ಮವನ್ನು ಸಫಲಗೊಳಿಸು ವೆವು" ಮತ್ತೆ ಕೆಲವರು "ನೀವೆ ನಿಜವಾದ ದೇಶೋದ್ಧಾರಕರು, ನಾವು ನಿಮ್ಮನ್ನು ಸಂದರ್ಶಿಸಬೇಕೆಂದಿರುವೆವು" ಬೇರೆ ಕೆಲವರು "ನೀವು ಪುರುಷರ ನ್ನೇಕೆ ತಿರಸ್ಕರಿಸುವಿರಿ? ಪುರುಷರಿಲ್ಲದೆ ಸ್ತ್ರೀಯರು ಪ್ರಗತಿ ಮಾರ್ಗದಲ್ಲಿ ಮುಂದುವರಿಯಬಲ್ಲರೆ?" ಇತ್ಯಾದಿ-ಇತ್ಯಾದಿ-ಯಾಗಿ ಎಷ್ಟೊ ಬಾಯಿಗಳಿಂದ ಎಷ್ಟೋ ಮಾತುಗಳನ್ನು ಕೇಳಿ ಕೇಳಿ ನನಗೆ ಸಾಕಾಯಿತು. ನಾನು ಪುರು ಷರಿಗೋಸ್ಕರ ಕೆಲವು ನಿಯಮಗಳನ್ನು ಮಾಡಿದೆನು.

ಆ ನಿಯಮಗಳ ಸಾರಾಂಶವೇನೆಂದರೆ–ಸ್ತ್ರೀಯರ ವಿಚಾರವಾಗಿ ಪುರು ಷರ ಹೃದಯದಲ್ಲಿ ಯಾವಾಗಲೂ ಶ್ರದ್ಧೆಯೂ ಪವಿತ್ರ ಭಾವನೆಯೂ ಉತ್ಪನ್ನ ವಾಗಬೇಕು. ಸಮಾಜ ಸುಧಾರಣೆಯಲ್ಲಿ ಅವರ ಧ್ಯಾನವು ಆಕರ್ಷಿತವಾಗ ಬೇಕು. ಮತ್ತು ಪ್ರಥಮ ಬಾರಿಯಾಗಿ ಬರುವ ಪುರುಷರೆಲ್ಲರು ತಮ್ಮ ಪೂರ್ಣಪರಿಚಯವನ್ನೂ, ಉದ್ಯೋಗವನ್ನೂ ವಿಳಾಸವನ್ನೂ ಮನೆತನದ ವಿಚಾರಗಳನ್ನೂ ತಿಳಿಸಿದನಂತರ, ಅದನ್ನು ನೋಡಿ ಆಲೋಚಿಸಿ, ಆಮೇಲೆ ಅವರಿಗೆ ಅಪ್ಪಣೆಯನ್ನು ಕೊಡುತ್ತಿದ್ದೆನು. ಬೇರೆ ಆಲೋಚನೆಯಿಂದ ಬಂದಿದ್ದದರಿಗೆ ಪ್ರವೇಶವೇ ದೊರೆಯುತ್ತಿರಲಿಲ್ಲ. ಈ ಬಗೆಯ ಕಟ್ಟುಗಳಿಂದ ಸ್ತ್ರೀ ಸಮಾಜದ ಗೌರವವೂ ಹೆಚ್ಚಿತು.

* * *

ಒಂದು ದಿನ ನಾನು ನನ್ನ ಕಚೇರಿ ಕೋಣೆಯಲ್ಲಿ ಕುಳಿತು ಬರೆಯು ತ್ತಿದ್ದೆನು. ಆಗ ಸ್ವಲ್ಪ ದೂರದಲ್ಲಿ ಒಬ್ಬ ಸ್ತ್ರೀಯ ಆರ್ತನಾದವು ಕೇಳಿ ಬಂದಿತು. ನಾನು ಅವಳನ್ನು ಕರೆಯಿಸಿದೆನು. ಅವಳು ಉಟ್ಟಿದ್ದ ಸೀರೆಯು ಹರಿದು ಚಿಂದಿಚಿಂದಿಯಾಗಿತ್ತು. ನನ್ನನ್ನು ನೋಡಿದ ಕೂಡಲೆ ಅವಳು ಮತ್ತಷ್ಟು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಅದನ್ನು ನೋಡಿ ಅವಳಲ್ಲಿ ಮನಸ್ಸು ಕರಗಿ, ಪ್ರೇಮದಿಂದ, "ಏನಮ್ಮ, ಏನು ಬೇಕು ನಿನಗೆ?" ಎಂದು ಕೇಳಿದೆನು.

ಆ ಸ್ತ್ರೀಯು—"ಮಹಾತಾಯಿ, ನಾನು ಬಹು ದೊಡ್ಡ ಸಂಕಟದಲ್ಲಿದ್ದೇನೆ. ಇದ್ದ ಐಶ್ವರ್ಯವೆಲ್ಲ ಹಾಳಾಗಿ, ದೇಶವನ್ನು ಬಿಟ್ಟು ಗಂಡನ ಜತೇಲಿ ಇಲ್ಲಗೆ ಬಂದಿದ್ದೇನಮ್ಮಾ. ಆರು ತಿಂಗಳಿಂದ ನನ್ನ ಪತಿಯು ಹಾಸಿಗೆ ಹಿಡಿದು ಮಲಗಿದ್ದಾರೆ. ಮುಖವೆಲ್ಲ ಹುಣ್ಣಾಗಿ ಹೋಗಿದೆ, ಜ್ವರಾ ಬಂದಿದೆ, ಕೆಮ್ಮು ಇದೆ. ಈಗಂತೂ ಬಹಳ ನಿತ್ರಾಣವಾಗಿ ಕೂತುಕೊಳ್ಳುವುದಕ್ಕೆ ಕೂಡ ಶಕ್ತಿಯಿಲ್ಲದವರಾಗಿದ್ದಾರೆ. ಅವರ ಸ್ಥಿತಿ ಹಾಗಿದೆ, ನನ್ನ ಹತ್ತಿರ ಒಂದು ಬಿಡಿ ಕಾಸೂ ಇಲ್ಲ. ಇದ್ದಬದ್ದ ಸಾಮಾನುಗಳನ್ನೆಲ್ಲ ಅಡವಿಟ್ಟು ಇದುವರೆಗೆ ಖರ್ಚು ನಡೆಸಿದ್ದಾಯಿತು. ಈಗೇನು ಮಾಡಲಿ ? ಈ ಊರಲ್ಲಿ ನನ್ನನ್ನು ಕೇಳುವರಾರು? ಕೊನೆಗೆ ಎಲ್ಲರ ಬಾಯಲ್ಲಿಯೂ ನಿಮ್ಮ ಕೀರ್ತಿ ಕೇಳಿ, ನಿಮಗೆ ಶರಣಾಗತಳಾಗಿ ಬಂದಿದ್ದೇನೆ. ಈಗ ನೀವು ಸಹಾಯ ಮಾಡದಿದ್ದರೆ ನನ್ನ ಪತಿಯು ಸಾಯುವರು. ನನ್ನ ಬಾಳು ನಾಯಿಯ ಬಾಳಿನಂತಾಗುವುದು. ದಯೆಯಿಟ್ಟು ತಾವು ಬಂದು ನನ್ನ ಪತಿಯನ್ನು ನೋಡಬೇಕು" ಎಂದಳು. ನಾನು ಅವಳ ಮಾತನ್ನು ಕೇಳಿ, ಆಲೋಚಿಸುತ್ತ ಕುಳಿತೆನು. ಆದರೆ ಸುಮತಿ ದೇವಿಯು ಕೂಡಲೆ "ದೇವಿ! ಆಲೋಚನೆ ಮಾಡುವೆ ಯಾಕೆ? ಇವಳು ಹೇಳುವ ಮಾತು ಕೇಳಿದರೆ, ಅವಳ ಪತಿಯು ಬದುಕುವಂತಿಲ್ಲವೆಂದು ತೋರುವುದು. ಆದುದರಿಂದ ಈಗ ನೀನು ಇವಳನ್ನು ಕರೆದುಕೊಂಡು ಹೋಗಿ ರೋಗಿಯನ್ನು ನೋಡಿ ಮುಂದಿನ ಕಾರ್ಯವನ್ನು ಮಾಡು!" ಎಂದಳು.

ಕೊನೆಗೆ ನಾನು ಇಬ್ಬರು ದಾಸಿಯರನ್ನು ಕರೆದುಕೊಂಡು ಮೋಟಾರಿನಲ್ಲಿ ಹೊರಟೆನು. ಎಲ್ಲೆಲ್ಲೊ ಸಂದಿಗೊಂದಿಗಳಲ್ಲಿ ಸುತ್ತಿ ಅವಳ ಮನೆಯನ್ನು ಸೇರಿದೆವು. ಅದು ಮನೆಯಾಗಿರಲಿಲ್ಲ, ಪ್ರೇತಪುರಿಯಾಗಿತ್ತು. ಮುಂದುಗಡೆ ದೊಡ್ಡ ಬಚ್ಚಲಿನ ಕಾಲುವೆ ಹರಿಯುತ್ತಿತ್ತು. ಸೊಳ್ಳೆಗಳ ಸ್ವತಂತ್ರ ಸಾಮ್ರಾಜ್ಯ. ಮನೆಯೊಳಗೆಲ್ಲ ಕತ್ತಲೆ ಕವಿದಿತ್ತು. ಸ್ವಲ್ಪ ಹೊತ್ತಾದ ಮೇಲೆ ಅಲ್ಲಿ ಜೌಗು ನೆಲದ ಮೇಲೆ, ಒಂದು ಹರಕು ಹಾಸಿಗೆಯಲ್ಲಿ ಒಬ್ಬ ದುರ್ಬಲನ, ಕೇವಲ ಅಸ್ಥಿ ಪಂಜರವುಳ್ಳ ಶರೀರವು ಬಿದ್ದಿದೆ. ಅದನ್ನು ನೋಡಿದ ಕೂಡಲೆ ಹೆದರಿ, ನಾನು ಮುಂಬಾಗಿಲಿನಲ್ಲೆ ನಿಂತೆನು.

ನಾನು ನಿಂತಿದ್ದನ್ನು ನೋಡಿ ಆ ಸ್ತ್ರೀಯು ಒಳಗೆ ಹೋದಳು. ಗಂಡ ನನ್ನು ಕುರಿತು—" ಇನ್ನು ಹೆದರಬೇಡಿ, ದಯಾಮಯರಾದ ಶಾಂತಾ ದೇವಿ ಯವರು ಬಂದಿದ್ದಾರೆ. ಅವರ ಕೃಪೆಯಿಂದ ನಿಮಗೆ ಬೇಗ ಗುಣವಾಗುತ್ತೆ. ಅಯ್ಯೊ! ಯಾಕಷ್ಟು ಒದ್ದಾಡುತ್ತಿರುವಿರಿ? ಸ್ವಲ್ಪ ಶಾಂತರಾಗಿರಿ"ಎಂದಳು. ಆ ಮನುಷ್ಯನು ನೀರು ಬೇಕೆಂದು ಸನ್ನೆಮಾಡಿದನು. ಅವಳು ಒಂದು ಮಣ್ಣಿನ ಪಾತ್ರೆಯಲ್ಲಿ ನೀರು ಕುಡಿಸಿದಳು. ಅವನು ನೀರು ಕುಡಿದು, "ಇನ್ನು ನಾನು ಬೇಗ ಸಾಯುವೆನು. ಆದರೆ ಮೃತ್ಯು ಸಮಯದಲ್ಲಿ ನಾನು ಶಾಂತಾದೇವಿಯವರನ್ನು ನೋಡಬೇಕೆಂದಿರುವೆನು. ನಾನು ಮಹಾ ಪಾಪಿ ನಾನು ನನ್ನ ಪಾಪದ ಫಲವನ್ನು ಅನುಭವಿಸುತ್ತಿರುವೆನು. ಅಯ್ಯೊ!...."

ನಾನು ರೋಗಿಯನ್ನು ನೋಡಿರಲಿಲ್ಲವಾದರೂ ಅವನ ಸ್ವರವನ್ನು ಕೇಳಿ, ಚಕಿತಳಾದೆನು. ಏಕೆಂದರೆ ಸ್ವರವು ಪರಿಚಿತವಾದುದಾಗಿತ್ತು. ನಾನು ಹೆದರಿ ಅಲ್ಲಿಂದ ಹೊರಟುಹೋಗಬೇಕೆಂದು ಆಲೋಚಿಸುತ್ತಿರುವಾಗ, ಆ ಹೆಂಗಸು ಅಳುತ್ತಾ ಬಂದು " ನನ್ನ ಸ್ವಾಮಿಯ ಒದ್ದಾಟವನ್ನು ನೋಡಿ ದರೆ ಅವರು ಬದುಕುವಂತೆ ಕಾಣುವುದಿಲ್ಲ. ಈ ಅಂತ್ಯ ಸಮಯದಲ್ಲಿ ತಮ್ಮ ದರ್ಶನವನ್ನು ಮಾಡಬೇಕೆಂದಿರುವರು" ಎಂದಳು. ನಾವು ನಿರ್ವಾಹವಿ ಲ್ಲದೆ ಅವನ ಬಳಿ ಹೋಗಿ ನೋಡಿದೆನು. ಅವನೇ ಪಾಪಿಯಾದ ಮಾಧವ! ನನ್ನನ್ನು ನೋಡಿ ಪರ್ವತದಿಂದ ಉರುಳಿ ಬಿದ್ದವನಂತೆ ನರಳಿದನು. ನಾನು ಅವನನ್ನು ನೋಡಿ ಮುಖವನ್ನು ತಿರುಗಿಸಿದೆನು. ಅವನು ಬಹು ಕಷ್ಟದಿಂದ 'ಭಾನುಮತಿ ಅತ್ತಿಗೆ! ನೀನೇ-ಹೌದು ನಾನು ಯಾವ ಮುಖದಿಂದ ಕ್ಷಮೆ ಬೇಡಲಿ? ಅಯ್ಯೋ! ನಾನೆಂತ—ಪಾಪಿ....ದೊಡ್ಡ....ಪಾಪಿ....ಆ....ಪಾಪ ....ಫಲವನ್ನು....ಈಗ....ಅನುಭವಿಸುತ್ತಾ....ಇದೇನೆ........ಅತ್ತಿಗೆ....ನೀನು ದೇವತೆ... ಒಂದು ಸಲ....' ನಾನು ಕ್ಷಮಿಸಿದ್ದೇನೆ ' ಅಂತ....ಹೇಳ್ಬಿಡು....ಈ ಪಾಪೀನಾ ಕ್ಷಮಿಸು! ಅಯ್ಯೋ! ನೋಡು, ಈ ಯಮಧೂತರು ಹ್ಯಾಗೆ ಸೂಜಿ ಚುಚ್ಚುತ್ತಿದ್ದಾರೆ. ಅಯ್ಯೋ! ಹಾವಿನಿಂದ ಕಡಿಸುತ್ತಾ ಇದ್ದಾರೆ.... ಅಯ್ಯಯ್ಯೋ ಬೆಂಕಿಯಿಂದ ನನ್ನ ಸುಡ್ತಿದಾರೆ........"

ಅವನ ಸ್ಥಿತಿಯನ್ನು ನೋಡಿ ಇನ್ನು ಅವನು ಬದುಕುವುದಿಲ್ಲವೆಂದು ತಿಳಿದು ಅವನ ತಲೆಯ ಹತ್ತಿರ ಕುಳಿತು ಅವನನ್ನು ಕ್ಷಮಿಸಬೇಕೆಂದು ಭಗ

ವಂತನನ್ನು ಪ್ರಾರ್ಥಿಸಿದೆನು. ಅನಂತರ ಇಬ್ಬರು ದಾಸಿಯರನ್ನು ಅಲ್ಲಿ ಬಿಟ್ಟು ಹಿಂತಿರುಗಿದೆನು.

* * *

ನಡೆದ ಎಲ್ಲ ಸಂಗತಿಗಳನ್ನು ಸುಮತಿಗೆ ಹೇಳಿದೆನು. "ಇದರಲ್ಲೇನು ಆಶ್ಚರ್ಯ. ಅವನು ತನ್ನ ಪಾಪದ ಫಲವನ್ನು ಅನುಭವಿಸುತ್ತಿರುವನು. ಅದು ನಿನ್ನ ಶಾಪದ ಫಲ. ಅಬಲೆಯನ್ನು ವ್ಯರ್ಥವಾಗಿ ದುಃಖಪಡಿಸುವುದರಿಂದ ಆಗುವ-ಫಲ ಇದೇ. ಆ ಫಲವನ್ನು ಅವನು ಭೋಗಿಸುತ್ತಿರುವುದನ್ನು ಈಗ ನೀನು ನೋಡಿದೆ" ಎಂದಳು.

ಮಾಧವನ ಮರಣಾನಂತರ ಅವನ ಹೆಂಡತಿಯು ನನ್ನ ಸಂಸ್ಥೆಗೆ ಬಂದಳು. ಅವಳಿಂದ—ತಂದೆಯು ತೀರಿಹೋದ ಮೇಲೆ ಮಾಧವನು ಬೇಕು ಬೇಕಾದಹಾಗೆ ವೇಶ್ಯೆಯರಿಗೂ, ಸಾರಾಯಿಗೂ ಹಣವನ್ನು ಖರ್ಚುಮಾಡಿ, ಸ್ನೇಹಿತರೊಂದಿಗೆ ಮೋಜು ಮಾಡುತ್ತ ಮೆರೆದನು. ಅದರಿಂದ ಅವನ ಗುಮಾಸ್ತನು ಧನಿಕನಾದನು. ಮಾಧವನ ಆಸ್ತಿಪಾಸ್ತಿಯೆಲ್ಲ ಹರಾಜಾಗಿ ಹೋಯಿತು. ಆಮೇಲೆ ಅವನು ಇಲ್ಲಿಗೆ ಬಂದನು. ಇಲ್ಲಿ ಮೇಹರೋಗದಿಂದ, ನರಳಿ, ಮೃತ್ಯುವಶನಾದನು ಎಂದು—ತಿಳಿಯಿತು. ನಾನು ನಿರ್ಮಲೆಯನ್ನು (ಮಾಧವನ ಹೆಂಡತಿಯನ್ನು) ನನ್ನ ಆಶ್ರಮದಲ್ಲಿ ಸೇರಿಸಿಕೊಂಡೆನು. ಈಗ ಅವಳು ಇಲ್ಲಿಯೆ ಇದ್ದಾಳೆ. ನೀವು ಬಂದು ನೋಡಬಹುದು.

# ಪಾಪವೊ ಪುಣ್ಯವೊ ?

✻

**ನ**ಮ್ಮ ತಂದೇತಾಯಿ ಬಹಳ ಬಡವರು 'ದುರ್ಭಿಕ್ಷದಲ್ಲಿ ಅಧಿಕ ಮಾಸ' ಎಂಬ ಹಾಗೆ ಬಡತನದಲ್ಲಿ ಮಕ್ಕಳ ಸಂಖ್ಯೆಯೂ ಜಾಸ್ತಿಯಾಗುವುದು. ಅದಾವ ನಿಯಮವನ್ನನುಸರಿಸಿ ದೇವರು ಹೀಗೆಮಾಡುತ್ತಾನೊ ತಿಳಿಯದು. ಧನಿಕರಾದವರಿಗೆ ಮುಪ್ಪಿನಲ್ಲಿ ಸಂಪಾದನೆ ಮಾಡಬೇಕಾದ ಮಕ್ಕಳು ಬೇಡವಾದುದರಿಂದ ಅವರಿಗೆ ಮಕ್ಕಳನ್ನು ಕೊಡದೆ, ಬಡವರಾದವರಿಗೆ ಮುಪ್ಪಿನಲ್ಲಿ ಬೇಕಾದ ಮಕ್ಕಳನ್ನು ಕೊಟ್ಟು ದೇವರು ಪ್ರಾಯಶಃ ತಾನು ನಿಷ್ಪಕ್ಷಪಾತಿ ಎಂದು ಹೊಗಳಿಸಿಕೊಳ್ಳಬೇಕೆಂದು ಹೀಗೆ ಮಾಡುವನೋ ಏನೋ? ಅಂತೂ ನಮ್ಮಮ್ಮನು ಐದು ಜನ ಮಕ್ಕಳನ್ನು ಹೆತ್ತಳು. ನಾಲ್ಕು ಜನ ಗಂಡುಮಕ್ಕಳು, ಕೊನೆಯದು ಹೆಣ್ಣಾದ ನಾನು. ಬಡತನ, ಸಂಸಾರ ರಥ ನಡೆಯೋದು ಕಷ್ಟ. ಆದ್ದರಿಂದ ನಮ್ಮಪ್ಪನು ಮಂಗಳೂರಲ್ಲಿ ಒಂದು ಊಟದ ಹೋಟಲು ಇಟ್ಟನು. ನಮ್ಮ ತಾಯಿ ಅಡಿಗೆ ಮಾಡುವುದು, ನಮ್ಮಪ್ಪ ಬಡಿಸುವುದು. ನಮ್ಮ ಹೋಟಲಿನಲ್ಲಿ ದರವು ಕಡಿಮೆ. ಆದ್ದರಿಂದ ಕಾಲೇಜು ಮತ್ತು ಹೈಸ್ಕೂಲಿನ ವಿದ್ಯಾರ್ಥಿಗಳೆಲ್ಲರೂ ನಮ್ಮ ಹೋಟಲಿಗೇ ಬರುವರು. ದರವು ಕಡಿಮೆಯಿದ್ದುದಲ್ಲದೆ ನಮ್ಮ ಹೋಟಲಿನಲ್ಲಿ ಮತ್ತೊಂದು ಆಕರ್ಷಕ ವಸ್ತುವೊಂದಿತ್ತು.

ಕಾಮಿನಿಕಾಂಚನದಿಂದ ದೂರರಾಗಿರಬೇಕೆಂದು ಹಗಲು ಬೋಧಿಸುತ್ತ ರಾತ್ರಿಯಾದ ಕೂಡಲೆ ವೇಶ್ಯಾ ಕಾಮಿನಿಯನ್ನೊ, ರೂಪವತಿಯಾದ ಗರತಿಯನ್ನು ಹುಡುಕಿಕೊಂಡು ಹೋಗಿ ತಮ್ಮಲ್ಲಿರುವ ಕಾಂಚನದಿಂದಲೊ ಆಸೆ ಪ್ರತ್ಯಾಸೆಗಳಿಂದಲೊ ಅವರ ಜೀವನವನ್ನು ಕೆಡಿಸುವ ಪಂಡಿತರೇ ನಮ್ಮ

ಸಮಾಜದಲ್ಲಿ ಹೆಚ್ಚು. ಇಂತಹವರು ಯಾರಿಗೂ ಕಾಣದಂತೆ ತಾವು ಪಾಪವನ್ನು ಆಚರಿಸಿದರೂ ಹಗಲು ಹೊತ್ತಿನಲ್ಲಿ ತಮ್ಮ ಬೋಧನೆಯಿಂದ ತಮ್ಮ ಪಾಪವನ್ನು ತೊಳೆದುಕೊಳ್ಳುತ್ತಿರುವೆನೆಂದು ತಿಳಿದುಕೊಂಡಿರುವರು. ಮತ್ತೆ ಬೇಕಾದರೆ ನಮ್ಮ ಸಮಾಜವಲ್ಲಿ ತಮ್ಮ ಭೋಗ ಜೀವನದಲ್ಲಿ ಸಮಯ ದೊರೆತಾಗ ಮತ್ತೆ ಕೂತಾಗ ನಮ್ಮ ಋಷಿಗಳು ಹೀಗೆ ಹೇಳುತ್ತಾರೆ, ಹಾಗೆಹೇಳುತ್ತಾರೆ, ಎಂದು ಹೆಚ್ಚುಹೆಚ್ಚಾಗಿ ನೀತಿಬೋಧನೆಯನ್ನುಮಾಡುವ ಪ್ರರೋಪದೇಶ ಪಂಡಿತರ ಜೀವನ ಕ್ರಮವನ್ನು ನೋಡಿರಿ. ಅವರು ಮಾಡುವುದು ಹಗಲು ನೀತಿಬೋಧೆ, ರಾತ್ರಿ ವ್ಯಭಿಚಾರ. ಇದು ಸಾಮಾನ್ಯ ಜೀವಿಯ ಜೀವನ ಕ್ರಮ. ವ್ಯಭಿಚಾರಿಗೆ ಇದೊಂದು ಬಗೆಯ ಮನಶ್ಶಾಂತಿ. ಹೀಗಾಗುವುದು ಅವರ ತಪ್ಪಲ್ಲ. ಅದು ಪ್ರಕೃತಿ ನಿಯಮ. ಆದುದರಿಂದ ಸಮಾಜವಲ್ಲಿ ತನ್ನ ಬ್ರಹ್ಮಚರ್ಯದಿಂದ ಅಥವಾ ತಪಸ್ಸಿನಿಂದ ಯಾವನಾದರೊಬ್ಬನು ತನ್ನ ಪ್ರಭೆಯನ್ನು ತೋರಲಾರಂಭಿಸಿದರೆ, ಆಗ 'ಇವನೇನು ಬ್ರಹ್ಮಚಾರಿಯೊ? ಯೋಗಿಯೋ? ಎಂಥೆಂಥಾ ವಿಶ್ವಾಮಿತ್ರ ಪರಾಶರಾದಿಗಳೇ ಕಾಮಿನಿಯ ರೂಪವನ್ನು ನೋಡಿ ಕಾಮವಶರಾದಾಗ, ಇವನ ಪಾಡೇನು ? ಎಂದು ನಮ್ಮ ಪಂಡಿತರು ಹೇಳುವಾಗ ಈ ನಿಯಮವು ತಮ್ಮ ಆಚರಣೆಯಿಲ್ಲದ ನೀತಿ ಬೋಧನೆಗೂ ಸಂಬಂಧಿಸುವುದೆಂಬುದನ್ನು ಅವರು ಮರೆಯುವರು.

ನಮ್ಮ ಹೋಟೆಲಿನಲ್ಲಿ ದರವು ಕಡಿಮೆಯಾಗಿದ್ದುದಲ್ಲದೆ ಮತ್ತೊಂದು ಆಕರ್ಷಕ ವಸ್ತುವೊಂದಿತ್ತೆಂದು ಮೇಲೆ ಹೇಳಿದ್ದೇನೆ. ನಮ್ಮಪ್ಪನು ಹೋಟಲನ್ನು ಇಡುವಾಗ ನನಗೆ ೧೨ ವರ್ಷ ವಯಸ್ಸಾಗಿತ್ತು. ನೋಡಿ, ನನ್ನ ರೂಪವನ್ನು ನಾನೇ ವರ್ಣಿಸಿಕೊಳ್ಳಬಾರದು. ಒಟ್ಟಿನಲ್ಲಿ ನನ್ನನ್ನು ನೋಡಿದ ಮಾನವನು ಎಂಥಾ ತಪಸ್ವಿಯಾದರೂ ಮರುಳಾಗುವಂತಿದ್ದಿತು. ಇಷ್ಟು ಹೇಳಿದ ಮೇಲೆ ನನ್ನ ಮೂಗು, ಕಣ್ಣು, ಕಿವಿ, ಕೂದಲು, ಎದೆ, ಕೈಕಾಲುಗಳನ್ನು ವರ್ಣಿಸಬೇಕಾಗಿಲ್ಲ. "ಹಣವೆಂದರೆ ಹೆಣವು ಬಾಯಿತೆರೆಯುವುದಂತೆ!" ಸ್ತ್ರೀ ರೂಪಲಾವಣ್ಯವೆಂದರೆ ಪುರುಷನು ಕರಗುವನು. ಅದರಲ್ಲಿ ಯೌವನವಿದ್ದರೆ ಯಾವ ಪಂಡಿತನು ತಾನೆ ಹುಚ್ಚನಾಗಲಾರನು. ನಮ್ಮ ಹೋಟೆಲಿಗೆ ಬರುತ್ತಿದ್ದವರಲ್ಲಿ ಹಲವರು ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳು. ಅವರಿಗೆ ಬೇಕಾದ್ದು ವೆಚ್ಚ ಕಡಿಮೆಯಾಗಬೇಕು. ಅದು

ಇದ್ದೇ ಇತ್ತು. ಅದರ ಜತೆಗೆ ಆಗತಾನೆ ಕಾಮಿನಿಯ ಕಾಮಪ್ರಪಂಚದಲ್ಲಿ ಕಾಲಿಡುತ್ತಿದ್ದ ಸರ್ವಾಂಗ ಸುಂದರಿಯಾದ ಹುಡುಗಿಯು ನಾನೊಬ್ಬಳಿದ್ದ ಮೇಲೆ ಕೇಳುವುದೇನು ? ಇದರ ಮೇಲೆ ನನ್ನ ತಂದೆ ತಾಯಿಗಳು ವೃದ್ಧ ರಾಗಿದ್ದುದರಿಂದಲೂ, ನನ್ನ ಅಣ್ಣಂದಿರೆಲ್ಲರೂ ವಿದ್ಯಾರ್ಜನೆಗಾಗಿ ಪಾಠಶಾಲೆಗೆ ಹೋಗುವವರಾದ್ದರಿಂದಲೂ, ನಾನು ದುರದೃಷ್ಟದಿಂದ ಹೆಣ್ಣಾಗಿ ಹುಟ್ಟಿ, ವಿದ್ಯಾರ್ಜನೆಯ ಅವಶ್ಯಕತೆಯಿಲ್ಲದೆ, ಮುಂದೆ ಗಂಡನೆಂಬ ಹೆಸರಿನಿಂದ ಬರುವ ಪುರುಷನಿಗೆ ಮಾಡಬೇಕಾದ ದಾಸಿ ವೃತ್ತಿಯನ್ನು ಕಲಿಯಬೇಕೆಂಬ ಉದ್ದೇಶದಿಂದ ನನ್ನ ತಂದೆತಾಯಿಗಳು ನನ್ನನ್ನು ನಮ್ಮ ಹೋಟೆಲಿಗೆ ಊಟ ಕ್ಕೆ ಬರುವ ಜನರ ಸೇವಾವೃತ್ತಿಯನ್ನು ಮಾಡಬೇಕೆಂದು ನಿಯಮಿಸಿದ್ದುದ ರಿಂದಲೂ, ನಮ್ಮಲ್ಲಿ ಬರುವವರಿಗೆ ಮದುಪೆಯ ಖರ್ಚಿಲ್ಲದೆ, ಮದುವೆಗಾಗಿ ಬೆಳೆದಿರುವ ಹುಡುಗಿಯ ಸೇವೆಯು ಲಭಿಸುತ್ತಿತ್ತು. ಆದುದರಿಂದ ಬೇರೆ ಹೋಟೆಲುಗಳಲ್ಲಿದ್ದ ಎಷ್ಟೋ ಜನ ಯುವಕ ವಿದ್ಯಾರ್ಥಿಗಳೂ, ನೌಕರರೂ ಅವನ್ನು ಬಿಟ್ಟು ನಮ್ಮ ಹೋಟಲಿಗೆ ಬಂದು ಸೇರಿದರು. ಜನರ ಸಂಖ್ಯೆ ಹೆಚ್ಚಿದಂತೆ ನಮ್ಮ ತಂದೆತಾಯಿಗಳಿಬ್ಬರೂ ಅಡಿಗೆ ಮನೆಯಲ್ಲಿಯೇ ಕಾಲಕಳೆ ಯಬೇಕಾಯಿತು. ಬೇರೆ ಆಳನ್ನಿಟ್ಟುಕೊಳ್ಳುವುದಕ್ಕೆ ನಾವು ಬಡವರು. ಆ ಬಡತನದಲ್ಲಿಯೂ ಕೂಡ ನಮ್ಮಣ್ಣಂದಿರಿಗಿಂತಲೂ ನನ್ನ ಅಂಗಸೌಷ್ಠವ ವನ್ನೂ ದೇಹದಾರ್ಢ್ಯವನ್ನೂ ಬೆಳವಣಿಗೆಯನ್ನೂ ಆಕರ್ಷಕವಾಗಿಟ್ಟುದರಲ್ಲಿ ಭಗವಂತನ ಉದ್ದೇಶವೇನಿರಬಹುದೆಂದು ಆಗ ನಾನು ಊಹಿಸಲಾರದೆ ಹೋದೆ. ಈಗ ನೋಡಿದರೆ ಅದು ಕೇವಲ ನನ್ನ ಬಡ ತಂದೆತಾಯಿಗಳ ಬಡತನಕ್ಕೆ ಮರುಗಿ ಭಗವಂತನು ಹಾಗೆ ಮಾಡಿದ್ದನೆಂದು ತಿಳಿಯುವೆನು. ಆ ಭಗವಂತನೂ ಪುರುಷನಾದುದರಿಂದ ಸ್ತ್ರೀಯಾದ ನನ್ನ ಮೇಲೆ ಅಷ್ಟು ನಿರ್ದಯನಾಗಿದ್ದನೊ ?

ನಮ್ಮ ಹೋಟಲಿನಲ್ಲಿ ಅಡಿಗೆ ಮನೆಗೆ ನನ್ನ ವೃದ್ಧ ಮಾತಾಪಿತೃಗಳು ಯಜಮಾನರು, ದುಡ್ಡಿನ ವಿಚಾರಕ್ಕೆ ನನ್ನ ಅಣ್ಣಂದಿರು . ಖಜಾನ್ಚಿಗಳು, ಕೆಲಸದ ವಿಚಾರದಲ್ಲಿ ನಾನು ಯಜಮಾನಿಯಾಗಿಬಿಟ್ಟೆ. ಆದುದರಿಂದ ಯಾರಾದರೂ ಸ್ನಾನಕ್ಕೆ ನೀರಿಲ್ಲನೆಂದರೆ, ಭಾವಿಯಿಂದ ನೀರು ಸೇದುವವಳು ನಾನು, 'ನೀರು ಬಿಸಿ !' ಎಂದರೆ ನೀರು ತಂದು ಹಾಕುವವಳು ನಾನು,

ಒಂದು ಪಂಕ್ತಿಯ ಊಟವಾದ ಕೂಡಲೆ ಎಲೆಗಳನ್ನೆತ್ತಿ ಗುಡಿಸಿ ಸಾರಿಸಿ ಮತ್ತೊಂದು ಪಂಕ್ತಿಗೆ ಎಲೆ ಬಡಿಸಿ ಅಣಿ ಮಾಡುವವಳು ನಾನು. ಮುಸುರೆ ತಿಕ್ಕುವವಳು ನಾನು. ಊಟಕ್ಕೆ ಬರುವವರಲ್ಲಿ ಯಾರಿಗಾದರೂ ಅಸ್ವಸ್ಥ ವಾದರೆ ಅವರಿಗೆ ಅನ್ನ ತೆಗೆದುಕೊಂಡು ಹೋಗಿ ಕೊಡುವವಳು ನಾನು.— ಹೀಗೆಯೆ ಇನ್ನೂ ಯಾವ್ಯಾವ ಕೆಲಸವನ್ನು ನನ್ನ ತಂದೆತಾಯಿಗಳೂ ಹೊರ ಗಿನವರೂ ನನ್ನಿಂದ ಮಾಡಿಸುತ್ತಿದ್ದರೊ ಅದೆಲ್ಲವನ್ನೂ ಬರೆಯಲಾರಂಭಿಸಿದರೆ ಅದೇ ಅನೇಕ ಪುಟಗಳಾಗಬಹುದು. ಒಟ್ಟಿನಲ್ಲಿ ನೀರಒಲೆಗೆ ಉರಿಹಾಕಲು ಬೆಳಿಗ್ಗೆ ನಾಲ್ಕು ಘಂಟೆಗೆ ಎದ್ದವಳು ರಾತ್ರಿ ನನ್ನ ತಂದೆತಾಯಿ ಮಲಗಿದ ಮೇಲೆ ಅಡುಗೆ ಮನೆಯನ್ನು ಚೊಕ್ಕವಾಗಿ ಸಾರಿಸಿ, ಮುಸುರೆತಿಕ್ಕಿ ೧೨ ಘಂಟೆಯ ಹೊತ್ತಿಗೆ ಒಂದು ಚಾಪೆಯ ಮೇಲೆ ಮಲಗುತ್ತಿದ್ದೆನು.

ಹಗಲೆಲ್ಲ ಕೆಲಸದಲ್ಲಿರುವಾಗ ನನ್ನ ಮನಸ್ಸು ಕೆಲಸದಲ್ಲಿಯೆ ಮಗ್ನ ವಾಗಿರುತ್ತಿತ್ತು. ಹಾಸಿಗೆಯಮೇಲೆ ಮಲಗಿದಕೂಡಲೆ ಅನೇಕ ಯೋಚನೆ ಗಳು ಬರುತ್ತಲಿದ್ದವು. "ನನ್ನ ಅಣ್ಣಂದಿರೇಕೆ ನಾನು ಮಾಡುವ ಕೆಲಸವನ್ನು ಮಾಡಬಾರದು ? ಗಂಡಸರು ಕೆಲಸಮಾಡಕೂಡದೆ ? ಅವರೇ ವಿದ್ಯಾರ್ಜನೆ ಮಾಡಬೇಕು, ನಾನು ಮಾಡಕೂಡದೋ ? ಅವರು ವಿದ್ಯಾಭ್ಯಾಸ ಮಾಡ ದಿದ್ದರೆ ಮುಂದೆ ಅವರಿಗೆ ಮದುವೆಯಾಗುವುದಿಲ್ಲವೆಂದು ಅಮ್ಮನು ಹೇಳು ವಳು. ಹಾಗಾದರೆ ನನಗೆ ಮದುವೆಯಾಗುವುದಿಲ್ಲವೆ? ಮದುವೆ ಯಾಕೆ ಆಗಬೇಕು ? ಅಮ್ಮನಂತೆ ನಾನು ಗಂಡನ ಪಕ್ಕದಲ್ಲಿ ಕುಳಿತು ಅಡಿಗೆ ಮಾಡು ವುದಕ್ಕೇನು? ಆಗ ನಾನು ಹೋಟಲು ಇಡಬೇಕೊ? ಆಗ ಅಣ್ಣಂದಿರು ಅವರ ಹೆಂಡತಿಯರೊಂದಿಗೆ ಹೋಟಲು ಇಡಲು ಹೊರಟು ಹೋಗುವರೊ? ಹಾಗಾದರೆ ನಮ್ಮರಿನಲ್ಲಿರುವವರೆಲ್ಲರೂ ಹೋಟಲೇಕೆ ಇಟ್ಟಿಲ್ಲ ! ನಮ್ಮ ಎದು ರುಮನೆ ಹೆಂಗಸರು ಅವರ ಗಂಡಂದಿರೊಂದಿಗೆ ಸಾಯಂಕಾಲ ತಿರುಗಾಡುವು ದಕ್ಕೆ ಹೋಗುವರಲ್ಲ! ನಾನೇಕೆ ಹೋಗಬಾರದು ? ನಮ್ಮ ಪಕ್ಕದ ಮನೆ ಯಲ್ಲಿ ಗಂಡಸರೇ ಇಲ್ಲ, ಹೆಂಗಸರೇ ಇದ್ದಾರಲ್ಲ. ಅವರು ಹಗಲುಹೊತ್ತು ನಿದ್ರೆ ಮಾಡುತ್ತಾರೆ. ಅವರಲ್ಲಿ ಅಡುಗೆಯನ್ನು ಗಂಡಸೇ ಮಾಡುವವನಲ್ಲ! ಆ ಹೆಂಗಸರು ಒಳೊಳ್ಳೆ ಮಂಚಗಳ ಮೇಲೆ ಮೆತ್ತಗಿರುವ ಹಾಸಿಗೆಯ ಮೇಲೆ

ಮಲಗುತ್ತಾರಲ್ಲ! ಸಾಯಂಕಾಲವಾಗುವಾಗ ಅವರು ತಲೆಗೆ ಸುವಾಸನೆಯ ತೈಲವನ್ನು ಹಚ್ಚಿ, ಬಾಚಿ, ಜಡೆಹಾಕಿ, ಹೂಮುಡಿದುಕೊಂಡು, ಮನೋಹರ ವಾದ ರಂಗಿನ ಸೀರೆಗಳನ್ನುಟ್ಟುಕೊಳ್ಳುವರು? ಅವರ ಮನೆಗೆ ರಾತ್ರಿ ಎಷ್ಟು ಜನ ಗಂಡಸರು ಬರುತ್ತಾರಲ್ಲ! ಅವರು ಆ ಹೆಂಗಸರಿಂದ ಯಾವ ಕೆಲಸವನ್ನೂ ಮಾಡಿಸುವುದಿಲ್ಲವಲ್ಲ! ಅವರ ಮೈಮೇಲೆ ಎಷ್ಟು ಆಭರಣಗಳು! ನಾನೂ ಹೆಂಗಸು, ಅಮ್ಮನು ಹೆಂಗಸು! ನಮಗೇಕೆ ಆಭರಣಗಳಿಲ್ಲ! ಅವರಿಗಿಂತ ನಾನು ಸುಂದರಿಯಲ್ಲವೆ?" ಇವೇ ಮುಂತಾದ ಆಲೋಚನೆಗಳು ನನ್ನ ಮನಸ್ಸನ್ನು ಅಲ್ಲೋಲ ಕಲ್ಲೋಲ ಮಾಡಿಬಿಡುತ್ತಿದ್ದವು.

— ೨ —

**ನ**ಮ್ಮ ಮನೆ ಎದುರು ಸಾಲಿನಲ್ಲಿ ಒಬ್ಬ ಧನಿಕರ ಮನೆ. ನಮ್ಮ ಮನೆಯ ಬಲಭಾಗದಲ್ಲಿ ನಾನು ಹಿಂದೆ ಹೇಳಿದ ಹೆಂಗಸರಿದ್ದ ಮನೆ. ಆ ಮನೆಯ ಹಿತ್ತಲೂ ನಮ್ಮ ಮನೆಯ ಹಿತ್ತಲೂ ಒಂದೇ ಆಗಿದ್ದಿತು, ಅಂದರೆ ಮಧ್ಯೆ ಗೋಡೆಯಿರಲಿಲ್ಲ. ಆ ಮನೆಯಲ್ಲಿದ್ದವರು ವೇಶ್ಯಾ ಸ್ತ್ರೀಯರೆಂದು ನನಗೆ ಗೊತ್ತಿರಲಿಲ್ಲ. ಅವರ ಮನೆಗೆ ಬರುವ ಗಂಡಸರೆಲ್ಲರೂ ರಾತ್ರಿ ಬರುತ್ತಿದ್ದರು. ಮತ್ತೆ ಕಾಲು ನಡಿಗೆಯಲ್ಲಿ ಬರುವವರು ಕಡಿಮೆ. ಬೆಳಗಾಗುವ ಹೊತ್ತಿಗೆ ಯಾರೂ ಗಂಡಸರಿರುತ್ತಿರಲಿಲ್ಲ. ರಾತ್ರಿ ೧೨-೧ ಘಂಟೆಯ ವರೆಗೆ ಜನರು ಬರುತ್ತಲೇ ಇದ್ದರು, ಹೋಗುತ್ತಲೇ ಇದ್ದರು. ಬೆಳಗಿನ ಸಮಯದಲ್ಲಿ ನಾನು ಮುಸುರೆ ತಿಕ್ಕುವಾಗ ಆ ಹೆಂಗಸರು ಹಾರ್ಮೋನಿಯಮ್ ತಬಲಾ, ವೀಣೆ ಮುಂತಾದವನ್ನು ಬಾರಿಸುತ್ತಿದ್ದರು. ನಾನೂ ಕೆಲವು ವೇಳೆ ಆ ಸಂಗೀತ ಧ್ವನಿಯನ್ನು ಕೇಳಿ ತಲ್ಲೀನಳಾಗಿ ಮುಸುರೆ ತಿಕ್ಕುವುದನ್ನು ಮರೆತು ಬಿಡುತ್ತಿದ್ದೆನು. ಆಗ ನಮ್ಮಮ್ಮನು ಕೂಗಿಕೊಳ್ಳುತ್ತಿದ್ದಳು, ಕೂಡಲೇ ನಮ್ಮ ಅಣ್ಣನು ಬಂದು "ಕತ್ತೆ! ಅಡಿಗೆಗೆ ಹೊತ್ತಾಯ್ತು. ಇನ್ನೂ ಮುಸುರೆ ಪಾತ್ರೆ ತಿಕ್ಕಿಲ್ಲವೇ ?" ಎಂದು ತಲೆಯಮೇಲೆ ಪಟ್ಟನೇ ಹೊಡೆಯುತ್ತಿದ್ದನು. ಆಗ ನಾನು ಕಣ್ಣೀರು ಸುರಿಸುತ್ತ ಮುಸುರೆ ತಿಕ್ಕುತ್ತ, "ದೇವರೆ! ನನಗೆ ಮುಂದೆ ಜನ್ಮವನ್ನಿತ್ತರೆ ನಮ್ಮ ಮುಂದಿನ ಮನೆಯಲ್ಲಾಗಲಿ ಪಕ್ಕದ ಮನೆಯಲ್ಲಾಗಲಿ ಹುಟ್ಟುವಂತೆ ಮಾಡು! ಪಕ್ಕದ ಮನೆಯವರಂತೆ

ನಾನು ವಾದ್ಯಗಳನ್ನು ಬಾರಿಸುವಂತೆ ಕಲಿಸು! ಈ ಮುಸುರೆ ತಿಕ್ಕುವ ಕೆಲಸವನ್ನು ನನಗೆ ಕೊಡಬೇಡ." ಎಂದು ಪ್ರಾರ್ಥಿಸುತ್ತಿದ್ದೆನು.

ನನ್ನ ತಂದೆಯು ಹೋಟೆಲಿಟ್ಟು ೪ ವರ್ಷಗಳಾದವು. ನಾನು ಹದಿನಾರು ವರ್ಷದವಳಾಗಿ ಯೌವನದಲ್ಲಿ ಪದಾರ್ಪಣ ಮಾಡಿದೆನು. ಯೌವನದ ಚಿನ್ಹೆಯು ನನ್ನ ಅಂಗಾಂಗಳೆಲ್ಲದರಲ್ಲಿಯೂ ಹೊರಸೂಸುತ್ತಿತ್ತು. ಎದೆಯು ದೊಡ್ಡ ಹೆಂಗಸಿನಂತೆ ಬೆಳೆಯಿತು. ನನ್ನ ಮದುವೆ ಮಾಡಲು ತಂದೆ ತಾಯಿಗಳ ಬಡತನದಿಂದ ಸಾಧ್ಯವಾಗಲಿಲ್ಲ. ನಾನು ಹದಿನೈದು ವರ್ಷದವಳಾದಾಗಲೆ ಮೈ ನೆರೆದಿದ್ದೆನು. ಆದರೆ ಬ್ರಾಹ್ಮಣ ಜಾತಿಯಿಂದ ಹೊರಗೆ ಹಾಕುವರೆಂಬ ಭಯದಿಂದ ನನ್ನ ತಂದೆತಾಯಿಗಳು ಆ ವಿಷಯಗಳನ್ನು ಪ್ರಕಟ ಪಡಿಸಲಿಲ್ಲ. ಯಾರು ಕೇಳಿದರೂ. "ನಮ್ಮ ಹುಡುಗೀಗೆ ಹನ್ನೊಂದು ವರ್ಷವಾದರೂ ಎಷ್ಟು ದೊಡ್ಡ ಹೆಂಗಸಿನ ಹಾಗೆ ಬೆಳದಿದ್ದಾಳೆ ನೋಡಿ! ಅವಳ ಬೆಳವಣಿಗೆ ಬೇಗ! ನಾವೂ ವರ ಹುಡುಕುತ್ತಿದೇವೆ!" ಎನ್ನುತ್ತಿದ್ದರು. ವರಗಳೇನೊ ಕೆಲವು ಬಂದವು. ಆದರೆ ಆ ಪಶುಗಳ ಬೆಲೆಯೂ ಹೆಚ್ಚಾಗಿದ್ದಿತು. ಅದನ್ನು ಕೊಡಲಾರದೆ ನನ್ನ ತಂದೆಯು ನನ್ನ ವಯಸ್ಸನ್ನು ತಗ್ಗಿಸುತ್ತ ಹೋಗುತ್ತಿದ್ದನು. ನಾನು ಯೌವನದಲ್ಲಿ ಪದಾರ್ಪಣ ಮಾಡಿದ್ದರೂ ಕೇವಲ ಕೆಲಸದಲ್ಲಿಯೇ ಮಗ್ನವಾಗಿದ್ದ ನನ್ನ ಮನಸ್ಸಿನಲ್ಲಿ, ಕಾಮ ವಿಚಾರಕ್ಕೆ ಆಸ್ಪದವೇ ಇರುತ್ತಿರಲಿಲ್ಲ. ಕೆಲಸದಲ್ಲಿಯೇ ಮಗ್ನರಾಗಿರುವ ಎಲ್ಲರ ಅವಸ್ಥೆಯೂ ಹೀಗೆಯೊ ಏನೊ? ಆದರೇನು? ನಮ್ಮ ಹೋಟೆಲಿಗೆ ಬರುತ್ತಿದ್ದ ವಿದ್ಯಾರ್ಥಿಗಳು ಯುವಕರು. ಅವರು ಹಲವು ವಿಧವಾದ ಅಂಗ ಚೇಷ್ಟೆ ಮಾಡುತ್ತಿದ್ದರು. ಏನೇನೋ ಕಾಗದಗಳನ್ನು ಬರೆದು ಬಚ್ಚಲಮನೆಯಲ್ಲಿ "ನೀರು ಬಿಸಿ! ತಣ್ಣೀರು ಬೇಕು!" ಎಂದು ಸುಮ್ಮ ಸುಮ್ಮನೆ ನನ್ನನ್ನು ಕರೆದು ಆ ಕಾಗದಗಳನ್ನು ಕೊಟ್ಟು "ಓದಿಕೊ" ಎನ್ನುತ್ತಿದ್ದರು. ನಾನು ಒಂದು ದಿನ ಒಬ್ಬನ ಕಾಗದವನ್ನು ನಮ್ಮಣ್ಣನ ಕೈಗೆ ಕೊಟ್ಟು "ಅಣ್ಣಾ! ಆಗೋ ಅಲ್ಲಿ ಊಟಕ್ಕೆ ಕೂತಿರುವವರು ಈ ಕಾಗದ ಕೊಟ್ಟರು. ಅದರಲ್ಲಿ ಏನು ಬರೆದಿದೆ ಓದಣ್ಣಾ!" ಎಂದು ಹೇಳಿದೆನು. ಅವನು ಕಾಗದವನ್ನು ಓದಿಕೊಂಡು ಅದರಲ್ಲಿದ್ದ ವಿಷಯಗಳನ್ನು ಅಮ್ಮನಿಗೂ ಅಪ್ಪನಿಗೂ ತಿಳಿಸಿದನು. ಅವರು "ಕಳ್ಳ ಮುಂಡೆ! ಈಗಿನಿಂದಲೂ ವ್ಯಭಿಚಾರ ಮಾಡ್ತೀಯಾ! ನೀನು

ಸೂಳೆ ಕೆಟ್ಟು ಹೋದೆಯಾ! ನಿನ್ನ ಚರ್ಮ ಸುಲಿದು ಬಿಟ್ಟೇವು!" ಎಂದು ಬೈದು ಹೊಡೆದರು. ಅದನ್ನು ನೋಡಿ, ಆ ಕಾಗದ ಕೊಟ್ಟ ಮನುಷ್ಯನು "ಏನಾಯ್ತು!" ಎಂದನು, ಆಗ ಅಪ್ಪನು "ನೋಡಿ ಸುಮ್ಮ ಸುಮ್ಮನೆ ಈ ಕಾಗದ ನೀವು ಕೊಟ್ಟರಿ ಅಂತ ಸುಳ್ಳು ಹೇಳ್ತಾಳೆ. ಯಾರ ಜತೆಗೊ ಓಡಿ ಹೋಗಬೇಕೂ ಅಂತ ಮಾಡಿದ್ದಾಳೆ, ಕಳ್ಳಮುಂಡೇ!" ಎಂದು ಮತ್ತೆ ಹೊಡಿದನು. ಅದಕ್ಕೆ ಆ ಮನುಷ್ಯನು "ಇದೇನಯ್ಯಾ? ನಿಮ್ಮ ಹುಡುಗಿ ಒಳ್ಳೇ ಚಾಲು ಕಲ್ತಳಲ್ಲಾ? ನಾನು ಕೊಟ್ಟನಂತೇ! ಚನ್ನಾಯ್ತು! ಇನ್ನು ಮೇಲೆ ನಿಮ್ಮ ಹೋಟಲಿಗೆ ನಾನು ಕಾಲಿಡುವುದೇ ಇಲ್ಲ. ಇಂಥಾ ಕೆಟ್ಟ ಹೆಸರು ನನಗೆ ಎಲ್ಲೂ ಬರಲಿಲ್ಲ! ನಮ್ಮ ಕಚೇರಿಯಲ್ಲಿ ನನ್ನಂಥ ಒಳ್ಳೆ ಮನುಷ್ಯನೇ ಇಲ್ಲ ಅಂತ ಜನರು ಹೊಗಳುತ್ತಿರುವಾಗ ನಿಮ್ಮ ಹೋಟಲಿಗೆ ಬಂದು ಈ ಕೆಟ್ಟ ಹೆಸರು ಪಡೆಯಬೇಕಾಯಿತೆ?' ಎಂದನು. ಅದನ್ನು ಕೇಳಿ ಅಪ್ಪನು ಆ ಗಿರಾಕಿ ತಪ್ಪುವುದೆಂದು ಭಾವಿಸಿ "ಕೇಳಿದೆಯೇನೆ? ಏನಂತಾರೆ, ಪಾಪ ಅವರು! ಅವರೆಂಥ ದೊಡ್ಡ ಮನುಷ್ಯರು! ಅವರ ಮೇಲೆ ದೋಷ ಹೊರಿಸ್ತೀಯಾ! ನಿಜ ಹೇಳು" ಎಂದು ಮತ್ತೆ ಹೊಡೆದನು. ಈ ಮಾತನ್ನು ಕೇಳಿ ತೃಪ್ತನಾದಾ ಆ ಮನುಷ್ಯನು ಮೌನದಿಂದ ಹೊರಟು ಹೋದನು. ನನಗೆ ಆ ಕಾಗದದಲ್ಲಿರುವ ವಿಷಯವು ತಿಳಿಯಲಿಲ್ಲ. ವಿಷಯವು ತಿಳಿದಿದ್ದರೂ ಅದರ ಜ್ಞಾನವಿರಲಿಲ್ಲ. ಆದ್ದರಿಂದ ಅಪ್ಪನ ಪೆಟ್ಟನ್ನೂ ಅಣ್ಣನ ಪೆಟ್ಟನ್ನೂ ತಾಳಲಾರದೇ "ನಿಜವಾಗಿ ಈ ಕಾಗದವನ್ನು ಅವರೇ ಕೊಟ್ಟು ಅದನ್ನು ಓದಿಕೊ ಎಂದು ಹೇಳಿದರು" ಎಂದು ಹೇಳಿದೆನು. ಅದರಿಂದ ಮತ್ತಷ್ಟು ಏಟುಗಳು ಹೆಚ್ಚಾದವು ಆಗ ಅಮ್ಮನು ನೋಡಲಾರದೆ, ಇನ್ನು ಸಾಕು ಬಿಡಿ. ಬೆಳೆದ ಹುಡುಗಿಯನ್ನು ಮನೆಯಲ್ಲಿಟ್ಟುಕೊಂಡರೆ ಹೀಗೇ ಆಗೋದು! ಇನ್ನಾದರೂ ಯಾವನಾದರೂ ಬೀದೀಲಿ ಹೋಗುವವನನ್ನಾದರೂ ಕರೆತಂದು ಕಂಕಣವನ್ನು ಕಟ್ಟಿ ಕಳಿಸೋ ಪ್ರಯತ್ನ ಮಾಡಿ" ಎಂದಳು. ಆ ದಿನ ನನ್ನ ಮನಸ್ಸಿಗೆ ವಿಶೇಷ ವ್ಯಥೆಯುಂಟಾದ ಹಾಗೆ ಆಗಿ, ಹಿತ್ತಲಿಗೆ ಹೋಗುವಳ ಹಾಗೆ ಹೋಗಿ ಪಕ್ಕದ ಮನೆಯಲ್ಲಿ ಕುಳಿತುಬಿಟ್ಟೆನು. ಪಕ್ಕದ ಮನೆಯವರು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಯಾವಾಗಲಾದರೂ ನಾನು ಅವರ ಮನೆಗೆ ಹೋದಾಗ ನನ್ನ ತಲೆಗೆ ಸುವಾಸನೆ ಎಣ್ಣೆ ಹಚ್ಚಿ

ಬಾಚುತ್ತಿದ್ದರು. ಏನಾದರೂ ಹಣ್ಣನ್ನು ತಿನ್ನುವುದಕ್ಕೆ ಕೊಡುತ್ತಿದ್ದರು. ಈ ಸಂಗತಿಯು ನಡೆದ ದಿನ ಆ ಹೆಂಗಸರು ನನ್ನ ಮ್ಲಾನ ವದನವನ್ನು ನೋಡಿ 'ಯಾಕಮ್ಮ, ಮಗು, ಇವತ್ತು ಸಪ್ಪಗಿದ್ದೀಯೆ?" ಎಂದರು. ನನ್ನ ದುಃಖವು ಹೆಚ್ಚಾಯಿತು. ಗಟ್ಟಿಯಾಗಿ ಅತ್ತು ಬಿಟ್ಟೆನು. ಆಗ ನಾನು ಹರಕು ಸೀರೆಯನ್ನುಟ್ಟಿದ್ದೆನು. ಆದರಿಂದ ನನ್ನ ಮೈಯ ಕೆಲವು ಭಾಗಗ ಳಲ್ಲಿದ್ದ ಬಾಸುಂಡೆಗಳು ಅವರಿಗೆ ಕಾಣಿಸಿದವು. ಮೂವರು ಹೆಂಗಸರೂ ನನ್ನ ಸೆರಗನ್ನು ತೆರೆದು, ಕನಿಕರದಿಂದ 'ಯಾರಮ್ಮ ಹೀಗೆ ಹೊಡೆದಿದ್ದಾರೆ ನಿನ್ನಾ!" ಎಂದು ಕೇಳಿದರು. ನಾನು "ಅಪ್ಪ ಮತ್ತು ಅಣ್ಣ" ಎಂದೆನು.

" ಏಕೆ ?"

ನಾನು ನಡೆದಸಂಗತಿಯನ್ನೆಲ್ಲ ಹೇಳಿದೆನು. ಅವರು ಕರುಣೆಯಿಂದ, "ಅಯ್ಯೋ ಪಾಪ ನೀನೇನೂ ತಿಳಿವಿಲ್ಲದಹುಡುಗಿ! ಆ ಕಾಗದ ನಿಮ್ಮಣ್ಣನಿ ಗೇಕೆ ತೋರಿಸಿದೆ ? ಅದನ್ನು ಅಲ್ಲೇ ಒಲೆಯಲ್ಲಿ ಹಾಕಿಬಿಡಬೇಕಾಗಿತ್ತು. ಅಥವಾ ಇಲ್ಲಿತಂದಿದ್ದರೆ ನಾವು ಓದಿ ಹೇಳುತ್ತಿದ್ದವಲ್ಲ" ಎಂದರು. ನಾನು ಮನಸ್ಸಿನಲ್ಲಿ 'ಇನ್ನು ಮುಂದೆ' ಹಾಗೇ ಮಾಡ್ತೇನೆ. ಹಾಗಾದರೆ ಹೆಂಗ ಸರೂ ಓದುಬರಹಕಲೀತಾರೆಯೆ!' ಅಂದುಕೊಂಡೆನು ಆ ಹೆಂಗಸರು ನನ್ನ ತಲೆಬಾಚಿ ಹೆರಳುಹಾಕಿ, ಹೂ ಮುಡಿಸಿ ಬಿಸ್ಕತ್ತುಗಳನ್ನೂ ಹಣ್ಣುಗಳನ್ನೂ ತಿನ್ನುವುದಕ್ಕೆ ಕೊಟ್ಟರು. ನಾನು ತಿಂದೆನು. ಕುಡಿಯುವುದಕ್ಕೆ ಹಾಲು ಕೊಟ್ಟರು. ಕುಡಿದು 'ನಾನು ಇವರ ಮಗಳಾಗಿದ್ದರೆ ಎಷ್ಟು ಚೆನ್ನಾಗಿತ್ತಲ್ಲಾ. ಎಷ್ಟು ಸುಖವಾಗಿ ಸಾಕುತ್ತಿದ್ದರಲ್ಲ' ಎಂದುಕೊಂಡೆನು, ಮತ್ತೆ ಏಟಿನ ಭಯ ದಿಂದ, ಮನೆಯಕಡೆ ಹೊರಟೆನು. ಮನೆಬಿಟ್ಟು ೩-೪ ಘಂಟೆ ಸಮಯವಾಗಿ ದ್ದುದರಿಂದ, ಅಮ್ಮನು 'ನೀವೇನೋ ಹೊಡೆದುಬಿಟ್ಟಿರಿ. ಆ ಗಿರಾಕಿ ತಪ್ಪಿ ಹೋದಾರು ಎಂಬ ಭಯದಿಂದ ಅವನನ್ನ ಗದರಿಸದೇ ಹುಡುಗೀನೇ ಬಲಿ ಹಾಕಿಬಿಟ್ಟಿರಿ. ಈಗ ನೋಡಿ, ಹುಡುಗಿ ಮನೆಬಿಟ್ಟು ಹೊರಟುಹೋದಳು. ಭಾವೀಲೇ ಬಿದ್ದುಬಿಟ್ಟಳೋ ? ನದೀಲೇ ಬಿದ್ದುಬಿಟ್ಟಳೋ ? ಇಷ್ಟು ದಿವಸ ಇಲ್ಲಿದ್ದು ಈದಿನ ಈ ಕಾಗದ ತಂದು, ಅದೂ ಅವಳ ಅಣ್ಣನ ಕೈಲ್ಲಿ ಕೊಡಬೇ ಕಾದರೆ, ಹುಡುಗಿ ಮನಸ್ಸು ಎಷ್ಟು ನಿರ್ಮಲವಾಗಿದೆ ಅಂತ ಗೊತ್ತಾಗುವು ದಿಲ್ವೇ' ಎಂದು ಏನೇನೋ ಕೂಗಾಡುತ್ತಿದ್ದಳು. ನನ್ನನ್ನು ನೋಡಿದ

ಕೂಡಲೆ ಅಣ್ಣನು ಬಂದು 'ಏನೇ ಅಪ್ಪನು ಹೊಡೆದರೆ ಸಿಟ್ಟುಮಾಡಿಕೊಂಡು ಹೋಗಿಬಿಡಬೇಕೆ? ಬಾ, ಅಮ್ಮಾ, ಬಂದಳು. ಸಾಕು!' ಎಂದನು. ಕೂಡಲೆ ಅಮ್ಮನು ನನ್ನನ್ನು ಒಳಗೆ ಕರೆದುಕೊಂಡು ಹೋಗಿ, ಎಲೆಹಾಕಿ, ಅನ್ನ ಬಡಿಸಿ, ಹೆಚ್ಚು ತುಪ್ಪವನ್ನು ಸುರಿದು 'ನಿಧಾನವಾಗಿ ಊಟಮಾಡಮ್ಮ ಇವತ್ತು ನೀನು ಎದ್ದ ಘಳಿಗೆ ಒಳ್ಳೆಯದಲ್ಲ' ಎಂದಳು. ಎಷ್ಟಾದರೂ ತಾಯಿಯ ಕರುಳು! ಅಂದಿನಿಂದ ಮುಂದೆ ನನಗೆ ಬೈಗಳು ಬೀಳುವುದೂ ನಿಂತು ಹೋಯಿತು.

ಮುಂದೆ ಕೆಲವು ದಿನಗಳಾದನಂತರ ನಮ್ಮ ಹೋಟೆಲಿಗೆ ಬರುತ್ತಿದ್ದ ವಿದ್ಯಾರ್ಥಿಯೊಬ್ಬನು ನಾನು ಬಚ್ಚಲು ಮನೆಯಲ್ಲಿ ಮುಸುರೆ ತಿಕ್ಕುತ್ತಿರುವಾಗ ಒಂದು ಚೀಟಿಯನ್ನು ನನ್ನ ಕೈಲಿಟ್ಟು, ನನ್ನ ಗಲ್ಲವನ್ನು ಹಿಡಿದು, 'ಇದನ್ನು ಮುಚ್ಚಿಟ್ಟುಕೊ. ಯಾರಿಗೂ ತಿಳಿಯದಂತೆ ಓದಿಕೊ!' ಎಂದು ಕಾಲ್ತೊಳೆದುಕೊಂಡು ಹೊರಟುಹೋದನು. ಇಂಥ ಚೀಟಿಗಳು ಈ ಮುಂಚೆ ಎಷ್ಟೋ ನನ್ನ ಕೈಗೆ ಬಂದಿದ್ದವು. ಆದರೆ ಅವುಗಳೆಲ್ಲವನೂ ಅಗ್ನಿದೇವನಿಗೆ ಆಹುತಿಯಾಗರ್ಪಿಸಿದ್ದೆನು. ಆದರೆ ಈ ದಿನ ಅಕಸ್ಮಾತ್ತಾಗಿ ಅದರಲ್ಲಿರುವ ವಿಷಯಯವನ್ನು ತಿಳಿಯಬೇಕೆಂಬ ಕುತೂಹಲವುಂಟಾಗಿ ಕೈತೊಳೆದು ಪಕ್ಕದ ಮನೆಗೆ ಹೋದೆನು. ಪಕ್ಕದ ಮನೆಯ ಹೆಂಗಸರು ಆ ಹೊತ್ತಿನಲ್ಲಿ ನನ್ನನ್ನು ನೋಡಿ, 'ಏನು, ಇವತ್ತು ಇಷ್ಟುಬೇಗ ಕೆಲಸ ಮುಗಿಸಿಕೊಂಡೆಯೇನು? ಏನು ಬಂದೆ?' ಎಂದು ಕೇಳಿದರು. ನಾನು ಚೀಟಿಯನ್ನು ಅವರ ಕೈಗೆ ಕೊಟ್ಟು 'ಇದನ್ನು ಓದಿ ಹೇಳಿ' ಎಂದೆನು. ಅವರು ಚೀಟಿಯನ್ನು ಬಿಚ್ಚಿದರು. ಅದರೊಳಗಿನಿಂದ ಒಂದು ಐದು ರೂಪಾಯಿಯ ನೋಟು ಬಿದ್ದಿತು. ಆಶ್ಚರ್ಯದಿಂದ ಅವರಲ್ಲೊಬ್ಬಳು ಅದನ್ನು ಕೈಗೆ ತೆಗೆದುಕೊಂಡು ಓದಲಾರಂಭಿಸಿದಳು.—

'ಪ್ರಿಯಳೆ,

'ಪ್ರಿಯೆ ಸಾಕೂ,-ನಾನು ನಿತ್ಯವೂ ನಿನ್ನ ಕಷ್ಟವನ್ನು ನೋಡುತ್ತಲಿದ್ದೇನೆ, ನೋಡಿ ನೋಡಿ ನನ್ನ ಹೃದಯವು ಬೆಂದುಹೋಗುತ್ತಲಿದೆ ನಿನಗಿರುವ ರೂಪಲಾವಣ್ಯವನ್ನೂ ಅಂಗಸೌಷ್ಟವವನ್ನೂ ನೋಡಿದರೆ ನೀನು ಧನಿಕರ ಮನೆಯನ್ನು ಅಲಂಕರಿಸಬೇಕಾದ ಹುಡುಗಿಯಾಗಬೇಕಾಗಿತ್ತು.

ಏನೋ ದುರ್ದೈವದಿಂದ ನಿನ್ನ ಬಡತಂದೆತಾಯಿಗಳ ಹೊಟ್ಟೆಯಲ್ಲಿ ಹುಟ್ಟಿರುವೆ. ಆದರೂ ಚಿಂತೆಯಿಲ್ಲ. ಈಗ ದೇವರು ನಿನ್ನ ಮೇಲೆ ಕರುಣೆಯಿಟ್ಟಂತೆ ತೋರುತ್ತದೆ. ಆದ್ದರಿಂದ ನನ್ನ ಮನಸ್ಸು ತಿರುಗಿದೆ. ಇವತ್ತು ನನ್ನ ಬಿ.ಏ., ಪರೀಕ್ಷೆಯು ಮುಗಿಯಿತು ನಾಡಿದ್ದು ಬೆಳಿಗ್ಗೆ ಮೇಯಿಲಿನಲ್ಲಿ ನಾನು ಮದ್ರಾಸಿಗೆ ಪ್ರಯಾಣಮಾಡುತ್ತೇನೆ. ನೀನು ಮನೆಯಲ್ಲಿ ಯಾರಿಗೂ ಹೇಳದೆ ರೈಲು ಸ್ಟೇಷನಿಗೆ ಬಂದುಬಿಡು. ಅಲ್ಲಿ ನಿನಗಾಗಿ ಟಿಕೇಟು ತೆಗೆದುಕೊಂಡಿರುತ್ತೇನೆ. ಇಬ್ಬರೂ ಒಂದು ಸಾರಿ ಈ ಸ್ಥಳವನ್ನು ಬಿಟ್ಟರೆ, ಆಮೇಲೆ ನನ್ನ ಅರಮನೆಗೆ ನೀನೇ ರಾಣಿಯಾಗಿರಬಲ್ಲೆ. ಯಾವುದಕ್ಕೂ ಇವತ್ತು ಸಾಯಂಕಾಲ ಉತ್ತರ ಕೊಡು.—

ಇತಿ.

ನಿನ್ನ ರೂಪದ ದಾಸ-ನಾನು.'

ಈ ಕಾಗದದ ಅರ್ಥವು ನನಗೆ ಸರಿಯಾಗಿ ತಿಳಿಯಲಿಲ್ಲ. ಆದರೆ ಕಾಗದವನ್ನು ಓದಿದ ಹೆಂಗಸು ಅಂದು ನನಗೆ "ಹೆಂಗಸಂದರೇನು? ರಾಣಿಯೆಂದರೇನು" ಇತ್ಯಾದಿ ಇತ್ಯಾದಿ ಎಷ್ಟೋ ವಿಷಯಗಳಲ್ಲಿ ಶಿಕ್ಷಣಕೊಟ್ಟಳು. ಆಗ ನನ್ನಲ್ಲಿ ಸುಪ್ತವಾಗಿದ್ದ ಸ್ತ್ರೀತ್ವವು ಜಾಗೃತಗೊಂಡಿತು. ನಾನು ಆ ಕಾಗದವನ್ನೂ ನೋಟನ್ನೂ ತೆಗೆದುಕೊಂಡು ಹಿಂದಿರುಗಿದೆನು. ಆದಿನ ರಾತ್ರಿ ಆ ಚೀಟಿಯನ್ನು ಕೊಟ್ಟ ವಿದ್ಯಾರ್ಥಿಯು ಊಟಕ್ಕೆ ಬಂದಾಗ ಅವನ ನೋಟನ್ನು ಹಿಂದಿರುಗಿಕೊಟ್ಟು 'ಕ್ಷಮಿಸಬೇಕು.' ಎಂದು ಹೇಳಿ ಹೊರಟು ಹೋದೆನು. ಮುಂದೆ ಈ ವಿದ್ಯಾರ್ಥಿಯು ವಿವಾಹಿತನಾದ ಒಬ್ಬ ಧನಿಕನೆಂದು ತಿಳಿಯಿತು!

— ೩ —

ನನ್ನ ತಂದೆತಾಯಿಗಳ ಲೆಕ್ಕದಲ್ಲಿ ಕ್ರಮೇಣ ನನ್ನ ವಯಸ್ಸು ಕಡಿಮೆಯಾಗುತ್ತಿದ್ದರೂ, ನನ್ನ ವಯಸ್ಸು ಹೆಚ್ಚಿದಂತೆ ನನ್ನ ಅಂಗಾಂಗಗಳಲ್ಲಿ ಯೌವನದ ಕುರುಹುಗಳು ತೋರಲಾರಂಭಿಸಿದವು. ಮನಸ್ಸಿಗೆ ಯಾವುದನ್ನು ಮಾಡಕೂಡದೆಂದು ನಿಷೇಧವಿರುತ್ತದೊ, ಅದನ್ನು ಮಾಡಿ ನೋಡುವುದರಲ್ಲಿ ಕುತೂಹಲವೂ ಆನಂದವೂ ಹೆಚ್ಚು. ಅದರಲ್ಲಿ ಮುಂದಾಗುವ ಪರಿಣಾಮವು ಮೊದಲೇ ತಿಳಿಯದಿದ್ದರೆ ಮನಸ್ಸು ಮತ್ತಷ್ಟು ಸ್ವೇಚ್ಛೆಯಾಗಲಿಚ್ಛಿಸುವುದು. ನನಗೆ ಮನೆಯಲ್ಲಿ ಪರ ಗಂಡಸರ ಹತ್ತಿರ ಮಾತನಾಡಬೇಡ, ಒಂದೇ ಆಸನ

ದಲ್ಲಿ ಗಂಡಸಿನೊಂದಿಗೆ ಕೂತುಕೊಳ್ಳಬೇಡ ಎಂಬೀ ನಿಷೇಧದಿಂದ ನನ್ನ ಮನಸ್ಸು "ಕೂತರೆ ಏನಾಗುವುದು, ಮಾತನಾಡಿದರೆ ಏನಾಗುವುದು ?" ಎಂದು ಕೇಳಲಾರಂಭಿಸಿತು. ಆದರೆ ಮನೆಯವರ ಹೆದರಿಕೆಯಿಂದ ನಾನು ಆ ಕೆಲಸವನ್ನು ಮಾಡಲು ಹಿಂಜರಿಯುತ್ತಿದ್ದೆನು. ಹೆದರಿಕೆಯಂಥ ಕೆಟ್ಟ ಗುಣವಿಲ್ಲ ನಮ್ಮ ಸಮಾಜದಲ್ಲಿಯೂ "ಯಾರು ಏನೆನ್ನುವರೋ" ಎಂಬೀ ಹೆದರಿಕೆಯಿಂದ ಬಹಿರಂಗದಲ್ಲಿ ಅನೇಕರು ನೀತಿ ನಿಪುಣರಾಗಿ ತೋರುವವರು ಅನೇಕರಿರುವರು. ಹೆದರಿಕೆಯಿಂದುಂಟಾದ ನೀತಿಗಿಂತಲೂ ನಿರ್ಭಯದಿಂದಿರುವ ಅನೀತಿಯೆ ಎಷ್ಟೋ ಮೇಲಾದುದೆಂದು ನನಗೆ ಅನಿಸಿತು. ಏಕೆಂದರೆ ಹೆದರಿಕೆಯ ತಳಹದಿಯ ಮೇಲಿರುವ ನೀತಿಯ ಕಟ್ಟಡದಲ್ಲಿ ಕಾಪಟ್ಯವಿದೆ, ಮೋಸವಿದೆ, ವಂಚನೆಯಿದೆ, ಪ್ರಾಮಣಿಕತೆಯಿಲ್ಲ. ನಿರ್ಭಯದ ಅನೀತಿಯಲ್ಲಿ ಪ್ರಾಮಾಣಿಕತೆಯಿದೆ, ಕಾಪಟ್ಯವಿಲ್ಲ, ವಂಚನೆಯಿಲ್ಲ, ಮೋಸವಿಲ್ಲ. ಸಮಗ್ರ ಸಮಾಜಕ್ಕೆ ಅಂಥವರ ನಡೆತೆಯು ತಿಳಿದಿರುವುದು. ಅಂಥವರಿಂದ ಸಮಾಜಕ್ಕೆ ಯಾವ ಮೋಸವೂ ಆಗಲಾರದು. ನನ್ನ ಸ್ಥಿತಿಯ ವಿಚಾರದಲ್ಲಿ ಮನಸ್ಸಿನಲ್ಲಿ ಹಲವು ಬಗೆಯ ಯೋಚನೆಗಳು ಹುಟ್ಟಲಾರಂಭಿಸಿದವು. ನನ್ನ ಮನಸ್ಸು "ಎಷ್ಟು ದಿನ ಈ ವಂಚನೆ? ಎಷ್ಟು ದಿನ ಹೀಗಿರಬಲ್ಲೆ? ನಿನ್ನ ಈ ಸೌಂದರ್ಯವೇಕೆ ? ನಿನ್ನ ತಂದೆತಾಯಿಗಳು ಬಡವರಾಗಿದ್ದರೂ, ನಿನ್ನಲ್ಲಿ ಯೌವನ ಧನವಿದೆ ಅದನ್ನು ವಿನಿಯೋಗಿಸಿ ಸುಖಪಡು. ಪುರುಷನು ಧನದಿಂದ ಸ್ತ್ರೀಯ ದೇಹವನ್ನು ವಿಕ್ರಯಿಸಬಲ್ಲನಾದರೆ, ಸ್ತ್ರೀಯು ತನ್ನ ಸೌಂದರ್ಯ ಮತ್ತು ಯೌವನ ಧನದಿಂದ ಪುರುಷನನ್ನು ವಶಪಡಿಸಿಕೊಳ್ಳಬಲ್ಲಳು. ಪ್ರೇಮ, ಸತಿ ಪತಿಯರ ಪ್ರೇಮ, ಎಂದರೇನು ? ಪ್ರಪಂಚದಲ್ಲಿ ಪ್ರೇಮದ ಬೆಲೆಯನ್ನರಿತವರು ನೂರರಲ್ಲಿ ಒಬ್ಬ ಸಿಕ್ಕುವುದು ಕಷ್ಟ. ಅಂಥಾ ಆದರ್ಶ ಸತಿಪತಿಗಳ ಜತೆ ಸಾವಿರಕ್ಕೊಂದು ಸಿಕ್ಕುವುದು ಕಷ್ಟ. ಈಗಿರುವ ಸತಿಪತಿಗಳೆಂದರೆ ಎಲ್ಲರು ಸಮಾಜದ ಹೆದರಿಕೆಯಿಂದ ಸತಿಪತಿಗಳಾಗಿರುವವರೇ ! ಹೊಟ್ಟೆಯ ಪಾಡು ಸುಖವಾಗಿ ನಡೆಯುವವರಿಗೆ ಸಮಾಜದ ಹೆದರಿಕೆ. ದರಿದ್ರರ ಮಗಳಾಗಿ ನಿನಗೇಕೆ ಅದರ ಚಿಂತೆ? ನಿನಗೆ ದೈಹಿಕ ಸುಖವು ದೊರೆಯಬೇಕಾದರೆ, ನೀನು ಯಾವನಾದರೊಬ್ಬ ಪುರುಷನನ್ನು ಅನುಸರಿಸು" ಎಂದು ಹೇಳಲಾರಂಭಿಸಿತು. ನಾನು ಅದರ ಉದ್ವೇಗವನ್ನು ತಡೆದುಕೊಳ್ಳ

ಲಾರದೇ ಹೋದೆನು, ಏಕೆಂದರೆ ನಮ್ಮ ಹೋಟಲಿಗೆ ಬರುವ ಜನರೆಲ್ಲರೂ ನನ್ನ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಲಾರಂಭಿಸಿದರು. "ಜನರು ಹೇಗೂ ಆಡಿಕೊಳ್ಳುವರು, ಇನ್ನು ನಾನು ಕಾರ್ಯರಂಗಕ್ಕಿಳಿಯಲು ತಡ ವೇಕೆ?" ಎಂದುಕೊಂಡೆನು. ಆಗ ನನಗೆ ವೇದಾಂತ ವಿಚಾರವೇನೂ ತಿಳಿ ಯದು. ಪಾಪವೆಂದರೇನೋ ಪುಣ್ಯವೆಂದರೇನೋ ತಿಳಿಯದು: ಮನಸ್ಸು ಶಾಂತವಾಗಿದ್ದರೆ ಅದೇ ಪುಣ್ಯ, ಅಶಾಂತವಾಗಿದ್ದರೆ ಅದೇ ನರಕವೆಂದು ನನ್ನ ಭಾವನೆಯಾಗಿತ್ತು.

ಕೆಲವು ದಿನಗಳಲ್ಲಿ ಮನಸ್ಸಿನ ಅಶಾಂತಿಯು ಹೆಚ್ಚಿತು. ನಮ್ಮ ಹೋಟಲಿಗೆ ಒಬ್ಬ ಬಿಲ್ಲವರ ಯುವಕನು ಊಟಕ್ಕೆ ಬರುತ್ತಿದ್ದನು. ಅವನು ಸ್ವಲ್ಪ ಮಟ್ಟಿಗೆ ಇಂಗ್ಲೀಷನ್ನು ಕಲಿತಿದ್ದನು. ಕನ್ನಡದಲ್ಲಿ ಚೆನ್ನಾಗಿ ಪಾಂಡಿತ್ಯವಿದ್ದಿತು. ಆಗ ಅವನಿಗೆ ೨೫ ರೂಪಾಯಿ ಸಂಬಳದ ಒಂದು ಕೆಲಸವು ದೊರಕಿತ್ತು. ಅವನು ರೂಪದಲ್ಲಿಯೂ ಶೀಲದಲ್ಲಿಯೂ ಚೆನ್ನಾಗಿದ್ದನು. ಅವನಿಗೆ ಇರುವುದಕ್ಕೆ ಬೇರೆ ಮನೆಯು ಸಿಕ್ಕಿರಲಿಲ್ಲ. ಆದ್ದರಿಂದ ರಾತ್ರಿ ನಮ್ಮ ಹೋಟಲಿನಲ್ಲಿಯೆ ಮಲಗಿಕೊಳ್ಳುತ್ತಿದ್ದನು. ಒಂದು ದಿನ ರಾತ್ರಿ ೧೨ ಘಂಟೆಯ ಸಮಯ. ಎಲ್ಲರೂ ಮಲಗಿದ್ದರು. ಬಹಿರಂಗದಲ್ಲಿ ನೀತಿವಂತರಂತೆ ನಟಿಸುತ್ತ,, ಮರೆಯಲ್ಲಿ ಪಾಪಾಚರಣೆಯನ್ನು ಮಾಡುವವರಿಗೆ ಅದೇ ಸಮಯ. ನಿರೋಧದಿಂದ ತಡೆಗಟ್ಟಿದ್ದ ನನ್ನ ಮನಸ್ಸು ತಡೆಯನ್ನು ಕಡಿದು ಅಲ್ಲೋಲ ಕಲ್ಲೋಲವಾಯಿತು. ನಾನು ಚಾಪೆಯ ಮೇಲೆ ಎದ್ದು ಕುಳಿತು, ಆ ಬಿಲ್ಲವ ಯುವಕನು ಮಲಗಿದ್ದ ನಡುಮನೆಗೆ ದೀಪವನ್ನು ತೆಗೆದುಕೊಂಡು ಬಂದೆನು. ಅವನ ಮುಖವನ್ನು ಚೆನ್ನಾಗಿ ದೃಷ್ಟಿಸಿ ನೋಡಿದೆನು. ಅವನಿಗಿನ್ನೂ ನಿದ್ದೆ ಹತ್ತಿರಲಿಲ್ಲ. ದೀಪವು ಅಷ್ಟು ಹೊತ್ತು ಅವನ ಬಳಿಯಿದ್ದುದನ್ನು ನೋಡಿ ಕಣ್ತೆರದನು. ನಾನು "ಸುಮ್ಮನಿರು, ಮಾತನಾಡಬೇಡವೆಂದು" ಸಂಜ್ಞೆ ಮಾಡಿದೆನು. ಅವನು ಸುಮ್ಮನಿದ್ದನು. ನಾನು ದೀಪವನ್ನು ಆರಿಸಿ, ಅವನ ಪಕ್ಕದಲ್ಲಿ ಮಲಗಿ, ಅವನನ್ನ ಆಲಂಗಿಸಿಕೊಂಡೆನು. ಆಗ ನನಗುಂಟಾದ ಭಾವನೆಯನ್ನು ನಾನು ವರ್ಣಿಸಲಾರೆ. ಅನಂತರ ಪಿಸುಮಾತಿನಲ್ಲಿ ನಾವಿಬ್ಬರೂ ಏನೇನೊ ಮಾತನಾಡಿಕೊಂಡೆವು. ಮರುದಿನ ಆ ಯುವಕನು

ತಾನು ಕೆಲಸಮಾಡುತ್ತಿದ್ದ "ಪ್ಯಾರೀ ಅಂಡ್ ಕಂಪನಿ"ಯವರಲ್ಲಿ ಏನೇನೋ ಹೇಳಿಕೊಂಡು ಹೊಸದುರ್ಗವೆಂಬಲ್ಲಿದ್ದ ಆ ಕಂಪನಿಯ ಶಾಖೆಗೆ ತನ್ನನ್ನು ವರ್ಗಾಯಿಸಬೇಕೆಂದು ಕೇಳಿಕೊಂಡು ಬಂದನು. ಅದರ ಮಾರನೆಯ ದಿನ ಮುಂಜಾವಿನಲ್ಲಿ ಇನ್ನು ನಸು ನಸು ಕತ್ತಲೆ. ಆಗ ಒಬ್ಬ ಸ್ಫುರದ್ರೂಪಿಯಾದ ಯುವಕನೂ ಒಬ್ಬ ಸುಂದರಿಯಾದ ಯುವತಿಯೂ ಮಂಗಳೂರಿನಿಂದ ಹೊರಡುವ ಮೇಯಿಲ್ ಗಾಡಿಯಲ್ಲಿ ಕುಳಿತಿದ್ದರು. ಗಾಡಿಯು ಹೊರಟಿತು ಬೆಳಿಗ್ಗೆ ೯ ಘಂಟೆಗೆ ಹೊಸದುರ್ಗವನ್ನು ತಲುಪಿತು. ಅಲ್ಲಿ ಅವರಿಬ್ಬರೂ ಇಳಿದರು. ಯುವಕನು ಯುವತಿಯನ್ನು ಕರೆದುಕೊಂಡು 'ಪ್ಯಾರೀ ಕಂಪೆನಿ'ಯ ಏಜಂಟರ ಬಳಿಗೆ ಹೋಗಿ ತಾನು ಮರುದಿನದಿಂದ ಕೆಲಸದ ಮೇಲೆ ಹಾಜರಾಗುವಂತೆ ತಿಳಿಸಿ ಬಂದನು. ಅಲ್ಲಿಂದ ಯುವಕ ಯುವತಿಯರಿಬ್ಬರೂ ಒಂದು ಹೋಟಲಿನಲ್ಲಿ ಬಂದಿಳಿದರು. ಅಲ್ಲಿ ಹೋಟಲಿನವನಿಗೆ ಸೇರಿದ ಒಂದು ಮನೆಯು ಖಾಲಿ ಇತ್ತು. ಅವನು ಆ ಮನೆಯನ್ನು ಬಾಡಿಗೆಗೆ ಕೊಡಲೊಪ್ಪಿದನು. ಆ ಯುವಕ ಯುವತಿಯರಿಬ್ಬರೂ ಆ ಮನೆಯಲ್ಲಿ ಸತಿಪತಿಯರಂತೆ ವಾಸಿಸಲಾರಂಭಿಸಿದರು. ಅವರ ಪರಿಚಯವನ್ನು ಹೊಸದಾಗಿ ಹೇಳಬೇಕೇನು ?

ಇಷ್ಟು ದಿನ ಪ್ರಹರಗಳಿಗೂ ನಿಂದೆಗೂ ಗುರಿಯಾಗಿದ್ದ ನಾನು, ಇಂದು ನನ್ನ ಇಷ್ಟಾರ್ಥವನ್ನು ನೆರವೇರಿಸಿಕೊಂಡು ಸುಖಿಯಾಗಿರುವಂತೆ ಭಾವಿಸಿದ್ದೆನು. ಆದರೆ ದುಃಖದ ನಂತರ ಸುಖವೂ ಸುಖದನಂತರ ದುಃಖವೂ ಚಕ್ರ ನೇಮೀ ಕ್ರಮದಿಂದ ಬರುವುದು ಪ್ರಕೃತಿನಿಯಮ. ನಾನು ಚಿರಕಾಲ ಸುಖವನ್ನೆ ಭೋಗಿಸುವೆನೆಂದು ತಿಳಿದಿದ್ದೆನು. ಎರಡು ವರ್ಷಕಾಲ ನಾವಿಬ್ಬರೂ ಸುಖವಾಗಿದ್ದೆವು. ಅನಂತರ ಆ ಬಿಲ್ಲವನ ತಂದೆಯು ಬಂದು "ನಿನಗೆ ಮದುವೆಯನ್ನು ಏರ್ಪಡಿಸಿ ಬಂದಿರುವೆನು. ನಮ್ಮ ಜಾತಿಯಲ್ಲಿ ನಿನ್ನಷ್ಟು ವಿದ್ಯೆಯನ್ನು ಕಲಿತವರು ಯಾರೂ ಇಲ್ಲ, ಆದ್ದರಿಂದ ನಮ್ಮೂರಿನ ಧನಿಕರಾದ ಸುವರ್ಣರ ಮಗಳನ್ನು ನಿನಗೆ ಕೊಡಲು ನಿಶ್ಚಯಿಸಿರುವರು. ನಾಳಿದ್ದು ಮದುವೆ" ಎಂದು ಯುವಕನನ್ನು ಕರೆದುಕೊಂಡು ಹೋದನು. ಆಗ ನನಗೆ ದಿಕ್ಕು ತೋಚದಂತಾಯಿತು. ಈ ಎರಡು ವರ್ಷ ಕಾಲದಲ್ಲಿ ಯುವಕನು ನನ್ನ ಕೈಗೆ ತಂದುಕೊಡುತ್ತಿದ್ದ ಹಣದಲ್ಲಿ ೧೦೦ ರೂಪಾಯಿಗಳನ್ನು ಸಂಗ್ರಹಿ

ಸಿಟ್ಟಿದ್ದೆನು. ಈ ಹಣವನ್ನು ಕೇಳಲು ಯುವಕನಿಗೆ ಮನಸ್ಸಿಲ್ಲದೆ ಅವನ ತಂದೆಯ ಬಲಾತ್ಕಾರಕ್ಕೂ ತನ್ನನ್ನು ಜಾತೀಯ ಬಂಧುಗಳು ಬಹಿಷ್ಕರಿಸಿ ಯಾರೆಂಬ ಬೆದರಿಕೆಗೂ ಹೆದರಿ, ತಂದೆಯನ್ನು ಹಿಂಬಾಲಿಸಿದನು. ನಾನು ಒಬ್ಬಂಟಿಗಳಾಗಿ, ಸಕಲ ಬಂಧುವೂ ಅವನೇ ಎಂದು ನಂಬಿಕೊಂಡಿದ್ದು, ಕೊನೆಗೆ ಆ ಯುವಕನಿಂದ ತ್ಯಜಿತಳಾಗಿ, ವಿಶೇಷ ಆಲೋಚನೆಗೆ ಗುರಿಯಾದೆನು.

— ೪ —

ನಾನು ಮಗಳೂರನ್ನು ಬಿಟ್ಟು ಹೋದಮೇಲೆ ಅಲ್ಲಿ ಪ್ಲೇಗು ಹೆಚ್ಚಾಯಿತು. ನನ್ನ ತಂದೆತಾಯಿಗಳಿಗೆ ನನ್ನ ಪತ್ತೆಯು ಹತ್ತಲಿಲ್ಲ. ಅವರಿಬ್ಬರೂ ನನ್ನ ಹಿರಿಯ ಅಣ್ಣಂದರಿಬ್ಬರೂ ಪ್ಲೇಗಿನಲ್ಲಿ ಮಡಿದರು. ನಮ್ಮ ಹೋಟಲು ನಿಂತುಹೋಯಿತು. ಆಗ ನನ್ನ ಕಿರಿಯ ಅಣ್ಣಂದಿರಿಬ್ಬರು ಹೈಸ್ಕೂಲಿನಲ್ಲಿ ಓದುತ್ತಿದ್ದರು. ತಂದೆ ತಾಯಿಗಳ ಮರಣದಿಂದಲೂ ಹೋಟಲು ನಿಂತು ಹೋದ್ದರಿಂದಲೂ, ಅವರ ವಿದ್ಯಾಭ್ಯಾಸಕ್ಕೆ ತೊಂದರೆಯುಂಟಾಯಿತು. ಅವರಲ್ಲೊಬ್ಬನಿಗೆ ಒಂದು ಅಂಗಡಿಯಲ್ಲಿ ೧೦ ರೂಪಾಯಿ ಸಂಬಳದ ಗುಮಾಸ್ತೆಯ ಕೆಲಸವು ಸಿಕ್ಕಿತು. ಅದರಲ್ಲಿಯೆ ಇಬ್ಬರು ಅತಿ ಕಷ್ಟದಿಂದ ಕಾಲಹರಣೆ ಮಾಡುತ್ತಿದ್ದರು.

ಹೊಸ ದುರ್ಗದಲ್ಲಿ ನಾನು ಏಕಾಂಗಿಯಾದನಂತರ ಅಂತಹ ಊರಿನಲ್ಲಿರುವುದಕ್ಕಿಂತಲೂ ಮಂಗಳೂರಿಗೆ ಹೋಗಿ ವಾಸಿಸುವುದು ಮೇಲೆಂದು ತೋರಿತು. ಮರುದಿನ ಸಾಯಂಕಾಲವೇ ನಾನು ಮಂಗಳೂರಿಗೆ ಬಂದು ತಲುಪಿದೆನು. ರೈಲ್ವೆ ಸ್ಟೇಷನಿನಿಂದ ಹೊರಟವಳು ನೇರವಾಗಿ ನಮ್ಮ ಹೋಟಲಿನ ಪಕ್ಕದ ಮನೆಗೆ ಬಂದೆನು. ಮನೆಯವರು ನನ್ನನ್ನು ವಿಶೇಷ ಆದರದಿಂದ ಬರಮಾಡಿಕೊಂಡರು. ಆದಿನ ಊಟ ಉಪಚಾರವಾದನಂತರ, ನನ್ನ ತಂದೆ ತಾಯಿಗಳು ನಾನು ಅದೃಶ್ಯಳಾದನಂತರ ಎಷ್ಟು ದುಃಖಪಟ್ಟರೆಂದೂ, ನನ್ನ ಅಣ್ಣಂದಿರು ಎಷ್ಟು ಕಷ್ಟಕ್ಕೆ ಗುರಿಯಾಗಿರುವರೆಂದೂ ತಿಳಿಸಿದರು. ಅನಂತರ ನನ್ನ ಮುಂದಿನ ಜೀವನವು ನಡೆಯಬೇಕಾದರೆ ಅವರ ಧರ್ಮವನ್ನನುಸರಿಸಬೇಕೆಂದು ತಿಳಿಸಿದರು. ಆಗ ನಾನು ೧೯–೨೦ ವರ್ಷದವಳು. "ಈ ಮೊದಲು ನನ್ನ ಸುಖಕ್ಕಾಗಿ ಪುರುಷನಿಗೆ ದೇಹವನ್ನರ್ಪಿಸಿದವಳು, ಈಗ ನನ್ನ ಜೀವನಕ್ಕಾಗಿ ಪರಪುರುಷರಿಗೆ ದೇಹವನ್ನರ್ಪಿಸುವುದರಲ್ಲೇನು ತಪ್ಪು?" ಎಂದುಕೊಂಡೆನು. ಮರುದಿನ ನಾನು ಬೇರೆ ಮನೆಯನ್ನು ಮಾಡಿಕೊಂಡೆನು.

ಒಂದು ತಿಂಗಳಾಗುವ ಹೊತ್ತಿಗೆ ನನ್ನ ಸೌಂದರ್ಯದ ಪ್ರಭೆಯು ಮಂಗಳೂರಿನಲ್ಲೆಲ್ಲ ಹಬ್ಬಿತು. ಆಮೇಲೆ ಕೇಳುವುದೇನು? ಅನೇಕ ಜನ ಬ್ರಹ್ಮಚರ್ಯೋಪದೇಶಕರೂ, ಸ್ನಾನಾನುಷ್ಠಾನನಿರತ ನಟರೂ, 'ರಸಿಕರಾದ ವಕೀಲರೂ, ದೊಡ್ಡ ಜರತಾರಿ ರುಮಾಲಿನವರೂ, ಧನಿಕರೂ, ತಮ್ಮ ಪತ್ನಿಯರಿಂದ ತೃಪ್ತಿಗೊಳ್ಳದಿದ್ದವರೂ ನನ್ನ ಮನೆಗೆ ಬರಲಾರಂಭಿಸಿದರು. ನಾನೂ ಧನಿಕಳಾಗುತ್ತಬಂದೆನು. ಆದರೆ ನನ್ನ ಐಶ್ವರ್ಯವು ಹೆಚ್ಚಿದಂತೆ ನನ್ನಲ್ಲಿ ರೋಗವು ವೃದ್ಧಿಯನ್ನೈದಲಾರಂಭಿಸಿತು. ಆಗ ನನ್ನ ಮುಂದಣ ಜೀವನಕ್ಕೆ ಸಾಕಾದಷ್ಟು ಧನವನ್ನು ಸಂಗ್ರಹಿಸಿದ್ದುದರಿಂದ ಇನ್ನು ಮುಂದೆ ನಾನು ನನ್ನ ದೇಹ ವ್ಯಾಪಾರವನ್ನು ನಿಲ್ಲಿಸಬೇಕೆಂದು ನಿರ್ಧರಿಸಿದೆನು. ನನ್ನ ಅಣ್ಣಂದಿರೂ ಆಗ ಯಾರಿಗೂ ಕಾಣದಂತೆ ಬಂದು ನನ್ನ ಮನೆಯಲ್ಲಿ ಊಟಮಾಡಿಕೊಂಡು ಹೋಗುತ್ತಿದ್ದರು. ಅವರ ವಿದ್ಯಾಭ್ಯಾಸಕ್ಕೂ ನಾನು ಸಹಾಯ ಮಾಡಿದೆನು. ಆದರೆ ಆ ಸಮಯದಲ್ಲಿ ನನ್ನ ಸೌಂದರ್ಯಕ್ಕೆ ಮರುಳಾಗಿ ಬಂದು ನನ್ನ ರೋಗದಲ್ಲಿ ಭಾಗಿಯಾಗಿದ್ದರೂ, ನನ್ನನ್ನು ನಿಂದಿಸದೆ, ನನ್ನ ಪೂರ್ವೋತ್ತರವನ್ನರಿತು, ನನ್ನಲ್ಲಿ ಸಹಾನುಭೂತಿಯನ್ನು ತೋರುತ್ತಿದ್ದ ಒಬ್ಬ ಬ್ರಾಹ್ಮಣನಿದ್ದನು. ಆತನಿಗೂ ೩೦-೩೨ ವಯಸ್ಸು. ಅವನಿಗೆ ಪತ್ನಿಯಿರಲಿಲ್ಲ. ನನ್ನನ್ನೇ ಪತ್ನಿಯಾಗಿ ಸ್ವೀಕರಿಸಿದರು. ನನಗೆ ಅನೇಕ ಔಷಧೋಪಚಾರಗಳನ್ನು ಮಾಡಿಸಿ, ರೋಗಮುಕ್ತಳಾಗಿ ಮಾಡಿದರು. ತಾನೂ ರೋಗ ಮುಕ್ತನಾದರು. ನಮ್ಮಿಬ್ಬರಿಗೂ ವೇದೋಕ್ತ ವಿಧಿಯಲ್ಲಿ ಲಗ್ನವಾಗಿರಲಿಲ್ಲ. ಆದರೂ ನಮ್ಮಂತೆ ಆದರ್ಶರಾದ ಸತಿಪತಿಗಳು ವಿರಳವಾಗಿರುವರೆಂದು ಹೇಳಬಲ್ಲೆನು. ನನ್ನ ಪತಿಯು ಸಾಧುಸಂತರಲ್ಲಿ ವಿಶೇಷ ಭಕ್ತಿಯುಳ್ಳವರು. ಅವರು ಒಂದು ದಿನ ಒಬ್ಬ ಯುವಕ ಯೋಗೀಶ್ವರನನ್ನು ಮನೆಗೆ ಕರೆತಂದರು. ಆತನಿಗೆ ನನ್ನ ಪೂರ್ವ ಚರಿತೆಯೆಲ್ಲವನ್ನೂ ಹೇಳಿ, "ತಾವು ಈಕೆಯು ಮಾಡಿದ ಅಡಿಗೆಯನ್ನು ಊಟಮಾಡುವಿರೊ?" ಎಂದು ಕೇಳಿದರು. ಅದಕ್ಕೆ ಯೋಗೀಶ್ವರನು "ಯಾಕೆ ಮಾಡಬಾರದು ? ತಾಯಿಯು ನೀಡಿದರೆ ಮಗನು ಊಟಮಾಡಬಾರದೆ? ತಾಯಿಗೆ ಇರುವುದು ಜಾತಿ ಒಂದೇ. ಜನನಿಯೂ ಜನ್ಮಭೂಮಿಯೂ ಕೇವಲ ಪವಿತ್ರವಾದ "ಸ್ತ್ರೀ" ಎಂಬ ಜಾತಿಗೆ ಸೇರಿದವರು. ಆದ್ದರಿಂದಲೇ ಅವರು ಸ್ವರ್ಗಕ್ಕಿಂತ ಶ್ರೇಷ್ಠರೆನಿಸಿರುವರು.

ಇದುವರೆಗೆ ಆಕೆ ಅನುಭವಿಸಿದುದು ತನ್ನ ಪ್ರಾರಬ್ಧ ಕರ್ಮವನ್ನು. ಅದರಿಂದ ಆಕೆಯ ಆತ್ಮಕ್ಕೆ ಯಾವ ಕುಂದೂ ಉಂಟಾಗಿಲ್ಲ. ಈಗ ಆಕೆ ಕೇವಲ ಭಗವದ್ಭಕ್ತಳಾಗಿ ನಿಮ್ಮಲ್ಲಿ ತನ್ನ ಇಷ್ಟದೇವತೆಯಾದ ಭಗವಾನ್ ಶ್ರೀಕೃಷ್ಣನನ್ನು ಕಾಣಲು ಕಾತುರಗೊಂಡಿರುವಳು. ಶ್ರೀಕೃಷ್ಣನು "ಎಂಥಾ ಪಾಪಿಯಾದರೂ ಸ್ತ್ರೀಯಾಗಲಿ, ವೈಶ್ಯರಾಗಲಿ, ಶೂದ್ರರಾಗಲಿ, ಅವನು ನನ್ನಲ್ಲಿಯೆ ಮನಸ್ಸಿಟ್ಟರೆ ಅವರಿಗೆ ನಾನು ಸದ್ಗತಿಯನ್ನೀಯುವೆನು ಎಂದು ಗೀತೆಯಲ್ಲಿ ಹೇಳಿಲ್ಲವೆ?" ಎಂದು ನನ್ನ ಕಡೆಗೆ ತಿರುಗಿ "ಅಮ್ಮಾ, ನೀನೇನು ಮಾಡಿದ್ದರೂ ತಂದು ನೀಡು. ಹಸಿವೆಯಾಗುತ್ತಿದೆ!" ಎಂದು ಹೇಳಿದರು. ನಾನು "ನನ್ನ ನಿತ್ಯದ ಪೂಜೆಯು, ಧ್ಯಾನವು, ಇಂದು ಪರಮಾತ್ಮನಿಗೆ ಸೇರಿತು. ಅವನೇ ಈ ಯೋಗೀಶ್ವರನ ರೂಪದಲ್ಲಿ ನನಗೆ ದರ್ಶನವಿತ್ತಿರುವನು" ಎಂದು ಭಾವಿಸಿದೆನು. ಕಣ್ಣುಗಳಿಂದ ಆನಂದಾಶ್ರುವು ಧಾರೆಯಾಗಿ ಹೊರಟಿತು. ನಾವಿಬ್ಬರೂ ಆ ಯೋಗಿವರನ ಪಾದಗಳನ್ನು ತೊಳೆದು, ಆತನಿಗೆ ಮೃಷ್ಟಾನ್ನವನ್ನೀಡಿದೆವು. ಆತನು ಊಟವಾದನಂತರ, "ನಿಮ್ಮ ಪ್ರಾರಬ್ಧವು ಇಂದಿಗೆ ಮುಗಿದಂತಾಯಿತು. ಸಾಧುಸಂತರ ಪೂಜೆಯಲ್ಲಿ ನಿಮ್ಮ ಆಯುಸ್ಸನ್ನು ಕಳೆಯಿರಿ" ಎಂದು ಹೇಳಿ, ನಮ್ಮಿಬ್ಬರನ್ನೂ ಆಶೀರ್ವದಿಸಿ, ಹೊರಟುಹೋದರು.

ನನ್ನ ಆಸ್ತಿಯೆಲ್ಲವನ್ನೂ ಖರ್ಚುಮಾಡಿ, ಈಗ ನಾವು ಒಂದು ನದಿಯ ತೀರದಲ್ಲಿ ಪರ್ಣಕುಟೀರವೊಂದನ್ನು ಕಟ್ಟಿಸಿ, ವಾನಪ್ರಸ್ಥಾಶ್ರಮಿಗಳಂತೆ ಜೀವಿಸುತ್ತಿರುವೆವು. ನಮ್ಮ ಕುಟೀರಕ್ಕೆ ಅನೇಕ ಜನ ಸಾಧು ಸಂತರು ಬಂದು ನಮಗೆ ದರ್ಶನವೀಯುತ್ತಿರುವರು. ನಮ್ಮನ್ನು ಬಹಿಷ್ಕರಿಸಿದ್ದವರನೇಕರು ಈಗ ನಮ್ಮ ಕುಟೀರಕ್ಕೆ ಬಂದು ಭಗವತ್ಸೇವೆಯನ್ನು ಮಾಡುತ್ತಿರುವರು. ನನ್ನ ಪತಿಯ ಆಸ್ತಿಯಿಂದ ನಮಗೆ ಯಾವ ಕೊರತೆಯೂ ಇಲ್ಲವಾಗಿದೆ. ಅವರೂ ಅನೇಕ ಜನ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿರುವರು. ನಾವಿಬ್ಬರೂ ಪಾಪದಿಂದ ಮುಕ್ತರಾಗಿರುವೆವೆಂದು ನಮ್ಮ ಭಾವನೆ. ಒಂದೊಂದು ಸಲ ಹೃದಯದಲ್ಲಿ ಆವುದೊ ಒಂದು ಬಗೆಯ ದಿವ್ಯ ಜ್ಯೋತಿಯು ತಲೆದೋರಿ, "ಭಯಪಡಬೇಡ, ನಿನ್ನ ನಿಷ್ಕಪಟವಾದ ಪೂಜೆಯನ್ನು ನಾನು ಸ್ವೀಕರಿಸುತ್ತಿರುವೆನು." ಎಂದು ಹೇಳುತ್ತಿರುವುದು. ಈಗ ನಾವಿಬ್ಬರೂ

ಪುಣ್ಯಶಾಲಿಗಳಂತೆ ಶಾಂತಿ ಸುಖವನ್ನನುಭವಿಸುತ್ತಿರುವೆವು. ಆದರೆ ನಮ್ಮ ಸಮಾಜಕ್ಕೆ ನಮ್ಮ ಜೀವನ ಕ್ರಮವನ್ನೂ ಸಮಸ್ಯೆಯಾಗಿ ತೋರುತ್ತಿದೆ. ಆದಕ್ಕಾಗಿ ಅದು ಇನ್ನೂ ಘೋಷಿಸುತ್ತಿದೆ, "ಈ ಜೀವನ ಕ್ರಮವು-**ಪಾಪವೊ? ಪುಣ್ಯವೊ?**" ಎಂದು.

ಶ್ರೀ

# ಸತ್ಯನಾರಾಯಣ ವ್ರತ

ರಾತ್ರಿ ೧೦ ಗಂಟೆ ಸಮಯ. ಕನಕಪುರದ ಅಂಗಡಿ ಬೀದಿಯಲ್ಲಿ ಅಲ್ಲಲ್ಲಿ ಒಂದೊಂದು ಮಿಂಚಿನ ಹುಳುಗಳಂತೆ ಮುನಸಿಪಲ್ ಲಾಂದ್ರಗಳು ಮಿಣು ಕುತ್ತಿವೆ. ಕೃಷ್ಣಪಕ್ಷ, ಅಮಾವಾಸ್ಯೆಯ ಹಿಂದಿನ ದಿನದ ಕತ್ತಲಲ್ಲಿ ನಿರಭ್ರ ವಾದ ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳೆ ಮುನಸಿಪಲ್ ಲಾಂದ್ರಗಳಿ ಗಿಂತ ಹೆಚ್ಚು ಬೆಳಕನ್ನು ಕೊಡುತ್ತಿವೆ. ಆ ಲಾಂದ್ರಗಳ ಹತ್ತಿರ ಮತ್ತು ಅವುಗಳ ಕೆಳಗೆ ಮಿಣುಕುವ ದೀಪದ ಕಿರಣವನ್ನು ಎದುರಿಸಲಾರದ ಕತ್ತಲು ಕವಿದಿರುವುದು, ಆ ಮಿಣಕು ದೀಪಗಳ ಸಾಲಿನ ದಾರಿಯಲ್ಲಿ ಹೋಗುತ್ತ, ಒಬ್ಬ ವ್ಯಕ್ತಿಯು—

"ಗುರುವು ದೊರೆಯಬೇಕೆಂಥವನು – ಬಹು|
ದುರಿತ ನಿವಾರಿಸುವಥವನು || ಪ ||
ಪರಮಾತ್ಮನ ತೋರ್ವಂಥವನು – ಭವ
ಶರಧಿಯ ದಾಟಿಸುವಂಥವನು ||

ಎಂದು ಹಾಡುತ್ತ, ಮೂರು ಫರ್ಲಾಂಗು ದೂರ ಹೋದ ಬಳಿಕ, ಅಲ್ಲಿ ಬಲಗಡೆ ಸಂದಿಯಲ್ಲೊಂದು ಮನೆಯ ಮುಂದೆ ನಿಂತನು.

ಬಾಗಿಲನ್ನು ತಟ್ಟಿ–"ಬಾಗಿಲು, ಬಾಗಿಲು!" ಯಾವ ಉತ್ತರವೂ ಬರ ಲಿಲ್ಲ. ಬಳಿಕ ವ್ಯಕ್ತಿಯು–"ರಾಧಾ-ರಾಧಾ, ಬಾಗಿಲು!" ಎಂದು ಬಾಗಿ ಲನ್ನು ಗಟ್ಟಿಯಾಗಿ ತಟ್ಟಿದಾಗ – ಒಳಗಣಿಂದ "ಬಂದೇ!" ಎಂದು ಧ್ವನಿಯು ಬಂತು.

ಅನಂತರ ಕೈಯಲ್ಲಿ ಒಂದು ಡೀಟ್ಜ್ ಲಾಂದ್ರವನ್ನು ಹಿಡಿದುಕೊಂಡು ಒಬ್ಬ ೨೪ ವರುಷದ ಯುವತಿಯು ಬಾಗಿಲನ್ನು ತೆರೆದು-"ಇದೇಕೆ, ಇವತ್ತೂ ಹೊತ್ತು ಮಾಡಿ ಬಂದಿರಲ್ಲ! ಮನೆಗೆ ಬೇಗ ಬರಬಾರದೆ!"

ನಿನ್ನ ನಿದ್ದೆಗೆ ತೊಂದರೆಯಾಯಿತೇನು? ಏನು ಮಾಡೋದು ಭಜನ ಮಂದಿರದಲ್ಲಿ ಇನ್ನೆರಡು ದಾಸರಾಯರ ಪದಗಳನ್ನು ಹಾಡಲು ಬಲಾತ್ಕರಿಸಿದರು. ಹಾಡುತ್ತ ಮೈಮರೆತೆ, ಹೊತ್ತಾಯಿತು!"

"ನಾಳೆ ನಿಮ್ಮ ತಮ್ಮ ಮನೋಹರರಾಯರು ಸಂಜೆ ರೈಲಿಗೆ ಮುಂಬೈಯಿಂದ ಬರುತ್ತಾರಂತೆ. ಅವರ ಎಂ. ಎ. ಪರೀಕ್ಷೆ ಮುಗಿಯಿತಂತೆ. ಇನ್ನು ನೌಕರಿ ಸಿಕ್ಕುವವರೆಗೆ ಇಲ್ಲಿ ಬಂದು ಕೆಲಕಾಲ ವಿಶ್ರಾಂತಿ ಹೊಂದಬೇಕೆಂದಿರುವರಂತೆ, ಕಾಗದವನ್ನು ಬರೆದು ಇಲ್ಲಿಗೆ ಇವತ್ತು ಬಂದವರೊಬ್ಬರ ಕೈಲಿ ಬರೆದು ಕಳಿಸಿರುವರು. ನೀವು ಅತ್ತಕಡೆ ಭಜನ ಮಂದಿರಕ್ಕೆ ಹೋದಿರಿ, ಅವರು ಇತ್ತ ಕಾಗದ ತಂದುಕೊಟ್ಟರು!"

'ಸರಿ. ನಾಳೆ ಬೆಳಗ್ಗೆ ಕಾಗದ ಓದಿದರಾಯಿತು. ನೀನು ಸ್ವಸ್ಥವಮಲಗಿಕೊ, ಆಫೀಸಿನ ಕೆಲವು ರಿಕಾರ್ಡುಗಳನ್ನು ನಾನು ತಂದಿದ್ದೇನೆ. ಅವುಗಳನ್ನು ಸರಿಪಡಿಸಿ ಮಲಗುತ್ತೇನೆ!"

ವ್ಯಕ್ತಿಯ ಹೆಸರು ಮೋಹನರಾಯ ವಯಸ್ಸು ೨೮. ಕೆಂದವರ್ಣ, ಗುಂಡಾದ ಮುಖ, ಮುಖದಲ್ಲಿ ತೇಜಸ್ಸೂ ವರ್ಚಸ್ಸೂ ಇದೆ. ಕಣ್ಣುಗಳಲ್ಲಿ ಅವನ ಆಧ್ಯಾತ್ಮಿಕ ಜೀವನದ ಬಗೆಯನ್ನು ಸೂಚಿಸುವ ಹೊಳಪು, ರಾಧೆ ಮೋಹನರಾಯನ ಪತ್ನಿ. ಮೋಹನನು ಮೆಟ್ರಿಕ್ ಕ್ಲಾಸಿನಲ್ಲಿ ಓದುತ್ತಿದ್ದಾಗಲೆ ಅವನ ತಂದೆ ತಾಯಿ ಅವನಿಗೆ ಲಗ್ನಮಾಡಿದ್ದರು. ರಾಧೆಯ ತಂದೆಯೂ ಮೋಹನರಾಯನ ತಂದೆಯೂ ಒಂದೇ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ರಾಧೆಯ ತಂದೆ ಸಣ್ಣ ನೌಕರಿಯಲ್ಲಿದ್ದವರು. ಬಡತನದ ಜೀವನ. ಆದರೆ ಅವರ ಪ್ರಾಮಾಣಿಕತೆ, ಸರಳತೆ, ಆಚಾರ ನಿಷ್ಠೆಗಳನ್ನು ನೋಡಿ, ರಾಮರಾಯರ ಏಕಮಾತ್ರ ಪುತ್ರಿಯಾದ ರಾಧೆಯನ್ನು ತನ್ನ ಏಕಮಾತ್ರ ಪುತ್ರನಿಗೆ ತಂದುಕೊಳ್ಳಲು ಮೋಹನನ ತಂದೆ, ಕೋರ್ಟಿನ ನಾಜರ್ ಕೃಷ್ಣರಾಯರು ನಿಶ್ಚಯಿಸಿದರು. ಗೌರಾಂಗಿ, ಸೂಕ್ಷ್ಮ ಬುದ್ಧಿ ಶಕ್ತಿಯನ್ನು ಸೂಚಿಸುವ ಹಣೆ, ವಿಶಾಲ ನೇತ್ರಗಳು, ಬೇರೆಯವರ ಮನಸ್ಸನ್ನಾಕರ್ಷಿ

ಸುವ ದೃಷ್ಟಿ ರಾಧೆಯದು, ರಾಧೆಯ ತಾಯಿಯೂ ಹಾಸಿಗೆ ಹಿಡಿದು ಮಲಗಿದ್ದಳು. ಆದ್ದರಿಂದ ರಾಧೆಯ ಲಗ್ನವು ಅವಸರದಲ್ಲಿ ನಡೆಯ ಬೇಕಾಗಿತ್ತು. ನಾಜರು ಕೃಷ್ಣರಾಯರು ಹೇಳಿದ ಮಾತಿಗೆ ರಾಮರಾಯರು ಎದುರು ಹೇಳುವಂತಿರಲಿಲ್ಲವಾದ್ದರಿಂದ, ಎಲ್ಲ ವೆಚ್ಚವನ್ನೂ ವಹಿಸಿಕೊಂಡು ಕೃಷ್ಣರಾಯರು ರಾಧಾ-ಮೋಹನರ ವಿವಾಹವನ್ನು ನೆರವೇರಿಸಿದರು. ವಿವಾಹವಾದ ಮರುವರುಷವೆ ರಾಧೆಯ ತಂದೆತಾಯಿ ತೀರಿಕೊಂಡರು. ಮೆಟ್ರಿಕ್ ಪಾಸಾದ್ದರಿಂದ, ಮೋಹನನೂ ಕನಕಪುರವನ್ನು ಬಿಟ್ಟು ಪುಣೆಗೆ ಕಾಲೇಜಿನಲ್ಲಿ ಓದುವುದಕ್ಕಾಗಿ ಹೋದನು.

— ೨ —

**ಮೋ**ಹನನ ತಂದೆ ಕೃಷ್ಣರಾಯರು ಧನಾಢ್ಯರಾಗಿದ್ದುದರಿಂದ ಪುಣೆಯಲ್ಲಿ ಮೋಹನನ ವಿದ್ಯಾಭ್ಯಾಸವು ಸಾಂಗವಾಗಿ ನಡೆಯಿತು. ಅವನಿಗೆ ಅಲ್ಲಿ ಮನೋಹರರಾಯನೆಂಬ ಸಹಾಧ್ಯಾಯಿಯ ಸಹವಾಸವು ದೊರೆತುದರಿಂದ, ಪುಣೆಯಲ್ಲಿ ದಿನಗಳು ಬಲು ಬೇಗ ಕಳೆಯುವಂತಿದ್ದವು. ಇಬ್ಬರೂ ಕನ್ನಡ ನಾಡಿನವರು. ಮನೋಹರರಾಯನೂ ಮೋಹನನೂ ಸಂಜೆಯ ಹೊತ್ತು ಬಂಡ್ ಗಾರ್ಡನ್ ಕಡೆ ವಾಯು ವಿಹಾರಾರ್ಥವಾಗಿ ಹೋಗುತ್ತಿದ್ದಾಗ ಪರಸ್ಪರ ಮನೆತನದ ವಿಚಾರಗಳನ್ನು ಮಾತನಾಡಿಕೊಳ್ಳುತ್ತಿದ್ದರು. ಅದರಿಂದ ದಿನ ದಿನಕ್ಕೆ ಅವರಲ್ಲಿ ಗೆಳೆತನವು ಬೆಳೆಯುತ್ತ ಸೋದರ ವಾತ್ಸಲ್ಯದಂತೆ ಪರಿಣಮಿಸಿತು. ಮನೋಹರನು ವಯಸ್ಸಿನಲ್ಲಿ ಮೋಹನನಿಗಿಂತ ಚಿಕ್ಕವನು. ಆದ್ದರಿಂದ ಮೋಹನನು ತನಗೆ ಅಣ್ಣ ತಮ್ಮ ಅಕ್ಕತಂಗಿಯರಾರೂ ಇಲ್ಲದ್ದರಿಂದ ಮನೋಹರನನ್ನೆ ತಮ್ಮನೆಂದು ಭಾವಿಸಿದನು.

ಮನೋಹರನು ಮೆಟ್ರಿಕ್ ಪಾಸಾದ ೩-೪ ತಿಂಗಳಲ್ಲಿ ತಂದೆಯನ್ನು ಕಳೆದುಕೊಂಡನು. ಅವನಿಗೆ ಅಣ್ಣನೊಬ್ಬನಿದ್ದನು, ತಂದೆ ಸಾಯುವಾಗ ಮನೋಹರನು ಎಲ್ಲಿಯವರೆಗೆ ಓದುತ್ತೇನೆನ್ನುವನೋ ಅಲ್ಲಿಯವರೆಗೆ ಓದಿಸಬೇಕು ಎಂದು ಹಿರಿಯ ಮಗನಿಂದ ವಚನ ತೆಗೆದುಕೊಂಡಿದ್ದರು. ಮನೋಹರನು ಬಹು ಚುರುಕಾದ ಹುಡುಗ, ಬುದ್ಧಿಯೂ ತೀವ್ರ, ರೂಪದಲ್ಲಿಯೂ ಸುಂದರನಾಗಿದ್ದನು. ಅವನ ನಮ್ರನಡತೆಯು ಅವನ ರೂಪವನ್ನು ಆಕರ್ಷಕವಾಗಿ ಮಾಡಿತ್ತು. ಅವನ ವಿದ್ಯಾಭ್ಯಾಸಕ್ಕೆಂದೆ ಅವನ ತಂದೆ ೧೦೦೦

ರೂಪಾಯಿಗಳನ್ನು ತೆಗೆದಿಟ್ಟಿದ್ದರು. ತಂದೆ ಸತ್ತ ಕೆಲವು ದಿನಗಳವರೆಗೆ ಮನೋಹರನ ಅಣ್ಣನು ಅವನನ್ನು ಬಹಳ ಅಕ್ಕರೆಯಿಂದ ನಡೆಸಿಕೊಳ್ಳುತ್ತಿರುವವನಂತೆ ನಟಿಸಿ, ಅವನಿಂದ ತನಗೆ ಬೇಕಾದ ಎಲ್ಲ ಕಾಗದ ಪತ್ರಗಳಿಗೂ ರುಜು ಹಾಕಿಸಿಕೊಂಡನು. ಇನ್ನು ಮನೋಹರನು ಅವನಿಗೆ ಬೇಕಾಗಿರಲಿಲ್ಲ. ಅಲ್ಲಿಯವರೆಗೆ ಎಲ್ಲವೂ ಸರಿಯಾಗಿ ನಡೆಯಿತು. ಮೂರನೆಯ ತಿಂಗಳಲ್ಲಿ ಹಣಕ್ಕಾಗಿ ಮನೋಹರನಿಂದ ಅವನ ಅಣ್ಣನಿಗೆ ಕಾಗದ ಹೋಯಿತು. ಅದಕ್ಕೆ ಉತ್ತರವೂ ಬಂದಿತು.—

"ಚಿ|| ಸ|| ರಾ|| ಮನೋಹರನಿಗೆ – ಆಶೀರ್ವಾದಗಳು.

ಈ ವರುಷ ಮನೆ ಹೊಲಗಳ ದುಡ್ಡು ಕೊಡಲು ರೈತರು ತಪ್ಪಿದ್ದಾರೆ. ಹಿಂದಿನ ರೈತರನ್ನು ಬಿಡಿಸಿ ಬೇರೆಯವರನ್ನು ನೋಡೋಣವೆಂದರೆ ಅದಕ್ಕೂ ಅವಕಾಶವಿಲ್ಲದಂತಾಗಿ, ನಿನಗೋಸ್ಕರ ನಾನು ಸಾಲಮಾಡಬೇಕಾಗಿದೆ. ಮನೆಯಲ್ಲಿ ಈಕೆಗೆ ಹೆರಿಗೆ ದಿನಗಳು ಬೇರೆ ಸಮೀಪಿಸಿವೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಮುಂದೆ ನಿನ್ನ ವಿದ್ಯಾಭ್ಯಾಸಕ್ಕೆ ಹಣ ಒದಗಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗುವುದೊ ಹೇಳಲಾರೆ. ಆದ್ದರಿಂದ ನೀನೂ ಈ ವಿಚಾರವಾಗಿ ಯೋಚನೆಮಾಡಿ ನೋಡು. ಈಗಿನ ಕಾಲದಲ್ಲಿ ಹೊಲಮನೆ ನೆಚ್ಚಿಕೊಂಡಿರುವುದಕ್ಕಿಂತಲೂ, ಪುಣೆಯಂತಹ ಊರಿನಲ್ಲಿ ಎಲ್ಲಿಯಾದರೂ ನೌಕರಿ ಸಿಕ್ಕರೆ ಸೇರಿಕೊಳ್ಳುವುದು ಉತ್ತಮ, ನೀನು ಈ ಸಲ ರಜೆಯಲ್ಲಿ ಊರಿಗೆ ಬಂದಾಗ ಎಲ್ಲ ಸಂಗತಿಯೂ ಅರಿವಾಗುವುದು.

ದುರ್ದೈವದ ಸಂಗತಿ, ನಿನಗೆ ತಿಳಿಸಬಾರದೆಂತಿದ್ದರೂ ತಿಳಿಸದಿರಲಾರೆ. ಮೊನ್ನೆ ಮನೆಯಲ್ಲಿ ಕಳ್ಳತನವಾಗಿ, ತೀರ್ಥರೂಪರವರು ನಿನ್ನ ವಿದ್ಯಾಭ್ಯಾಸಕ್ಕೆಂದು ತೆಗೆದಿಟ್ಟಿದ್ದ ಹಣವೂ, ಈಕೆಯ ಒಡವೆಗಳನ್ನೂ ಇಟ್ಟಿದ್ದ ಪೆಟ್ಟಿಗೆ, ಮತ್ತೆ ಬೇರೆ ಕೆಲವು ಬಟ್ಟೆ ಬರೆಗಳೂ ಹೋಗಿಬಿಟ್ಟವು. ಆದರಿಂದ ಮನಸ್ಸಿಗೆ ಬೇಸರವಾಗಿ ಹೆಚ್ಚೇನೂ ಬರೆಯಲಾರದವನಾಗಿದ್ದೇನೆ.

ನಾನಾದರೂ ಈಗಿನ ಪರಿಸ್ಥಿತಿಯಲ್ಲಿ ಹೊಲ ಮನೆಗಳನ್ನು ನೆಚ್ಚಿಕೊಂಡು ಎಷ್ಟು ದಿನ ಇಲ್ಲಿ ಇರುವೆನೊ ಹೇಳಲಾರೆ, ಇರಲಿ. ನಿನ್ನ ಕ್ಷೇಮ ಸಮಾಚಾರಕ್ಕೆ ಆಗಾಗ್ಗೆ ಬರೆಯುತ್ತಿರು, ಇಂತು ಆಶೀರ್ವಾದಗಳು.

— ಪ್ರಭಾಕರ. "

ಈ ಉತ್ತರವನ್ನು ಓದುತ್ತ ಮನೋಹರನ ಮುಖವು ಮ್ಲಾನವಾಯಿತು ಅದನ್ನು ನೋಡಿ ಮೋಹನನು "ಏನು ನಿಮ್ಮಣ್ಣನ ಕಾಗದವೇನು? 'ಎಲ್ಲರೂ' ಕ್ಷೇಮವಷ್ಟೆ?" ಎಂದನು,-

ಮನೋಹರನು ಕಣ್ಣೊತ್ತಿ ನೋಡುವಾಗ ಅವನ ಕಣ್ಣುಗಳಿಂದ ಎರಡು ಹನಿ ಕಂಬನಿ ಜಾರಿ ಬಿದ್ದಿತು. ಅವನು ಕಾಗದವನ್ನು ಮೋಹನನ ಕೈಗೆ ಕೊಟ್ಟನು. ಮೋಹನನು ಕಾಗದವನ್ನೋದಿ,—"ನೀನು ಈಗ ಏನು ಯೋಚಿಸಿರುವೆ?"ಎಂದನು. "ಯೋಚಿಸುವುದೇನು? ಇವತ್ತಿಗೆ ನನ್ನ ವಿದ್ಯಾಭ್ಯಾಸವು ಇಲ್ಲಿಗೆ ನಿಂತಂತೆಯೆ ನನ್ನ ಅಣ್ಣನಿಗೂ ಅತ್ತಿಗೆಗೂ ನಾನು ಕಾಲೇಜಿನಲ್ಲಿ ಓದುವುದೆ ಮನಸ್ಸಿನಲ್ಲಿರಲಿಲ್ಲ. ನಾನು ಎಂ ಎ. ಪರೀಕ್ಷೆಯವರೆಗೆ ಓದಬೇಕೆಂದು ತಂದೆಯವರ ಮನಸ್ಸಿನಲ್ಲಿತ್ತು, ಅವರ ಆಸೆಯನ್ನು ನೆರವೇರಿಸಲು ಕಷ್ಟಪಡುವುದಕ್ಕೂ ನಾನು ಸಿದ್ಧನಾಗಿದ್ದೆ. ಆದರೆ ಇಂದು ಅನಾಥನಾದ ನನ್ನ ಇಚ್ಛೆ—"

"ಮನೋಹರ ಚಿಂತಿಸಬೇಡ. ನಾನೇ ನಿಮ್ಮಣ್ಣನೆಂದು ತಿಳಿದುಕೊ, ಈಸಲ ರಜೆ ಬಂದಾಗ ಇಬ್ಬರೂ ಸೇರಿ ನಮ್ಮ ಊರಿಗೆ ಹೋಗೋಣ. ಅಲ್ಲಿ ನಮ್ಮ ತಂದೆ ತಾಯಿಯವರನ್ನು ನೀನೂ ನೋಡಿದ ಹಾಗಾಗುವುದು ನಿನ್ನ ಮುಂದಿನ ವಿದ್ಯಾಭ್ಯಾಸದ ಚಿಂತೆಯನ್ನು ಬಿಡು, ನನ್ನಿಂದಾದ ಮಟ್ಟಿಗೆ ನಾನು ನಿನಗೆ ಸಹಾಯ ಮಾಡುವೆನು. ನನ್ನ ತಂದೆಯವರು ಕೂಡ ಇದಕ್ಕೆ ಒಪ್ಪುವರು, ಅವರು ಎಷ್ಟೋಜನ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿರುವರು."

"ಮೋಹನಣ್ಣ, ನೀನೆ ನನಗೆ ಇಂದಿನಿಂದ ನಿಜವಾದ ಅಣ್ಣ. ನಾನು ಇನ್ನು ನಮ್ಮ ಊರಕಡೆ ಮುಖ ತೋರುವುದಿಲ್ಲ. ನಾನು ಇವತ್ತೆ ಮೃತನಾದೆನೆಂದು ನಮ್ಮಣ್ಣನಿಗೆ ತಿಳಿದರೆ ಅವನು ಎಷ್ಟೋ ಸಂತೋಷಪಡುವನು. ಅವನಿಗೆ ಆಸ್ತಿಯ ಮೇಲೆ ಅಪಾರವಾದ ಆಸೆ. ಅದನ್ನೆಲ್ಲ ಅವನೇ ಭೋಗಿಸಬೇಕೆಂದು ಅವನ ಇಚ್ಛೆ, ಆಗಲಿ—ಅವನೇ ಅದನ್ನೆಲ್ಲ ಭೋಗಿಸಲಿ! ನನಗೆ ಇವತ್ತು ದೇವರು ನಿನ್ನಂಥ ದಯಾಳುವಾದ ಅಣ್ಣನನ್ನು ತೋರಿದ್ದು ನನ್ನ ಹಿರಿಯರ, ನನ್ನ ಜನ್ಮಾಂತರೀಯದ ಪುಣ್ಯ. ನಾನು...."

"ಇರಲಿ ಮನೋಹರ, ಹೋಗಿ ಮುಖ ತೊಳೆದುಕೊಂಡು ಬಾ, ಬಂಡ್ ಗಾರ್ಡನ್ ಕಡೆ ವಾಕ್ ಹೋಗೇಣ. ಮನಸ್ಸು ನಿನಗೂ ಶಾಂತ ವಾಗುವುದು–"ನಾನೂ ಅಷ್ಟರಲ್ಲಿ ಚಹಾ ಮಾಡುವೆನು. ಫಲಾಹಾರಕ್ಕೆ ನಿನ್ನೆ ತಂದ ಟೊಮೆಟೊ, ಮೂಲಂಗಿ, ಸೌತೇಕಾಯಿ, ಕೊಬ್ಬರಿ ಎಲ್ಲ ಹಚ್ಚಿ ಫ್ರೂಟ್ ಸಾಲೆಡ್ ಮಾಡಿದ್ದೇನೆ. ಅದನ್ನು ಕಬಳಿಸೋಣ." ಎಂದು ಸ್ಟವ್ ಹತ್ತಿ ಸಲು ಹೊರಟು ಹೋದನು.

— ೩ —

ಕನಕಪುರದಲ್ಲಿ ಒಂದು ಭವ್ಯವಾದ ಮನೆ - ಅದರ ಮಧ್ಯ ಭಾಗದಲ್ಲಿ ಒಂದು ತೊಟ್ಟಿ. ಅದರ ಮೇಲ್ಭಾಗದಲ್ಲಿ ನಾಲ್ಕು ಕಡೆಗೆ ಕೈಸಾಲೆ. ಅಲ್ಲಿ ಒಂದು ಭಾಗದಲ್ಲಿ ನಾಲ್ಕಾರು ಕುರ್ಚಿ, ೧ ಮೇಜು, ೧ಸೋಫಾ ಹಾಕಿದೆ. ಸೋಫಾದ ಮೇಲೆ ಮೋಹನನ ತಾಯಿ ಕುಳಿತಿದ್ದಾರೆ. ಸ್ವಲ್ಪ ಸ್ಥೂಲಕಾಯ, ಗೌರಾಂಗಿ, ಅರ್ಧ ಪಲಿತಕೇಶವನ್ನು ಹೆರಳು ಹಾಕಿ ಹಿಂದೆ ತುರುಬು ಕಟ್ಟಿ ಕೊಂಡಿದ್ದಾರೆ. ಕೆನ್ನೆಯಮೇಲೆ ಅರಿಸಿನದ ಕಲೆ, ಹಣೆಯ ಮೇಲೆ ದೊಡ್ಡ ಗುಂಡಾದ ಕುಂಕುಮ, ಕಿವಿಯಲ್ಲಿ ಬೆಂಡೋಲೆ ಬುಗುಡಿಗಳು ಆ ಹೆಂಗಸು ಹಳೆಯ ಕಾಲಕ್ಕೆ ಸೇರಿದವಳೆಂದು ವ್ಯಕ್ತ ಪಡಿಸುತ್ತಿದ್ದವು. ಹೃದಯದಲ್ಲಿ ರುವ ದಯಾಳುತ್ವವು ಹೊರಸೂಸುವುದೊ ಎಂಬಂತೆ ಸಜಲ ನಯನಗಳು.

"ನಮ್ಮ ಮೋಹನನ ಜತೆಗೆ ನಿನೊಬ್ಬ ನಮ್ಮ ಹುಡುಗನೆ ಆದಿ. ಇನ್ನ ವ್ಯಾಲೆ ಇದೇ ನಿನ್ನ ಮನಿ, ನಾನೇ ನಿನ್ನ ತಾಯಿ ಎಂದು ತಿಳಿದುಕೊ. ನಮ್ಮ ಮೋಹನಗೂ ಬಿ.ಎ. ತನಕ ಓದಿಸಿ, ವಕೀಲಿ ಪಾಸು ಮಾಡಿಸ ಬೇಕೂ ಅಂತಿದ್ದಾರೆ. ನೀನೂ ಹಾಂಗೆ ಮಾಡೇನಪ್ಪ, ಮನೋಹರ," ಎಂದು ಮೋಹನನ ತಾಯಿ ಹೇಳಿದರು. ಮನೋಹರನು ಗದ್ಗದಿತಕಂಠ ನಾಗಿ, ಮಾತನಾಡಲಾರದೆ, ಕೃತಜ್ಞತೆಯನ್ನು ಸೂಚಿಸುವ ಆನಂದಾಶ್ರುಗ ಳನ್ನುದರಿಸುತ್ತ, ಮೋಹನನ ತಾಯಿ ರುಕ್ಮಿಣಿಬಾಯಿಯ ಕಾಲಿಗೆರಗಿದನು.

ಅದರಿಂದ ಮತ್ತಷ್ಟು ಸಂತೃಪ್ತಳಾಗಿ ರುಕ್ಮಿಣಿಬಾಯಿಯು–"ಉದಂಡ ಆಯುಷ್ಯವಂತನಾಗು, ವಿದ್ಯಾವಂತನಾಗು, ಬುದ್ಧಿವಂತನಾಗು, ಐಶ್ವರ್ಯ ವಂತನಾಗು, ನಿನಗೂ ನನ್ನ ಸೊಸೆ ರಾಧಾಬಾಯಿಯಂಥ ಚಲೊ ಹುಡುಗೀನ ತಂದು ಲಗ್ನ ಮಾಡ್ತೀನಿ." ಎಂದು ಆಶೀರ್ವದಿಸಿದರು.

"ನಿಮ್ಮೆಲ್ಲರ ಆಶೀರ್ವಾದಗಳ ಬಲವಿರಲಿ ನನಗೆ ಅಷ್ಟು ಸಾಕು" ಎಂದನು.

ಅಷ್ಟರಲ್ಲಿ ಅಡುಗೆಯವನು ಚಹಾ ಬಟ್ಟಲುಗಳನ್ನೂ ಫಲಹಾರದ ತಟ್ಟೆಗಳನ್ನು ಅವರ ಮುಂದೆ ತಂದಿಟ್ಟನು.

ಏನೇನೋ ಹರಟುತ್ತ ಎಲ್ಲರೂ ಉಪಾಹಾರವನ್ನು ಮುಗಿಸಿದರು. ರುಕ್ಮಿಣೀಬಾಯಿಯು, "ಮೋಹನಾ, ನಿನ್ನ ತಮ್ಮ ಮನೋಹರನ್ನಾ ತೋಟದ ಕಡೀಗೆ ಕರಕೊಂಡು ಹೋಗಿ ತೋರ್ಸಲಾ? ಎಂದರು. ಮೋಹನನು 'ಇವತ್ತು ಆ ಕಡೆಗೆ ವಾಕಿಂಗ್ ಹೋಗುವೆವು' ಎಂದನು.

ದಾರಿಯಲ್ಲಿ ಹೋಗುತ್ತ ಮನೋಹರನು–"ಮೋಹನಣ್ಣಾ, ನನ್ನ ಧರ್ಮ ಪಿತನನ್ನೂ ಮಾತೆಯನ್ನೂ ಕಳೆದುಕೊಂಡೆ, ಆದರೆ ನನಗೆ ಅವರು ಮತ್ತೆ ಕನಕಪುರದಲ್ಲಿ ಲಭಿಸಿರುವರು, ಋಣದ ಅಣ್ಣನಿಂದ ದೂರನಾದೆ, ಧರ್ಮ ಸೋದರನನ್ನು ಈಗ ಹೊಂದಿರುವೆನು. ನಿಮ್ಮ ಮನೆಯವರೆಲ್ಲ ಎಷ್ಟು ಒಳ್ಳೆಯವರು, ನಿಮ್ಮ ತಾಯಿಗೆ ಮಕ್ಕಳೆಂದರೆ ಅದೆಷ್ಟು ಪ್ರೀತಿ, ಅದೆಷ್ಟು ಉಪಚಾರ. ನಾನು ನಿಮ್ಮೆಲ್ಲರ ಋಣವನ್ನು ಹೇಗೆ ತೀರಿಸಬಲ್ಲೆ."

"ಹುಚ್ಚು ಹುಚ್ಚಾಗಿ ಮಾತಾಡಬೇಡ, ಮನೋಹರ, ಯಾರು ಯಾರಿಗೆ ಋಣಿಗಳೊ, ನಿನಗ ನಾವು ಋಣಿಗಳೊ, ನಮಗೆ ನೀನು ಋಣಿಯೊ ತಿಳಿಯದು! ಅಂತೂ ಯಾವುದಾದರೊಂದು ಜನ್ಮಾಂತರೀಯ ಸಂಬಂಧದ ಆಕರ್ಷಣವಿಲ್ಲದಿದ್ದರೆ ನಾವು ಹೀಗೆ ಸೇರುತ್ತಿದ್ದೆವೆ? ನಿನ್ನ ಹೆತ್ತ ತಂದೆಯ ಋಣವೆಷ್ಟು ನಿನಗೆ ಸಲ್ಲಬೇಕಾಗಿತ್ತೊ ಅಷ್ಟೆ ನಿನಗೆ ಸಂದಿತು. ಈಗ ನಮ್ಮ ಋಣವೆಷ್ಟು ನಿನಗೆ ಸಲ್ಲಬೇಕಾಗಿದೆಯೊ? ಅದೆಲ್ಲ ಯೋಚಿಸುತ್ತ ಹೋದರೆ ಅಂತ್ಯವಿಲ್ಲ ಪಾರವಿಲ್ಲ."

ಹೀಗೆ ಮಾತನಾಡುತ್ತ ಊರ ಸಮೀಪದಲ್ಲಿ, ಕೆರೆಯ ಕೆಳಗಿದ್ದ ತೋಟವೊಂದಕ್ಕೆ ಅವರಿಬ್ಬರೂ ಬಂದರು, ತೋಟದ ಮಧ್ಯದಲ್ಲಿ ಎರಡು ಗುಡಿಸಲುಗಳು, ಒಂದು ಗುಡಿಸಲಿನಲ್ಲಿ ತೋಟಗಾರನು ಸಂಸಾರ ಸಮೇತ ವಾಸವಾಗಿದ್ದನು. ಮತ್ತೊಂದು ಗುಡಿಸಲಿನಲ್ಲಿ ಒಂದು ಆರಾಮು ಕುರ್ಚಿ ಒಂದು ನಿಲ್ಲು ಮಣೆಯ ಮೇಲೆ ಕೆಲವು ಪುಸ್ತಕಗಳು, ಮೂಲೆಯಲ್ಲಿ ಒಂದು ಸಣ್ಣ ತಂಬೂರಿ, ಒಂದು ಕಡೆ ಒಂದು ಚಾಪೆ, ಅದರ ಮೇಲೆ ಕಂಬಳಿ, ಅದರ

ಮೇಲೆ ಕೃಷ್ಣಾಜಿನ ಹಾಸಿತ್ತು. ಮೋಹನನು ತೋಟಗಾರನ ಮಗಳನ್ನು ಕರೆದು,-"ಯಜಮಾನ ಇದ್ದಾನೇನವ್ವಾ, ಪಪಾಯಿ ಗಿಡದಲ್ಲಿ ಹಣ್ಣಾಗಿದ್ದರೆ ಒಂದು ಒಳ್ಳೆಹಣ್ಣು ಕಿತ್ತಿಕೊಂಡು ಬಾ ಅಂತ ಹೇಳು" ಎಂದನು.

"ಗಿಡದಲ್ಲಿ ನಾಲ್ಕು ಹಣ್ಣು ಬಿಟ್ಟಿದ್ದವು. ಒಂದು ಗಿಣಿ ಹೊಡದಿತ್ತು. ಅದನ್ನು ನಾವು ತಿಂದಿವಿ. ಇನ್ನೂ ಮೂರು ಹಣ್ಣು ನಿಮ್ಮ ಮನೆಗೆ ಕಳ್ಸೋಣ ಅಂತ ಇಟ್ಟದೀವಿ., ಒಂದು ಹೆಚ್ಚಿ ಲಗೂನ ತರತೀನ್ರಿ." ಎಂದು ಓಡಿ ಹೋದಳು.

ಮೋಹನ-"ಇದು ನನ್ನ ಧ್ಯಾನಮಂದಿರ, ಶಹರಿನ ನಾಗರಿಕರ ಗದ್ದಲದ ಜೀವನ ಬೇಸರವಾದಾಗ ನಾನು ಇಲ್ಲಿಗೆ ಬಂದು ಕೆಲವು ದಾಸರ ಪದಗಳನ್ನು ಹಾಡಿಕೊಂಡು ಬೇಸರ ಕಳೆದುಕೊಳ್ಳುವೆನು."

"ನೀನು ವರಪುರುಷ, ದೇವರು ನಿನ್ನನ್ನು ಯಾವಾಗಲೂ ಸುಖವಾಗಿಡಲು, ನನಗೆ ಜನ್ಮಜನ್ಮಾಂತರದಲ್ಲಿಯೂ ನಿನ್ನ ತಮ್ಮನಾಗಿ ಹುಟ್ಟುವ ಭಾಗ್ಯ ಬರಲಿ."

ತೋಟಗಾತಿಯು ಒಂದು ತೆಟ್ಟೆಯಲ್ಲಿ ಪಪಾಯಿ ಹಣ್ಣನ್ನು ಹೆಚ್ಚಿ ಹೋಳುಮಾಡಿ, ಇವರ ಮುಂದೆ ತಂದಿಟ್ಟಳು.

ಮೋಹನ-"ಏನವ್ವಾ, ಎಲ್ಲರೂ ಕ್ಷೇಮವೆ?"

"ಹೌದರಿ, ಚಿಕ್ಕರಾಯರು ಯಾವಾಗ ಬಂದಿರಿ."

"ನಾನು ಬಂದು ಮೂರು ದಿನಗಳಾದವು. ಇನ್ನೂ ೨೦ ದಿವಸ ಇದ್ದು ಮತ್ತೆ ಹೋಗಬೇಕು."—

ಇಬ್ಬರೂ ಫಲಾಹಾರ ಮಾಡಿಕೊಂಡು, ಅಲ್ಲಿಂದ ಶರಚ್ಚಂದ್ರನ ಶೀತಲ ಕಿರಣಗಳಲ್ಲಿ ನಲಿಯುತ್ತ ಮಂದವಾಗಿ ಚಲಿಸುತ್ತಲಿದ್ದ ವಾಯುವನ್ನು ಸೇವಿಸುತ್ತ ಮನೆಗೆ ಹೊರಟರು.

— ೪ —

**ಮೋ**ಹನನು ಬಿ.ಎ. ತರಗತಿಯಲ್ಲಿರುವಾಗ ಅವನ ತಾಯಿಗೆ ತೀವ್ರ ಕಾಯಿಲೆ ಎಂದು ತಂತಿ ಬಂತು. ಹಿಂದೆ ಕಾಯಿಲೆಯಾದಾಗ ಯಾವಾಗಲೂ ಕಾಗದ ಬರುತ್ತಿದ್ದುದು. ಈಗ ತಂತಿ ಬಂದಿರುವುದರಿಂದ ಕಾಯಿಲೆಯು ಅಪಾಯಕಾರವಾಗಿರಬೇಕೆಂದು ತಿಳಿದು, ಮೋಹನನು ಮನೋಹರನಿಗೆ ತಂತಿ

ಯನ್ನು ತೋರಿ–"ನಾನು ಇವತ್ತಿನ ರೈಲಿಗೆ ಹೊರಡುವೆನು, ನಿನ್ನ ಹಾಗೆ ನಾನೂ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗುವೆನೊ ಏನೊ? ನಾನು ಹೋಗುವವರೆಗೆ ಅವರು ಬದುಕಿದ್ದರೆ ಮುಖದರ್ಶನವಾಗುವುದು." ಎನ್ನುತ್ತಿರುವಾಗ ಅವನ ಕಣ್ಣಿನಿಂದ ಎರಡು ಹನಿಗಳುದುರಿದವು.

"ಮೋಹನಣ್ಣಾ, ಹಾಗೆನ್ನಬೇಡ. ದೇವರು ಅವರಿಗೆ ಇನ್ನೂ ಆಯುಷ್ಯವನ್ನು ಕೊಟ್ಟು ಕಾಪಾಡಲಿ. ನನಗೂ ಆಕೆಯು ಹೊರತು ತಾಯಿ ಎಲ್ಲಿ? ಅವರು ಗುಣಮುಖವಾಗುವವರೆಗೆ ಇದ್ದು ಬಾ. ಅವಶ್ಯವಾದರೆ ನಾನೂ ಬರುವೆನು."

ಮಾರನೆಯ ದಿನ ಸಂಜೆಯ ಹೊತ್ತಿಗೆ, ಮೋಹನನು ಕನಕಪುರದ ಸ್ಟೇಷನಿಂದ ಟಾಂಗಾ ಮಾಡಿಕೊಂಡು ಗಾಬರಿಯಿಂದ ಮನೆಗೆ ಸೇರಿದನು. ಡಾಕ್ಟರು "ಇನ್ನು ಆಸೆ ಇಡುವಂತಿಲ್ಲ" ಎಂದು ಹೇಳಿ ಹೋಗಿದ್ದರು. ಮೋಹನನ ಪತ್ನಿ ರಾಧೆ ಅತ್ತೆಯ ಸೇವೆ ಮಾಡುತ್ತ ಕುಳಿತಿದ್ದಳು. ತಂದೆ ಕೃಷ್ಣರಾಯರು ಮೋಹನನು ಬಂದ ಕೂಡಲೆ ಅವನಿಗೆ ಎಲ್ಲ ಸಂಗತಿಗಳನ್ನು ತಿಳುಹಿಸಿ, ಹಾಸಿಗೆ ಹಿಡಿದು ಮಲಗಿದ್ದ ಪತ್ನಿಯ ಬಳಿ ಕರೆತಂದು—"ಮೋಹನ ಬಂದಿದ್ದಾನೆ. ನೋಡು" ಎಂದರು.

ರುಕ್ಮಿಣಿಬಾಯಿಯು ನಿಧಾನವಾಗಿ ಕಣ್ತೆರೆದು—"ಹಾಂ! ಬಂದೆಯಾ ಮೋಹನಾ! ಬಾ ಹತ್ತಿರ ಕೂತುಕೊ. ನೀನು ವಕೀಲನಾದ್ದು ನೋಡಬೇಕು, ನನ್ನ ಸೊಸೆ ರಾಧಾ ಹೆತ್ತ ಗಂಡುಮಗುವನ್ನು ಆಡಿಸಬೇಕು, ನಿನ್ನ ತಮ್ಮ ಮನೋಹರನಿಗೆ ಮದುವೆ ಮಾಡಿಸಬೇಕು"ಎಂದು ಆಸೆ ಇಟ್ಟುಕೊಂಡಿದ್ದೆ. ಅದನ್ನು ನೆರವೇರಿಸುವುದು ಭಗವಂತನಿಗೆ ಇಷ್ಟವಾಗಿಲ್ಲವೆಂದು ಕಾಣುತ್ತದೆ. ನನ್ನ ಸಮಯ ಸಮೀಪಿಸುತ್ತಿದೆ"

"ಹಾಗೆನ್ನಬೇಡವಮ್ಮ, ನಿನಗೆ ಗುಣವಾಗುವುದು. ನಿನ್ನ ಆಸೆಗಳೆಲ್ಲ ನೆರವೇರುವವು, ನಿನ್ನ ಆಸೆಗಳೆಲ್ಲ ನೆರವೇರುವಷ್ಟು ಆಯುಸ್ಸನ್ನು ಭಗವಂತನು ನಿನಗೆ ಕೊಡಲಿ ಎಂದು ಮನೋಹರನೂ ಪ್ರಾರ್ಥಿಸುತ್ತಲಿದ್ದಾನೆ."

"ಪಾಪ, ಎಂಥಾ ಒಳ್ಳೆಯ ಹುಡುಗ, ತಂದೆತಾಯಿಯನ ಕಳಕೊಂಡು ತಬ್ಬಲಿಯಾದ. ಅದಕ್ಕೆ ದೇವರು ತಂದೆತಾಯಿಯ ಸ್ಥಾನದಲ್ಲಿ ಅಷ್ಟು

ಚುರುಕು ಬುದ್ಧಿ ಕೊಟ್ಟಿದ್ದಾನೆಂದು ಕಾಣುತ್ತದೆ. ಅನಾಥರಿಗೆ ದೇವರೆ ರಕ್ಷಕ. ನೀನೂ ನಿನ್ನ ತಂದೆಯೂ ಅವನ ಕೈಬಿಡಬೇಡಿ. ಅವನನ್ನೂ ಸಂಸಾರವಂತನಾಗಿ ಮಾಡಿದರೆ ನನ್ನ ಆಸೆ ನೆರವೇರಿದಂತಾಗುವುದು."

"ಈಗ ಮಾತಾಡಬೇಡವಮ್ಮಾ, ಆಯಾಸವಾಗುವುದು."

"ಇಲ್ಲ ಮಾತಾಡುವುದಿಲ್ಲ. ನೀನು ಹೋಗಿ ಸ್ನಾನಮಾಡಿ ಊಟ ಮಾಡಿ ಬಾ. ದೂರ ಪ್ರಯಾಣದಿಂದ ಆಯಾಸಗೊಂಡಿರುವೆ. ಹೋಗು, ಊಟಮಾಡಿ ಬಾ. ನೀನೂ ನಿನ್ನ ಹೆಂಡತಿಯೂ ನನ್ನ ಹತ್ತಿರ ಕೂತು ಕೊಂಡಿರಿ. ಈಗ ಮೂರು ದಿನಗಳಿಂದ ರಾಧಾ, ಪಾಪ, ನಿದ್ದೆ ಇಲ್ಲದೆ ನನ್ನ ಸೇವೆ ಮಾಡುತ್ತಲಿದ್ದಾಳೆ. ಅವಳು ಬೇಗ ಗಂಡು ಕೂಸಿನ ತಾಯಿಯಾಗ ಲಪ್ಪಾ."

ರಾಧೆಯು ತಲೆತಗ್ಗಿಸಿದಳು. ಮೋಹನನು ಎದ್ದು ಸ್ನಾನಕ್ಕೆ ತೆರಳಿ ದನು. ಕೃಷ್ಣರಾಯರ ಮುಖದ ಮೇಲೆ ಕಾಣುತ್ತಿದ್ದ ಚಿಂತೆಯ ಮೋಡ ಗಳು ಸ್ವಲ್ಪ ಕಡಿಮೆಯಾದಂತೆ ತೋರುತ್ತಿತ್ತು. ಮೋಹನನ ಆಗಮನ ದಿಂದ ಹೆಂಡತಿ ಗುಣ ಮುಖಳಾಗುವಳೆಂದು ಅವರು ತಿಳಿದಿದ್ದರು.

ಮಾರನೆಯ ದಿನ ಬೆಳಗಿನ ಝಾವ ೫ ಗಂಟೆಗೆ ರುಕ್ಮಿಣಿ ಬಾಯಿಯ ವರಿಗೆ ಮೇಲುಸಿರಿಗಿಟ್ಟಿದೆ. ಹತ್ತಿರ ಗಂಡ, ಮಗ, ಸೊಸೆ ಕುಳಿತಿದ್ದಾರೆ. ರುಕ್ಮಿಣಿಬಾಯಿ ಪಕ್ಕದಲ್ಲಿ ಕೃಷ್ಣನ ಪಟವನ್ನಿಡಿಸಿ ಹೂಮಾಲೆ ಹಾಕಿಸಿ- ಅದರ ಮುಂದೆ ಎಲ್ಲರೂ ಸೇರಿ ಭಜನೆ ಮಾಡುವಂತೆ ಹೇಳಿದ್ದರು. ಎಲ್ಲರೂ ಮೃದುವಾದ ಧ್ವನಿಯಲ್ಲಿ ಭಜನೆ ಮಾಡುತ್ತಿದ್ದಾರೆ-ರೋಗಿಯು ಅತ್ತಿತ್ತ ಹೊರ ಳಾಡುತ್ತ ಪದೇ ಪದೇ ಕೃಷ್ಣನ ಪಟದ ಕಡೆ ನೋಡುತ್ತ – "ರಾಮಚಂದ್ರ ಗೋಪಾಲಕೃಷ್ಣ–ತಂದೆ–ಯಾಕಪ್ಪಾ-ಇಷ್ಟು ಪೀಡಿಸುತ್ತಿ–ಬೇಗ ಮುಕ್ತ ಳಾಗಿ ಮಾಡಪ್ಪ–ಮುಕುಂದ" ಎಂದು ನಾಮಸ್ಮರಣೆಯಲ್ಲಿ ಮಗ್ನರಾಗಿದ್ದಾರೆ.

ಕಳೆದ ೩೦ ವರುಷಗಳಿಂದ ತನ್ನ ಸಹಧರ್ಮಿಣಿಯಾಗಿ ತನ್ನ ಜೀವನದ ಸುಖದುಃಖಗಳಲ್ಲಿ ಭಾಗಿಯಾಗಿ, ಭಾಗ್ಯದೇವಿಯಾಗಿ, ಮನೆಗೆ ಬಂದವ ರಿಗೆ ಇಲ್ಲವೆನ್ನದೆ, ಧರ್ಮಿಷ್ಟಳಾಗಿ, ಅನೇಕ ವಿಪತ್ಸಮಯದಲ್ಲಿ ತನಗೆ ಧೈರ್ಯ ವನ್ನು ಹೇಳುತ್ತ, ಕೈಹಿಡಿದು ಸಂಸಾರ ಪಥದಲ್ಲಿ ಸಂಗಮವಾಗಿ ತನ್ನೊಂ ದಿಗೆ ಸಾಗಿದ್ದ ಪತ್ನಿ ರುಕ್ಮಿಣಿಬಾಯಿಯು ಇಂದು ತನ್ನ ಕೈಬಿಟ್ಟು ಹೋಗುವ

ರೆಂದೋ ಏನೊ- ಕೃಷ್ಣರಾಯರ ಕಣ್ಣುಗಳೆರಡರಿಂದಲೂ ಧಾರಾಕಾರವಾಗಿ ಗಂಗಾಯಮುನೆಗಳಂತೆ ಪ್ರವಾಹ ಹರಿಯುತ್ತಿದೆ.

ಸುಮಾರು ಬೆಳಿಗ್ಗೆ ೬ ಗಂಟೆಯ ಹೊತ್ತಿಗೆ ರುಕ್ಮಿಣಿಬಾಯಿ--"ಗಂಗೆ ತಂದು ಹಾಕಿ! ಯಾರ್ಯಾರೋ ದೇವತೆಗಳು - ಸಂತರು ಬಂದಿದ್ದಾರೆ. ಕರೆಯುತ್ತಿದ್ದಾರೆ" ಎಂದರು.

ಕೂಡಲೆ ಪತಿ, ಮಗ, ಸೊಸೆ – ಮೂವರೂ ಅವರ ಬಾಯಲ್ಲಿ ಗಂಗೆ ಹಾಕಿದರು. ಮುಂದೆ ಮೂರೇ ನಿಮಿಷಗಳಲ್ಲಿ ರುಕ್ಮಿಣಿಬಾಯಿಯ ಪ್ರಾಣ ಪಕ್ಷಿ ಹಾರಿಹೋಗಿ ಎಲ್ಲವೂ ಸ್ತಬ್ಧವಾಯಿತು.

— ೫ —

ತಾಯಿ ಸತ್ತವರುಷ; ಜೀವನದ ಬಗೆಯಲ್ಲಿ ಬೇಸರದಿಂದ ಮೋಹ ನನು ಆ ವರುಷ ಪರೀಕ್ಷೆಗೆ ಸರಿಯಾಗಿ ಓದಲಾಗಲಿಲ್ಲ ತಂದೆಯು ಏನೆಂದು ಕೊಳ್ಳುವರೋ ಎಂದು ಅವನು ಪರೀಕ್ಷೆಗೇನೋ ಕುಳಿತನು. ಅವನು ಬಿ.ಎ. ಪರೀಕ್ಷೆ ಮುಗಿಯುವ ವೇಳೆಗೆ ಸರಿಯಾಗಿ ಕೃಷ್ಣರಾಯರಿಗೆ ಪೆನ್‌ಷನ್ ಪ್ರಾರಂಭವಾಯಿತು. ಅವರಿಗೂ ಹೆಂಡತಿ ತೀರಿಕೊಂಡಂದಿನಿಂದ ಜೀವನ ದಲ್ಲಿ ಜಿಗುಪ್ಸೆ ಹುಟ್ಟಿತು. ಮತ್ತೆ ಅವರ ಆರೋಗ್ಯವೂ ಕೆಡುತ್ತ ಬಂದಿತ್ತು. ತಾನು ಪೆನ್ಷನ್ ಪಡೆವಾಗಲೇ ಮಗನನ್ನು ಉದ್ಯೋಗಕ್ಕೆ ಸೇರಿಸಬೇಕೆಂದು ಮೋಹನನು ಬಿ. ಎ. ಪರೀಕ್ಷೆಗೆ ಕಟ್ಟಿದ ಸಂಗತಿಯನ್ನು ತಮ್ಮ ಸಾಹೇಬ ರಿಗೆ ತಿಳಿಸಿದ್ದರು. ಆತನು ಬಿ. ಎ. ಪರೀಕ್ಷೆ ಆದ ಕೂಡಲೆ ಆತನನ್ನು ಗುಮಾಸ್ತಗಿರಿಗೆ ಸೇರಿಸಿಕೊಳ್ಳಲು ವಚನವಿತ್ತಿದ್ದನು. ಮೋಹನನು ಮನೋ ಹರನೂ ಪರೀಕ್ಷೆ ಮುಗಿದು ಊರಿಗೆ ಬಂದಾಗ ಮೋಹನನಿಗೆ ನೌಕರಿಯು ದೊರೆಯಿತು. ಅವನಿಗೆ ನೌಕರಿಯು ದೊರೆತ ೨೦ ದಿನಗಳಲ್ಲಿ ಅಕಸ್ಮಾತ್ತಾಗಿ ಹೃದಯಸ್ತಂಭನದಿಂದ ಕೃಷ್ಣರಾಯರು ಇಹಲೋಕ ವ್ಯಾಪಾರವನ್ನು ಮುಗಿ ಸಿದರು!

ಮುಂದೆ ೧ ತಿಂಗಳಲ್ಲಿ ಬಿ. ಎ. ಪರೀಕ್ಷೆ ರಿಜಲ್ಟು ಬಂದಾಗ ಮನೋ ಹರನು ಉತ್ತೀರ್ಣನಾಗಿದ್ದನು, ಮೋಹನನು ಅನುತ್ತೀರ್ಣನಾಗಿದ್ದನು. ಆದರೆ ಈಗ ರಾಧೆಯೊಂದಿಗೆ ಸಂಸಾರ ಸಮೇತ ಓದುವುದಕ್ಕೆ ಪುಣೆಗೆ ಹೋ ಗುವುದಾಗಲಿ, ಸಿಕ್ಕಿರುವ ನೌಕರಿಯನ್ನು ಬಿಡುವುದಾಗಲಿ ಸಾಧ್ಯವಿರಲಿಲ್ಲ.

ಮನೋಹರನು ಪ್ರಾಸಾದ್ದಕ್ಕೆ ಅವನನ್ನು ಅಭಿನಂದಿಸಿ, ಅವನು ಮುಂಬ ಯಿಗೆ ಹೋಗಿ ತಂದೆಯ ಇಚ್ಛೆಯಂತೆ ಎಂ.ಎ. ಗೆ ಓದಬಹುದೆಂದೂ ಅದಕ್ಕೆ ತಾನು ಸಂಪೂರ್ಣವಾಗಿ ಸಹಾಯ ಮಾಡುವುದಾಗಿಯೂ ಹೇಳಿಕಳುಹಿಸಿ ದ್ದನು. ಮನೋಹರನು ಮೋಹನಣ್ಣನ ಏಕರೀತಿಯಾದ ವಾತ್ಸಲ್ಯಕ್ಕೆ ಕೃತ ಜ್ಞನಾಗಿ, ಅವನಪ್ಪಣೆಯಂತೆ ಮುಂಬೈಗೆ ಹೋಗಿ ವಿದ್ಯಾಭ್ಯಾಸ ಮುಗಿಸಿ ಕನ ಕಪುರಕ್ಕೆ ಹೊರಟಿದ್ದನು. ಅವನ ಸ್ವಂತ ಅಣ್ಣನು ಮನೆಮಠ ಮಾರಿಕೊಂಡು ಮುಂಬೈಗೋ ಮದ್ರಾಸಿಗೋ ವ್ಯಾಪಾರಿಯಾಗಿ ಹೋದನೆಂದು ತಿಳಿದುದ ರಿಂದ ಅವನ ಹಳೆಯ ಬಂಧುಗಳ್ಯಾರೂ ಈಗ ಇರಲಿಲ್ಲ.

— ೬ —

ಕನಕಪುರಕ್ಕೆ ಮನೋಹರನು ಬಂದು ಹತ್ತು ದಿನಗಳಾಗಿದ್ದವು. ಈ ಸಲ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು ಬಂದಿರುವುದರಿಂದ ಉತ್ತಮ ದರ್ಜೆ ಯಲ್ಲಿ ಉತ್ತೀರ್ಣನಾಗುವ ಭರವಸೆಯಿಂದ ಅವನು ಉಲ್ಲಾಸದಿಂದಿದ್ದನು. ೧೦ ಗಂಟೆಗೆ ಮೋಹನನು ಊಟಮಾಡಿಕೊಂಡು ಆಫೀಸಿಗೆ ಹೋದಕೂಡಲೆ ರಾಧೆಯೂ ಊಟಕ್ಕೆ ಕೂತುಕೊಳ್ಳುತ್ತಿದ್ದಳು. ಮೋಹನನ ಜೊತೆಗೆ ಮನೋಹರನೂ ಊಟಮಾಡಿರುತ್ತಿದ್ದನು. ಆದ್ದರಿಂದ ಅತ್ತಿಗೆ ಊಟಕ್ಕೆ ಕುಳಿತಾಗ ಮುಂಬೈನ ಸಮಾಚಾರವನ್ನು ಹೇಳುತ್ತ ಅಲ್ಲಿ ಜನರ ಜೀವನದ ಬಗೆಯನ್ನು ಕನಕ ಪುರದ ಜನರ ಜೀವನದ ಬಗೆಯನ್ನೂ ತುಲನಮಾಡಿ ತಿಳಿಸುತ್ತಿದ್ದನು. ಒಂದು ದಿನ—“ವೈನಿ, ನೀವು ಇತ್ತೀಚೆಗೆ ಏಕೋ ಉದಾಸಚಿತ್ತರಾಗಿರುವಿರೇಕೆ? ಯಾವಾಗಲೂ ಏನೋ ಚಿಂತೆಯಲ್ಲಿರುವಂತೆ ಕಾಣುತ್ತದೆ. ಮೋಹನಣ್ಣನೂ ಏನೋ ಚಿಂತೆಯಲ್ಲಿರುವಂತೆ ಕಾಣುತ್ತದೆ. ಅದೇನು ಚಿಂತೆ ನನ್ನೆದುರಿಗೆ ಹೇಳಬಾರದೆ”.

“ಏತರ ಚಿಂತೆ. ಚಿಂತೆ ಇಲ್ಲ ಏನೂ ಇಲ್ಲ. ಹೆಂಗಸಾಗಿ ಹುಟ್ಟಿ, ಯಾವ ಕರ್ಮಕ್ಕಾಗಿಯೋ ಇಷ್ಟು ವರ್ಷ ಸಂಸಾರಮಾಡಿ, ಮಕ್ಕಳಿಲ್ಲದೆ ಬಂಜೆಯಾದ ನನ್ನ ಬಾಳು ನನಗೆ ಬೇಸರವಾಗಿದೆ. ಇನ್ನು ನನ್ನಿಂದ ವಂಶೋದ್ಧಾರದ ಆಶೆಯಿಲ್ಲವೆಂದು ಅವರೂ ಚಿಂತಿತರಾಗಿರಬಹುದು. ಮೊದಲೇ ವಿರಕ್ತರು. ಇತ್ತೀಚೆಗೆ ವಿರಕ್ತಿ ಹೆಚ್ಚಾಗಿ ಒಂದೊಂದು ದಿನ ಆಫೀಸಿನಿಂದ ಮನೆಗೆ ಬರದೇ ತೋಟಕ್ಕೆ ಹೋಗಿ ಧ್ಯಾನಮಗ್ನರಾಗಿಬಿಡು

ವರು. ರಾತ್ರಿ ಎಷ್ಟೋ ಹೊತ್ತಿನವರೆಗೆ ಮನೆಗೆ ಬರುವರು. ಅದನ್ನು ನೀವೇ ನೋಡುತ್ತಿರುವಿರಲ್ಲ. ನನಗೂ ಬಾಳು ಬೇಸರವಾಗುತ್ತಿದೆ."

" ಹಾಗೆಂದರೇನು. ನಾನೂ ಮೋಹನಣ್ಣನಿಗೆ ಹೇಳುವೆನು. ಈ ವಯಸ್ಸಿನಲ್ಲಿ ವೇದಾಂತವೇಂಥಾದ್ದು. ಜೀವನದಲ್ಲಿ ಏನೋ ಉದ್ದೇಶದಿಂದ ಪ್ರತಿಯೊಂದು ಪ್ರಾಣಿಯೂ ಸೃಷ್ಟಿಯಾಗಿದೆ. ಆದ್ದರಿಂದ ಬಾಳಿಗೆ ಬೇಸರ ಪಡಬಾರದು."

ತಂತೀ ಜವಾನನು ಬಂದು ತಂತಿಯನ್ನು ತಂದು " ಮನೋಹರ ರಾವ್ ಕೇರಾಫ್ ಮೋಹನರಾವ್ " ಎಂದು ಬಾಗಿಲಿನಲ್ಲಿ ಕೂಗಿದನು. ಮನೋಹರನು ಹೋಗಿ ತಂತಿಯನ್ನು ಒಡೆದು ನೋಡಲಾಗಿ ಅದು ಅವನ ಸ್ನೇಹಿತನು ಕೊಟ್ಟ ತಂತಿಯಾಗಿತ್ತು.

" ಅಭಿನಂದನೆಗಳು. ಮೊದಲನೆ ಶ್ರೇಣಿಯಲ್ಲಿ ನೀವು ಉತ್ತೀರ್ಣರು.' ! ರಾಧೆಯ ಎದುರಿಗೆ ಓದಿ ಹೇಳಿದನು. ಅವಳು ಸಂತೋಷದಿಂದ ಜೀವನದಲ್ಲಿ ನಿಮ್ಮಂಥ ಉತ್ಸಾಹವುಳ್ಳವರಿಗೆ, ಸಿಕ್ಕುವ ಫಲವಿದು. ನನ್ನ ಅಭಿನಂದನೆ ಯನ್ನೂ ಸ್ವೀಕರಿಸಿ '' ಎಂದು ಉಲ್ಲಾಸದಿಂದ ನುಡಿದಳು. ಅಂದು ಮಧ್ಯಾಹ್ನ ಬೇಗ ಮನೆಗೆ ಬಂದ ಮೋಹನನಿಗೂ ಈ ಸುದ್ದಿ ತಿಳಿದು ಆತನೂ ಸಂತೋಷಪಟ್ಟನು. ಮತ್ತೆ ಮನೋಹರನಿಗೆ —'' ಇನ್ನು ೨-೩ ತಿಂಗಳು ನೌಕರಿ ವಿಚಾರ ಮಾಡಬೇಡ. ಸುಖವಾಗಿ ವಿಶ್ರಾಂತಿ ಹೊಂದು. ನಿನ್ನ ನೌಕರಿ ಚಿಂತೆ ನನಗೆ ಬಿಡು.'' ಎಂದನು.

— ೭ —

ಮನೋಹರನು ನಿತ್ಯವೂ ಬೆಳಿಗ್ಗೆ ತೋಟಕ್ಕೆ ಹೋಗಿ ಅಲ್ಲಿ ತೋಟದ ಕೆಲಸಗಳನ್ನು ಸರಿಯಾಗಿ ಮಾಡಿಸುವ ಕೆಲಸವನ್ನು ಮೋಹನನು ಅವನಿಗೆ ವಿಧಿಸಿದ್ದನು, ಅವನನ್ನು ನೌಕರಿಗೆಂದು ಹೊರಗೆ ಕಳಿಸುವ ಯೋಚನೆಯು ಮೋಹನನಿಗೆ ಇರಲಿಲ್ಲ ಅದರ ಕಾರಣವೂ ಬೇರೆಯಾರಿಗೂ ತಿಳಿಯಲಿಲ್ಲ. ಮನೋಹರನ ಪರೀಕ್ಷೆಯಾದ ನಾಲ್ಕು ತಿಂಗಳ ಕಾಲ ಮೋಹನನ ತೋಟಕ್ಕೆ ಹೋಗುವುದು, ಅಲ್ಲಿ ಹೊಸ ಗಿಡ ಸಸಿಗಳನ್ನು ನೆಡಿಸುವುದು, ಅವುಗಳಿಗೆ ಗೊಬ್ಬರ ಹಾಕಿಸುವುದು ಮೊದಲಾದ ಎಲ್ಲ ಕೆಲಸಗಳನ್ನು ಮಾಡಿಸುತ್ತಿದ್ದನು. ಅಂದು ಇವನು ಮನೆಗೆ ಬರುವ ಹೊತ್ತಿಗೆ ಮೋಹನನು ಆಫೀಸಿಗೆ ಹೋಗುವ

ಹೊತ್ತಾಗಿತ್ತು, ಅವನು ಆಫೀಸಿಗೆ ಹೋಗಿರುವನೆಂದು ತಿಳಿದು ರಾಧೆಯು ಹೊರಬಾಗಿಲಿಗೆ ಬಂದು ನಿಲ್ಲುವ ಹೊತ್ತಿಗೆ ಸರಿಯಾಗಿ ಎದುರಿಗೆ ತೋಟ ದಿಂದ ಮನೋಹರನು ಬಂದನು. ರಾಧೆಯು ಸ್ವಲ್ಪ ಹಿಂದಕ್ಕೆ ಹೋದಳು. ಮನೋಹರನು "ಏಕೆ. ರಾಧಾಬಾಯಿ, ಇವತ್ತು ಏನೊ ಚಿಂತೆ ಕಾಣುತ್ತಿರು ವುದಲ್ಲ! ಏನಾಯಿತು!"ಎಂದನು.

"ಚಿಂತೆಯಲ್ಲವೆ ಮತ್ತೆ, ಮುಟ್ಟು ನಿಂತು ನಾಲ್ಕು ತಿಂಗಳ ಮೇಲಾ ಯಿತು, ಇದು ಇವರಿಗೆ ತಿಳಿದರೆ–"

ಆಫೀಸಿನಲ್ಲಿ ಹೆಚ್ಚಾಗಿದ್ದ ರಿಕಾರ್ಡುಗಳನ್ನು ಮನೆಯಲ್ಲೆ ಪೂರೈಸೋಣ ವೆಂದು ರಜೆ ತೆಗೆದುಕೊಂಡು ಪಕ್ಕದ ಕೋಣೆಯಲ್ಲಿ ರಿಕಾರ್ಡುಗಳ ಮುಂದೆ ಕೂತಿದ್ದ ಮೋಹನನು ಮುಚ್ಚಿದ್ದ ಬಾಗಿಲನ್ನು ತೆರೆದು ಹೊರಗೆ ಬಂದು–

"ರಾಧಾ, ನಿನ್ನ ಮಾತು ಕೇಳಿದೆ. ನೀನು ಹೆದರಬೇಡ, ನಿನ್ನ ಹಕ್ಕಾದ ತಾಯ್ತನವನ್ನು ನೀಡಲು ನನಗೆ ಭಗವಂತನು ಅಧಿಕಾರವನ್ನೀಯಲಿಲ್ಲ. ನೀನು ಈಗ ೫ ತಿಂಗಳ ಬಸುರಿ ಎಂದು ನನಗೆ ಗೊತ್ತಿದೆ. ನೀನು ಮುಗ್ಧೆ, ನೀನರಿಯೆ, ನಿನ್ನ ಮುಖ ಲಕ್ಷಣ, ನಿತ್ಯದ ಚರ್ಯೆ ಎಲ್ಲವನ್ನೂ ನಾನು ತಿಳಿ ದುಕೊಂಡೆನು. ನನಗೆ ಎಲ್ಲ ವಿಚಾರವೂ ತಿಳಿದಿದೆ ಎಂದು ನೀನಾಗಲಿ, ಮನೋಹರನಾಗಲಿ ಹೆದರಬೇಕಾದ್ದಿಲ್ಲ. ನಿಮ್ಮ ಮಾನರಕ್ಷಣೆ ಮಾಡುವುದ ರಿಂದ ನನ್ನ ಮಾನವನ್ನು, ನಮ್ಮ ವಂಶದ ಮಾನವನ್ನು ನಾನು ಕಾಪಾಡಿ ಕೊಳ್ಳುವೆನು. ನಾನು ಹೇಳಿದಂತೆ ನೀವು ಯಾವ ಅನುಮಾನಕ್ಕೂ ಅವ ಕಾಶವಾಗದಂತೆ ನನ್ನೊಂದಿಗೆ ಸಹಕರಿಸಿದರೆ ಅದರಿಂದ ಎಲ್ಲರಿಗೂ ಹಿತ. ಮನೋಹರ, ಎಲ್ಲಿಯೊ ಹುಟ್ಟಿದ ಕನ್ಯೆ, ಎಲ್ಲಿಯೊ ಹುಟ್ಟಿದವರ – ಇಬ್ಬರೂ ಸತಿಪತಿಯರಾಗುವುದು ಜನ್ಮಾಂತರದ ಋಣಾನುಬಂಧ. ನಾನು ರಾಧೆಯ ಕೈಹಿಡಿಯುವಷ್ಟೆ ಋಣಾನುಬಂಧವಿತ್ತು. ಆಕೆಗೆ ತಾಯ್ತನವನ್ನೀಡುವ ಋಣಾನುಬಂಧವಿರಲಿಲ್ಲ ಎಂದರೆ ಸಮಾಜವು ರಾಧೆಯನ್ನು ತಿರಸ್ಕರಿಸೀತು. ಅದಕ್ಕೆ ನಾನು ಎಡೆಗೊಡಲಾರೆ. ನಿನ್ನಮೇಲೂ ಅನುಮಾನ ಬಾರದಂತೆ ನಿನಗೆ ಬೆಳಗಿನ ಹೊತ್ತು ತೋಟದ ಕೆಲಸ ನೇಮಿಸಿರುವೆನು. ನಿನ್ನ ತೋಟದ ಕೆಲಸದಿಂದ ಊರಿನ ಜನರೂ ತೃಪ್ತರಾಗಿದ್ದಾರೆ. ಈಗ ಆ ತೋಟದಲ್ಲಿ ಅದೇನು ಹಣ್ಣು, ಅದೇನು ಹೂಗಳು ಎನ್ನುತ್ತಿದ್ದಾರೆ. ರಾಧೆಯ ಕೈಲಿ

ಬೆಳಿಗ್ಗೆ ಆ ಗುಲಾಬಿ, ಸಂಪಿಗೆ ಮೊದಲಾದ ಹೂಗಳನ್ನು ಪಕ್ಕದ ಮನೆಗಳಿಗೆಲ್ಲಾ ಹಂಚಿಸುತ್ತಿದ್ದೇನೆ. ನಾಡಿದ್ದು ನಾನೂ ರಾಧೆಯ ಸೀಮಂತ ನಡೆಯುವಂತೆ ಏರ್ಪಡಿಸುವೆನು. ಎಲ್ಲ ಕಾರ್ಯಗಳೂ ಭಗವದಿಚ್ಛೆಯಂತೆ ನಡೆಯುತ್ತಿವೆ. ರಾಧಾ, 'ನೀನು ಗಂಡು ಹಡೆಯಬೇಕು, ನಿನ್ನಂಥ ಕನ್ಯೆ ಮನೋಹರನನ್ನು ವರಿಸಬೇಕು' ಎಂದು ಅಮ್ಮಾ ಸಾಯುವಾಗ ಹೇಳಲಿಲ್ಲವೆ? ಈಗ ಆ ಆಶೀರ್ವಾದ ಫಲಿಸಿತೆಂದು ನಾನು ತಿಳಿದಿರುವಂತೆ ಲೋಕ ತಿಳಿಯಲಾರದು. ಅದಕ್ಕೆ ಸಹನೆಯ ಬಲ ಬೇಕು. ನಾನು ವಕೀಲನಾಗಬೇಕೆಂದು ಅಮ್ಮ ಆಸೆ ಪಟ್ಟಿದ್ದಳು. ಈಗ ನಾನು ದೇವರೆದುರಿಗೆ, ನಿಸರ್ಗ ಧರ್ಮದೆದುರಿಗೆ, ನಿಮ್ಮ ಪರ ವಕೀಲನಾಗಿ ಕೆಲಸ ಮಾಡುತ್ತಿರುವೆನೆಂಬುವನ್ನು ಅಮ್ಮನು ಸ್ವರ್ಗದಿಂದ ನೋಡುತ್ತಿರಬಹುದು. ಇನ್ನು ಮುಂದೆ ಎಲ್ಲ ಕಾರ್ಯಗಳೂ ಯಾರಿಗೂ ಅನುಮಾನವುಂಟಾಗದಂತೆ ನಡೆಯಲಿ. ಯಾರೂ ಯಾವ ಚಿಂತೆಯನ್ನೂ ಮಾಡಕೂಡದು."-ಎಂದನು.

ರಾಧೆಯೂ ಮನೋಹರನೂ ಮೂಕರಂತೆ ಮೌನವದನರಾಗಿ ಮೋಹನನ ಮಾತುಗಳನ್ನು ಕೇಳುತ್ತಿದ್ದಂತೆಯೆ ಅವರೀರ್ವರ ಮುಖಗಳು ಕಾಂತಿಹೀನವಾದವು.

ರಾಧ ಗಂಡನ ಪಾದಗಳನ್ನು ಹಿಡಿದು-'ನೀವು ನನ್ನ ಆರಾಧ್ಯದೇವತೆ! ನಾನು ನಿಮ್ಮ ಸತಿಯೆನ್ನಿಸಿಕೊಳ್ಳಲರ್ಹಳಲ್ಲ' ಎಂದಳು.

ಮನೋಹರನು-'ನೀನೆ ನನ್ನ ತಂದೆ, ಅಣ್ಣ, ತಾಯಿ, ಎಲ್ಲ ಬಂಧು. ಉದಾರಚರಿತನಾದ ನಿನಗೆ ನಾನೆಸಗಿದ ದ್ರೋಹವನ್ನ ಮನ್ನಿಸುವೆಯಾ, ಅಣ್ಣಾ, ಮೋಹನದೇವ!"ಎಂದು ಎರಗಿದನು. ಮೋಹನನು ಅವರಿಬ್ಬರನ್ನೂ ಹಿಡಿದೆತ್ತಿ—"ಇದೇನು ಕೆಲಸ ಮಾಡುತ್ತಿರುವಿರಿ. ನೋಡಿದವರೇನಂದಾರು? ರಾಧಾ ಈಗ ನೀನು ಚಿಂತೆಗೆ ಗುರಿಯಾದರೆ ಅದು ನಿನ್ನ ತಾಯ್ತನಕ್ಕೆ ಧಕ್ಕೆ ತಂದೀತು. ಅದಾಗದಂತೆ ಸಂತೋಷದಿಂದ ನಾಡಿದ್ದು ನನ್ನ - ಅಲ್ಲ - ನಿನ್ನ ಸೀಮಂತಕ್ಕೆ ಎಲ್ಲ ಏರ್ಪಾಟು ಮಾಡು. ಈಗ ನಾನೇ ಪೇಟೆಗೆ ಹೋಗಿ ಹಸರು ಸೀರೆ ತರುವೆನು. ಮನೋಹರ ನಿಮ್ಮ ರಾಧಾ ವೈನಿಯ ಸೀಮಂತಕ್ಕೆ ಅಡಿಗೆಯವನಿಗೆ ಹೇಳಿ ಬಾ!' ಇನ್ನು ಮುಂದೆ ನಡೆಯಬೇಕಾದ ಕಾರ್ಯಗಳೆಲ್ಲ ಸಂತೋಷದಿಂದ ನಡೆಯಲಿ."-ಎಂದು ಪೇಟೆಗೆ ಹೊರಟನು.

— ೮ —

ರಾಧೆಯ ಮಗು ಬಾಲಕೃಷ್ಣನಿಗೆ ಒಂದೂವರೆ ವರುಷ ವಯಸ್ಸಾಗಿದೆ. ಮೋಹನನು ಮಗುವಿಗೆ ನಾಮಕರಣಾದಿ ಸಂಸ್ಕಾರಗಳನ್ನು ಸಾಂಗವಾಗಿ ನೆರವೇರಿಸಿದನು. ಈಗ ರಾತ್ರಿ ಎಲ್ಲರೂ ಮಲಗಿದ ಕೂಡಲೆ ತೋಟದ ಧ್ಯಾನ ಮಂದಿರಕ್ಕೆ ಹೋಗುವನು, ಬೆಳಗಾಗುವದರೊಳಗಾಗಿ ಮನೆಗೆ ಬಂದು ಬಿಡುವನು. ಅವನ ಮುಖದ ಮೇಲೆ ಒಂದು ಬಗೆಯ ದೈವಿಕ ತೇಜಸ್ಸು ಹೆಚ್ಚುತ್ತಿದೆ. ಅವನ ಕಚೇರಿಯಲ್ಲಿ - ಮೋಹನನಿಗೆ ಮುಂಬೈಯಲ್ಲಿ ಲಕ್ಷಾಧೀಶನಾದ ಅವನ ಮಿತ್ರನೊಬ್ಬನು ದೊಡ್ಡ ಬಂಡವಾಳದಿಂದ ಒಂದು ಕಂಪನಿಯನ್ನು ತೆರೆದಿರುವುದಾಗಿಯೂ, ಅದಕ್ಕೆ ಇವನನ್ನೇ ವ್ಯವಸ್ಥಾಪಕನಾಗಿರಲು ೧೦೦೦ ರೂಪಾಯಿ ಸಂಬಳದ ಮೇಲೆ ಕರೆದಿರುವುದಾಗಿಯೂ ಅದಕ್ಕಾಗಿ ಅವನು ಸಧ್ಯದಲ್ಲಿ ಈಗಿನ ಕೆಲಸಕ್ಕೆ ರಾಜೀನಾಮೆ ಕೊಡುವುದಾಗಿಯೂ ಸುದ್ದಿ ಹರಡಿದೆ. ಅವನ ಮೇಲಧಿಕಾರಿಯು ಅವನನ್ನು ಕರೆಸಿ ಕೇಳಿದ್ದಕ್ಕೆ ಮೋಹನರಾಯನು "ಹೌದು"ಎಂದನು. ಈ ಸುದ್ದಿಯು ಊರೆಲ್ಲ ಹರಡಿತ್ತು.

"ಅದಾವ ಕಂಪನಿ? ಕಂಪನಿಯ ಹೆಸರೇನು?"

"ಈಗ ನಾನೇನೂ ಹೇಳಲಾರೆ, ಅಲ್ಲಿ ಹೋದನಂತರ ನನ್ನ ರಾಜೀನಾಮೆ ಕಳಿಸಿದಾಗ ತಿಳಿಯುವುದು. ನನಗೆ ಸಧ್ಯಕ್ಕೆ ೧೦ ದಿನಗಳ ರಜೆ ಕೊಡಬೇಕು."

"ನಿಮ್ಮ ದೊಡ್ಡ ಅಧಿಕಾರದಲ್ಲಿ ನಮ್ಮನ್ನು ಮರೆಯಬೇಡಿ. ನಿಮ್ಮಂಥ ಪ್ರಾಮಾಣಿಕ ಕೆಲಸಗಾರರು ಎಲ್ಲಿ ಹೋದರೂ ಯಶಸ್ವಿಯಾಗುವರು. ನಿಮ್ಮ ರಜೆ ಮುಂಜೂರಾಗಿದೆ."

ಕಚೇರಿಯಿಂದ ಮನೆಗೆ ಬಂದು ಮೋಹನನು ರಾಧೆಯನ್ನು ಕರೆದು, "ನಾಳೆ ಹುಣ್ಣಿಮೆ ನಾನು ಶ್ರೀ ಸತ್ಯನಾರಾಯಣ ವ್ರತವನ್ನು ಗುಪ್ತವಾಗಿ ಮಾಡುವೆನು. ನೀನೇ ಮುತ್ತೈದೆ, ಮನೋಹರನೆ ಬ್ರಾಹ್ಮಣ. ಹೊರಗಿನವರಾರು ಕೂಡದು. ಕರಿಶಾವಿಗೆ ಪಾಯಸ ಭಕ್ಷ್ಯ, ಅಡುಗೆ ಬಹು ಸಾದಾ ಆಗಿರಬೇಕು." ಎಂದನು.

ಮಾರನೆಯದಿನ ಬೆಳಿಗ್ಗೆ ಎದ್ದು ಮೋಹನನು –

ಕರ್ಮ ಬಂಧನ ಛೇದನಾ |ರಘು| ರಾಮನ ನಾಮವ ನೀನೆನೆ ಮನವೇ |

ಎಂದು ದಾಸರ ಪದವನ್ನು ಹಾಡಿದನು. ಅನಂತರ ಎದ್ದು ಸ್ನಾನ ಮಾಡಿ ದೇವರ ಪೂಜೆ ಮಾಡಿ, ಸತ್ಯನಾರಾಯಣ ವ್ರತ ಪೂಜೆಯನ್ನೂ ಮಾಡಿದನು. ರಾಧೆಯೂ, ಮನೋಹರನೂ ಶ್ರದ್ಧೆಯಿಂದ ಕೂತು ಪೂಜೆಯನ್ನು ನೋಡಿ, ಕಥೆಯನ್ನೂ ಕೇಳಿದರು. ಅಡುಗೆ ಫಲ ತಾಂಬೂಲಾದಿ ನಿವೇದನ, ಮಂಗಳಾರತಿಯಾಯಿತು. ತೀರ್ಥ ಪ್ರಸಾದವಾದ ಬಳಿಕ-ಮೋಹನನು "ಇಂದು ಮುತ್ತೈದೆ ಬ್ರಾಹ್ಮಣ ಮೊದಲು ಊಟಕ್ಕೆ ಕೂತುಕೊಳ್ಳಬೇಕು. ನಾನೇ ಬಡಿಸಬೇಕು ಇದಕ್ಕೆ ಎದುರು ಮಾತು ಕೂಡದು" ಎಂದನು.

ಊಟವಾದ ಬಳಿಕ ಎರಡು ಮಣೆಗಳನ್ನು ಹಾಕಿ, ಅದರಮೇಲೆ ರಾಧೆಯನ್ನೂ, ಮನೋಹರನನ್ನೂ ಕೂಡಿಸಿ, ಮೋಹನನು ರಾಧೆಗೆ ದಕ್ಷಿಣೆ ತಾಂಬೂಲದೊಂದಿಗೆ ಒಂದು ಸೀರೆ ಖಣಗಳನ್ನೂ, ಮನೋಹರನಿಗೆ ಒಂದು ಜತೆ ಪಂಚೆ ಮತ್ತು ವಲ್ಲಿಯನ್ನೂ ಕೊಟ್ಟು ನಮಸ್ಕರಿಸಿದನು! ಅವರು ಪ್ರತಿ ನಮಸ್ಕರಿಸಿ, ನೀವು ದೊಡ್ಡವರು ನಮಗೆ ನಮಸ್ಕಾರ ಮಾಡಿದರೆ ನಮ್ಮ ಆಯುಸ್ಸು ಕ್ಷೀಣವಾಗದೆ ಎಂದರು. ಮೋಹನ-"ಬ್ರಾಹ್ಮಣ ಮುತ್ತೈದೆಯರು ಎಷ್ಟು ಚಿಕ್ಕವರಾಗಿದ್ದರೂ ನಮಸ್ಕಾರಾರ್ಹರು" ಎಂದು ಬಿಟ್ಟನು. ಅನಂತರ ಅವನು ಇವತ್ತು ಸಂಜೆಯವರೆಗೆ ನಾನು ಕೇವಲ ಸತ್ಯನಾರಾಯಣ ಪ್ರಸಾದದ ಮೇಲೆ ಇರುವೆನು. ಪ್ರಸಾದವನ್ನು ಸ್ವೀಕರಿಸಿ, ಒಂದು ಬಟ್ಟಲು ಹಾಲು ಕುಡಿದನು. ಸಾಯಂಕಾಲ ರಾಧೆಯು ಬಡಿಸಿದಳು. ಊಟವಾದ ಬಳಿಕ ತಾಂಬೂಲದ ತಟೆಯನ್ನು ತಂದಿಟ್ಟಳು. ಮೋಹನನು-"ಬೇಡ, ಇವತ್ತು ತಾಂಬೂಲ ಹಾಕಿಕೊಳ್ಳುವುದಿಲ್ಲ"ಎಂದನು.

— ೯ —

ಮೂರನೆಯ ದಿನ ಬೆಳಿಗ್ಗೆ ಮೋಹನನ ಆಫೀಸಿನ ಕೋಣೆಯ ಬಾಗಿಲು ತೆರೆದಿತ್ತು, ಕೋಣೆಯಲ್ಲಿ ಮೋಹನನಿರಲಿಲ್ಲ ಮನೋಹರನು ಕೋಣೆಯೊಳಗೆ ಹೋಗಿ ನೋಡಲು ಅಲ್ಲಿ ಒಂದು ದೊಡ್ಡ ಲಕೋಟೆ, ಅದರ ಮೇಲೆ ಒಂದು ಸಣ್ಣ ಕವರು. ಆ ಕವರನ್ನು ತೆಗೆದುಕೊಂಡು ಅಡುಗೆ ಮನೆಯಲ್ಲಿ ಚಹಾ ಮಾಡುತ್ತಿದ್ದ ರಾಧೆಯ ಬಳಿಗೆ ಓಡಿಹೋಗಿ-"ರಾಧಾಭಾಯಿ, ಈ ಕವರು ನೋಡು, ನನಗೇಕೊ ದಿಕ್ಕುತೋಚದಂತಾಗಿದೆ" ಎಂದನು.

ನಡುಗುತ್ತಿರುವ ಕೈಯಿಂದ ರಾಧೆಯು ಆ ಕವರನ್ನು ಒಡೆದು, ಒಳಗಿದ್ದ ಕಾಗದವನ್ನು ಬಿಚ್ಚಿ ಓದಿದಳು.—

"ಶ್ರೀ ರಾಧಾದೇವಿ, ಶ್ರೀ ಮನೋಹರ-ಇವರಿಗೆ. ಇಂದು ನಾನು ನಿಮ್ಮನ್ನು ಆಶೀರ್ವದಿಸಲರ್ಹನಲ್ಲ-ಹರಿದಾಸನಾದ ನನ್ನ ನಮಸ್ಕಾರವನ್ನು ಸ್ವೀಕರಿಸಿ. ನಿಮ್ಮ ಮಗು ಬಾಲಕೃಷ್ಣನಿಗೆ ನನ್ನ ಮುತ್ತುಗಳನ್ನು ಕೊಡಿ.

"ಯಾವುದೋ ಸಣ್ಣ ಕರ್ಮ ಬಂಧನದಿಂದಲೊ, ನನ್ನ ಮತ್ತು ರಾಧಾ ದೇವಿಯ ಮಾತಾಪಿತರ ತಪ್ಪಿನಿಂದಲೊ, ನಾನು ಆಕೆಯ ಕೈಹಿಡಿದು ಪತಿ ಯೆನಿಸಿಕೊಂಡೆನು, ಆದರೆ ನನ್ನ ವಿರಕ್ತ ಜೀವನದ ಒಲವಿನಿಂದಲೊ, ದೈವೇಚ್ಛೆ ಇಲ್ಲದ್ದರಿಂದಲೊ ನಾನು ರಾಧೆಗೆ ತಾಯ್ತನದ ಅನುಭವ ಕೊಡಲಾ ಗಲಿಲ್ಲ. ರಾಧಾದೇವಿಯ 'ಹೆಣ್ಣು ಜನ್ಮ ತಾಯ್ತನದಿಂದ ಸಾರ್ಥಕಗೊಳ್ಳಲು' ಜನ್ಮಾಂತರೀಯದ ಪೂರ್ಣ ಕರ್ಮ ಬಂಧನದಿಂದ ಆಕೆಯ ನಿಜವಾದ ಪತಿ ಯನ್ನು ಕರೆತಂದು ಆಕೆಯ ಬಳಿ ಬಿಡಬೇಕೆಂದು, ನನಗೂ ಮನೋಹರ ರಾಯನಿಗೂ ಸ್ನೇಹವಾಗಬೇಕೆಂದು ವಿಧಿ ಸಂಕಲ್ಪವಿದ್ದಂತೆ ತೋರುತ್ತದೆ. ಇಲ್ಲವಾದರೆ ನನ್ನ ತಾಯಿ ಕೂಡ ಆತನ ಮೇಲೆ ಅಷ್ಟು ಪ್ರೇಮವಿಟ್ಟುದೇಕೆ! ನಾನೂ ನನ್ನ ಕರ್ತವ್ಯವನ್ನು ಈವರೆಗೆ ಯಾರ ಮನಸ್ಸಿಗೂ ನೋವಾಗದಂತೆ, ಯಾರಿಗೂ ಸಂಶಯ ಬಾರದಂತೆ ವಹಿಸಿದ್ದೇನೆ. ಆದರೆ ಇನ್ನು ಮುಂದೆ ಈ ಬಗೆಯ ಜೀವನವನ್ನು ಈ ಊರಲ್ಲಿ ಮುಂದರಿಸುವುದರಿಂದ ನೀವು, ನಾನು ಜನರ ಅಪವಾದಕ್ಕೆ ಗುರಿಯಾಗುವುದು ತಪ್ಪದು. ಆದ್ದರಿಂದ ಮುಂದಿನ ಮಾರ್ಗವು ಸುಗಮವಾಗುವುದಕ್ಕಾಗಿ, ನಿಮ್ಮಿಬ್ಬರ ಮತ್ತು ಮಗುವಿನ ಹಿತ ದೃಷ್ಟಿಯಿಂದ ನಾನು ಮುಂಬೈಗೆ ದೊಡ್ಡ ಕೆಲಸದ ಮೇಲೆ ಹೋಗುವೆನೆಂದೂ ಅಲ್ಲಿಂದ ರಾಜೀನಾಮೆ ಕಳಿಸುವೆನೆಂದು ಸುದ್ದಿ ಹರಡಿದ್ದೇನೆ. ಮತ್ತೆ ಇಲ್ಲಿ ರುವ ನನ್ನ ಜಮೀನು, ತೋಟ, ಮನೆ ಇವುಗಳನು ಮನೋಹರನಿಗೆ ಮಾರಿ ರುವಂತೆಯೂ, ಅವನು ಅವುಗಳನ್ನು ಬೇರೆಯವರಿಗೆ ಮಾರಲು ಅಭ್ಯಂತರ ವಿಲ್ಲದಂತೆಯೂ ಕ್ರಯಪತ್ರಗಳನ್ನು ರಿಜಸ್ಟರು ಮಾಡಿಸಿ ಲಕೋಟೆಯಲ್ಲಿಟ್ಟಿ ದ್ದೇನೆ. ತಂದೆಯವರು ಬ್ಯಾಂಕಿನಲ್ಲಿಟ್ಟಿದ್ದ ಮೂವತ್ತು ಸಾವಿರ ರೂಪಾಯಿ ರೋಖನ್ನು ರಾಧಾದೇವಿಯ ಹೆಸರಿನಲ್ಲಿ, ಇನ್ನು ಹತ್ತು ಸಾವಿರ ಆಕೆಯ ಮಗುವಿನ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಿಸಿದ್ದೇನೆ.

ಮತ್ತೆ ಲಕೋಟೆಯಲ್ಲಿಟ್ಟಿರುವ ಮುನ್ನೂರು ರೂಪಾಯಿ ನೋಟುಗಳಲ್ಲಿ ರೂ. ೨೦೦ನ್ನು ನಮ್ಮ ತೋಟಗಾರನಿಗೂ, ರೂ. ೧೦೦ನ್ನು ಅವನ ಮಕ್ಕಳ ಬಟ್ಟೆ ಬರೆ ಮಗಳ ಮದುವೆಗಾಗಿಯೂ ನಾನು ಕೊಟ್ಟಿರುವುದಾಗಿ ಹೇಳಿ ಕೊಡಿ.

"ನೀವು ಇನ್ನು ಮುಂದೆ ಈ ಊರನ್ನು ಬಿಟ್ಟು, ಮುಂಬೈಯಂತಹ ಊರಲ್ಲಿ ಮನೆ ಮಾಡಿಕೊಂಡು ಸತಿಪತಿಯರಂತೆ ಜೀವನವನ್ನು ಸಾಗಿಸ ಬಹುದು. ಅಲ್ಲಿಗೆ ಹೋದಕೂಡಲೆ ಮನೋಹರನು ನೌಕರಿ ಹುಡುಕಬೇಕಾಗಿಲ್ಲ. ಅವನು ಬೇಕಾದರೆ ವ್ಯಾಪಾರಿಯಾಗಲು ಹೇರಳ ಹಣ, ತೋಟ ಮನೆ ಹೊಲಗಳ ಮಾರಾಟದಿಂದ ಬರುವಂತೆ ಮಾಡಿದ್ದೇನೆ. ರಾಧೆಯ ಮಕ್ಕಳಿಂದ ಉಭಯ ವಂಶಾಭಿವೃದ್ಧಿಯಾಗಲಿ.

"ಈಗ ನನಗೆ ಮುಂಬೈಯಲ್ಲಿ ಕೆಲಸ ಸಿಕ್ಕಿರುವುದೆಂದೂ ನೀವೆಲ್ಲರೂ ಮುಂಬೈಗೆ ಬರಬೇಕೆಂದು ನನ್ನ ಪತ್ರ ಬಂದಿರುವುದೆಂದೂ ಹೇಳಿ ನೀವು ನಿಮ್ಮ ಕಾರ್ಯ ಸಾಧನೆಯನ್ನು ಇನ್ನೊಂದು ತಿಂಗಳೊಳಗಾಗಿ ಮಾಡಿಕೊಳ್ಳಬೇಕು. ಅನಂತರ ನಾನು ನನ್ನ ರಾಜೀನಾಮೆಯನ್ನು ಕಳಿಸುವೆನು. ಇದೆಲ್ಲ ಕೇವಲ ನನ್ನ ಮಾನರಕ್ಷಣೆಗಾಗಿ, ನಿಮ್ಮ ಸಂಸಾರಿಕ ಜೀವನ ಸುಖಕ್ಕಾಗಿ.

"ನೀವು ಮಾತ್ರ, ನನ್ನ ವಿಚಾರದಲ್ಲಿ ದ್ರೋಹವನ್ನೆಸಗಿರುವಿರಿ, ಅಥವಾ ಪಾಪಿಗಳಾಗಿರುವಿರಿ ಎಂಬ ಭಾವನೆಯನ್ನು ನೀವು ತಳೆಯದಿರಿ. ಆ ಭಾವನೆಯಿಂದ ನಿಮಗೆ ಪಾಪವೇ ಬರುವುದು. ಎಲ್ಲವೂ ಭಗವಂತನ ಇಚ್ಛೆಯಂತೆ ನಡೆದಿದೆ ಎಂದು ಭಾವಿಸಿ ಬಾಳನ್ನು ಮುಂದುವರಿಸುವುದರಲ್ಲಿ ಹಿತವಿದೆ.

"ನನ್ನಿಂದ ವಿಮುಖನಾಗಿ, ನಾನು ಸಾಂಸಾರಿಕ ಜೀವನದಲ್ಲಿ ಮಗ್ನನಾಗುವಂತೆ ಮಾಡಲೆಳಸಿ, ನನಗೆ ಈ ಅತುಳೈಶ್ವರ್ಯವನ್ನಿತ್ತ ಆ ರಾಧಾ-ಮನೋಹರ ಬಾಲಕೃಷ್ಣ ರೂಪಿಯಾದ ಆ ಭಗವಂತನಿಗೇ ಅದನ್ನು ಅರ್ಪಿಸಿ, ನಾನು **ಅವನನ್ನೆ** ನೇರವಾಗಿ ಕಾಣಲು ಹೊರಟಿರುವೆನು.

"ಈ ಕಾಗದದ ವಿಚಾರವು ರಹಸ್ಯವಾಗಿರಲಿ. ನಾನು ಸೂಚಿಸಿರುವಂತೆ ಕಾರ್ಯಗಳನ್ನು ಶೀಘ್ರವಾಗಿ ನೆರವೇರಿಸಿಕೊಳ್ಳಿ. ನಾನು ಎಲ್ಲಿದ್ದರೂ

ಯಾವ ವೇಷದಲ್ಲಿದ್ದರೂ ಯಾವಾಗಲೂ ನಿಮ್ಮ ಶುಭ ಚಿಂತನೆಯನ್ನೆ ಮಾಡುತ್ತಿರುವೆನೆಂದು ತಿಳಿಯಿರಿ. ಇತಿ

ನಮ್ರ ಹರಿದಾಸ

ಮೋಹನ."

ರಾಧೆಯೂ ಮನೋಹರನೂ ಕಾಗದವನ್ನು ಓದಿ, ಬಹಳ ಹೊತ್ತು ದುಃಖಿಸಿದರು.

— ೧೦ —

ಇತ್ತ—ಮುಂಬೈ ಕಂಬಾಲಾ ಹಿಲ್ ಕಡೆ ಒಂದು ದೊಡ್ಡ ಬಂಗಲೆ. ಮನೋಹರನು ಮುಂಬೈಗೆ ರಾಧಾ ಸಮೇತ ಬಂದು ನೆಲಸಿ ವ್ಯಾಪಾರಿಯಾಗಿ ೬ ವರ್ಷಗಳೊಳಗಾಗಿ ವಿಶೇಷ ಪ್ರಖ್ಯಾತನಾಗಿ ಈ ಬಂಗಲೆಯನ್ನು ಕಟ್ಟಿಸಿದ್ದಾನೆ. ಅದರಲ್ಲಿ ದೇವರ ಕೋಣೆ, ಅಲ್ಲಿ ದೊಡ್ಡದೊಂದು ಪಟ-ಮೋಹನನ ಭಾವಚಿತ್ರವನ್ನು ದೊಡ್ಡದಾಗಿ ಬರೆಸಿದ್ದುದು. ಅದರ ಅಕ್ಕಪಕ್ಕದಲ್ಲಿ ಮೋಹನನ ತಂದೆ ತಾಯಿಗಳ ಚಿಕ್ಕಚಿಕ್ಕ ಭಾವಚಿತ್ರಗಳು. ದೊಡ್ಡ ಪಟದ ಕೆಳಗೆ "ಗುರುದೇವ" ಎಂದು ಉಲ್ಲೇಖಿಸಿದೆ. ಅದರ ಮುಂದೆ ಶ್ರೀಕೃಷ್ಣನ ವಿಗ್ರಹ. ಪಟಗಳಿಗೂ ವಿಗ್ರಹಕ್ಕೂ ಹೂವಿನ ಹಾರ ಹಾಕಿದೆ. ಅವುಗಳ ಮುಂದೆ ಒಂದು ನಂದಾದೀಪ ಉರಿಯುತ್ತಿದೆ.

ರಾಧೆ ಮತ್ತು ಮನೋಹರ ಸೇರರು ಅಲ್ಲಿ ಬೆಳಿಗ್ಗೆ ಸಾಯಂಕಾಲ ಭಜನೆ ಮಾಡುವರು.

* * *

ಅತ್ತ—ಋಷಿಕೇತದ ಸ್ವರ್ಗಾಶ್ರಮದ ಬಳಿ ಒಂದು ಕುಟೀರದ ಮುಂದೆ ಅನೇಕ ಮಂದಿ ನಿತ್ಯವೂ ನೆರೆಯುವರು. ಬೆಳಿಗ್ಗೆ ೮ ಗಂಟೆಯಾದ ಬಳಿಕ ಕುಟೀರದೊಳಗಣಿಂದ ಒಬ್ಬ ತೇಜಸ್ವಿಯಾದ ತರುಣ ಸನ್ಯಾಸಿಯು ಬಂದು ಬಂದ ರೋಗಿಗಳೆಲ್ಲರಿಗೂ ಔಷಧೋಪಚಾರ ಮಾಡಿ ಕಳಿಸುತ್ತಿರುವನು. ರೋಗಮುಕ್ತರಾದವರು ಕೃತಜ್ಞತೆಯಿಂದ - ಸನ್ಯಾಸಿಯು ಹಣವನ್ನು ಮುಟ್ಟುತ್ತಿರಲಿಲ್ಲವಾದ್ದರಿಂದ - ಹಣ್ಣು ಹಂಪಲುಗಳನ್ನು ತಂದು ಅರ್ಪಿಸುವರು. ಸನ್ಯಾಸಿಯು ಬಂದ ಹಣ್ಣುಹಂಪಲುಗಳನ್ನು ಬೇರೆ ರೋಗಿಗಳಿಗೆ ಹಂಚಿಬಿಡುವನು. ಇದು ಅವನ ನಿತ್ಯದ ಕಾರ್ಯಕ್ರಮ.

ಸಂಜೆಯ ಹೊತ್ತು ಕುಟೀರದಲ್ಲಿ ಕುಳಿತು.

"ಕರ್ಮ ಬಂಧ ಛೇದನಾ। ರಘು।ರಾಮನ ನಾಮವ ನೀನೆನೆಮನವೇ" ಎಂದು ಹಾಡುವಾಗ ಮಾತ್ರ ಆತನು ಕನ್ನಡ ನಾಡಿನಿಂದ ಬಂದವನೆಂದು ಅರಿವಾಗುವುದು.

# ನಂಬಿಕೆಗೆ ಮುಯ್ಯಿ

✻

— ೧ —

ಭಾಸ್ಕರರಾಯನು ಹುಡುಗನಾಗಿದ್ದಾಗಿನಿಂದ ಪತ್ರಿಕೆಗಳನ್ನು ಓದು ವುದು ಬಹಳ. ತಾನೂ ಒಂದು ದಿನ "ಹಿಂದೂ" "ಸ್ವರಾಜ್ಯ" ಮೊದಲಾದಂಥ ಒಂದು ದೊಡ್ಡ ಪತ್ರಿಕೆಗೆ ಸಂಪಾದಕನಾಗಬೇಕೆಂಬ ಆಸೆಯನ್ನು ಆಗಿನಿಂದಲೂ ಬೆಳೆಸಿ ಪೋಷಿಸುತ್ತಿದ್ದನು. ಅವನು ಅದಕ್ಕೆ ಬೇಕಾದ ವಿವಿಧ ಜ್ಞಾನಸಂಗ್ರ ಹವನ್ನು ಮಾಡಲಾರಂಭಿಸಿದನು. ಕೊನೆಗೆ ಅವನ ಆಸೆಯು ನೆರವೇರಿತು. ಮದ್ರಾಸಿನಲ್ಲಿ 'ಕ್ರಾಂತಿ' ಎಂಬ ಒಂದು ಪ್ರಸಿದ್ಧ ದೈನಿಕ ಪತ್ರಿಕೆಯ ಸಂಪಾ ದಕತ್ವವು ಅವನಿಗೆ ದೊರಕಿತು. ಆಗ ಅವನು ತನ್ನ ಕಾಲವನ್ನೆಲ್ಲಾ ಪ್ರಸಿದ್ಧ ಪತ್ರಿಕೆಗಳನ್ನೋದಿ, ದೇಶದ ಮತ್ತು ಜನರ ಕೊರತೆಗಳನ್ನು ತಿಳಿದು ಅವು ಗಳನ್ನು ನಿವಾರಿಸಲು ಬೇಕಾದ ಉಪಾಯಗಳನ್ನು ಸೂಚಿಸುವಂತಹ ವಿಷ ಯಗಳನ್ನೂ ಇತರ ಬೋಧಕವಾದ ವಿಚಾರಗಳನ್ನೂ ತನ್ನ ಪತ್ರಿಕೆಯಲ್ಲಿ ಪ್ರಕಟಿಸಲಾರಂಭಿಸಿದನು. ಪತ್ರ ಸಂಪಾದಕನಲ್ಲಿ ನಿರ್ದಾಕ್ಷಿಣ್ಯ, ನಿಷ್ಪಕ್ಷ ಪಾತ, ನಿರ್ಭೀತಿ ಗುಣಗಳಿರಬೇಕು. ಭಾಸ್ಕರರಾಯನಲ್ಲಿ ಈ ಗುಣಗಳು ಬೇರೂರಿದ್ದವು. ಆದ್ದರಿಂದ ಇವನ ಪತ್ರಿಕೆಯೆಂದರೆ ಸರ್ಕಾರದವರು, ಅದ ರಲ್ಲಿಯೂ ಸ್ವೇಚ್ಛಾಚಾರಿಗಳಾದ ಅಧಿಕಾರಿಗಳು ಹೆದರುತ್ತಿದ್ದರು. ಅದನ್ನು ನಿಲ್ಲಿಸಲು ಎಷ್ಟೋ ಪ್ರಯತ್ನಮಾಡಿದರು. ಸಾಗಲಿಲ್ಲ. ಕೊನೆಗೆ ಸಿ.ಐ.ಡಿ. ಎಂಬ ಬೇಟೆಗಾರನನ್ನು ಅವನ ಮೇಲೆ ಬಿಟ್ಟರು.

— ೨ —

"ಕ್ರಾಂತಿ" ಪತ್ರಿಕೆಯ ಕಾರ್ಯಾಲಯದಲ್ಲಿ ಭಾಸ್ಕರರಾಯನು ತನ್ನ ಸಂಪಾದಕೀಯ ಕೋಣೆಯಲ್ಲಿ ಕುಳಿತು, ಅಂಚೆಯಿಂದ ಬಂದ ಕಾಗದ ಪತ್ರ

ಗಳನ್ನು ಒಂದೊಂದಾಗಿ ಒಡೆದು ನೋಡುತ್ತಿದ್ದನು. ಆಗ ಕಾರ್ಯಾಲಯದ ಒಬ್ಬ ಆಳು ಒಂದು 'ವಿಸಿಟಿಂಗ್ ಕಾರ್ಡನ್ನು' ತಂದು ಅವನ ಮೇಜಿನ ಮೇಲಿಟ್ಟನು. ಭಾಸ್ಕರರಾಯನು 'ಅವರನ್ನು ಒಳಗೆ ಕಳಿಸು' ಎಂದನು. ಆಳು ಹೊರಟುಹೋದ. ಸ್ವಲ್ಪ ಹೊತ್ತಿನಲ್ಲಿ ಕಾಲಿನಿಂದ ತಲೆಯವರೆಗೂ 'ಖದ್ದರ್' ಬಟ್ಟೆಯನ್ನು (ಖಾದೀ ಬಟ್ಟೆಯನ್ನು) ಧರಿಸಿದ್ದ ಒಬ್ಬ ತರುಣನು ಭಾಸ್ಕರರಾಯನೆದುರಿಗೆ ಬಂದು ನಿಂತು 'ನಮಸ್ಕಾರ' ಎಂದನು. ಸಂಪಾದಕನು "ಬನ್ನಿ ಮಿಸ್ಟರ್ ಲಕ್ಷ್ಮಣಯ್ಯರ್, ಯಾವಾಗ ಬಂದಿರಿ? ಕೂತುಕೊಳ್ಳಿ."

ತರುಣನು ಕುರ್ಚಿಯ ಮೇಲೆ ಕೂತುಕೊಳ್ಳುವಾಗ "ನಿನ್ನೆ ರಾತ್ರಿ ಬಂದೆ" ಎಂದನು

ಆಗ ಸ್ವಲ್ಪ ಆಶ್ಚರ್ಯದಿಂದ ಸಂಪಾದಕನು, "ಒಳ್ಳೆಯದು, ಎಲ್ಲಿಳಿದುಕೊಂಡಿದ್ದೀರಿ?" ಎಂದನು.

"ಒಂದು ಛತ್ರದಲ್ಲಿಳಿದುಕೊಂಡಿದ್ದೇನೆ." "ಏಕೆ? ಇಲ್ಲಿಗೆ ಬರಬಹುದಾಗಿತ್ತಲ್ಲ?"

"ರಾತ್ರಿ ಬಂದಾಗ ಹೊತ್ತು ಬಹಳವಾಗಿತ್ತು ಅಷ್ಟೊತ್ತಿನಲ್ಲಿ ನಿಮ್ಮ ಆಫೀಸು ಮುಚ್ಚಿರುವುದು ಎಂದು ನಾನು ತಿಳಿದುಕೊಂಡಿದ್ದೆ."

"ಆಫೀಸು ಮುಚ್ಚಿದ್ದರೆ ಮತ್ತೆ ತೆಗೆಯುವುದಕ್ಕೆ ಆಗುತ್ತಿರಲಿಲ್ಲವೆ?"

"ಆಗುತ್ತಿತ್ತು. ಆದರೆ ಸುಮ್ಮನೆ ತೊಂದರೆ ಅಂತ ತಿಳುಕೊಂಡೆ."

"ಇದರಲ್ಲಿ ತೊಂದರೆಯೇನು!—ಒಳ್ಳೇದು. ಈಗಲಾದರೂ ಇಲ್ಲಿಗೆ ಬಂದು ಇಳಕೊಳ್ಳಿ. ಇಲ್ಲಿ ಎರಡು ಕೋಣೆಗಳು ಖಾಲಿಯಾಗಿವೆ. ಅವುಗಳಲ್ಲಿ ನೀವಿರಬಹುದು."

"ಒಳ್ಳೇದು!"

"ಹಾಗಾದ್ರೆ ಯಾವಾಗ ಬರ್ತೀರಿ?"

"ಇವತ್ತು ತಾವೆಷ್ಟೊತ್ತಿನವರೆಗೆ ಇಲ್ಲಿರ್ತೀರಿ,"

"ನಮ್ಮ ಮನೆ ಹತ್ತಿರದಲ್ಲಿಯೇ ಇದೆ. ಇಲ್ಲಿಂದ ೫ ನಿಮಿಷದ ದಾರಿ."

"ಹಾಗಾದರೆ ನಾಳೇನೆ ನಾನು ಕೆಲಸಕ್ಕೆ ಪ್ರಾರಂಭಿಸುತ್ತೇನೆ"

" ನಾಳೆಯಾಕೆ ? ನಾಡಿದ್ದರಿಂದ ಪ್ರಾರಂಭಿಸಬಹುದು. ಒಂದೆರಡು ದಿನ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ."

" ವಿಶ್ರಾಂತಿಯಿರಲಿ. ಅದಿಲ್ಲದೆ ಇದ್ದರೆ ದೇಹಸ್ಥಿತಿ ಸರಿಯಾಗಿರಬೇಕಲ್ಲ. ಆದರೆ ಕೆಲಸಮಾಡುವ ಆಶೆ ತುಂಬಾ ಇದೆ."

ಸಂಪಾದಕನು ನಕ್ಕು–" ಹಾಗೆಯೇ? ಒಳ್ಳೇದು. ನಿಮ್ಮ ಇಷ್ಟ ಬಂದಂತೆ ಮಾಡಬಹುದು."

" ನಾಳೆಯಿಂದಲೇ ಕೆಲಸಕ್ಕೆ ಪ್ರಾರಂಭಿಸಲೇ ? "

" ಆಗಲಿ ಪ್ರಾರಂಭಿಸಿ, ಶುಭಸ್ಯ ಶೀಘ್ರಂ! "

ಆದಿನ ಸಾಯಂಕಾಲ ಲಕ್ಷ್ಮಣ ಐಯ್ಯರು ಸಿ. ಐ. ಡಿ. ಇನ್ಸ್ಪೆಕ್ಟರನ ಮನೆಗೆ ಹೋದರು. ಇನ್ಸ್ಪೆಕ್ಟರು ಅವನನ್ನು ಒಂದು ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ, ಕುಳ್ಳಿರಿಸಿ....' ನೀವು ಯಾವಾಗ ಬಂದ್ರಿ? ' ಎಂದರು.

" ನಿನ್ನೆಯ ದಿನ ಬಂದೆ."

" ನನ್ನ ಕಾಗದ ನಿಮಗೆ ತಲುಪಲಿಲ್ಲವೆ ? "

" ತಲುಪಿತು. ಅದಕ್ಕೋಸ್ಕರವೇ ನಾನು ಇಲ್ಲಿಗೆ ಬಂದದ್ದು."

" ಒಳ್ಳೇದು ! ಈಗ ಇಲ್ಲಿ ಏನುಮಾಡಬೇಕಾಗಿದೆಯೆಂದು ನಿಮಗೆ ಗೊತ್ತೇ ಇದೆ."

" ಹೋ! ಅದರಲ್ಲಿ ಮೊದಲನೆಯ ಕೆಲಸ ಮಾಡಿಬಿಟ್ಟಿದ್ದೇನೆ."

" ಇದ್ಯಾವುದು ? "

" ನಾನು ' ಕ್ರಾಂತಿ ' ಪತ್ರಿಕೆಯ ಆಫೀಸಿನಲ್ಲಿ ಸಹಕಾರಿ–ಸಂಪಾದಕ ಕೆಲಸವನ್ನು ಸಂಪಾದಿಸಿಕೊಂಡೆನು."

" ಶಾಭಾಸ್ ! ಇನ್ನು ಎಲ್ಲ ಕೆಲಸ ಸುಲಭವಾಗುತ್ತದೆ."

" ಹೌದು, ಹಾಗೇ ಕಾಣುತ್ತದೆ."

" ನಿಮಗೆ ಇನ್ನೊಂದು ಮಾತು ಹೇಳಬೇಕಾಗಿದೆ. ನೀವು ಸಂಪಾದಕನ ಮೇಲೆ ಕಣ್ಣಿಡಬೇಕು. ಅವರ ವಿಚಾರಗಳೆಂತಹವು ? ಅವರ ಕಡೆ ಯಾರ್‍ಯಾರು ಬರುತ್ತಾರೆ ? ಅವರ ಪತ್ರ ವ್ಯವಹಾರ ಯಾರ್‍ಯಾರೊಂದಿಗೆ ನಡೆಯುತ್ತದೆ ? ಅದರಲ್ಲಿ ಸರ್ಕಾರಕ್ಕೆ ವಿರೋಧವಾಗಿ ಏನೇನು ಸಂಧಾನ ನಡೆಸುತ್ತಾರೆ? ಇವೇ ಮೊದಲಾದವುಗಳನ್ನು ತಿಳಿದುಕೊಳ್ಳಬೇಕು. ಅವರೆಲ್ಲಾ

ದರೂ ಹೊರ ಊರಿಗೆ ಹೋಗಬೇಕಾದರೆ ಎಲ್ಲಿಗೆ ಹೋಗ್ತಾರೆ? ಎಲ್ಲಿಳೀತಾರೆ? ಮೊದಲಾದ ಸಂಗತಿಗಳನ್ನು ನನಗಾಗಲಿ ನನ್ನ ಸಹೋದ್ಯೋಗಿಗಳಿಗಾಗಲಿ ತಿಳಿಸುತ್ತಿರಿ. ಮತ್ತೆ ನಿಮ್ಮ ಬುದ್ಧಿಗೆ ಹೊಳೆದ ವಿಚಾರಗಳನ್ನೆಲ್ಲ ಬಂದು ತಿಳಿಸುತ್ತಿರಿ."

"ಒಳ್ಳೆಯದು."

"ಇನ್ನೊಂದು ವಿಷಯ ಜ್ಞಾಪಕದಲ್ಲಿಟ್ಟುಕೊಳ್ಳಿ. ನಿಮ್ಮ ವೇಷದ ವಿಚಾರವನ್ನು ಮಾತ್ರ ಆಪ್ತ ಸ್ನೇಹಿತರಿಗೂ ನೀವು ತಿಳಿಸಬಾರದು. ನಿಮ್ಮ ಆಫೀಸರಿಗೆ ಮತ್ತು ನಿಮಗೆ ಮಾತ್ರ ವ್ಯಕ್ತಿ ಭೇದವು ತಿಳಿಯುವಂತಿರಬೇಕು. ಇದು ಸಿ. ಐ. ಡಿ. ಸಿದ್ಧಾಂತ."

"ಈ ವಿಚಾರ ನನಗೆ ಗೊತ್ತಿದೆ."

"ಗೊತ್ತಿದ್ದು ಪ್ರಯೋಜನವೇನು? ಅನೇಕರಿಗೆ ಗೊತ್ತಿರುತ್ತೆ. ಆದರೆ ಅದರಂತೆ ನಡೆದುಕೊಳ್ಳುವುದು ಕಷ್ಟಕರವಾಗುವುದು. ಅನೇಕರು 'ತಾವು ಸಿ. ಐ. ಡಿ. ಇಲಾಖೆಯವರೆಂದು ಗರ್ವದಿಂದಲೂ, ಜಂಭದಿಂದಲೂ ಕೊಚ್ಚಿಕೊಳ್ಳುತ್ತಾರೆ. ಆದರೆ ನಮ್ಮ ವ್ಯಕ್ತಿತ್ವವು ಎಂದಿನವರೆಗೆ ಗುಟ್ಟಾಗಿರುವುದೋ ಅಂದಿನವರೆಗೆ ನಮ್ಮ ಕೆಲಸಗಳೆಲ್ಲ ಫಲಿಸುತ್ತಿರುವುವು."

"ನೀವು ಹೇಳಿದ್ದು ನಿಜ. ಆದರೆ ನನ್ನ ವಿಚಾರದಲ್ಲಿ ನೀವೇನೂ ಚಿಂತೆ ಮಾಡಬೇಡಿ. ನೀವು ಹೇಳಿದಂತೆ ನಾನು ನಡೆದುಕೊಳ್ಳುತ್ತೇನೆ."

"ಒಳ್ಳೆಯದು, ನಿಮಗೆ ಬಿಸಿಬಿಸಿ ಸುದ್ದಿಗಳೇನಾದರೂ ತಿಳಿದರೆ ಅಥವ ಸಂಪಾದಕರನ್ನು ನೋಡುವುದಕ್ಕೆಂದು ಹೊಸಬರಾರಾದರೂ ಬಂದರೆ ಅವರ ವಿಚಾರದಲ್ಲಿ ನಿಮಗೆ ಸಂಶಯವುಂಟಾದರೆ ಅಥವಾ ನಿಮ್ಮ ಆಫೀಸಿಗೆ ಬರುವ ಪತ್ರಿಕೆಗಳಲ್ಲಿ ಸಂಶಯಾಸ್ಪದವಾದ ಲೇಖನಗಳಿದ್ದರೆ ಅವುಗಳನ್ನು ಮೊದಲು ನನಗೆ ತಿಳಿಸಬೇಕು."

'ಒಳ್ಳೆಯದು!' ಎಂದು ಲಕ್ಷ್ಮಣಯ್ಯರು ಎದ್ದು ಹೊರಡಲಣಿಯಾದನು. ಇನ್ಸ್ಪೆಕ್ಟರು ಆಗ—'ಈ ಊರಿನಲ್ಲಿ ನಿಮ್ಮ ಸ್ನೇಹಿತರಾರೂ ಇಲ್ಲ. ನಾನೂ ನನ್ನ ಸಹೋದ್ಯೋಗಿಯೊಬ್ಬರೂ ನಿಮ್ಮ ಆಫೀಸರೆಂದು ನಿಮಗೆ ಗೊತ್ತಿದೆಯಷ್ಟೆ?' ಎಂದರು.

‘ ಇಲ್ಲಿಯ ಸಿ. ಐ. ಡಿ.—’ ಎಂದು ಲಕ್ಷ್ಮಣಯ್ಯರ ಮಾತು ಮುಗಿಸುವುದರೊಳಗೇ–ಅವರ ‘ ಇಲ್ಲಿಯ ಸಿ. ಐ. ಡಿ. ಗೂ ನಿಮಗೂ ಸಂಬಂಧವಿಲ್ಲ. ಇಲ್ಲಿ ನೀವೊಬ್ಬರೇ ಇರೋದು, ನಿಮಗೆ ಸಹಾಯಕರಾರೂ ಇಲ್ಲ ಅಂತ ತಿಳಿದುಕೊಳ್ಳಿ. ಬಾಕಿ ವಿಚಾರವೆಲ್ಲ ಮೊದಲೇ ತಿಳಿಸಿದ್ದೇನೆ. ಎಲ್ಲಾ ಜ್ಞಾಪಕವಿದೆಯಷ್ಟೆ? ’ ಎಂದರು.

‘ ಇಲ್ಲಿ ನೀವು ಮತ್ತು ನಿಮ್ಮ ಅಸಿಸ್ಟೆಂಟರು ಇಬ್ಬರು ವಿನಾ ಯಾರಿಗೂ ನನ್ನ ವ್ಯಕ್ತಿತ್ವವೂ ರಹಸ್ಯವೂ ತಿಳಿಯಬಾರದು, ಅಷ್ಟೆ ತಾನೆ ? ’

“ ಹೌದು. ಇನ್ನು ನಿಮ್ಮ ಕೆಲಸಕ್ಕೆ ಹೊರಡಿರಿ.”

— ೩ —

ಲಕ್ಷ್ಮಣಯ್ಯರು ‘ ಕ್ರಾಂತಿ ’ ಕಚೇರಿಯಲ್ಲಿ ಕೆಲಸಮಾಡಲಾರಂಭಿಸಿ ೩ ತಿಂಗಳಾದವು. ಭಾಸ್ಕರರಾಯನಿಗೂ ಆತನಿಗೂ ಸ್ನೇಹ ಹೆಚ್ಚಿತು. ಸಾಯಂಕಾಲ ಕೆಲಸ ಮುಗಿದು ಭಾಸ್ಕರರಾಯನು (ಸಂಪಾದಕನು) ಮನೆಗೆ ಹೋಗುವಾಗ ಸಾಮಾನ್ಯವಾಗಿ ಲಕ್ಷ್ಮಣಯ್ಯರು ಆತನ ಜತೆಗೆ ಹೋಗುತ್ತಿದ್ದನು. ಒಂದೊಂದು ದಿನ ಸಂಪಾದಕರ ಮನೆಯಲ್ಲಿಯೇ ಊಟಮಾಡುತ್ತಿದ್ದನು. ಭಾಸ್ಕರರಾಯನಿಗೆ ಇಬ್ಬರು ಹೆಣ್ಣುಮಕ್ಕಳು. ಲಕ್ಷ್ಮಣಯ್ಯರು ಅವರೊಂದಿಗೆ ಆಟವಾಡುತ್ತ ಕಾಲ ಕಳೆಯುತ್ತಿದ್ದನು.

ಒಂದು ದಿನ ರಾತ್ರಿ ೮ ಘಂಟೆಯಲ್ಲಿ ಲಕ್ಷ್ಮಣಯ್ಯರು ಭಾಸ್ಕರಾಯನ ಮನೆಗೆ ಬಂದನು. ಸಂಪಾದಕನ ಕೋಣೆಗೆ ಬಂದಕೂಡಲೆ, ಅಲ್ಲಿದ್ದ ಮಗುವನ್ನು ನೋಡಿ ‘ ಶಾಂತಿ! ಏನುಮಾಡ್ತಿದ್ದೀಯಮ್ಮಾ? ’ ಎಂದನು. ಅವನ ಮಾತನ್ನು ಕೇಳಿದ ಕೂಡಲೆ ಐದು ವರುಷದ ಮಗುವು ಅವನ ಕಡೆಗೆ ಓಡುತ್ತ ಬಂದಿತು. ಅದನ್ನು ತನ್ನ ತೊಡೆಯಮೇಲೆ ಕೂಡಿಸಿಕೊಂಡು ಏ–ನು–ಮಾ–ಡ್ತಿ–ದ್ದೆ ? ” ಎಂದನು.

‘ ಓ-ನೂ ಇಲ್ಲ ’

‘ ಊಟ ಆಯಿತೆ ? ’

‘ ಹೂಂ-ಆಯ್ತೂ.’

‘ ಅಪ್ಪ ಏನುಮಾಡ್ತಿದಾರೆ? ’

‘ ಸಾನಾ-ಮಾಡ್–ಟಿಡ್ದಾರೆ ’

ಸಂಪಾದಕರು ದ್ವಿಕಾಲಸ್ನಾನ ಪದ್ಧತಿ ಇಟ್ಟಿದ್ದರು

ಲಕ್ಷ್ಮಣಯ್ಯರು ಮಗುವನ್ನು ಕರೆದುಕೊಂಡು ಹೊರಗೆ ಬಂದನು. ಅಲ್ಲಿ ಒಂದು ಚಿಕ್ಕ ಅಂಗಳವಿತ್ತು. ಅಲ್ಲಿ ನೆಲದಮೇಲೆ ನೀರು ಚಿಮುಕಿಸಿದ್ದರು. ಸಾಲಾಗಿ ಮೂರುನಾಲ್ಕು ಕುರ್ಚಿಗಳಿದ್ದುವು. ಮಗುವು ಸ್ವಲ್ಪ ಹೊತ್ತಿನಲ್ಲಿ ಒಳಗೆ ಹೋಯಿತು. ಅದು ಒಳಕ್ಕೆ ಹೋದ ೫ ನಿಮಿಷಗಳೊಳಗಾಗಿ ಸಂಪಾದಕ ಭಾಸ್ಕರರಾಯನು ಹೊರಕ್ಕೆ ಬಂದನು. ‘ ಏನು ಲಕ್ಷ್ಮಣಯ್ಯರೇ? ಏನು ವಿಶೇಷ?’ ಎಂದನು.

‘ ಏನೂ ಇಲ್ಲ, ಸುಮ್ಮನೆ ಬಂದೆ.’

‘ ಊಟವಾಯಿತೇ?’

‘ ಹೌದು, ಆಯಿತು.’

‘ ಇಲ್ಲವಾದರೆ ಅಡುಗೆ ಸಿದ್ಧವಾಗಿದೆ.’

‘ ಇಲ್ಲ. ನಾನು ಊಟಮಾಡಿಕೊಂಡೇ ಬಂದೆ.’

‘ ಒಳ್ಳೇದು ಸ್ವಲ್ಪಹೊತ್ತು ಕೂತಿರಿ. ನಾನು ಊಟಮಾಡಿ ಈಗ ಬರುತ್ತೇನೆ.’

‘ ಆಗಲಿ, ನೀವು ಊಟಮಾಡಿಕೊಂಡು ಬರುವವರೆಗೆ ನಾನು ಇಲ್ಲೇ ಇರ್ತೇನೆ.’

ಇಪ್ಪತ್ತು ನಿಮಿಷಗಳ ಮೇಲೆ ಭಾಸ್ಕರರಾಯನು ಊಟ ಮುಗಿಸಿಕೊಂಡು ಬಂದು ಲಕ್ಷ್ಮಣಯ್ಯರ ಪಕ್ಕದಲ್ಲಿ ಒಂದು ಕುರ್ಚಿಯ ಮೇಲೆ ಕುಳಿತುಕೊಂಡನು. ಆಳು ಎಲೆಅಡಿಕೆ ತಟ್ಟೆಯನ್ನು ತಂದು ಅವರಿಬ್ಬರ ಮುಂದಿದ್ದ ಚಿಕ್ಕ ಮೇಜಿನಮೇಲೆ ಇಟ್ಟನು. ತಾಂಬೂಲ ಚರ್ವಣವಾದನಂತರ ಭಾಸ್ಕರರಾಯನು ಹೊಟ್ಟೆ ಮೇಲೆ ಕೈಯಾಡಿಸುತ್ತ ‘ ಇವತ್ತು ಮಧ್ಯಾನ್ಹದ ಟಪಾಲಿನಲ್ಲಿ ನನಗೊಂದು ಕಾಗದ ಬಂದಿದೆ. ನಾಳೆ ರಾತ್ರಿ ಗಾಡಿಗೇ ನಾನು ಬೇರೆ ಊರಿಗೆ ಹೋಗಬೇಕಾಗಿದೆ. ನಾಲ್ಕು ದಿನಗಳ ಮಟ್ಟಿಗೆ....’

ಲಕ್ಷ್ಮಣಯ್ಯರು ಹೇಗೋ ಕೂತಿದ್ದವನು ಈಗ ಸರಿಯಾಗಿ ಕೂತುಕೊಂಡು ಉತ್ಸುಕತೆಯಿಂದ ‘ ಯಾವ ಊರಿಗೆ?’

‘ ಮೈಸೂರಿಗೆ’

'ಏನು ಕೆಲಸ?'

'ಅಲ್ಲಿ ನಮ್ಮ ಸಂಬಂಧೀಕರಲ್ಲಿ ಮದುವೆ.'

'ಮಕ್ಕಳನ್ನು ಕರಕೊಂಡು ಹೋಗ್ತೀರಿ ಅಂತ ಕಾಣುತ್ತೆ.'

'ಇಲ್ಲ. ಕರಕೊಂಡು ಹೋಗುವುದು ಕಷ್ಟ. ರಾತ್ರಿ ಪ್ರಯಾಣ. ಒಬ್ಬನೇ ಹೋಗುತ್ತೇನೆ'

'ಒಳ್ಳೆಯದು. ಮತ್ತೇನಾದರೂ—'

'ಅಗ್ರಲೇಖನವನ್ನೂ ಸ್ಫುಟವಿಚಾರವನ್ನೂ ನೀವೇ ಬರೆಯಬೇಕಾಗುತ್ತೆ.'

'ಆಗಲೀ ಬರೀತೇನೆ.'

'ಬಾಕಿ ಕೆಲಸವೆಲ್ಲ ಉಪಸಂಪಾದಕರು ಮಾಡಿಕೊಳ್ಳುತ್ತಾರೆ.'

'ಏನೂ ಯೋಚಿಸಬೇಡಿ. ಎಲ್ಲ ಸರಿಯಾಗಿ ನೋಡಿಕೊಳ್ಳುತ್ತೇನೆ.'

'ನಾನು ನಾಲ್ಕುದಿನಗಳಲ್ಲಿಯೆ ಬಂದುಬಿಡುತ್ತೇನೆ. ನಾಳೆದಿನದ್ದು ಅಗ್ರಲೇಖನ ಬರೆದುಕೊಡುತ್ತೇನೆ. ಸ್ಫುಟವಿಚಾರವನ್ನೂ ಬರೆಯುತ್ತೇನೆ. ಮುಂದೆ ಮೂರು ದಿನಗಳ ಕೆಲಸದ ಭಾರವೆಲ್ಲ ನಿಮ್ಮ ಮೇಲಿರುವುದು.'

'ಚಿಂತೆಯಿಲ್ಲ. ಸ್ಫುಟವಿಚಾರ ಸಾಮಾನ್ಯವಾಗಿ ನಾನೇ ಬರೆಯುತ್ತಿರುತ್ತೇನೆ. ಇನ್ನು ಉಳಿದದ್ದು ಅಗ್ರ ಲೇಖ. ಅದೇನು ದೊಡ್ಡ ವಿಷಯ. ಆದರೆ ನಿಮ್ಮಷ್ಟು ಚೆನ್ನಾಗಿ ಬರೆಯುವುದಕ್ಕೆ ನನಗೆ ಬರುವುದಿಲ್ಲ.'

'ನೀವೂ ಚೆನ್ನಾಗಿ ಬರೆಯುತ್ತೀರಿ. ಇದುವರೆಗೆ ನೀವು ಬರೆದದ್ದು ಎರಡು ಅಗ್ರಲೇಖನಗಳೂ ಚೆನ್ನಾಗಿದ್ದುವು.'

'ಏನೋ ಸ್ವಲ್ಪ ಈಗ ಬರೆಯೋದು ಕಲಿತುಕೊಂಡಿದ್ದರೇನಾಯಿತು? ಬಲು ದಿವಸಗಳಿಂದ ನಿಮ್ಮ ಸೇವೆ ಮಾಡಬೇಕೆಂಬ ಆಸೆಯಿಂದ ಅದನ್ನು ಕಲಿತುಕೊಂಡದ್ದು. ನಾಳೆ ಯಾವ ಗಾಡೀಗೆ ನೀವು ಹೊರಡೋದು?'

'ರಾತ್ರಿ ೧೦ ಘಂಟೇ ಗಾಡೀಲಿ'.

'ಮೈಸೂರಿಲ್ಲಿ ನಿಮ್ಮ ಸಂಬಂಧೀಕರು ಯಾವ ಪೇಟೇಲಿ ಇರೋದು?'

'ಹಳೆಯ ಅಗ್ರಹಾರದಲ್ಲಿ, ಏಕೆ?'

'ನಾನೂ ಕೆಲವು ಕಾಲ ಅಲ್ಲಿದ್ದೆ. ಅವರ ಗುರುತು ನನಗೆ ಇದೆಯೆನೊ ಅಂತ ಕೇಳಿದೆ.'

'ಅವರೇನೂ ಅಷ್ಟು ಪ್ರಸಿದ್ಧ ಮನುಷ್ಯರಲ್ಲ. ಒಂದು ಸಣ್ಣ ಜವಳಿ ಅಂಗಡಿ ಇಟ್ಟುಕೊಂಡಿದ್ದಾರೆ.'

'ಜವಳಿ ಅಂಗಡಿಯವರೆಲ್ಲ ನನಗೆ ಗುರ್ತಿದ್ದಾರೆ. ಅವರ ಹೆಸರೇನು?'

ಬಾಸ್ಕರರಾಯನು ಹೆಸರು ಹೇಳಿದನು. ಲಕ್ಷ್ಮಣಯ್ಯರು ಸ್ವಲ್ಪಹೊತ್ತು

'ಊಹೂಂ- ನನಗೆ ಅವರ ಗುರುತು ಇಲ್ಲ.'

ಅನಂತರ ತನ್ನ ಕೈ ಗಡಿಯಾರವನ್ನು ನೋಡಿಕೊಂಡು, ಅಯ್ಯರು 'ಒಳ್ಳೇದು! ರಾತ್ರಿ ಹೊತ್ತಾಯಿತು. ನಾನು ಹೊರಡಲೆ?'

'ಒಳ್ಳೇದು ಹೊರಡಿ. ನಾನೂ ಹೋಗಿ ಮಲಗಿಕೊಳ್ಳುತ್ತೇನೆ. ೧೦ ಘಂಟೆ ಆಯಿತು. ನಮಸ್ಕಾರ!'

ಲಕ್ಷ್ಮಣಯ್ಯರು ಅಲ್ಲಿಂದ ಹೊರಟು ಪೋಲೀಸ್ ಇನ್ಸ್ಪೆಕ್ಟರ ಮನೆಗೆ ಬಂದನು. ಅವನನ್ನು ನೋಡಿ ಇನ್ಸ್ಪೆಕ್ಟರು–'ಏನ್ರೀ? ಏನು ಸಮಾಚಾರ?' ಎಂದು ಕೇಳಿದರು.

'ನಾಳೆ ಸಂಪಾದಕರು ಮೈಸೂರಿಗೆ ಹೊರಡುತ್ತಾರೆ. ರಾತ್ರಿ ೯ ಘಂಟೆ ಗಾಡೀಗೆ.

'ಏನು ಕೆಲಸ?'

'ಯಾರ ಮನೇಲೋ ಮದುವೆಯಂತೆ. ಅದಕ್ಕೋಸ್ಕರ ಹೋಗ್ತಾರೆ.'

'ಎಲ್ಲಿ ಇಳಕೊಳ್ತಾರೆ?'

ಲಕ್ಷ್ಮಣಯ್ಯರು ವಿಳಾಸವನ್ನು ಸಂಪೂರ್ಣವಾಗಿ ಹೇಳಿದರು. ಅನಂತರ ಸ್ವಲ್ಪ ಹೊತ್ತು ಸುಮ್ಮನಿದ್ದು-'ನೀವು ಬಂದು ಮೂರುತಿಂಗಳಾಯಿತು. ನಮ್ಮ ಕೆಲಸ ಕೈಗೂಡುವ ಸುದ್ದಿಯೊಂದೂ ನೀವು ತಂದಿಲ್ಲ.' ಎಂದರು.

'ಅಂಥಾದ್ದೇನೂ ನಡೀತಾ ಇಲ್ಲ. ಆಗಿದ್ದರೆ ತಿಳಸ್ತಾ ಇರಲಿಲ್ಲವೇ?'

'ನಡೆಯಿತೋ ಇಲ್ಲವೊ. ಪ್ರಾಯಶಃ ನಿಮಗೆ ತಿಳಿಯದೂ ಅಂತ ಕಾಣುತ್ತೆ!'

'ಹಾಗಾಗುವುದು ಸಾಧ್ಯವೇ ಇಲ್ಲ. ಹಗಲೂ ರಾತ್ರಿ ನಾನು ಆಫೀಸಿನಲ್ಲಿಯೇ ಇರುತ್ತೇನೆ. ಪ್ರತಿಯೊಬ್ಬರ ಮೇಲೂ ನನ್ನ ಕಣ್ಣಿದೆ. ಅಲ್ಲಿಗೆ ಬರುವ ಕಾಗದಗಳನ್ನೆಲ್ಲ ನಾನೇ ಓದುತ್ತೇನೆ. ಸಂಪಾದಕರ ಸ್ವಂತ ಕಾಗದಗಳನ್ನು ಮಾತ್ರ ಓದಲವಕಾಶವಿಲ್ಲ.'

'ಹಾಂ – ಅದೇ ಮುಖ್ಯವಿಷಯ' ಎಂದು ಇನ್ಸ್ಪೆಕ್ಟರು ಮೇಜಿನ ಮೇಲೆ ಮುಷ್ಟಿ ಪ್ರಹಾರ ಮಾಡಿ ಗರ್ಜಿಸಿದರು.

'ಅದನ್ನು ನೋಡುವುದು ಸಾಧ್ಯವಾಗಿಲ್ಲ'

'ಆ ಕಾಗದಗಳನ್ನು ನೋಡುವುದೇ ಮುಖ್ಯ ಕೆಲಸ. ಬೇಕಾದ ಕೆಲಸ ಮಾಡುವುದಕ್ಕೆ ನೀವು ಸಿದ್ಧರಾಗಿರಬೇಕು'.

'ಪ್ರಯತ್ನ ಪಟ್ಟು ನೋಡುತ್ತೇನೆ.'

'ನಿಮಗೆ ಇನ್ನೂ ಮೂರು ತಿಂಗಳ ವಾಯಿದೆ ಜಾಸ್ತಿ ಕೊಡುತ್ತೇನೆ. ಅಷ್ಟರೊಳಗೇ ನಿಮ್ಮಿಂದೇನೂ ಆಗದಿದ್ದರೆ ಹಿಂತಿರುಗಿ ಹೋಗುವುದು ಒಳ್ಳೆಯದು. ತಿಳಿಯಿತೇ ?'

'ಆಗಲೀ, ತಿಳೀತು. ನಾನು ಪ್ರಯತ್ನಪಡುತ್ತೇನೆ.'

'ಒಳ್ಳೇದು. ಈಗ ಹೊರಡಿ.'

— ೪ —

ಸಂಪಾದಕರು ಮೈಸೂರಿಗೆ ಹೋದ ಎರಡು ದಿನಗಳನಂತರ ಲಕ್ಷ್ಮಣಯ್ಯರು ಇನ್ಸ್ಪೆಕ್ಟರನ ಕಡೆ ಬಂದನು. ಅವರು ಅದನ್ನು ನೋಡಿ ವಿಶೇಷ ಉತ್ಸಾಹದಿಂದ 'ಏನು ಸಮಾಚಾರ ?'

'ಕ್ರಾಂತಿ'ಯ ವಿಶೇಷ ಸಂಚಿಕೆಯನ್ನು ಅವರ ಮುಂದಿಟ್ಟು ಅಯ್ಯರ್ 'ಇದರೊಳಗಿನ ಅಗ್ರಲೇಖನವನ್ನು ಓದಿ!' ಎಂದನು. ಇನ್ಸ್ಪೆಕ್ಟರು ಓದಿ 'ಲೇಖನ ಬಹಳ ಉಗ್ರವಾಗಿದೆ. ಇದರಿಂದ ಸಂಪಾದಕರಿಗೆ ೧ ವರ್ಷ ಜೈಲಾಗುತ್ತೆ' ಎಂದರು.

'ಅದಕ್ಕಾಗಿಯೇ ಬರೆದದ್ದು!'

'ಯಾರು ಬರೆದದ್ದು ?'

'ನಾನು'

'ಒಳ್ಳೇದು!'

'ಆ ದಿನ ಏನಾದರೂ ಕೆಲಸ ಮಾಡಬೇಕೆಂದು ನೀವು ಹೇಳಿದಿರಲ್ಲವೆ? ಯೋಚನೆ ಮಾಡಿ ನೋಡಿದಾಗ ಈ ಉಪಾಯ ಹೊಳೀತು. ಸಂಪಾದಕರು ಪರ ಊರಿಗೆ ಹೋಗಿದ್ದಾರೆ. ಈ ಸಮಯವೇ ಅನುಕೂಲವೆಂದು ತೋರಿತು. ಬರೆದೆ.'

ಇನ್ಸ್ಪೆಕ್ಟರು ನಕ್ಕು 'ಒಳ್ಳೆಯದು-ಆದರೆ ಇದರ ಪರಿಣಾಮವೇನಾಗುತ್ತೆ ಗೊತ್ತೊ?' ಎಂದರು.

ತನ್ನ ಕೆಲಸಕ್ಕೆ ಇನ್ಸ್ಪೆಕ್ಟರು ಮೆಚ್ಚುವರೆಂದು ಅಯ್ಯರು ನಂಬಿದ್ದರು ಆದರೆ ಅವರು ಮೇಲಿನ ಪ್ರಶ್ನೆಯನ್ನು ಕೇಳಿದ ಕೂಡಲೆ ಅಯ್ಯರ ಮುಖ. ಜೋಲುಬಿತ್ತು. ಆಗ ತೊದಲುತ್ತ ಅವನು 'ಏನು ಪರಿಣಾಮವಾಗುತ್ತೆ?' ಎಂದನು.

'ಸಂಪಾದಕರಿಗೆ ಒಂದೋ ಎರಡೋ ವರುಷ ಜೈಲಾಗುತ್ತೆ. ಅಷ್ಟೇ!

'ಹಾಗಾದರೆ ನಿಮಗೆ ಬೇಕಾಗಿದ್ದದ್ದೇನು?'

'ಸಂಪಾದಕರು ಜೈಲಿಗೆ ಹೋದ್ದರಿಂದ ನಮ್ಮ ಕೆಲಸ ಮುಗಿಯಲಿಲ್ಲ. ಕ್ರಾಂತಿಕಾರಕ ವಿಚಾರವುಳ್ಳವರಾರು? ಸಂಪಾದಕರು ಯಾರ್ಯಾರಿಗೆ ಪತ್ರ ಬರೆಯುತ್ತಾರೆ? ಅವರ ವಿಳಾಸಗಳೇನು? ಇವೆಲ್ಲ ನಮಗೆ ತಿಳಿಯಬೇಕು. ಸಂಪಾದಕರು ಜೈಲಿಗೆ ಹೋದರೆ ಈ ಕೆಲಸವೆಲ್ಲ ನೆರವೇರುವುದಿಲ್ಲ.'

ಲಕ್ಷ್ಮಣಯ್ಯರು ಇನ್ಸ್ಪೆಕ್ಟರ ಕಡೆ ಬಾಯಿ ತೆರೆದುಕೊಂಡು ನೋಡುತ್ತಿದ್ದನು. ಅವರು ಮತ್ತೆ ಹೀಗೆ ಹೇಳಿದರು.—'ನನ್ನ ವಿಚಾರವೇನೆಂದು ಈಗಲಾದರೂ ತಿಳಿಯಿತೊ? ಚಿಂತೆಯಿಲ್ಲ. ಈಗ ಆದ್ದು ಆಯಿತು. ಈ ಲೇಖನದ ವಿಚಾರ ತೀರ್ಮಾನವಾಗಬೇಕಾದರೆ ೧-೨ ತಿಂಗಳಾಗುತ್ತೆ. ಅಷ್ಟರೊಳಗೆ ನಿಮ್ಮ ಕೆಲಸ ನೀವು ಮಾಡಿರಿ.'

ಲಕ್ಷ್ಮಣಯ್ಯರು ಮುಖತಗ್ಗಿಸಿಕೊಂಡು ಹಲ್ಲುಕಚ್ಚಿಕೊಂಡು 'ಹೌದು ಇನ್ನೂ ಸಮಯವಿದೆ. ನಮಸ್ಕಾರ' ಎಂದು ಹೊರಟು ಹೋದನು.

ಸಂಪಾದಕ ಭಾಸ್ಕರರಾಯನು ವಾಪಸು ಬಂದನು. ಬೆಳಿಗ್ಗೆ ಕ್ರಾಂತಿ 'ಕಚೇರಿಯಲ್ಲಿ ಕುಳಿತುಕೊಂಡು 'ಕ್ರಾಂತಿಯ ಹಾಳೆಗಳನ್ನು ತಿರಿಗಿಸುತ್ತ. 'ಲೇಖನವೇನೊ ಬಹಳ ಚೆನ್ನಾಗಿದೆ. ಆದರೆ ಇದರಲ್ಲಿ ಬರೆದಿರುವ ಕೆಲವು ವಾಕ್ಯಗಳನ್ನು ಸರಕಾರದವರು ನೋಡಿದರೆ ರಾಜದ್ರೋಹದ ಆಪಾದನೆ ತರಬಹುದು ಎಂದರು.'

ಲಕ್ಷ್ಮಣಯ್ಯರು—ಮಾಡಿದರೆ ಮಾಡಲಿ! ನಾನು ಅದಕ್ಕೆ ಸ್ವಲ್ಪವೂ ಹೆದರುವುದಿಲ್ಲ. ಜೈಲಿಗೆ ಹೋಗುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಸಂಪಾದಕನು ನಕ್ಕು—ಆದರೆ ಈ ಸಾರಿ ನೀವು ಹೋಗಲವಕಾಶವಿಲ್ಲ.

‘ ಅದೇಕೆ ? ’ ಎಂದು ಲಕ್ಷ್ಮಣಯ್ಯರು ಆಶ್ಚರ್ಯದಿಂದ ಕೇಳಿದನು.

‘ ಏಕೆಂದರೆ ಪತ್ರಿಕೆಯ ಸಂಪಾದಕ, ಪ್ರಕಾಶಕ, ಮುದ್ರಕ–ಎಲ್ಲ ನಾನೇ.

‘ ಆದರೆ ಲೇಖನವನ್ನು ಬರೆದವನು ನಾನು ! ’

‘ ಆದರೇನು ? ನಿಮ್ಮ ಹೆಸರಿದೆಯೆ ? ಅಲ್ಲದೆ ಇದರ ಹೊಣೆಯೆಲ್ಲ ನನ್ನ ಮೇಲಿದೆ.’

ಲಕ್ಷ್ಮಣಯ್ಯರು ಮುಖ ತಗ್ಗಿಸಿಕೊಂಡು ಸುಮ್ಮನೆ ಕುಳಿತನು. ಅವನಿಗೆ ಉತ್ತೇಜನವೀಯಬೇಕೆಂದು ಸಂಪಾದಕರು—‘ಚಿಂತೆಯೆಕೆ ? ಏನಾಗುತ್ತೋ ನೋಡೋಣ.’ ಎಂದರು.

‘ ನಿಮಗೆ ತೊಂದರೆಯಾದರೆ ನನಗೆ ದುಃಖವಾಗುತ್ತೆ.’

‘ ದುಃಖವಾಗುವ ಕಾರಣವೇನು ? ಹೆಚ್ಚಾದರೆ ೧ ವರುಷ ಅಥವಾ ಎರಡು ವರುಷಗಳ ಸಜಾ ಆಗಬಹುದು. ಒರಳಿಗೆ ತಲೆ ಕೊಟ್ಟ ಮೇಲೆ ಒನಕೆ ಪೆಟ್ಟಿಗೆ ಹೆದರುವುದಕ್ಕಾದೀತೆ ?’

‘ ನೀವು ನನ್ನನ್ನು ಮುಂದೆ ಮಾಡಿ. ಈ ಲೇಖನವನ್ನು ನಾನೇ ಬರೆದವನೆಂದು ಹೇಳಿಬಿಡುತ್ತೇನೆ ? ’

‘ ಅದಾಗುತ್ತದೆಯೆ ? ಹಾಗೆ ಹೇಳಿದರೂ ನನ್ನ ಜವಾಬ್ದಾರಿ ತಪ್ಪುವುದಿಲ್ಲ ಮತ್ತೆ ನನಗೆ ಅದರಿಂದ ಬಿಡುಗಡೆಯಾಗುವಂತಿದ್ದರೂ ನಾನು ಹಾಗೆ ಮಾಡಲಾರೆ. ಹಾಗೆ ಮಾಡುವುದು ನನಗೆ ನ್ಯಾಯವೆನಿಸದು. ಯಾವ ಸಂಪಾದಕನಿಗೂ ಅದು ನ್ಯಾಯವೆನಿಸದು.’

‘ ಏನು ಅನ್ಯಾಯವಾಯಿತಲ್ಲ!’

‘ ಅನ್ಯಾಯವಿಲ್ಲ ಒಂದೂ ಇಲ್ಲ. ಆದ್ದೆಲ್ಲಾ ಸರಿಯಾಗಿದೆ.’ ಸಂಪಾದಕನು ಹೀಗೆ ಹೇಳಿದಾಗ ಅಯ್ಯರ ತಿರುಳಿಲ್ಲದ ವಾದಕ್ಕಾಗಿ ಮನಸ್ಸಿನಲ್ಲಿ ಅವನಿಗೆ ತಿರಸ್ಕಾರವುಂಟಾಯಿತು. ಆದರೆ ತನ್ನ ಕೋಪವನ್ನು ತೋರಿಸಿಕೊಳ್ಳಲಿಲ್ಲ. ಮತ್ತೆ ಅಯ್ಯರ ವಿಚಾರದಲ್ಲಿ ದುರಭಿಪ್ರಾಯಕ್ಕೂ ಮನಸ್ಸಿನಲ್ಲಿ ಅವಕಾಶ ಕೊಡಲಿಲ್ಲ.

ಈ ಸಮಯದಲ್ಲಿ ಭಾಸ್ಕರರಾಯನ ಮಿತ್ರನೊಬ್ಬನು ಬಂದನು. ಸಂಪಾದಕರ ಕೋಣೆಯೊಳಕ್ಕೆ ನುಗ್ಗುತ್ತಿರುವಾಗಲೇ ಅವನು ‘ಮೊನ್ನೆ ದಿನದ ಸಂಚಿಕೆಯ ನಿಮ್ಮ ಅಗ್ರಲೇಖನ ಬಹಳ ಜೋರಾಗಿದೆ’ ಎಂದನು.

ಸ್ವಲ್ಪ ಬೇಸಸದಿಂದ ಸಂಪಾದಕನು–'ನಿಮ್ಮ ಮನಸ್ಸಿಗೆ ಒಪ್ಪಿತೇನು ?' ಮಿತ್ರಮಹಾಶಯನು ಕುರ್ಚಿಯ ಮೇಲೆ ಕೂತುಕೊಳ್ಳುವಾಗ " ನನಗೆ ಮಾತ್ರವೇ ಏನು ?–ಎಲ್ಲರಿಗೂ ಸಂತೋಷವಾಗಿದೆ. ನಿಮಗೆ ಗೊತ್ತಾಗಿದೆಯೋ ಇಲ್ಲವೊ ನಿನ್ನೆ ನಮಗೆ ಸಂಚಿಕೆ ಸಿಕ್ಕುವುದೇ ಕಷ್ಟವಾಗಿತ್ತು."

ಸಂಪಾದಕನ ಕೋಪವಿಳಿಯಿತು. ಪ್ರಸನ್ನ ಮುದ್ರೆಯಿಂದ 'ಹಾಗಾದರೆ ಎಲ್ಲರ ಮನಸ್ಸಿಗೂ ಒಪ್ಪಿತಲ್ಲ!' ಎಂದನು.

'ಲೇಖನದ ಶೈಲಿ ಬಹು ಗುಂಭಗಾಂಭೀರ್ಯವುಳ್ಳದಾಗಿದೆ. ನಾನಂತು ಅದನ್ನು ಐದಾರುಸಾರಿ ಓದಿದೆ.'

ಸಂಪಾದಕ—'ಆ ಲೇಖನವನ್ನು ಲಕ್ಷ್ಮಣಯ್ಯರು ಬರೆದರು!' ಈ ವಿಚಾರವನ್ನು ತಿಳಿಸುವಾಗ ಸಂಪಾದಕನ ಮನಸ್ಸಿನ ಸ್ಥಿತಿಯು ಚೆನ್ನಾಗಿಲ್ಲದಿದ್ದರೂ, ಅಯ್ಯರ ಕೀರ್ತಿಯನ್ನು ಅಪಹರಿಸಬೇಕೆಂಬ ದುರಾಸೆ ಆತನಲ್ಲಿರಲಿಲ್ಲ.

ಮಿತ್ರಮಹಾಶಯನು ಅಯ್ಯರ ಕಡೆ ತಿರುಗಿಕೊಂಡು--'ಏನು ಲಕ್ಷ್ಮಣಯ್ಯರೇ, ನೀವು ಬೂದಿ ಮುಚ್ಚಿದ ಕೆಂಡದಂತಿದ್ದಿರಿ.' ಎಂದನು.

ಅಯ್ಯರು—ಮಂದಹಾಸದಿಂದ—" ನಾನು ಬರೆದದ್ದೇನು? ಇದೆಲ್ಲ ಸಂಪಾದಕರ ಶಿಕ್ಷಣದ ಫಲ!" ಅಂದ.

"ಹೌದು, ಹೌದು ಅವರ ಶಿಕ್ಷಣವೆಂದರೆ, ಅವರೆದುರಿಗೆ ಹೊಗಳಬಾರದು. ಅವರಂಥ ಧೈರ್ಯಶಾಲಿಗಳಾದ ಸಂಪಾದಕರು ಯಾರಿದ್ದಾರೆ ಹೇಳಿ!

ಸಂಪಾದಕನು ಸಂತೋಷದಿಂದ—'ಅಂತೂ ಇದರ ಮೂಲ ಕೀರ್ತಿ ನನಗೆ ದೊರಕಿತು' ಎಂದುಕೊಂಡನು. ಈ ವಿಚಾರದಿಂದ ಸಂಪಾದಕರ ಹೃದಯದಲ್ಲಿ ಸಂಕುಚಿತವಾಗಿದ್ದ ಉದಾರತ್ವವು ಶಬ್ದರೂಪವಾಗಿ ಹೊರಬಿದ್ದಿತು. ಅವರು ಹೀಗೆಂದರು–" ಶಿಕ್ಷಣಕೊಟ್ಟರೂ, ಅದನ್ನು ಹೊಂದುವುದರಲ್ಲಿಯೂ ಯೋಗ್ಯತೆ ಇರಬೇಕು. ಲಕ್ಷ್ಮಣಯ್ಯರಿಗೆ ಆ ಯೋಗ್ಯತೆಯಿದೆ. ಆದ್ದರಿಂದಲೇ ಅವರು ಸ್ವಲ್ಪ ಕಾಲದಲ್ಲಿ ಅದರ ರಹಸ್ಯವನ್ನು ತಿಳಿದುಕೊಂಡರು. ಅನೇಕರಿಗೆ ವರ್ಷಗಟ್ಲೆ ಹೇಳಿಕೊಟ್ಟರೂ ಅವರು ಒಂದು ವಾಕ್ಯವನ್ನು ಬರೆಯಲಾರರು".

ಮಿತ್ರ ಮಹಾಶಯ—ಅದೂ ನಿಜ. ಗುರು ಶಿಷ್ಯರಿಬ್ಬರೂ ಯೋಗ್ಯ ರಾಗಿದ್ದರೇನೇ ಏನಾದರೂ ಕೆಲಸವಾಗೋದು.

ಮೇಲೆ ಹೇಳಿದ ಸಂಗತಿ ನಡೆದು ಒಂದು ತಿಂಗಳಾಗಿ ಹೋಯಿತು. ಲಕ್ಷ್ಮಣಯ್ಯರ ಲೇಖನದ ವಿಚಾರವನ್ನು ೮-೧೦ ದಿನಗಳ ವರೆಗೆ ಜನರು ಚರ್ಚಿಸಿದರು. ಅನಂತರ ಎಲ್ಲರೂ ಅದನ್ನು ಮರೆತುಬಿಟ್ಟರು.

ಒಂದು ದಿನ ಬೆಳಿಗ್ಗೆ ಪೋಲೀಸಿನವರು ಸಂಪಾದಕರ ಮನೆ, 'ಕ್ರಾಂತಿ'ಯ ಕಚೇರಿಯನ್ನು ಶೋಧನೆಮಾಡಿದರು. ಅನಂತರ ಸಂಪಾದಕನ್ನು ಹಿಡಿದು ಬಂಧನದಲ್ಲಿಟ್ಟರು ಅವರ ಪತ್ರಿಕೆಯಲ್ಲಿ ರಾಜದ್ರೋಹಾತ್ಮಕ ಲೇಖನಗಳನ್ನು ಮುದ್ರಿಸಿದುದೇ ಅವರ ಅಪರಾಧವೆಂದು ತಿಳಿಸಲಾಯಿತು. ಆ ದಿನ ಸಂಪಾದಕರನ್ನು ಜಾಮೀನಿನಮೇಲೆ ಬಿಟ್ಟುಬಿಟ್ಟರು. ಮುಂದೆ ವಿಚಾರಣೆಗೆ ಆರಂಭವಾಯಿತು. ತೀರ್ಪು ಹೇಳುವುದಕ್ಕೆ ನಾಲ್ಕು ದಿನ ಮುಂಚೆ ಭಾಸ್ಕರರಾಯನು ಲಕ್ಷ್ಮಣಯ್ಯರನ್ನು ಕುರಿತು-“ಲಕ್ಷ್ಮಣಯ್ಯರೇ ನಾನಂತೂ ಜೈಲಿಗೆ ಹೋಗುತ್ತೇನೆ—ಇನ್ನು........”

ಲಕ್ಷ್ಮಣಯ್ಯರು ಗಾಬರಿಯಿಂದ—“ಇಷ್ಟರಲ್ಲಿಯೇ ಇದರ ತೀರ್ಮಾನವಾಯಿತೆ?”

'ಅದು ಖಂಡಿತ.'

'ಇದು ನಿಮಗೆ ಹೇಗೆ ತಿಳಿಯಿತು?'

“ಏನ್ರೀ! ಇದರ ವಿಚಾರವೇ ಹಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಬಿಡುಗಡೆಯ ಸಂಭವವಿಲ್ಲ. ಇನ್ನುಳಿದುದೆಲ್ಲ ದೈವಾಧೀನ. ಆದರೆ ನಾನಿಲ್ಲದಿರುವಾಗ ಪತ್ರಿಕೆಯ ಜವಾಬ್ದಾರಿಯೆಲ್ಲವೂ ನಿಮ್ಮಮೇಲಿರುವುದು.”

ಅಯ್ಯರು ಆಶ್ಚರ್ಯದಿಂದ—“ಏನು? ನನ್ನ ಮೇಲೆ?”

“ಹೌದು, ನಿಮ್ಮ ಮೇಲೆ. ನನ್ನ ನಂಬಿಕೆಗರ್ಹರಾದ ಮನುಷ್ಯನು ನಿಮ್ಮನ್ನು ಬಿಟ್ಟರೆ ಬೇರೊಬ್ಬನಿಲ್ಲ.”

ಅಯ್ಯರು ಜೀವವಿಲ್ಲದ ಗೊಂಬೆಯಂತೆ ಸುಮ್ಮನೆ ಕುಳಿತುಕೊಂಡು ಸಂಪಾದಕನನ್ನೇ ನೆಟ್ಟ ನೋಟದಿಂದ ನೋಡುತ್ತಿದ್ದನು.

ಸಂಪಾದಕ:-ಹೆಚ್ಚಾದರೆ, ನನಗೆ ಎರಡು ವರ್ಷ ಸಜಾ ಆಗಬಹುದು ಎರಡುವರ್ಷದ ವರೆಗೆ ಎಲ್ಲ ಕೆಲಸವನ್ನೂ ನೀವೇ ಮಾಡಬೇಕಾಗುವುದು.

ಯೋಗ್ಯರಾದವರ್ಯಾರಾದರೂ ಸಿಕ್ಕಿದರೆ ನಿಮ್ಮ ಸಹಾಯಕ್ಕಿಟ್ಟುಕೊಳ್ಳಿ. ಉಪಸಂಪಾದಕರಂತೂ ಇಬ್ಬರು ಇದ್ದಾರೆ. ಇಷ್ಟರಲ್ಲಿಯೇ ಕೆಲಸ ನಡೆಸಿಕೊಳ್ಳಿ. ಮತ್ತೊಂದು ಉಪಕಾರ ಮಾಡಬೇಕು, ನೀವು ನಾನು ಬಿಡುಗಡೆಯಾಗಿ ಬರುವವರೆಗೆ ಸರ್ಕಾರದವರು ನಿಮ್ಮ ಮೇಲೆ ವಕ್ರದೃಷ್ಟಿಯನ್ನಿಡುವಂತಹ ಲೇಖನಗಳನ್ನು ಮಾತ್ರ ಬರೆಯಬೇಡಿ. ಏಕೆಂದರೆ ಆಗ-ಇಲ್ಲಿಯ ಕೆಲಸವೆಲ್ಲ ನಿಂತುಹೋಗುವುದು. ಇನ್ನು ನಮ್ಮ ಮನೆಯವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವ ಜವಾಬ್ದಾರಿಯನ್ನು ನಿಮ್ಮ ಮೇಲೆ ಬಿಟ್ಟಿದ್ದೇನೆ. ನಾನು ನನ್ನ ಆಪ್ತರೊಬ್ಬರಿಗೆ ಬರೆದಿದ್ದೇನೆ. ಆತನೂ ನಾಳೆನಾಡಿದ್ದರಲ್ಲಿ ಬರಬಹುದು. ಆತನ ಮೇಲೂ ನಿಮ್ಮ ವಿಚಾರಣೆ ಇರಲಿ. ಆತನು ಕೇವಲ ಮನೆ ವಿಚಾರಗಳನ್ನು ನೋಡಿಕೊಳ್ಳುತ್ತಾರೆ."

ಅಯ್ಯರು ಮಾತಿಲ್ಲದೆ ಕೂತಿದ್ದಾನೆ.

ಸಂಪಾದಕ:—ನೀವು ಮಾತಾಡುತ್ತಿಲ್ಲ. ಇದರ ವಿಚಾರದಲ್ಲಿ ನಿಮ್ಮ ಆಕ್ಷೇಪಣೆಯೇನಾದರೂ ಇದ್ದರೆ ಹೇಳಿರಿ.

ಅಯ್ಯರು:-ನನಗೇನೂ ತೋಚುತ್ತಿಲ್ಲ. ಕೇವಲ ನನ್ನಿಂದ ತಮಗೆ ತೊಂದರೆಯುಂಟಾಯಿತೆಂದು ತಿಳಿದು—

ಸಂ:-ಆ ವಿಚಾರವಾಗಿ ಯೋಚಿಸಬೇಡಿ. ಈ ಕೆಲಸವೇ ಹಾಗಿದೆ, ಈ ಲೇಖನವು ಪ್ರಕಟವಾದ ಮೇಲೆ ಚಂದಾದಾರರ ಸಂಖ್ಯೆಯೂ ಹೆಚ್ಚಿದೆ.

ಅಯ್ಯರು:-ಆದರೆ ನನಗೆ ಮಾತ್ರ ದುಃಖವಾಗುತ್ತಿದೆ.

ಸಂ:-ನೀವು ದುಃಖಿಸಲು ಕಾರಣವಿಲ್ಲ. ನಮ್ಮಂಥವರ ಕರ್ತವ್ಯ ಅದು. ನಾಳೆ ನಾನು ನಿಮ್ಮ ಹೆಸರಿನಲ್ಲಿ ಸಂಪಾದಕ, ಮುದ್ರಕ ಮತ್ತು ಪ್ರಕಾಶಕರೆಂದು ಡಿಕ್ಲರೇಷನ್ ಬರೆದುಕೊಡುತ್ತೇನೆ. ಆಗ ನನ್ನ ಚಿಂತೆ ನಿವಾರಣೆಯಾಗುವುದು.

ಲಕ್ಷ್ಮಣಯ್ಯರ ಎದೆ ಹೊಡೆದುಕೊಳ್ಳಲಾರಂಭಿಸಿತು.

ಈ ಸಂಭಾಷಣೆಯಾದ ರಾತ್ರಿಯೇ, ಅಯ್ಯರು ಇನ್ಸ್ಪೆಕ್ಟರನ್ನು ನೋಡಿ ಎಲ್ಲ ಸಂಗತಿಯನ್ನೂ ತಿಳಿಸಿದನು. ಅವರು ಅವನಿಗೆ-' ನೀವು ಈ ಗಲಾಟೆಗೆ

ಸಿಕ್ಕಿಕೊಳ್ಳಬೇಡಿ. ಸಿಕ್ಕಿಕೊಂಡರೆ ಸಿ- ಐ. ಡಿ. ಡಿಪಾರ್ಟ್‌ಮೆಂಟನಿಂದ ನಿಮಗೆ ಅರ್ಧ ಚಂದ್ರಪ್ರಯೋಗವಾದೀತು.' ಎಂದರು.

'ಆದರೆ ನಾನು ಈಗ ಸಹಾಯಮಾಡದಿದ್ದರೆ ಪತ್ರಿಕೆ ನಿಂತುಹೋಗುತ್ತದಲ್ಲಾ!'

"ಒಳ್ಳೇದಾಯಿತು! ನಮಗೆ ಬೇಕಾಗಿರುವುದೂ ಅದೇ".

"ಆದರೆ ನಾಳೆ ಸಂಪಾದಕರು ನನ್ನ ಹೆಸರಿನಲ್ಲಿ ಡಿಕ್ಲರೇಷ‌ನ್ ಮಾಡುತ್ತಾರಂತೆ!"

"ಅದಾಗೋದಿಲ್ಲ ಅಂತ ನೀವು ಖಂಡಿತವಾಗಿ ಹೇಳಿಬಿಡಿ!"

"ಈಗ ನಾನಿರುವ ಪರಿಸ್ಥಿತಿಯನ್ನು ನೋಡಿದರೆ ಹಾಗೆ ಮಾಡುವುದು ಅಸಾಧ್ಯವಾಗಿ...."

"ಪರಿಸ್ಥಿತಿ ಗಿರಿಸ್ಥಿತಿಯೇನೂ ಇಲ್ಲ. ನೀವು ಆ ಕೆಲಸ ಮಾಡಬಾರದು. ಏನಾದರೂ ಉಪಾಯದಿಂದ ಅದರ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಿ."

"ಹ್ಯಾಗೆ ತಪ್ಪಿಸಿಕೊಳ್ಳಲಿ?"

"ಯಾವುದಾದರೂ ಊರಿಗೆ ಹೊರಟುಹೋಗಿ."

"ನೋಡ್ತೇನೆ."

ಇನ್‌ಸ್ಪೆಕ್ಟರು ಕೋಪದಿಂದ ಕರ್ಕಶಸ್ವರದಲ್ಲಿ--"ನೋಡ್ತೇನೇನು! ಇಂಥ ಮಾತು ಕೇಳುವ ಅಭ್ಯಾಸ ನಮಗಿಲ್ಲ. ನಾನು ಹೇಳಿದ ಹಾಗೆ ನಡಕೊಳ್ಳಬೇಕು." ಎಂದರು.

ಈ ಮಾತು ಅಯ್ಯರಿಗೆ ಸರಿತೋರಲಿಲ್ಲ. ಅವನು-'ಇದರಿಂದ ಕೂಡಲೆ ತಪ್ಪಿಸಿಕೊಳ್ಳುವುದಕ್ಕೆ ಸಂಪಾದಕರಿಗೆ ಯಾವ ಕಾರಣ ಹೇಳಲಿ? ಅದನ್ನು ಕೇಳಿ ಅವರು ಏನು ತಿಳಿಕೊಂಡಾರು?'—ಎಂದನು.

"ಹಾಗೊ! ನಿಮ್ಮ ಮನಸ್ಸು ಬಹಳ ಮೃದುವಾಗಿರುವಂತೆ ಕಾಣುತ್ತದೆ. ಹಾಗಿದ್ದರೆ ನೀವು ಆ ಲೇಖನವನ್ನು ಬರೆದು ಸಂಪಾದಕರನ್ನೇಕೆ ಸಿಕ್ಕಿಸಿದಿರಿ. ಅದನ್ನು ಬರೆಯಿರಿ ಎಂದು ನಾನು ನಿಮಗೆ ಹೇಳಿರಲಿಲ್ಲವಲ್ಲ" ಎಂದು ಇನ್‌ಸ್ಪೆಕ್ಟರ್ ಸಾಹೇಬರು ಹಾಸ್ಯಮಾಡಿದರು.

ಅಯ್ಯರ ಬಾಯಿಂದ ಮಾತೇ ಹೊರಡಲಿಲ್ಲ. ಅವನು ತಲೆ ತಗ್ಗಿಸಿದ್ದನು. ಆದರೆ ಇನ್‌ಸ್ಪೆಕ್ಟರ್ ಅಷ್ಟಕ್ಕೆ ತೃಪ್ತರಾಗದೆ—'ಈ ಇಲಾಖೆಯಲ್ಲಿ

ಸ್ನೇಹ, ದಯೆ ಇರಕೂಡದು. ಹೇಳಿದ ಕೆಲಸ ಕಣ್ಮುಚ್ಚಿಕೊಂಡುಮಾಡುವ ಕಲ್ಲೆದೆಯವರೇ ಈ ಇಲಾಖೆಗೆ ಯೋಗ್ಯರು. ಅಂಥವರೇ ಇದರಲ್ಲಿರಬಲ್ಲವರು. ಅವರಿಗೆ ಹೆಚ್ಚಿನ ಪದವಿಯೂ ದೊರೆಯುವುದು.

ಅಯ್ಯರು ಆಲೋಚನೆಮಾಡುತ್ತ—'ಸರಿಯಾದ ಮಾತು'ಎಂದನು.

ಇನ್ಸ್ಪೆಕ್ಟರ ಮನೆಯನ್ನು ಬಿಟ್ಟು ಬಂದು ಅಯ್ಯರು ಹಾಸಿಗೆಯಮೇಲೆ ಮಲಗಿಕೊಂಡನು. ಆದರೆ ನಿದ್ರೆ ಬರಲಿಲ್ಲ. ಏನೇನೋ ಯೋಚನೆಗಳು ನಿದ್ರೆಗೆ ಅವಕಾಶವೀಯಲಿಲ್ಲ. ಒಂದು ಕಡೆ ಸಂಪಾದಕನ ಸರಳಸ್ವಭಾವ, ತನ್ನಲ್ಲಿಟ್ಟಿದ್ದ ನಂಬಿಕೆ, ಸ್ನೇಹ ಇವುಗಳು—ಮತ್ತೊಂದೆಡೆಯಲ್ಲಿ ಇನ್ಸ್ಪೆಕ್ಟರ ಕ್ರೂರತನ, ಸ್ವಾರ್ಥ. ಹೃದಯಶೂನ್ಯತೆ-ಇವುಗಳು- ಕಣ್ಣೆದುರಿಗೆ ಕಟ್ಟಿದಂತಿದ್ದವು. ಆಗ ಅಯ್ಯರು ಯೋಚಿಸಲಾರಂಭಿಸಿದನು—'**ಇನ್ಸ್ಪೆಕ್ಟರು—ಸಂಪಾದಕರು**'-ಇವರಿಬ್ಬರಲ್ಲಿ ಉತ್ತಮರಾರು? ಒಬ್ಬರು ನನ್ನಮೇಲೆ ಪ್ರೀತಿಯಿಟ್ಟು, ನನಗೋಸ್ಕರ ಜೈಲಿಗೆ ಹೋಗುತ್ತಿರುವಾಗಲೂ ಎಲ್ಲ ಹೊಣೆಯನ್ನು ನನಗೇ ವಹಿಸುತ್ತಿದ್ದಾರೆ. ಇನ್ಸ್ಪೆಕ್ಟರು ಮೊದಲನೆಯ ನಂಬರ ಸ್ವಾರ್ಥಿಯಾಗಿದ್ದಾರೆ. 'ನಾನು ನೋಡುತ್ತೇನೆ' ಎಂದ ಕೂಡಲೆ ಅವನ ಕಣ್ಣು ಕೆಂಪಗಾಗಿ 'ನಾನು ಹೇಳಿದ ಹಾಗೆ ನಡೆದುಕೊಳ್ಳಬೇಕು' ಎಂದು ಜೋರು ಮಾಡುತ್ತಾನೆ. ಆತನಿಗೆ ನನ್ನಲ್ಲಿ ಸ್ವಲ್ಪವೂ ನಂಬಿಕೆಯಿಲ್ಲ. ನಾನೇನಾದರೂ ಸ್ವಲ್ಪ ತಪ್ಪುಮಾಡಿದರೆ ಆತನು ನನಗೆ ಶತ್ರುವಾಗುತ್ತಾನೆ.........

ಎರಡನೆಯ ದಿನ ಅಯ್ಯರನ್ನು ಕರೆದು ಸಂಪಾದಕನು—

"ಇವತ್ತು ನಿಮ್ಮ ಹೆಸರಿನಲ್ಲಿ ಡಿಕ್ಲರೇಷನ್ ದಾಖಲುಮಾಡಬೇಕು."

ಅಯ್ಯರು—ಒಳ್ಳೆಯದು.

ಆ ದಿನ ಡಿಕ್ಲರೇಷನ್ ಮಾಡಿದ್ದಾಯಿತು. ಮೂರನೆಯ ದಿನ ನ್ಯಾಯಾಧೀಶರು ಸಂಪಾದಕರ ವಿಚಾರವಾಗಿ ತೀರ್ಪನ್ನು ಓದಿದರು. '**ಕ್ರಾಂತಿಯ**' ಸಂಪಾದಕರಿಗೆ ಒಂದೂವರೆ ವರ್ಷ ಸಜಾ, ೨೦೦ ರೂ ಜುಲ್ಮಾನೆ ವಿಧಿಸಲಾಯಿತು.

ಸಂಪಾದಕರು ಜೈಲಿಗೆ ಹೋದಮೇಲೆ ಲಕ್ಷ್ಮಣಯ್ಯರು ಕ್ರಾಂತಿ ಪತ್ರಿಕೆಯ ಸಂಪಾದಕತ್ವವನ್ನು ಬಹು ವಿಚಕ್ಷಣೆಯಿಂದ ಸಾಗಿಸಿದರು. ಡಿಕ್ಲರೇಷನ್ ಆದ ಮೇಲೆ ಅಯ್ಯರು ಇನ್ಸ್ಪೆಕ್ಟರನ್ನು ನೋಡಿರಲಿಲ್ಲ. ಒಂದುದಿನ

ಆಕಸ್ಮಾತ್ತಾಗಿ ಬೀದಿಯಲ್ಲಿ ಇಬ್ಬರೂ ಸಂಧಿಸಿದರು. ಇನ್ಸ್ಪೆಕ್ಟರು ಹಾಸ್ಯ ಮಾಡುತ್ತ–"ತಾವು ಈಗ ದೊಡ್ಡ ದೇಶಭಕ್ತರಾಗಿರುವಂತೆ ಕಾಣುತ್ತೆ!" ಎಂದರು.

"ಹೌದು. ಹಾಗೆ ಹೇಳುವುದರಲ್ಲಿ ನಿಮ್ಮ ಅಭಿಪ್ರಾಯವೇನು?"

"ನನ್ನ ಅಭಿಪ್ರಾಯವೇ? ಅದು ಇಷ್ಟರಲ್ಲಿಯೇ ನಿಮಗೆ ಗೊತ್ತಾಗುತ್ತೆ. ನೀವೂ ಒಂದು ದಿನ ಜೈಲು ಯಾತ್ರೆ ಮಾಡಬೇಕಾಗಿದೆ ಎಂದು ನನಗೆ ವ್ಯಸನವಾಗುತ್ತಿದೆ."

"ಆದಕ್ಕೆ ನಾನು ಸಿದ್ಧವಾಗಿಯೇ ಇದ್ದೇನೆ. ಸಂಪಾದಕರು ಹಿಂತಿರುಗಿ ಬರುವ ಸಮಯವನ್ನೇ ಕಾಯುತ್ತಿದ್ದೇನೆ."

"ಹಾಗೋ?"

"ನಿಮಗೆ ಅನುಮಾನವೇನು? ನಿಮ್ಮ ಮಾತು ಕೇಳಿಕೊಂಡು ನಾನು ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ನಾನೇ ಅನುಭವಿಸಬೇಡವೇ? ಜೈಲಿಗೆ ಹೋಗುವುದಕ್ಕಿಂತಲೂ ಉತ್ತಮವಾದ ಪ್ರಾಯಶ್ಚಿತ್ತ ಈಗ ಬೇರೆ ಯಾವುದಿದೆ?"

"ಸರಿ, ಸರಿ! ಜೈಲಿಗೆ ಹೋಗುವುದಕ್ಕೆ ಏನುಮಾಡಬೇಕಂತಿದ್ದೀರಿ?"

"ಏನೂ ಇಲ್ಲ. ಮೊದಲನೆಯ ಸಂಪಾದಕರನ್ನು ತೊಂದರೆಗೆ ಗುರಿ ಮಾಡುವುದಕ್ಕೆ ಎಂಥಾ ಲೇಖನವನ್ನು ಬರೆದಿದ್ದೆನೊ ಅಂಥದನ್ನೆ ಇನ್ನೊಂದು ಸಾರಿ ಬರೆಯುತ್ತೇನೆ."

"ನಾನು ಹೇಳಿದ ಹಾಗೆ ಮಾಡಿದ್ದರೆ, ನೀವು ಈ ಕಷ್ಟಕ್ಕೊಳಗಾಗ ಬೇಕಾಗುತ್ತಿತ್ತೇ? ನೀವೂ ಷೋಕಾಗಿ ಮಜಾಮಾಡ್ಕೊಂಡು ಇರಬಹು ದಾಗಿತ್ತು."

"ದೇವರು ನಿಮ್ಮ ಆ 'ಮಜ' ದಿಂದ ನನ್ನನ್ನು ಕಾಪಾಡಲಿ! ಆ ಸುಖಕ್ಕಿಂತಲೂ ಈ ದುಃಖವು ಎಷ್ಟೋ ಆನಂದದಾಯಕವಾಗಿದೆ." ಎಂದು ಅಯ್ಯರು-**ಕ್ರಾಂತಿ** ಯ **ಸಂಪಾದಕರು**–ಹೊರಟುಹೋದರು.. ಇನ್ಸ್ಪೆಕ್ಟರು ಬಾಯಿಬಿಟ್ಟುಕೊಂಡು ಅಯ್ಯರ ಕಡೆಗೇ ನೋಡುತ್ತ—"**ನಂಬಿಕೆಗೆ ಮುಯ್ಯಿ ಇದಲ್ಲವೇ?**" ಅಂದುಕೊಳ್ಳುತ್ತಿದ್ದರು.

# ಅಡವಿಯರಾಜ

ಗ್ರೀಷ್ಮಋತು ಸಂಧ್ಯಾಕಾಲ. ಮಾಳವದೇಶದ ಒಂದು ನಿಬಿಡಾರಣ್ಯ ಮಧ್ಯದಲ್ಲಿ ಒಂದು ವಾಮನ ಮಾನವವಿಗ್ರಹವು- ಪರಿಪುಷ್ಟಕಾಯ— ಕೃಷ್ಣಶ್ವೇತ ಮಧ್ಯಮವರ್ಣ ದೇಹ- ತೀಕ್ಷ್ಣದೃಷ್ಟಿಯುಳ್ಳ ಕಣ್ಣುಗಳು-ಉದ್ದವಾಗಿ ಬೆಳದಿದ್ದ (ದಾಡಿ) ಗದ್ದಗಳಿಂದ ಕೂಡಿ, ಮೋಟಾದ ದಪ್ಪ ದೊಣ್ಣೆಯೊಂದನ್ನು ಆಸರೆಮಾಡಿಕೊಂಡು ಆವುದೋ ಒಂದು ವಿಷಯವನ್ನು ಚಿಂತಿಸುತ್ತ ನಿಂತಿತ್ತು. ಅಸ್ತಾಚಲವನ್ನಡರುತ್ತಿದ್ದ ಪ್ರಭಾಕರನ ಪ್ರಭಾವದರ್ಶಕವಾದ ಪ್ರಕಾಶದಿಂದ ಆ ಮಾನವ ವಿಗ್ರಹವನ್ನು ತೊಂದರೆಗೊಳಿಸಬಾರದೆಂದು, ಮಹಾವೃಕ್ಷಗಳ ವಿಪುಲ ಶಾಖೆಗಳು ಒಂದರೊಡನೆ ಮತ್ತೊಂದು ಸೇರಿ ಆಲೋಚಿಸುತ್ತಿದ್ದಂತೆ ಭಾಸವಾಗುತ್ತಿದ್ದಿತು. ವೃಕ್ಷಗಳಮೇಲೆ ಆಸೀನವಾದ ಪಕ್ಷಿಗಳಮೇಲೆ ಸೂರ್ಯರಶ್ಮಿಯು ಬಿದ್ದು, ಒಂದು ತೆರನಾದ ಪ್ರಕಾಶವನ್ನುಂಟುಮಾಡಿದ್ದುದು. ಅಧಃ ಮೃದುಮಯ ಸುಕೋಮಲ ತೃಣಪಾತ್ರ !

ರಜನೀದೇವಿಯು ತೀವ್ರವಾಗಿ ಸಮೀಪಿಸುತ್ತಿದ್ದಳು. ಆಕಾಶದಲ್ಲಿ ಸಂಧ್ಯಾತಾರೆಗಳು ಒಂದೊಂದಾಗಿ ಮೂಡುತ್ತಿದ್ದುವು. ಆದರೂ, ಆ ವಾಮನ ವಿಗ್ರಹವು ಚಲಿಸಲೇ ಇಲ್ಲ. ಮುಖಕಾಂತಿಯಿಂದ ಚಿಂತೆಯು ಹೆಚ್ಚುತ್ತಿದ್ದಂತೆ ತೋರುತಿತ್ತು. ಆಗಾಗ್ಗೆ, ನಿಟ್ಟುಸಿರು ಕೇಳಿಬರುತ್ತಿದ್ದುದು. ಅವನಾರು ? ಅವನಾಲೋಚನೆಗಳೇನು ?

" ಅವರು ನನ್ನನ್ನು ಬಂಧಿಸಬೇಕೆಂದು ಬೆನ್ನಟ್ಟಿಬಂದಿರುವರು. ಬ್ರಿಟಿಷ್ ನ್ಯಾಯನಿಬಂಧನೆಗಳೆಂಬ ಬೇಟೆನಾಯಿಗಳಿಂದ ಕೂಡಿದ ಅವರು ನನ್ನನ್ನು ಜೀವಂತನಾಗಿಯೋ- ಅಥವಾ ನಿರ್ಜೀವಿಯಾಗಿಯೋ- ಹಿಡಿಯ

ಬೇಕೆಂದು ಅಪೇಕ್ಷಿಸಿರುವರು. ನನ್ನನ್ನು ಬಂಧಿಸಿ ತಪ್ಪನ್ನಾರೋಪಿಸಿ, ನ್ಯಾಯಸ್ಥಾನದಲ್ಲಿ- ನ್ಯಾಯಾಧಿಪತಿಯ ಮುಂದೆ- ನಿಲ್ಲಿಸಬೇಕೆನ್ನುವರು. ನನ್ನ ಅಪರಾಧಗಳಿಗಾಗಿ ನನ್ನನ್ನು ಮರಣದಂಡನೆಗೆ ಗುರಿಮಾಡಬೇಕೆನ್ನುವರು. ಅಪರಾಧಗಳು! ಹಾ!! ನನ್ನ ಅಪರಾಧಗಳು!!! ಅವು ಯಾವುವು? ನಾನು- ದಸ್ಯು, ಡಕಾಯಿತ, ಕೊಲೆಪಾತಕನಂತೆ!! ನಾನು ಸಾಧಾರಣ ಜನರನ್ನೂ, ಜಾಗರೂಕತೆಯಿಲ್ಲದ ಪ್ರಯಾಣಿಕರನ್ನೂ, ಬಡಿವೆನಂತೆ!! ನಿಷ್ಕಲ್ಮಷೆಯರಾದ ಲಲನೆಯರನ್ನೂ, ನಿರ್ಬಲರಾದ ಧನಿಕರ ಹಣವನ್ನೂ ಅಪಹರಿಸುವೆನಂತೆ!! ಜನವಸತಿಯುಳ್ಳ ಗ್ರಾಮಗಳನ್ನೂ ಅಲ್ಲಲ್ಲಿ ತಂಗುವ ಪಥಿಕರ ತಂಡಗಳನ್ನೂ ಲುಟನಮಾಡುವೆನಂತೆ!!! ನಾನು ಮಾನವ ರೂಪಿಯಾದರೂ, ಮಾನವನಲ್ಲವಂತೆ!!! ಅಹಾ! ನಾನೆಂದೂ, ಕೇವಲ ಬಾಲಕರಿಗಾಗಲೀ, ಬಾಲೆಯರಿಗಾಗಲೀ, ದಯೆಯನ್ನು ತೋರಿಲ್ಲವಂತೆ!! ನಾನು ಪ್ರತ್ಯಕ್ಷ ರಾಕ್ಷಸನಂತೆ!! ಅದರಲ್ಲಿಯೂ, ಗಾಢಕೃಷ್ಣವರ್ಣದ ಆ ಮಾರೀಚಾದಿಗಳಿಗಿಂತಲೂ ಕ್ರೂರನಂತೆ! ಅಹಾ! ಹಾ!! ದಯಾಸಾಗರನೂ, ಸುಂದರನೂ ಆದ ನನಗೆ ಈ ರೀತಿಯ ಅಭಿನಂದನಗಳನ್ನು ಕೊಡುತ್ತಿರುವ ಆ ನರಾಧಮರಿಗೆ ಧಿಕ್ಕಾರವಿರಲಿ! ಧಿಕ್!! ಧಿಕ್!! ನನ್ನ ವಿಷಯದಲ್ಲಿ, ಅವರಿಗಿರುವ ಹಿತಚಿಂತನೆಗಾಗಿ ನಾನು ಅನುಗೃಹೀತನೂ, ಕೃತಜ್ಞನೂ ಆಗಿರುವೆನು. ಕ್ಷುದ್ರನರಾಧಮರೆ! ಕ್ಷುಲ್ಲಕವಾದ ನಿಮ್ಮ ಅಪವಾದಗಳೂ ಕಾರಣರಹಿತವಾದ ದಂಶನವೂ, ಕೇವಲ ಕುತ್ಸಿತವಾದ ಅಪವಾಧಗಳೂ, ಅಬಾಧಕವಾದ ಭರ್ತ್ಸನವೂ, ನನ್ನ ಮೇಲೆ ಅಣುಮಾತ್ರವೂ ಪ್ರಯೋಗವಾಗಲಾರದೆಂದು ನಂಬಿರಿ. ಕರ್ಮಚಂಡಾಲರಾದ ನಿಮ್ಮ ಯೋಧರು ಅತ್ಯಂತಪಟುಗಳೂ ಕುಶಾಗ್ರಬುದ್ಧಿಯುತರೂ ಆಗಿದ್ದರೂ ನನ್ನ ದೇಹವನ್ನು ಸ್ಪರ್ಶಿಸುವುದಕ್ಕಾಗಲಿ,-ಚಿಃ! ನನ್ನ ಛಾಯೆಯನ್ನು ಸಮೀಪಿಸುವುದಕ್ಕಾಗಲಿ- ಧೈರ್ಯವುಳ್ಳವರಾಗಿರುವರೆಂದು ಭಾವಿಸಬೇಡಿರಿ!! ಪ್ರಜೆಗಳ ಹೃದಯ ರಾಜ್ಯದಲ್ಲಿ, ನನ್ನ ಸಾರ್ವಭೌಮತ್ವವು ಅಷ್ಟು ದುರ್ಬಲವಾಗಿದೆಯೆ? ನಿಮ್ಮ ಕ್ರೂರ ಶಾಸನದಲ್ಲಿ ಅದು ಯಾವ ವಿಧದಲ್ಲಿಯೂ ಪರಿಣಮಿಸಲಾರದಷ್ಟು ಅಜಾಗರೂಕತೆಯ ಕ್ಷೀಣದೆಶೆಯಲ್ಲಿರುವುದೆ? ಎಲೈ! ಮಾನವಾಕಾಂಕ್ಷೆಯಲ್ಲಿರುವ ದರ್ಪವೆ! ಬಲದೇವನೇನು, ಅಷ್ಟು ದುರ್ಬ

ಲನೆ ? ” ಎಂದು ಉಚ್ಚಸ್ವರದಿಂದ ತಲೆಯನ್ನು ಮೇಲಕ್ಕೆತ್ತಿ ಕೂಗಿಕೊಳ್ಳುತ್ತ, ಅತ್ತಿತ್ತ ತಿರಗಲಾರಂಭಿಸಿದನು.

ಮಧ್ಯರಾತ್ರಿಯಾದುದು. ಹಿಂಸ್ರಪ್ರಾಣಿಗಳಾದ ಹುಲಿ, ಚಿರತೆ, ನರಿಗಳ ಕೂಗಿಗೆ ಆರಂಭವಾಯಿತು. ವೃಕ್ಷಾಗ್ರದಿಂದ ಪೇಚಕಪಕ್ಷಿಗಳ ಧ್ವನಿಯು ಕೇಳಿಬರುತ್ತಿದ್ದಿತು. ಗಾಢಾಂಧಕಾರ. ಆ ಘೋರಾರಣ್ಯಮಧ್ಯದಲ್ಲಿ ಭೀತಿಯನ್ನು ನೀಗಿ, ಮುಂದಣ ಪರಿಣಾಮ ವಿಷಯವನ್ನೇ ಚಿಂತಿಸದೆ—ಅನೇಕ ವರ್ಷಗಳ ಹಿಂದೆ ವನದಲ್ಲಿಯೇ ವಾಸಮಾಡುತ್ತಿದ್ದ ಬಲದೇವನು ನಿಜವಾಗಿಯೂ ಚೋರಾಗ್ರಗಣಿಯೆ ?

ನಾವು ಆವ ಕಾಲದ ವಿಷಯವನ್ನು ಉಲ್ಲೇಖಿಸಲು ಕುಳಿತಿರುವೆವೊ, ಆ ಕಾಲದಲ್ಲಿ ಬಲದೇವನೆಂಬ ಹೆಸರು ಮಧ್ಯ ಹಿಂದೂಸ್ಥಾನದಲ್ಲೆಲ್ಲರಲ್ಲಿಯೂ ಭೀತಿಯನ್ನು ಹುಟ್ಟಿಸಿದ್ದಿತು. ಅದರಲ್ಲಿಯೂ ಬ್ರಿಟಿಷ್ ಅಧಿಕಾರಿಗಳನ್ನು ನಡುಗಿಸಿಬಿಟ್ಟಿತ್ತು. ಆದರದು— ಯಾರು ನಿರ್ಬಲರಿಗೆ ಉಪದ್ರವನ್ನುಂಟು ಮಾಡುತ್ತಿದ್ದರೊ, ಯಾರು ರಕ್ಷಕರಿಲ್ಲದವರನ್ನು ದುರ್ವೃತ್ತಿಯಿಂದ ತೊಂದರೆಗೊಳಿಸುತ್ತಲಿದ್ದರೊ, ಯಾರು ಹೊಟ್ಟೆತುಂಬ ಊಟಮಾಡಲೂ ಅವಕಾಶವಿಲ್ಲದ ಬಡರೈತರ ಸಾಧನ ಸಾಮಾಗ್ರಿಗಳನ್ನು ಬಲವತ್ತರ ಅಧಿಕಾರ ಪ್ರಯೊಗದಿಂದ ಸೂರೆಮಾಡಿ ತೊಂದರೆಗೊಳಿಸುತ್ತಲಿದ್ದರೊ, ಅಂತಹರ ಹೃದಯವನ್ನು ಒಡೆದೇಬಿಡುತ್ತಿತ್ತೆನ್ನಬಹುದು. ಯಾರು ಹಗಲಿರಳೂ ಕಷ್ಟಪಟ್ಟು, ನೀರನ್ನು ಹೊತ್ತು, ಕಟ್ಟಿಗೆಯನ್ನು ಕಡಿದು ಹೊಟ್ಟೆಯನ್ನು ತುಂಬಿಕೊಳ್ಳುತ್ತಿದ್ದರೊ, ಯಾರು ದುರಾಚಾರ ದುರ್ವೃತ್ತಿಗಳನ್ನರಿಯದೆ, ತಮ್ಮ ಕಾರ್ಯವನ್ನು ಅನ್ಯರಿಗೆ ಅಪಾಯವಾಗದಂತೆ ನಡೆಯಿಸಿಕೊಂಡು ಹೋಗುತ್ತಲಿದ್ದರೊ, ಅಂತಹರು ಕೇವಲ ನಿರ್ಭೀತರು !

ಬಲದೇವನು ಭೀತಿಯೇನೆಂಬುದನ್ನೇ ಅರಿಯದೆ, ಅತ್ಯಂತ ಜಾಗರೂಕನಾಗಿ ಬಹಳ ಬುದ್ಧಿಚತುರತೆಯಿಂದ ಹಿಡಿದ ಕಾರ್ಯವನ್ನು ಸಾಧಿಸುತ್ತಿದ್ದನು. ಬಲದೇವನು ಸಾಹಾಯ್ಯಶೂನ್ಯರಿಗೆ ಸಾಹಾಯ್ಯ ! ದರಿದ್ರರಿಗೆ ದ್ರವ್ಯ ! ! ಉಪವಾಸದಿಂದ ಪ್ರಾಣತ್ಯಾಗೋನ್ಮುಖರಾದವರಿಗೆ ಅನ್ನದಾಯಕ ! ರೋಗಗ್ರಸ್ಥರಿಗೆ ಸಮುಸ್ತೋಪಚಾರದಾಯಕ ! ದುಷ್ಟಶಿಕ್ಷಕ ಶಿಷ್ಟಪರಿಪಾಲನವೇ ಅವನ ಕರ್ತವ್ಯ ಕರ್ಮ ! ವಿಪ್ಲವ ಸಮಯದಲ್ಲಿ ಅತುಲೈಶ್ವರ್ಯದಿಂದ

ಸಂತೋಷಪಡುತ್ತ, ಬಡವರನ್ನು ತೊಂದರೆಪಡಿಸುತ್ತಿದ್ದವರಿಗೆ ಧನಿಕರಿಗೆ ಇವನು ಶತ್ರು! ನಿರಾಶ್ರಿತರ ಆಶ್ರಯಕ್ಕಾಗಿಯೇ, ಹಿಡಿದ ಕಾರ್ಯವನ್ನು ಸಾಧಿಸುತ್ತಿದ್ದ ಬಲದೇವನೇ ಅಡವಿಯರಾಜ!!

ಪುನಃ ಬಲದೇವನು :— "ನನ್ನನ್ನು ಹಿಡಿಯಬೇಕೆಂದು ಅರಣ್ಯದಿಂದ ಅರಣ್ಯಕ್ಕೂ, ಊರಿಂದೂರಿಗೂ ನನ್ನ ಹಿಂದೆಯೇ ಅಲೆಯುತ್ತಲಿರುವರು. ನನ್ನ ಪರಿವಾರದವರಲ್ಲನೇಕರನ್ನು ಹಿಂಸಿಸಿ; ಕೆಲವರನ್ನು ಕೊಂದು; ನನ್ನ ದಳವನ್ನು ಕ್ಷೀಣದೆಶೆಗೆ ತಂದರು. ನನ್ನ ದಳದಲ್ಲಿ ಕೆಲವರನ್ನು ಬಂಧಿಸಿ; ಅವರನ್ನು ನಯವಿನಯಗಳಿಂದ ಸಲಹಿ; ನನ್ನ ಅಂತರಂಗಗಳನ್ನು ತಿಳಿಯ ಲೆಳಸಿದರು! ನನ್ನನ್ನು ಅಲ್ಪಾಯುವನ್ನಾಗಿ ಮಾಡಲು, ಈಗ ನನ್ನ ಸಮೀಪಕ್ಕೇ ಬಂದಿರುವರು. ಒಳ್ಳೆಯದು! ನಾಳೆಯದಿನ ಈ ನನ್ನ ಹಸ್ತಗಳು ಅವರಿಗೇನು ಮಾಡಬಲ್ಲವೆಂಬುದನ್ನೂ, ಅನ್ಯಸಹಾಯವಿಲ್ಲದೆಯೇ ಬಲದೇವನು ಶತ್ರುಶಿಬಿರದಲ್ಲೇ ಏನು ಮಾಡಬಲ್ಲನೆಂಬುದನ್ನೂ ಅವರಿಗೆ ಪ್ರತ್ಯಕ್ಷವಾಗಿ ತೋರಿಸಿಯೇಬಿಡುವೆನು. ನನ್ನನ್ನು ಹಿಡಿಯಲು ಹೊರಟಿರುವವರ ಹೃದಯವು ಒಡೆದುಹೋಗುವಂತೆ ಮಾಡುವೆನು!" ಎಂದು ಅದೇ ಸ್ವರದಲ್ಲಿ ಹೇಳಿಕೊಂಡನು.

ಅನಂತರ ಆ ಅಂಧಕಾರಮಯವಾದ ಅರಣ್ಯಮಧ್ಯದಲ್ಲಿ ನಿಂತು ತನ್ನ ದಕ್ಷಿಣಹಸ್ತವನ್ನು ಮುಖಕ್ಕೆತ್ತಿ; ಎಲ್ಲ ದಿಕ್ಕುಗಳಿಂದಲೂ ಪ್ರತಿಧ್ವನಿ ಬರುವಂತೆ ಕರ್ಕಶವಾದ ಸಿಳ್ಳನ್ನು ಹಾಕಿದನು. ಕೆಲ ನಿಮಿಷಗಳೊಳಗೇ- ಎಲೆ ಮರಗಳ ಮರಮರ ರವವು ಅವುದೋ ಒಂದು ಪ್ರಾಣಿಯ ಆಗಮನವನ್ನು ಸೂಚಿಸಿತು. "ಮನುಷ್ಯನೊ, ಪಶುವೋ" ಎಂಬುದನ್ನು ತಿಳಿಯುವವರಿಗೂ ಬಲದೇವನು ಸುಮ್ಮನಿದ್ದು ಶಾಂತಿಯನ್ನು ಧಿಕ್ಕರಿಸುವಂತೆ "ಯಾರಲ್ಲಿ?" ಎಂದು ಕೇಳಿದನು.

"ಶೂರರಾದ ನಾಯಕರೆ! ಸೇವಕನಾದ ಷಾಹು!"

"ಎಲ್ಲವೂ ಸರಿಯಾಗಿದೆಯಷ್ಟೆ!"

"ಎಲ್ಲವೂ ಸರಿಯಾಗಿದೆ!"

"ಒಳ್ಳೆಯದು. ಈಗ ನನ್ನ ಮಾತುಗಳನ್ನು ಲಕ್ಷ್ಯವಿಟ್ಟು ಕೇಳು. ನಾನು ಈ ದಿವಸ, ಇಲ್ಲಿಯೇ ನಿದ್ರಿಸುವೆನು. ನಿನ್ನಲ್ಲಿರುವ ಆಹಾರವನ್ನು

ತಂದುಕೊಡು ; ಅದರೊಡನೆ, ನನಗೊಂದು ಬಲವಾದ ದೊಡ್ಡ ದೊಣ್ಣೆಯನ್ನೂ ತೆಗೆದುಕೊಂಡು ಬಾ ! ನಾಳೆಯ ಬೆಳಗ್ಗೆ ಕೋಳಿಕೂಗುವುದಕ್ಕೆ ಮುಂಚೆಯೇ ಎದ್ದುಹೋಗುವೆನು. ಸಂದರ್ಭವಶಾತ್ ಬೆಳಕುಹರಿದು ಸ್ವಲ್ಪಹೊತ್ತಾಗುವವರಿಗೂ ಹಿಂದಿರುಗಲಾರೆ! ಬಹಳ ಎಚ್ಚರಿಕೆಯಿಂದ ಇರಿ. '

ಷಾಹುವು ಪ್ರೀತಿಪಾತ್ರನಾದ ಒಡೆಯನ ಮತ್ತಾವ ವಿಧವಾದ ಆಜ್ಞೆಯನ್ನೂ ನಿರೀಕ್ಷಿಸದೆ, ಅಪ್ಪಣೆಯನ್ನು ನೆರವೇರಿಸಲು ತೆರಳಿದನು.

— ೨ —

[ಶತ್ರು ಶಿಬಿರದಲ್ಲಿ]

ಡಕಾಯಿತರ ನಾಯಕನನ್ನು ನಾವು ನಿಶೀಥಸಮಯದಲ್ಲಿ ಎಲ್ಲಿ ಸಂಧಿಸಿದ್ದೆವೊ– ಆ ಅರಣ್ಯದ ಸಮೀಪದಲ್ಲಿ ಅಧಿಕಾರವರ್ಗದವರ ಕೈಯಿಂದ ದೀರ್ಘಕಾಲದವರಿಗೂ ತಪ್ಪಿಸಿಕೊಂಡು ಎಷ್ಟೆಷ್ಟು ಕಷ್ಟಗಳು ಪ್ರಾಪ್ತವಾದರೂ, ಲುಟನವೃತ್ತಿಯನ್ನು ನಿಲ್ಲಿಸದೆ, ತನ್ನ ಸಾಹಸಕಾರ್ಯಗಳಲ್ಲಿ ಅಧೀರನಾಗದೆ ಇದ್ದ,– ಬಲದೇವನನ್ನು ಬಂದಿಯನ್ನಾಗಿ ಮಾಡಲು, ಸರ್ಕಾರದವರಿಂದ ಆರಿಸಲ್ಪಟ್ಟ ಅತ್ಯಂತ ಧೈರ್ಯಶಾಲಿಯಾದ 'ಪೋಲೀಸ್ ಸೂಪರಿಂಟೆಂಡೆಂಟ್' ಎಂಬ ಐರೋಪ್ಯನೂ, ಅವನ ಪಕ್ಷವನ್ನು ವಹಿಸಿದ 'ಮಿಲಿಟರಿ ಪೋಲೀಸ'ರ ಒಂದು ಗುಂಪೂ, ಅಲ್ಲಲ್ಲಿ ಡೇರೆಗಳನ್ನು ಹಾಕಿಕೊಂಡು ಸಮಯವನ್ನು ನಿರೀಕ್ಷಿಸುತಲಿದ್ದರು.

ಮೂರು ರಾತ್ರಿಗಳ ಹಿಂದೆ, ದರೋಡೆಯವರ ಗುಂಪೊ ಅಥವಾ ಅದರಲ್ಲೊಂದು ಭಾಗವೊ, ಆ ಪ್ರದೇಶದಲ್ಲೇ ಒಬ್ಬ ಬನಿಯಾ ಜಾತಿಯ ಅತುಳೈಶ್ವರ್ಯವುಳ್ಳ ವರ್ತಕನನ್ನು ಹಿಡಿದು, ಅವನ ಧನವನ್ನೆಲ್ಲ ಸುಲಿಗೆ ಮಾಡಿ, ಮಗ್ಗುಲಿನಲ್ಲೇ ಇದ್ದ ಅರಣ್ಯವನ್ನು ಸೇರಿದರೆಂಬ ವರ್ತಮಾನವನ್ನು ಕೇಳಿ 'ಸೂಪರಿಂಟೆಂಡೆಂಟ' ನು ಅಲ್ಲಿ ಇಳಿದಿದ್ದನು.

ಸೂಪರಿಂಟೆಂಡೆಂಟನು ಒಂದು ತಂಡ ಸೇನೆಯನ್ನು ಒಬ್ಬ 'ಲೆಫ್ಟಿನೆಂಟ'ನ ಕೈಕೆಳಗೆ ಅರಣ್ಯದ ಮತ್ತೊಂದು ಭಾಗಕ್ಕೆ ಕಳಿಸಿದ್ದನು. ಬಲದೇ

ವನನ್ನು ಎಲ್ಲೆಡೆಯಿಂದಲೂ ಆವರಿಸಿ, ಹಿಡಿದು ಬಿಡಬೇಕೆಂದು ಸಂಕಲ್ಪಿಸಿದ್ದರು. ಸಂಕಲ್ಪವು ಸಿದ್ಧಿಸಿದ್ದರೆ, ಸೂಪರಿಂಟೆಂಡೆಂಟನ ಅದೃಷ್ಟವೂ ಒಳ್ಳೆಯದಾಗುತಿತ್ತೆಂದು ಹೇಳಬಹುದು !

ಬೆಳಗಾಗುತ್ತ ಬಂದಿತು. ಪ್ರಕೃತಿದೇವಿಯು ಹೊಸದಿನದ ಅನುಭವಕ್ಕಾಗಿ ಎಲ್ಲರನ್ನೂ ಎಚ್ಚರಗೊಳಿಸುತ್ತಿದ್ದಳು. ಆಗ, ಸೂಪರಿಂಟೆಂಡೆಂಟ್‌ನ ಡೇರೆಯ ಮುಂಭಾಗದಲ್ಲಿದ್ದ ಪಹರೆಯವನು ಪರದೆಯನ್ನೆತ್ತಿ ಇಣಿಕಿನೋಡಿದನು. ಆಗಾಗಲೆ, ಕ್ಯಾಪ್ಟನ್ನನು ವಸ್ತ್ರ (*Dress*) ಧಾರಿಯಾಗಿ ಹೊರಹೊರಡಲು ಸಿದ್ಧನಾಗಿದ್ದನು. ಹೊರಗಿನಿಂದ ನೋಡಿದ ಮನುಷ್ಯನು ಒಳಹೊಕ್ಕು, 'ಮಿಲಿಟರಿಯ ಸಲಾಂ' ಮಾಡಿ, "ಸ್ವಾಮಿ ! ಹೊರಗೆ, ಯಾವನೋ ಒಬ್ಬನು ತನಗೆ ಬಲದೇವನಿರುವ ಸ್ಥಳವು ತಿಳಿದಿರುವುದೆಂದೂ, ತಾನು ತೋರಿಸುವನೆಂದೂ ಬಂದಿರುವನು" ಎಂದು ವಿನಯದಿಂದ ಅರಿಕೆ ಮಾಡಿದನು. ಅಧಿಕಾರಿಯು, "ಕೂಡಲೇ ಅವನನ್ನ ಒಳಗೆ ಕರೆದುಕೊಂಡು ಬಾ !" ಎಂದು ಹೇಳಿಕಳಿಸಿದನು.

ಉತ್ತರಕ್ಷಣದಲ್ಲಿಯೇ ಕುಬ್ಜಾಕಾರದ ದೃಢಕಾಯನಾದ ಮನುಷ್ಯನೊಬ್ಬನು ಅವನ ಮುಂದೆ ನಿಂತನು. ಆ ಪರಕೀಯ ವ್ಯಕ್ತಿಯ ನೋಟ, ಮುಖಭಾವಗಳಲ್ಲಾವ ವಿಧವಾದ ವಿಶೇಷ ವಿಷಯವೂ, 'ಸೂಪರ್ರಿಂಟೆಂಡೆಂಟ'ನಿಗೆ ತೋರಿಬರಲಿಲ್ಲ. ಅವನೊಬ್ಬ ಸಾಧಾರಣ ದೇಶೀಯ ಮನುಷ್ಯನಂತೆ ಇದ್ದನು.

ಅಧಿಕಾರಿಯು ಗಂಭೀರಸ್ವರದಿಂದ:—"ನೀನೇಕೆ ಇಲ್ಲಿಗೆ ಬಂದೆ ?"

ವ್ಯಕ್ತಿ :—"ಬಹುಮಾನಕ್ಕಾಗಿ !"

ಅಧಿಕಾರಿ :—ಡಕಾಯಿತರ ನಾಯಕನಾದ ಬಲದೇವನನ್ನಾಗಲೀ, ಅವನಿರುವ ಸ್ಥಳವನ್ನಾಗಲೀ ತೋರುವವರಿಗೆ ದೊರೆಯತಕ್ಕ ಬಹುಮಾನವು ನಿನಗೆ ಬೇಕೆಂದು ತೋರುವುದು. ಅಹುದೆ ? ನೀನು ಅವನಿರುವ ಸ್ಥಳವನ್ನು ತೋರಬಲ್ಲೆಯಾ ?"

ವ್ಯಕ್ತಿ ;— "ಖಂಡಿತವಾಗಿಯೂ ಕರೆದುಕೊಂಡು ಹೋಗಬಲ್ಲೆನು. ಆ ನಾಯಕನನ್ನು ನೋಡುವ- ಇದಿರ್ಗೊಳ್ಳುವ ಧೈರ್ಯವು ನಿಜವಾಗಿಯೂ ನಿಮಗೆ ಇದ್ದರೆ……."

ಅರ್ಧೋಕ್ತಿಯಲ್ಲಿಯೆ ಅಧಿಕಾರಿಯು, "ಏನು ? ಆ ಕ್ಷುದ್ರಪ್ರಾಣಿಯನ್ನು ಎದಿರ್ಗೊಳ್ಳುವ ಧೈರ್ಯವೆ ? ಹಾ ! ಹಾ !! ನಿನಗೇಕೆ ಆ ಸಂಶಯ ? ಪ್ರಖ್ಯಾತನೂ, ಗೌರವಯುಕ್ತನೂ ಅನೇಕ ಸೈನಿಕರಧಿಪತಿಯೂ ಆದ ಈ ಅಧಿಕಾರಿಯು ಆ ದೇಶೀಯನನ್ನು ಇದಿರ್ಗೊಳ್ಳಲು ಅಂಜುವನೆ ? ನಿನ್ನ ಮಾತುಗಳು ನಿಜವಾಗಿಯೂ ಹಾಸ್ಯಜನಕವೇ ಸರಿ." ಎಂದು ನಸುನಗುತ್ತ ಹೇಳಿದನು. ಆಗಲವನ ಮುಖವು ಕೆಂಪೇರಿಹೋಗಿದ್ದುದು. ಆ ಸಾಧಾರಣ ಗ್ರಾಮವಾಸಿಯ ಮುಖಭಾವವು ಆ ಸೂಪರಿಂಟೆಂಡೆಂಟನ ಕೋಪವನ್ನು ಶಾಂತಿಗೊಳಿಸದಿದ್ದರೆ, ಅವನು ಆ ಹಳ್ಳಿಯವನನ್ನು ಮೂಳೆಗಳು ಪುಡಿಪುಡಿಯಾಗುವಂತೆಯೋ, ಇಲ್ಲವೆ, ಗುಲ್ಮವು ಒಡೆದುಹೋಗುವಂತೆಯೋ ಒದ್ದುಬಿಡುತ್ತಿದ್ದನು. ಸೂಪರಿಂಟೆಂಡೆಂಟನು ಕ್ಷಣಕಾಲ ಸುಮ್ಮನಿದ್ದು, ಕ್ರೋಧವನ್ನು ನಿಗ್ರಹಿಸಿ "ಡಕಾಯಿತನಿರುವ ಸ್ಥಳವು ಇಲ್ಲಿಗೆ ಎಷ್ಟುದೂರವಿದೆ ?" ಎಂದನು.

ವ್ಯಕ್ತಿ :—"ಒಂದು ಹರದಾರಿಯಾಗಬಹುದು ?"

ಆಗ ಆ ಅಧಿಕಾರಿಯು ಯೋಧಸಮೂಹವು ಹೊರಡಲು ಸಿದ್ಧವಾಗುವಂತೆ ಆಜ್ಞೆಮಾಡಿದನು.

ವ್ಯಕ್ತಿ:—"ಬಲದೇವನನ್ನು ಕಂಡುಹಿಡಿಯಬೇಕೆಂಬ ಕುತೂಹಲವಿದ್ದರೆ, ಈಗ ತಾವೊಬ್ಬರು ಮಾತ್ರ ಬರಬೇಕು. ಅಲ್ಲದೆ, ಹಳ್ಳಿಯವರಂತೆ ಉಡುಪನ್ನು ಧರಿಸಬೇಕು."

ಅಧಿಕಾರಿಯು ಸಂಶಯಾಸ್ಪದನಾದನು. ಆ ವ್ಯಕ್ತಿಯನ್ನು "ಏನು ? ನಾನೊಬ್ಬನೇ ಬರಬೇಕೆ ?"

ವ್ಯಕ್ತಿ:—"ನಾವು ಹೋಗಬೇಕಾಗಿರುವ ಮಾರ್ಗವು ಅತಿ ಗುಪ್ತವಾದುದೂ, ಸೇನೆಯವರಿಗೆ ಅಸಾಧ್ಯವಾದುದೂ ಆಗಿದೆ. ನಾನು ನಿಮಗೆ ಮಾರ್ಗವನ್ನು ತೋರುವೆನು. ಅನಂತರ ಅನ್ಯರ ಸಹಾಯವಿಲ್ಲದೆಯೋ, ಸೇನಾಸಹಾಯದೊಡನೆಯೋ, ಅವನನ್ನು ಬಂಧಿಸಬಹುದು. ಅವನನ್ನು ಹಿಡಿಯುವುದು ನನ್ನ ಕೆಲಸವಲ್ಲ. ಅವನನ್ನು ತೋರಿಸುವುದು ಮಾತ್ರ ನನ್ನ ಕರ್ತವ್ಯಕ್ಕೆ ಸೇರಿದುದು. ಆದುದರಿಂದ ನನ್ನ ನಿಯಮಗಳಿಗೆ ನೀವು

ಒಪ್ಪುವುದಾದರೆ, ನನ್ನೊಡನೆ ಹೊರಡಿರಿ. ಇಲ್ಲವಾದರೆ, ಇಗೋ-ನಾನು ಹೊರಡುವೆನು" ಎಂದು ದುರಾಗ್ರಹಯುಕ್ತನಾಗಿ ಹೊರಹೊರಡಲುದ್ಯುಕ್ತನಾದನು.

ವ್ಯಕ್ತಿಯ ದುರಾಗ್ರಹದಿಂದ ಇಷ್ಟು ಮಾತುಗಳನ್ನಾಡಿದರೂ ಅವನ ಮುಖದ ಪ್ರಶಾಂತಭಾವವು ಅಧಿಕಾರಿಗೆ ಯಾವ ವಿಧವಾದ ಸಂಶಯವನ್ನು ಉಂಟುಮಾಡಲಿಲ್ಲ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಗ್ರಾಮವಾಸಿಗಳು ದುರಾಗ್ರಹಿಗಳು!

ಅಧಿಕಾರಿಗೆ ಭೀತಿಯೇನೆಂಬುದೇ ತಿಳಿಯದು. ಅವನು ಬ್ರಿಟನ್ನನು. ಅದರಲ್ಲಿಯೂ ಸೇನಾಧಿಪತಿ! ಬ್ರಿಟನ್ನರು ಎಂದೂ ಸಾವಿಗಂಜುವರಲ್ಲ. ಅವರಿಗಾವ ವಿಧವಾದ ಅಂಜಿಕೆಯಾದರೂ ಇಲ್ಲ. ಹೆಚ್ಚು ವಿಚಾರಮಾಡದೆ ದೇಶೀಯರಂತೆಯೇ ಉಡುಪನ್ನು ಧರಿಸಿ, ಅನಭ್ಯಾಸದ ವೇಷದ ದೋಷವನ್ನು ಮುಚ್ಚಲು ಮೇಲೊಂದು ಕಂಬಳಿಯನ್ನು ಹೊದ್ದು, ತನ್ನ ಮೇಜಿನ ಮೇಲೆ ಇಟ್ಟಿದ್ದ ಆರುನಲಿಕೆಗಳ ಪಿಸ್ತೂಲನ್ನು ತೆಗೆದು ಒಳಭಾಗದಲ್ಲಿರುವ ಜೇಬಿನಲ್ಲಿಟ್ಟುಕೊಂಡು, ಒಂದು ಕೆಂಪುಬಣ್ಣದ ವಸ್ತ್ರವನ್ನು ತಲೆಗೆ ಸುತ್ತಿ, ಆ ದೇಶೀಯ ಮಾರ್ಗದರ್ಶಕನೊಡನೆ ಹೊರಟನು.

— ೩ —

[ಶತ್ರುಸಮುಖದಲ್ಲಿ]

ನಿಬಿಡವಾದ ಕಾನನ, ವಿಶಾಲವಾದ ಬೈಲುಗಳಲ್ಲಿ ನಡೆಯುತ್ತ ನೀರಿನಝರಿ, ಕಾಲುವೆಗಳನ್ನು ದಾಟುತ್ತ ಹೋಗುತ್ತಿರುವಾಗ, ಅವರ ಮೈಯನ್ನು ತರೆಯುತ್ತಲಿದ್ದ ಕಂಟಕತರುಗಳನ್ನು ಕೈಯಿಂದ ತೆಗೆದು ಹಾಕುತ್ತ, ಪೊದೆಗಳ ಮಧ್ಯದಲ್ಲಿಯೇ ಒಂದು ಘಂಟೆಕಾಲ ನಡೆದು, ಪ್ರಪಾತಸದೃಶವಾದ (Steep) ಒಂದು ಶಿಲೋಚ್ಚಯದ ತಳದಲ್ಲಿ ಬಂದು ನಿಂತರು.

ಮಾರ್ಗದರ್ಶಕನು ಅಲ್ಲಿ ಕ್ಷಣಕಾಲ ನಿಂತುಕೊಂಡನು. ಅನಂತರ ಆ ಗಿರಿಯ ಕಡೆಗೆ ಕೈಯ್ಯನ್ನು ತೋರಿಸಿ:- "ಈ ಪರ್ವತದ ಮತ್ತೊಂದು ಭಾಗ

ದಲ್ಲಿ ಡಕಾಯಿತರ ಶಿಬಿರವಿರುವುದು. ನೀವು ಈ ಬಂಡೆಯಮೇಲೆ ಹತ್ತಿದರೇ, ಅದರ ಅವಲೋಕನವುಂಟಾಗುವುದು. ಇಲ್ಲದಿದ್ದರೆ ಇಲ್ಲ" ಎಂದನು.

"ನಮ್ಮ ಮುಂದಿರುವ ಈ ಕಡಿದಾದ ಬಂಡೆಯಮೇಲೆ ಹತ್ತುವುದು ಸಾಧ್ಯವೇ ?" ಎಂದು ಅಧಿಕಾರಿಯು ಕೇಳಿದನು.

ವ್ಯಕ್ತಿ:-"ಓಹೋ ! ನಾನು ನಿನಗೆ ಸಾಹಾಯ್ಯಮಾಡುವೆನು. ಪರ್ವತವಾಸಿಗಳಾದ ನಾವು ನಿಮಗೆ ಅಸಾಧ್ಯವಾದ ಎಂತಹ ಕಾರ್ಯಗಳನ್ನಾದರೂ ಸುಲಭವಾಗಿ ಮಾಡಬಲ್ಲೆವು. ಈಗ ನೀನು ನನ್ನ ಕುತ್ತಿಗೆಯ ಸುತ್ತಲೂ ಕೈಯನ್ನು ಹಾಕಿಕೊಂಡು, ಬೆನ್ನಿನಮೇಲೆ ಹತ್ತು, ನಾನು ಮೇಲಕ್ಕೆ ಕರೆದುಕೊಂಡು ಹೋಗುವೆನು."

ರಾಜಪುರುಷನು ಭೀತಿಯಿಂದ ಭ್ರಾಂತನಾಗಿ ನಿಂತನು.

ಅವನ ಮುಂದಿದ್ದ ಆ ಪ್ರಪಾತದ ಶಿಖರಕ್ಕೆ ಒಬ್ಬನೇರುವುದೇ ದುಸ್ಸಾಧ್ಯವಾಗಿರುವಾಗ, ಒಬ್ಬ ಮನುಷ್ಯನನ್ನು ಬೆನ್ನಿನಮೇಲೆ ಹೊತ್ತುಕೊಂಡು ಹತ್ತುವುದೆಂದರೆ, ಆಶ್ಚರ್ಯವಲ್ಲವೆ ? ಚಕಿತನಾದ ಆ ಅಧಿಕಾರಿಯು ಸ್ವಲ್ಪ ವಿರಾಮವನ್ನು ವಹಿಸಿ, ಅವನ ಬೆನ್ನಿನಮೇಲೆ ಹತ್ತಿ ಕುಳಿತನು. ಮಾರ್ಗದರ್ಶಕನು ಹತ್ತಲುಪಕ್ರಮಿಸಿದನು. ಒಂದು ಬಾರಿಯಾದರೂ ಜಾರಲಿಲ್ಲ ! ಒಂದು ಬಾರಿಯಾದರೂ, ಹಿಂದಕ್ಕೆ ಸರಿಯಲಿಲ್ಲ ! ಒಂದು ತಡವೆಯಾದರೂ ಆಯಾಸದಿಂದ ದೀರ್ಘನಿಶ್ವಾಸವನ್ನು ಬಿಡಲಿಲ್ಲ. ಅಧಿಕಾರಿಯು ಅವನ ಬೆನ್ನಿನಮೇಲೆ ಇದ್ದರೂ, ಅವನಿಗೆ ಅವನು ತೃಣಪ್ರಾಯವಾಗಿದ್ದನೆಂದೇ ಹೇಳಬೇಕು. ಪ್ರಾಯಶಃ ಅರ್ಧಘಂಟೆಯೊಳಗಾಗಿ ಶಿಖರಪ್ರದೇಶಕ್ಕೆ ಅವನನ್ನು ಕರೆದುಕೊಂಡು ಹೋಗಿಬಿಟ್ಟನು. ಅಲ್ಲಿ ನಿಂತುನೋಡಿದರೆ, ಅನೇಕ ಉಪವನ, ಹಳ್ಳ, ನಾಲೆ, ಕಣಿವೆ, ಬೈಲು, ಕಣಿಮೆಯ ದಾರಿಗಳು ಕಾಣಿಸುತ್ತಿದ್ದವು. ಆ ಪ್ರಪಾತದ ಮತ್ತೊಂದು ಪಕ್ಕದ ಒಂದು ಮನೋಹರವಾದ ತೋಪಿನ ಮಧ್ಯದಲ್ಲಿ ಕಾಣುತಲಿದ್ದ ನಿಕುಂಜಿತವಾದ ಕುಟೀರಗಳ ಕಡೆಗೆ ಕೈತೋರಿಸಿ, "ಅಗೋ ! ಅಲ್ಲೇ ಆ ಕುಟೀರದಲ್ಲೇ ಆ ದಸ್ಯುದಳಪತಿಯಾದ ಬಲದೇವನಿರುವುದು. ಬಹುಮಾನವನ್ನು ಕೊಡು !" ಎಂದನು.

ಅಧಿಕಾರಿ :—"ನಿಜವಾಗಿಯೂ ನಾನು ನಿನಗೆ ಬಹುಮಾನವನ್ನು ಕೊಡು

ವೆನು. 'ಆದರೆ, ಆ ಕುಟೀರಗಳು ಆ ಡಕಾಯಿತನದೇ!' ಎಂದು ನನಗೆ ದೃಢವಾಗಬೇಕು. ಅನಂತರ ನಿನ್ನ ಆ ಬಲದೇವನನ್ನು ನಾನು ನೋಡಬೇಕು. ಅವನಿಗೆ ಈ ಅಧಿಕಾರಿಯಾದ ನನ್ನ ಮುಂದೆ ನಿಲ್ಲಲು ಧೈರ್ಯವಿದೆಯೆ ? ಎಂಬುದನ್ನು ಪರೀಕ್ಷಿಸಬೇಕು. ಆಗ ನೀನು ನಿನ್ನ ಬಹುಮಾನವನ್ನು ಪಡೆಯಲು ಅರ್ಹನಾಗುವೆ" ಎಂದನು.

ವ್ಯಕ್ತಿ :—"ಸಾಹೇಬ! ಹಾಗಾದರೆ, ನಿನ್ನ ಇಚ್ಛೆಯಂತಾಗಲಿ! ಅಡವಿಯರಾಜನಾದ ಯಾವ ಬಲದೇವನು ನಿಮ್ಮಗಳಿಂದ ದಸ್ಯುದಳಪತಿಯೆಂದೂ, ಡಕಾಯಿತರೊಡೆಯನೆಂದು ಕರೆಯಿಸಿಕೊಳ್ಳುವನೊ, ಆ ಬಲದೇವನು ನಾನೇ!" ಎಂದು ಹೇಳುತ್ತ, ಮೇಲೆ ಹೊದೆದಿದ್ದ ಕಂಬಳಿಯನ್ನು ತೆಗೆದೊಗೆದನು.

ಆಕಸ್ಮಿಕವಾಗಿ ಒಂದು ತೆರನಾದ ಕಂಪಿತವು— ಭೀತಿಯಿಂದಲೇ ಎಂದು ಹೇಳಲಾಗುವುದಿಲ್ಲ— ಅಧಿಕಾರಿಯ ಹೃದಯವನ್ನು ಭೇದಿಸಿಕೊಂಡು ಹೊರಹೊರಟುದು. ತಕ್ಷಣವೇ ಒಳಗಿಟ್ಟಿದ್ದ ಪಿಸ್ತೂಲನ್ನು ಕೈಗೆ ತೆಗೆದುಕೊಂಡು—ತಡವೇಕೆ? ಹಾರಿಸಿದನು. ಆದರೆ, ಅದರ ಗುಂಡು ಮಂದವಾಗಿ ಬೀಸುತ್ತಲಿದ್ದ ಪ್ರಭಾತವಾಯುವನ್ನು ಭೇದಿಸಿಕೊಂಡು ಹೊರಟುಹೋದುದೆ ಹೊರತು, ಮತ್ತೇನನ್ನೂ ಮಾಡಲಿಲ್ಲ! ಏಕೆಂದರೆ—ಸ್ಥಿರಚಿತ್ತನೂ, ದೃಢಕಾಯನೂ, ತೀವ್ರದೃಷ್ಟಿಯುಳ್ಳವನೂ ಆದ ಬಲದೇವನು ಸಮಯಕ್ಕೆ ಸರಿಯಾಗಿ ಕೆಳಗೆ ಕುಳಿತುಬಿಟ್ಟನು! ಕ್ಯಾಪ್ಟನನ್ನು ಮತ್ತೊಂದು ವೇಳೆ ಪಿಸ್ತೂಲನ್ನು ಹಾರಿಸಬೇಕೆಂದು ಆಲೋಚಿಸುವುದರೊಳಗಾಗಿಯೇ ಬಲದೇವನು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಅವನ ಕೈಗೆ ಬಲವಾದ ಒಂದು ಪೆಟ್ಟನ್ನು ಕೊಟ್ಟನು. ಪಿಸ್ತೂಲು ಭೂಗತವಾಗಿ ಬಲದೇವನ ಹಸ್ತವನ್ನಲಂಕರಿಸಿತು.

ಆಗ ಬಲದೇವನು, "ಸಾಹೇಬ! ನೀನು ಈಗ ನನ್ನ ಅಧೀನನಾಗಿರುವೆ! ನಿನ್ನ ಶತ್ರುವೂ, ದನುಜನೂ, ಧನಾಪಹಾರಿಯೂ ಆದವನ ಅಧೀನನಾಗಿರುವೆ!! ನೀನು ನಿನ್ನ ಹುರಣವನ್ನು ಯಾವ ರೀತಿಯಲ್ಲಿ ಹೊಂದಲಪೇಕ್ಷಿಸುವೆಯೆಂಬುದನ್ನು ಬೇಗ ಹೇಳು!!! ಅದನ್ನು ನೀನು ಈಗಲೇ

ಹೊಂದುವಿ !!! ನಾನು ಕರುಣಾಳುವಲ್ಲವೆಂದು ನೀನು ಎಷ್ಟೋ ತಡವೆ ಹೇಳಿಲ್ಲವೆ ? " ಎಂದನು.

ಅಧಿಕಾರಿಯ ಮುಖವು ಬೆಳ್ಳಗಾದುದು, ಮರಣ ಭೀತಿಯಿಂದಲ್ಲ. "ನನ್ನನ್ನು ನಾನಾ ಯಾತನೆಗಳಿಗೆ ಒಳಗುಮಾಡುವರು ? " ಎಂಬುದೇ ಅವನ ಭೀತಿಗೆ ಕಾರಣವು. ಆದರೆ, ಅವನಲ್ಲಿ ಪೂರ್ಣದರ್ಪವಿದ್ದಿತು. ಆ ದರ್ಪಬಲದಿಂದ ಗಂಭೀರವಾಗಿ "ಬಲದೇವ ! ಈ ಅಧಿಕಾರಿಯ ಮರಣವು ಯಾವ ವಿಧದಲ್ಲಿ ಬಂದರೂ ಹೆದರುವುದಿಲ್ಲ. ನೀನು ಹೇಳಿದಂತೆ ನಾನು ಈಗ ನಿನ್ನಧೀನದಲ್ಲಿರುವೆನು. ನನ್ನನ್ನು ಕೊಲ್ಲಲು ಇಷ್ಟವಿದ್ದರೆ ಕೊಲ್ಲಬಹುದು. ಆದರೆ ಅದರಿಂದ ಭಾರತದಲ್ಲಿ ಬ್ರಿಟಿಷ್ ಅಗ್ನಿಪ್ರತಿಷ್ಠೆ ಮಾಡಿದಂತಾಗುವುದು. ಸ್ವಲ್ಪಕಾಲದಲ್ಲಿಯೇ ಮಹಾ........"

ಆಗಲಾ ದಯಾಳುವಾದ ಬಲದೇವನು ಮೃದುಮಂದಹಾಸಗಳಿಂದ:- "ನಾನು ಈಗಾಗಲೇ ಮಧ್ಯಹಿಂದೂಸ್ಥಾನದಲ್ಲಿ ಹತ್ತಿಸಿರುವ ಬೆಂಕಿಯು ಪ್ರಬಲಿಸುತ್ತ ನಿಮ್ಮ ಅಧಿಕಾರವರ್ಗವನ್ನು ತಲ್ಲಣಗೊಳಿಸಿರುವುದು. ನಾನು ನಿನ್ನೆದಿರಿಗೆ ನಿರಾಯುಧನಾಗಿ ನಿಂತೆನು ; ಆದರೂ ನೀನು ನನ್ನನ್ನು ಕೊಲ್ಲಲು ಪ್ರಯತ್ನಿಸಿದಿ. ಸಾಧ್ಯವಾಗಿದ್ದರೆ ಕೊಲ್ಲುತ್ತಲೂ ಇದ್ದಿ. ನೀನು ಈಗ ನಿರಾಯುಧನಾಗಿರುವಿ ! ನಾನು ಒಂದೇ ಒಂದುಸಾರಿ, ಕಾಲಿನಿಂದ ಒದೆದರೆ ಈ ಪ್ರಪಾತದಿಂದ ಕೆಳಕ್ಕೆ ಉರುಳಿ, ರಕ್ತಮಾಂಸಾಸ್ಥಿಗಳ ಮುದ್ದೆಯಾಗುವಿ. ನನ್ನ ಅನುಜ್ಞೆಮಾತ್ರದಿಂದ, ನಿನ್ನ ಶರೀರವು ನೂರಾರು ಪಿಸ್ತೂಲುಗಳಿಂದ ಇಲ್ಲವೆ, ಸಹಸ್ರಾರು ಅಂಬುಗಳಿಂದ ಅಥವಾ ದಶಸಹಸ್ರ ಕತ್ತಿಗಳಿಂದ ಕೋಟಿ ಚೂರುಗಳಾಗಿ ಮಾಡಲ್ಪಡುವುದು. ನಾನು ಸುಳ್ಳನ್ನು ಹೇಳುವುದಾದರೆ, ನಿನ್ನ ಸುತ್ತಲೂ ಒಂದು ಬಾರಿ ಮುಖವನ್ನು ತಿರುಗಿಸಿ ನೋಡು " ಎಂದನು-

ಅಧಿಕಾರಿಯು ಒಂದು ತಡವೆ ಸುತ್ತಲೂ ನೋಡಿದನು, ಕೆಳಗಣ ಕಣಿವೆಯಲ್ಲಿ ಸುಮಾರು ಸಾವಿರಾರು ಮಂದಿ ಯೋಧರು ಸಶಸ್ತ್ರರಾಗಿ ನಾಯಕನ ಅಜ್ಞೆಯನ್ನು ನಿರೀಕ್ಷಿಸುತ್ತ ನಿಂತಿದ್ದುದನ್ನು ಕಂಡು ಆಶ್ಚರ್ಯಚಕಿತನಾದನು. ಗಿರಿಯಮೇಲ್ಭಾಗದಲ್ಲಿಯೆ ದಿವಾಕರನ ಕಿರಣರಾಶಿಯಲ್ಲಿ

ಪ್ರಕಾಶಿಸುತ್ತಲಿದ್ದ ಭಲ್ಲೆಗಳನ್ನು ಹಿಡಿದಿದ್ದ ನೂರಾರು ಮಂದಿ ಕಾಲಾಳುಗಳನ್ನು ನೋಡಿದನು. ಆಗ ಅವನಿಗೆ ಯೂರೋಪುಖಂಡದಲ್ಲಿ ಪ್ರಖ್ಯಾತರಾಗಿ ಆಲ್ಪಸ್ ಪರ್ವತವಾಸಿಗಳ ಅಧಿನಾಯಕರಾಗಿದ್ದ ರಾಡ್ರಿಕ್‌ಧೂ (Roderick Dhu) ಮತ್ತು ಜೇಮ್ಸ್‌ಫಿಟ್ಸ್ಜೇಮ್ಸ್ (James Fitz-James) ರುಗಳ ಚಿತ್ರವು ಸ್ಮೃತಿಪಥದಲ್ಲಿ ಕಾಣಿಸಿಕೊಂಡಿತು.

ಬಲದೇವ:—ಸಾಹೇಬ! ಅಂಜಬೇಡ. ನೀನು ನನ್ನನ್ನು ಕೊಲ್ಲಲು ಪ್ರಯತ್ನಿಸಿದಂತೆ, ನಾನು ನಿರಾಯುಧನೂ, ನಿರಾಶ್ರಿತನೂ ಆದ ನಿನ್ನನ್ನು ಕೊಲ್ಲಲು ಪ್ರಯತ್ನಿಸುವುದಿಲ್ಲ, ಅದು ನನ್ನ ಧರ್ಮವಲ್ಲ, ನಾನು ಬಲಿಷ್ಠರಾದ ದುರ್ಜನರೊಡನೆ ಮಾತ್ರ ಯುದ್ಧಮಾಡತಕ್ಕ ವೀರನು. ನಾನು ನಿನ್ನನ್ನು ನಿನ್ನ ಶಿಬಿರಕ್ಕೆ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಬಿಡುವೆನು. ಅನಂತರದಲ್ಲಿ ನೀನು ಹಿಂದುರಿಗಿ ಬಂದು ಸಾಧ್ಯವಾದರೆ ನನ್ನನು ಹಿಡಿಯಬಹುದು."

ಅಧಿಕಾರಿಯನ್ನು ಕ್ಷಣಮಾತ್ರದಲ್ಲಿ ಕೆಳಕ್ಕಿಳಿಸಿದನು. ಅಲ್ಲಿ ಅವನಿಗೆ ಭೋಜನೋಪಚಾರಗಳು ತೃಪ್ತಿಕರವಾಗಿ ನಡೆಯಿಸಲ್ಪಟ್ಟುವು. ಅನಂತರ, ಅವನಿಗೆ ಶಿಬಿರಕ್ಕೆ ಹೋಗಲು ಆಜ್ಞೆಯನ್ನಿತ್ತನು. ಆದರೆ, ಚೋರನಾಯಕನೆಂಬ ಬಿರುದನ್ನು ಪಡೆದಿದ್ದ ಬಲದೇವನು, ಅವನನ್ನು ನಿರಾಯುಧನನ್ನಾಗಿ ಮಾಡಿದನು. ಅಡವಿಯರಾಜನೂ, ಧೀರನೂ ಆದ ಈ ಬಲದೇವನಲ್ಲಿಯೂ ದಯಾರಸವು ಪೂರ್ಣವಾಗಿರುವುದಕ್ಕೆ ಸಂತೋಷಿಸಿ, ಇಂತಹ ಮಾನವರ ಬೇಟಿಯಿಂದ ವಿರಾಮವನ್ನು ಹೊಂದಲು ರಜವನ್ನು ಪಡೆದುಕೊಂಡು ಸಾಹೇಬನು ಸ್ವದೇಶಕ್ಕೆ ತೆರಳಿದನು.

# ದ. ಕೃ. ಭಾರದ್ವಾಜರ ಗ್ರಂಥಗಳು

## ನಮ್ಮ ಪ್ರಕಟನೆಗಳು

ಸಮಾಜ ಚಿತ್ರ — ಕಥಾಸಂಗ್ರಹ

**ಅ ಜ್ಞಿ ನ ಲ್ಲಿ**

ನಾಟ್ಯರೂಪ ಹಿಂದೂಸ್ಥಾನ—ಚರಿತ್ರೆ—ನಾಟಕ (ದೃಶ್ಯ)ರೂಪದಲ್ಲಿ
೨ ಭಾಗಗಳು

ಮಕ್ಕಳ ಕಥೆಗಳು — ಕಥಾಸಂಗ್ರಹ (ಮಕ್ಕಳಿಗಾಗಿ)

**ಕಮಲಾಕಾಂತನ ಕಡತ — ವಿಚಾರ ಪ್ರಚೋದಕ ವಿಡಂಬನಾತ್ಮಕ ಪ್ರಬಂಧಗಳು**
( ಬಂಗಾಳಿಯಿಂದ ಭಾಷಾಂತರ )

ಶ್ರೀ ತುಳಸಿದಾಸ ರಾಮಾಯಣ — (ಸಂಪೂರ್ಣ)

ಭೀಷ್ಮ — ನಾಟಕ

ಸೀತಾದೇವಿ — ನಾಟಕ

— ಪ್ರಕಾಶಕರು —

**ಆನಂದ್ ಬ್ರದರ್ಸ್**

ಕೆಂಪೇಗೌಡ ರಸ್ತೆ ಬೆಂಗಳೂರು, ನಗರ.

# ಟಿ. ಪಿ. ಕೈಲಾಸಂರವರ ಕೃತಿಗಳು

## ನಮ್ಮ ಪ್ರಕಟನೆಗಳು

| | | | | |
|---|---|---|---|---|
| ಬಂಡ್ವಾಳ್ವಿಲ್ಲದ ಬಡಾಯಿ | .... | 0 | 12 | 0 |
| ತಾಳೀಕಟ್ಟೋಕ್ಕೂಲೀನೇ | .... | 1 | 4 | 0 |
| ನಮ್ ಕಂಪೆನಿ | .... | 0 | 12 | 0 |
| ನಮ್ ಬ್ರಾಹ್ಮಣ್ಕೆ | .... | 0 | 12 | 0 |
| ನಮ್‌ಕ್ಳಬ್ಬು | .... | 0 | 6 | 0 |
| ವೈದ್ಯನ ವ್ಯಾಧಿ | .... | 0 | 6 | 0 |
| ಗಂಡಸ್ಕತ್ರಿ | .... | 0 | 6 | 0 |
| ಬಹಿಷ್ಕಾರ | .... | 0 | 6 | 0 |
| ತಾವರೆಕೆರೆ | .... | 0 | 8 | 0 |
| ಸೀಕರ್ಣೆ ಸಾವಿತ್ರಿ | .... | 0 | 3 | 0 |
| ಸತ್ತವನ ಸಂತಾಪ | .... | 0 | 12 | 0 |
| ಅಮ್ಮಾವ್ರ ಗಂಡ | .... | 1 | 4 | 0 |
| ಟೊಳ್ಳು ಗಟ್ಟಿ | .... | 0 | 9 | 0 |
| ಹೋಂ–ರೂಲು | .... | 0 | 12 | 0 |
| ಅನುಕೂಲಕ್ಕೊಬ್ಬಣ್ಣ | .... | 0 | 12 | 0 |
| ಪೋಲೀ ಕಿಟ್ಟಿ | .... | 1 | 12 | 0 |
| ಹುತ್ತದಲ್ಲಿ ಹುತ್ತ | .... | 2 | 0 | 0 |
| ಸೂಳೆ | .... | 1 | 8 | 0 |
| Purpose | .... | 2 | 0 | 0 |
| Little Lays & Plays | .... | | | |
| Karna | .... | 1 | 12 | 0 |

ಕರ್ಣ ಮತ್ತು ಪರ್ಪಸ್

—( ಜಿ. ಪಿ. ರಾಜರತ್ನಂರವರಿಂದ ಕನ್ನಡ ಅನುವಾದ. )

ಆನಂದ್ ಬ್ರದರ್ಸ್

ಬೆಂಗಳೂರು ೨.

## ದ. ಕೃ. ಭಾರದ್ವಾಜರ ಹೊಸ ಪುಸ್ತಕಗಳು

# ನಾಟ್ಯರೂಪ ಹಿಂದೂಸ್ಥಾನ

ಬುದ್ಧದೇವನ ಕಾಲ ಮೊದಲ್ಗೊಂಡು ಸನ್ ೧೮೫೭ನೆಯ ವರ್ಷದಲ್ಲಾದ ಸಿಪಾಯಿ ದಂಗೆಯವರೆಗಿನ ಇತಿಹಾಸವನ್ನು ಮಕ್ಕಳ ಮನಸ್ಸಿಗೆ ಹಿಡಿಯುವಂತೆ ನಾಟಕರೂಪದಲ್ಲಿ ಲೇಖಕರಾದ ಶ್ರೀ ದ. ಕೃ. ಭಾರದ್ವಾಜರು ಇದನ್ನು ಮನೋರಂಜಕವಾಗಿ ೨ ಭಾಗಗಳಲ್ಲಿ ಬರೆದಿರುವರು. ಇಸವಿ, ವರುಷ, ತಾರೀಖುಗಳ ನೀರಸ ಹೊರೆ ಇಲ್ಲದೆ, ಭರತಖಂಡದ ಮುಖ್ಯ ಚರಿತ್ರಾಂಶಗಳನ್ನೆಲ್ಲ ಮಕ್ಕಳು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುವ ರೀತಿಯಲ್ಲಿ ಇದನ್ನು ರಚಿಸಲಾಗಿದೆ. ಶೀಘ್ರದಲ್ಲಿಯೇ ಪ್ರಕಟವಾಗಲಿದೆ.

# ಮಕ್ಕಳ ಕಥೆಗಳು

ಮಕ್ಕಳು ಕೇಳಿ ಆನಂದಪಡುವ ಪುಟ್ಟಪುಟ್ಟ ಕಥೆಗಳ ಸಂಗ್ರಹವಿದು. ಶೀಘ್ರವಾಗಿ ಹೊರಬೀಳುವುದು.

# ಕಮಲಾಕಾಂತನ ಕಡತ (ದಪ್ತರ)

ಸುಪ್ರಸಿದ್ಧ ವಂಗೀಯ ಸಾಹಿತ್ಯ ಸಾರ್ವಭೌಮರೆನಿಸಿದ್ದ ಬಂಕಿಮಚಂದ್ರಚಟರ್ಜಿಯವರ, ಸಮಾಜವನ್ನು ಹೊಡೆದೆಬ್ಬಿಸುವಂತಹ, ವಿಚಾರಪ್ರಚೋದಕ ವಿಡಂಬನಾತ್ಮಕ ಲೇಖನ ಸಂಗ್ರಹದ ಕನ್ನಡ ಅನುವಾದ. ಪ್ರಕಟವಾಗಲಿದೆ.


---

## ಆನಂದ್ ಬ್ರದರ್ಸ್

ಪ್ರಕಾಶಕರು : : ಬೆಂಗಳೂರು ೨.


---


ಉಷಾ ಪ್ರೆಸ್, ಚಿಕ್ಕಪೇಟೆ, ಬೆಂಗಳೂರು ನಗರ.



**ದ. ಕೃ. ಭಾರದ್ವಾಜರು**

ನಲವತ್ತು ವರುಷಗಳಿಂದ ಇವರು ಸಾಹಿತ್ಯರಂಗಕ್ಕಿಳಿದು ಅನೇಕ ತ್ರೈಮಾಸಿಕ, ಮಾಸಿಕ, ಸಾಪ್ತಾಹಿಕ ಮತ್ತು ದೈನಿಕ ಪತ್ರಿಕೆಗಳ ಸಂಸ್ಥಾಪಕ, ಸಂಪಾದಕರಾಗಿ, ಸಹಸಂಪಾದಕರಾಗಿ, ಲೇಖಕರಾಗಿ ಕೆಲಸಮಾಡಿರುವರು. ಕನ್ನಡದಲ್ಲಿ ಮೊಟ್ಟಮೊದಲನೆಯದಾಗಿ ಮನೋರಂಜಕವಾದ ಪ್ರಸಿದ್ಧ ಚಿತ್ರಕಾರರ ತ್ರಿವರ್ಣ ಚಿತ್ರಗಳನ್ನು ಪ್ರತಿ ಮಾಸದಲ್ಲಿಯೂ ಪ್ರಕಟವಾಗುತ್ತಿದ್ದ, ಕೇವಲ ನಾಟಕ ನಾಟ್ಯಕಲೆಗಾಗಿಯೇ ಮೀಸಲಾಗಿದ್ದ 'ಕರ್ಣಾಟಕ ರಂಗಭೂಮಿ' ಮತ್ತು ಮಕ್ಕಳಿಗಾಗಿ ಹೊರಟ 'ಮಕ್ಕಳ ಪುಸ್ತಕ' ಮಾಸಪತ್ರಿಕೆಗಳ ಸಂಸ್ಥಾಪಕ-ಸಂಪಾದಕರು ಇವರೇ. ಕೇವಲ ಸಾಹಿತ್ಯಕ್ಷೇತ್ರವಲ್ಲದೆ, ವಿಜ್ಞಾನ, ರಾಜಕೀಯ, ಸಾಮಾಜಿಕ, ವೈದ್ಯಕೀಯ ಕ್ಷೇತ್ರಗಳಲ್ಲಿ ದುಡಿದು, ಆಯಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಗ್ರಂಥಗಳನ್ನು ರಚಿಸಿ ಕನ್ನಡಿಗರ ಮುಂದಿಟ್ಟಿರುವರು. ಇವರ ಇಂಗ್ಲೀಷ್-ಇಂಗ್ಲೀಷ್-ಕನ್ನಡ ನಿಘಂಟು ಕರ್ಣಾಟಕದಲ್ಲೆಲ್ಲರಿಗೂ ಪರಿಚಿತವಾಗಿದೆ. ಲೈಂಗಿಕವಿಜ್ಞಾನ ವಿಚಾರವಾಗಿ ಚೆನ್ನಾಗಿ ಅಧ್ಯಯನ ಮಾಡಿ, ವೈಜ್ಞಾನಿಕವಾಗಿ ಅದನ್ನು ವಿವೇಚಿಸಿ, ಸಶಾಸ್ತ್ರೀಯವಾಗಿ ಸರಳವಾದ ಶೈಲಿಯಲ್ಲಿ 'ದಾಂಪತ್ಯವಿಜ್ಞಾನ' ಮತ್ತು 'ಸಂತಾನವಿಜ್ಞಾನ'ವೆಂಬ ಗ್ರಂಥರತ್ನಗಳನ್ನು ಕನ್ನಡಿಗ ಯುವಕ ಯುವತಿಯರಿಗೆ ಪ್ರಪ್ರಥಮವಾಗಿ ಕೊಟ್ಟವರಿವರು. ಇವರ ಕಥೆಗಳಲ್ಲಿ ಮಾನವನ ಬಾಳಿನ ಕಟು ಅನುಭವ ತರಂಗಗಳು ಸಾಮಾಜಿಕ ಸಮಸ್ಯೆಗಳನ್ನು ತಂದೊಡ್ಡುವವು.